



ಕಸ್ತೂರಿ



ಲಾವಾಪಾತ್ರೆ ಉಕ್ಕಿದಾಗ







ದೊರೆಯ ಅವಸಾನದ ಸಂಪೂರ್ಣ ವೃತ್ತಾಂತ

ವರ್ಷ: 36 ಸಂಚಿಕೆ: 1 ಸೆಪ್ಟಂಬರ್ 1991

ಕಸ್ತೂರಿ
ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ: ಕೆ.ಶಾಮರಾವ್
ಸಂಪಾದಕ: ಆರ್.ಎ.ಉಪಾಧ್ಯ
ನಿರ್ವಹಣೆ: ರವಿ ಬೆಳಗೆರೆ

ಈ ಸಂಚಿಕೆಯಲ್ಲಿ

ಕಸ್ತೂರಿ ಕಾರ್ಯಾಲಯ ಕೊಪ್ಪೀಕರ ರಸ್ತೆ ಹುಬ್ಬಳ್ಳಿ - 580 020



ಅರ್ನೆಸ್ಟ್ ಹೆಮಿಂಗ್ವೇ ಅವರ ಜಗತ್ಪ್ರಸಿದ್ಧ ಕಾದಂಬರಿ 'ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ'ಯ ಕನ್ನಡ ಅನುವಾದವನ್ನು (ಪ್ರ.ವಿ.ಜುಲೈ-ಆಗಸ್ಟ್ 1991) ಸಿದ್ಧರಾಜ ಪೂಜಾರಿ ಅವರು ಸುಂದರವಾಗಿ ಮಾಡಿದ್ದಾರೆ. ಸುಮಾರು ನಲವತ್ತು ವರ್ಷಗಳ ಹಿಂದೆ ಅ.ನ.ಕೃ. ಅವರು ಇದೇ ಕಾದಂಬರಿಯನ್ನು 'ಸೋತು ಗೆದ್ದವನು' ಎಂಬ ಹೆಸರಿನಲ್ಲಿ ಅನುವಾದಿಸಿದ್ದರು. ಈಗಂತೂ ಅದರ ಪ್ರತಿಗಳು ದೊರಕಲಾರವು. ಆದ್ದರಿಂದ ಹೊಸ ಓದುಗರಿಗೆ ಇದೊಂದು ಒಳ್ಳೆಯ ಕೊಡುಗೆ.

ಒಂದು ಕೃತಿಯನ್ನು ಒಬ್ಬರೇ ಅನುವಾದ ಮಾಡಬೇಕು ಒಮ್ಮೆ ಪ್ರಕಟವಾದ ಕಾದಂಬರಿ, ಕಥೆಗಳನ್ನು ಪುನರ್ಮುದ್ರಿಸಬಾರದು ಎಂಬ ಕಟ್ಟುಪಾಡು ಇಟ್ಟುಕೊಳ್ಳಬೇಕಾಗಿಲ್ಲ. ವರ್ಷಂಪ್ರತಿ ಓದುಗರ ಸಂಖ್ಯೆ ಬೆಳೆಯುತ್ತಲೇ ಇರುವ ಕನ್ನಡದಲ್ಲಂತೂ ಇಂತಹ ನಿಯಮ ಆತ್ಮಹತ್ಯಾಕಾರಿಯಾದೀತು.

ಬೆಂಗಳೂರು **ಎಂ.ಆರ್.ರಾಮಸ್ವಾಮಿ**

O

ದಲಿತರಾಗಿಯೇ ಹುಟ್ಟಿ, ಆ ಪರಿಸರದಲ್ಲಿಯೇ ಬೆಳೆದ ವ್ಯಕ್ತಿ ರಚಿಸಿದ ಸಹಜ ಸಾಹಿತ್ಯಕೃತಿ ಹೇಗಿರಬೇಕೋ ಹಾಗೆಯೇ 'ಕುಸುಮ ಬಾಲೆ' ಇದೆ. ಶಿಷ್ಟ ಭಾಷೆಯ ಕೃತಿಗಳನ್ನು ಸಾಹಿತ್ಯದ ಹೆಸರಿನಲ್ಲಿ ಓದುತ್ತಿರುವವರಿಗೆ ಕುಸುಮ ಬಾಲೆ ಸುಲಭವಾಗಿ ಅರ್ಥವಾಗುವುದು ಕಷ್ಟ.

ಮಿರ್ಜಿ ಅಣ್ಣಾರಾಯರ 'ನಿಸರ್ಗ' ಅಚ್ಚಾದಾಗಲೂ ಇಂತಹುದೇ ಸಮಸ್ಯೆ ಬಂದಿತ್ತು. ಆ ಕೃತಿ ಮೌಲ್ಯಉಳ್ಳದ್ದೇ ಆದರೂ ಇಂದಿಗೂ ಎಲ್ಲ ಮಟ್ಟದ ಓದುಗರಿಗೆ ಸುಲಭವಾಗಿ ಅರ್ಥವಾಗುತ್ತಿಲ್ಲ. ಯಶವಂತ ಚಿತ್ತಾಲರ ಕೃತಿಗಳಲ್ಲಿಯ ಅನೇಕ ಪದಗಳು ಎಲ್ಲ ಕನ್ನಡಿಗರಿಗೆ ಮೂಲ ಅರ್ಥದಲ್ಲಿಯೇ ತಿಳಿಯುವುದಿಲ್ಲ. ಆಯಾ ಪ್ರದೇಶದ ಜನಜೀವನ-ಭಾವನೆ-ಕಲ್ಪನೆಗಳನ್ನು ಇತರರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದು, ಅಲ್ಲಲ್ಲಿಯ ರೂಢಿಗತ ಭಾಷೆಯಲ್ಲಿ ಆಚಾರ ನಂಬಿಕೆಗಳು ಪ್ರಕಟವಾದಾಗಲೇ.

ಈ ಕೊರತೆಯ ನಿವಾರಣೆಗೆ ನಮ್ಮ ಸಾಹಿತ್ಯಕ ಪತ್ರಿಕೆಗಳು ಮತ್ತು ಇತರ ನಿಯತಕಾಲಿಕೆಗಳು ಗಮನ ಹರಿಸಬೇಕಾದುದು ಅತ್ಯಗತ್ಯ (ಪರಿಷತ್ತು, ವಿ.ವಿ., ಅಕಾಡಮಿಗಳಿಂದ ಈ ಕೆಲಸ ಆಗುವುದಿಲ್ಲ.)

ಹಳೆಗನ್ನಡದ ಕೃತಿಗಳನ್ನು ಓದುಗರಿಗೆ ಅರ್ಥವಾಗಿಸಲು ಅವುಗಳ ಅನ್ವಯಾರ್ಥ ಕೊಡುವ (ಹೊಸಗನ್ನಡದಲ್ಲಿ) ಪರಿಪಾಠವಿತ್ತು. ಈಗ 'ಕುಸುಮ ಬಾಲೆ'ಯನ್ನು ಇರುವಂತೆಯೇ ಉಳಿಸಿ (ಸರಳ ಕನ್ನಡಕ್ಕೆ ಅನುವಾದ ಮಾಡದೆ) ಅದನ್ನು ಓದುವ ಕ್ರಮ-ಬಳಸಿರುವ ಪದಗಳ ಅರ್ಥ ತಿಳಿಸುವ ವ್ಯವಸ್ಥೆ ಪತ್ರಿಕೆಗಳಿಂದ ಆಗಬೇಕು.

ಗುಡಿಬಂಡೆ **ಗುಡಿಬಂಡೆ ಪೂರ್ಣಿಮಾ**

ಚರ್ಚೆಯಂಗಳದ ಉದ್ದಕ್ಕೂ ಸಂದರ್ಶಕಿ ಕೃತಿಯ ಬಗೆಗಿನ ತಮ್ಮ ಅಭಿಪ್ರಾಯಗಳಿಗೆ ದೇವನೂರರಿಂದ 'ಹೂಂ' ಅನಿಸಿಕೊಳ್ಳಲು ಹೆಣಗಾಡಿದ್ದಾರೆ. ಕೆಲವೊಮ್ಮೆ ದೇವನೂರು ಅವರೇ 'ಕುಸುಮ ಬಾಲೆ'ಯ ಬಗ್ಗೆ ಮಂಜುಳಾ ಅವರ ಸಂದರ್ಶನ ನಡೆಸುತ್ತಿದ್ದಾರೆಯೇ ಎಂಬ ಅನುಮಾನ ಕಾಡುತ್ತದೆ.

ದೇವನೂರು ಹೊಗಳಿಕೆಯನ್ನು ಸಹಿಸದವರು ಎಂಬುದು ಸೈಕಾಲಜಿ ಡಾಕ್ಟರ್‌ಗೆ ಗೊತ್ತು. ಆದರೂ ಮನೋಜ್ಞ, ಅದ್ಭುತ ಇತ್ಯಾದಿ ಹೊಗಳಿಕೆಗಳು ಚರ್ಚೆ

ಸಂಕ್ರಮಣ ಸ್ಪರ್ಧೆ

ಎಂದಿನಂತೆ ಈ ವರ್ಷವೂ ಸಂಕ್ರಮಣ ಪ್ರಕಾಶನವು ಕಾವ್ಯ, ಸಣ್ಣ ಕತೆ, ಲಲಿತ ಪ್ರಬಂಧ ಸಾಹಿತ್ಯ ಪ್ರಕಾರಗಳಲ್ಲಿ ಸ್ಪರ್ಧೆ ಏರ್ಪಡಿಸಿದೆ. ಹನಿಗವನಗಳಿಗಾಗಿ ವಿಶೇಷ ಸ್ಪರ್ಧೆ ಇದೆ. ಪ್ರವೇಶ ಸ್ವೀಕರಿಸುವ ಕೊನೆಯ ದಿನಾಂಕ 15.9.1991 ಆಸಕ್ತರು ಸ್ವವಿಳಾಸದ ಅಂಚೆ ಲಕೋಟೆಯನ್ನು ಸಂಕ್ರಮಣ ಪ್ರಕಾಶನ, ಧಾರವಾಡ-580 008 ಈ ವಿಳಾಸಕ್ಕೆ ಕಳಿಸಿ ವಿವರ ಪಡೆಯಬಹುದು.

ಧಾರವಾಡ **ನೀಲಾ ಪಾಟೀಲ**

ಯಂಗಳದಲ್ಲಿ ಕುಣಿದಿವೆ. ಚರ್ಚೆಯ ನೆಪದಲ್ಲಿ ಲೇಖಕರ ಮುಂದೆ ಸಂದರ್ಶಕರ ವಿಮರ್ಶಾ ಸಾಮರ್ಥ್ಯವೂ ಮೆರೆದಿದೆ.

ಸಂದರ್ಶಿಸಲು ದೇವನೂರರನ್ನು ಭೇಟಿಯಾಗುವ ಶ್ರಮ ತೆಗೆದುಕೊಳ್ಳದೇ 'ಕುಸುಮ ಬಾಲೆ' ಬಗ್ಗೆ ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಮಂಜುಳಾ ಅವರು ಒಂದು ಒಳ್ಳೆಯ ಲೇಖನ ಬರೆಯಬಹುದಾಗಿತ್ತು.

ಹುಬ್ಬಳ್ಳಿ ಉಮ

○

'ವಿಜ್ಞಾನದ ಆಧ್ಯಾತ್ಮ' (ಜುಲೈ, 91) ಬಹಳ ವಿಚಾರ ಪ್ರಚೋದಕವಾಗಿ ಮೂಡಿ ಬಂದಿದೆ. ಫ್ರಿತೋ ಕಾಪ್ರಾರ Tao of Physics ಇಡೀ ಪುಸ್ತಕದ ಅನುವಾದ ಅವರಿಂದ ಬರಲೆಂದು ಆಶಿಸುತ್ತೇನೆ.

ಕನ್ನಡದ ಮಹಾದೇವಿಯಕ್ಕನ ವಚನವನ್ನು ಉದಾಹರಿಸಿದ್ದು ಔಚಿತ್ಯಪೂರ್ಣವಾಗಿದೆ. ಆದರೆ ಅದರಲ್ಲಿ ನುಸುಳಿದ ಒಂದು ಚಿಕ್ಕ ತಪ್ಪಿನಿಂದಾಗಿ ಆ ವಚನದ ಅರ್ಥ ಪೂರ್ಣವಾಗುವುದಿಲ್ಲ. ಅವರು ಬರೆದ "ಹಣ್ಣು ಬಿಟ್ಟ ಬಳಿಕ ....." ಇದು ಮೂಲದಲ್ಲಿ "ಹಣ್ಣು ಮೆದ್ದ ಬಳಿಕ ....." ಎಂದು ಅರ್ಥವತ್ತಾಗಿದೆ.

ಧಾರವಾಡ ಎಸ್.ಬಿ.ಪೊಲೀಸಗೌಡರ

○

ಅಗಸ್ಟ ಸಂಚಿಕೆಯಲ್ಲಿ ಪ್ರಕಟವಾದ 'ಐ.ಕ್ಯೂ: ಬುದ್ಧಿಶಕ್ತಿಯ ಮಾಪನ' (ಡಾ.ಆನಂದ ದೇಶಪಾಂಡೆ) ಎಂಬ ಲೇಖನದ ಆರನೇ ವಾಕ್ಯವೃಂದದ ಆರಂಭದಲ್ಲಿ ಐ.ಕ್ಯೂ= (ಮಾನಸಿಕ ವಯಸ್ಸು-ದೈಹಿಕ ವಯಸ್ಸು) x 100 ಎಂದು ಪ್ರಕಟವಾಗಿದೆ.

ಆದರೆ ಅದು, ಐ.ಕ್ಯೂ.=(ಮಾನಸಿಕ ವಯಸ್ಸು ÷ ದೈಹಿಕ ವಯಸ್ಸು) x 100 ಎಂದಾಗಬೇಕಿತ್ತು ಅಲ್ಲವೇ?

ಜಮಖಂಡಿ ಸತೀಶ ಚಂ.ಹೆಬ್ಬಾರ

ನಾಗಮಂಗಲ ಎ.ರಘುನಾಥ್‌ಸಿಂಗ್

(ಹೌದು. ಮುದ್ರಣ ದೋಷಕ್ಕೆ ಕ್ಷಮೆ ಇರಲಿ - ಸಂ.)

○

ಜುಲೈ 91ರ ಸಂಚಿಕೆಯ ಪದಾರ್ಥ ಚಿಂತಾಮಣಿ ಅಂಕಣದಲ್ಲಿ 'ಒಂದಕ್ಕೊಂಭತ್ತಾಗುವುದು' ಎಂದು ಇದೆ. ಒಂಬತ್ತು ಎಂಬುದು ಅಲ್ಪ ಪ್ರಾಣವೇ ವಿನಃ ಮಹಾಪ್ರಾಣ ಅಲ್ಲ. ಕೇಶಿರಾಜನು 'ಪತ್ತುಪದಮಾಗಲೊಡಮೊಂಬತ್ತು ಕೊಮೆಂದಕ್ಕುಂ' ಎಂದೂ ಭಟ್ಟಾಕಳಂಕನು 'ಸೂತ್ರ, ಒಂಬತ್ತು ಪತ್ತೋತ್ತಾದಿಮ್' ಎಂದೂ ಅಲ್ಪಪ್ರಾಣವನ್ನೇ ಉಪಯೋಗಿಸಿದ್ದು ಕಂಡುಬರುತ್ತದೆ. ಅದೇ ರೀತಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ಕೂಡ ಒಂಬತ್ತು (ನಾ) ಒಂದು ಸಂಖ್ಯೆ ಎಂದು ಅಲ್ಪ ಪ್ರಾಣವನ್ನೇ ಉಪಯೋಗಿಸಲಾಗಿದೆ.

ಯಾದಗೀರ ಬಾಳಾಚಾರ್ಯ ಜೋಶಿ

ಲೇಖಕರಿಗೆ ಸೂಚನೆ

ಫುಲ್‌ಸ್ಕೇಪ್ ಹಾಳೆಯ ಒಂದೇ ಮಗ್ಗುಲಿಗೆ ಸ್ಫುಟವಾಗಿ ಬರೆದ ಲೇಖನದೊಂದಿಗೆ ಲೇಖಕರ ಹೆಸರು, ವಿಳಾಸ ಇರುವುದು ಅಗತ್ಯ. ಅನುವಾದ, ರೂಪಾಂತರ, ಸಾಧಾರ ಲೇಖನಗಳಾದರೆ ಮೂಲ ಲೇಖಕ, ಪ್ರಕಾಶಕರ ಹೆಸರು ವಿಳಾಸ ಮತ್ತು ಅನುಮತಿ ಪತ್ರವನ್ನೊಳಗೊಂಡಿರಬೇಕು.

ಅಸ್ವೀಕೃತ ಲೇಖನದೊಂದಿಗೆ ಅಂಚೆ ಲಕೋಟೆ ಇದ್ದರೆ ಮಾತ್ರ ಹಿಂದಿರುಗಿಸಲಾಗುವುದು. ಸ್ವೀಕೃತಿ ಬಗ್ಗೆ ಒಂದು ತಿಂಗಳಲ್ಲಿ ತಿಳಿಸಿ ಯಥಾವಕಾಶ ಪ್ರಕಟಿಸಲಾಗುತ್ತದೆ. ಪ್ರಕಟಿತ ಬರಹಗಳಿಗೆ ಸೂಕ್ತ ಸಂಭಾವನೆಯುಂಟು.

ಕವನ, ಕಿರುಬರಹ, ಸ್ಥಿರಶೀರ್ಷಿಕೆಯ ಲೇಖನಗಳನ್ನು ಹಿಂದಿರುಗಿಸಲು ಸಾಧ್ಯವಿಲ್ಲ. 'ಸಹಚಿಂತನ'ಕ್ಕೆ ಬರೆದ ಪತ್ರಗಳು ಚಿಂತನಾರ್ಹ ಅಂಶವನ್ನೊಳಗೊಂಡಿರಲಿ.


ಚಂದಾದಾರರಿಗೆ ಸೂಚನೆ

'ಕಸ್ತೂರಿ' ಪ್ರತಿ ತಿಂಗಳ ಒಂದನೇ ದಿನಾಂಕದೊಳಗೆ ಪ್ರಕಟವಾಗುವುದು. ಐದನೇ ದಿನಾಂಕದೊಳಗೆ ತಲುಪದಿದ್ದರೆ ಚಂದಾದಾರರು ತಮ್ಮ ಅಂಚೆ ಕಚೇರಿಯಲ್ಲಿ ಮೊದಲು ವಿಚಾರಿಸಿ ಆನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆ ನಮೂದಿಸಿರಬೇಕು.

ಚಂದಾದರಗಳು:

ಬಿಡಿ ಸಂಚಿಕೆ ...	- ರೂ.3.00
ಒಂದು ವರ್ಷಕ್ಕೆ (ಅಂಚೆ ಸೇರಿ)	- ರೂ.34.00
ಎರಡು ವರ್ಷಕ್ಕೆ (ಅಂಚೆ ಸೇರಿ)	- ರೂ.65.00
ಮೂರು ವರ್ಷಕ್ಕೆ (ಅಂಚೆ ಸೇರಿ)	- ರೂ.100.00

ಮುಗಿದು ಹೋದ ಮಧುರಗೀತೆ



ರಾಜಗುರು ನೆನಪುಗಳು

● ಸೂರಿ ಮುಳ್ಳಹಳ್ಳಿ

1987. ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ ಮೈಸೂರು ಬಳಿಯ ಸೋಮನಾಥಪುರದಲ್ಲಿ ಮೂರು ದಿನಗಳ ಸಂಗೀತ-ನೃತ್ಯೋತ್ಸವ ಏರ್ಪಡಿಸಿತ್ತು. ಬೇಸಿಗೆ. ಭಾರಿ ಸೆಕೆ. ರಾಜಗುರುಗಳ ಕಚೇರಿ ನಡು ಮಧ್ಯಾಹ್ನದ ಹೊತ್ತಿಗೆ! ಬಸವರಾಜರಿಗೆ ಇದರಿಂದ ಮನಸ್ಸಿಗೆ ಬೇಸರವಾಗಿತ್ತೋ ಇಲ್ಲವೋ ಗೊತ್ತಿಲ್ಲ; ನಾವು ಮಾತ್ರ, ''ಎಂಥಾ ವೇಳೆಯಲ್ಲಿ ಸಂಗೀತ ಕಚೇರಿ ಏರ್ಪಡಿಸಿದ್ದೀರಿ? ರಾಜಗುರುಗಳಂಥ ಹಿರಿಯ ಪ್ರತಿಭೆಗೆ ನೀವೀರೀತಿ ಅವಮಾನ ಮಾಡಬಾರದಾಗಿತ್ತು'' ಎಂದು ಅಕಾಡೆಮಿಯ ಪದಾಧಿಕಾರಿಗಳೆದುರು ನಮ್ಮ ಬೇಸರವನ್ನು ತೋಡಿಕೊಂಡಿದ್ದೆವು.

ರಾಜಗುರುಗಳು ಹಸನ್ಮುಖರಾಗಿಯೇ ಬಯಲು ರಂಗದ ವೇದಿಕೆಯನ್ನೇರಿದರು. ಅಲಿಯಾ ಬಿಲಾವಲ್ ರಾಗದೊಂದಿಗೆ ಕಚೇರಿಯನ್ನಾರಂಭಿಸಿದರು. ಹಿತವಾದ ವಾತಾವರಣ ನಿರ್ಮಾಣಕ್ಕೆ ಪ್ರಕೃತಿಯೂ ಮನಸ್ಸು ಮಾಡಿತು. ಸೂರ್ಯ ಮೋಡಗಳ ಮರೆ ಸೇರಿದ. ತಂಗಾಳಿ ಬೀಸಲಾರಂಭಿಸಿತು. ದೂರ ಮರಗಳ ನೆರಳನ್ನಾಶ್ರಯಿಸಿದ ರಸಿಕರೆಲ್ಲ ವೇದಿಕೆಯ ಸಮೀಪ ಬಂದು ಕೂತರು. ಅಲ್ಲಿದ್ದ ತಲೆಗಳೆಲ್ಲ ಅಲೆಯಂತೆ ಆಡುತ್ತಿದ್ದುದನ್ನು ಕಂಡ ರಾಜಗುರುಗಳ ಸ್ಫೂರ್ತಿಯೂ ಇಮ್ಮಡಿಗೊಂಡಿರಬೇಕು. ನಿರಾಯಾಸವಾಗಿ ತಾಸುಗಟ್ಟಲೆ ಹಾಡಿದರು.

ಕಚೇರಿ ಮುಗಿಯುತ್ತಲೇ ಧಾರಾಕಾರ ಮಳೆ!

''ಇಂಥ ಪ್ರಸಂಗಗಳು ಕಾಕತಾಳೀಯ. ಸಂಗೀತ ಸರಸ್ವತಿಯ ಕೃಪೆ ಅನ್ನಿ, ಬೇಕಾದರೆ,'' ಎಂದು ಬಸವರಾಜರು ಸೌಜನ್ಯದಿಂದಲೇ ನುಡಿದು ಎಲೆ-ಅಡಿಕೆ ಮೆದ್ದರು. ನಮಗೂ ತಮ್ಮ ಸುವಾಸಿತ ಚಂಚಿಯ ತಾಂಬೂಲ ಸೇವನೆಯ ಭಾಗ್ಯವೊದಗಿಸಿ ವಾಹನವೇರಿ ಮೈಸೂರಿಗೆ ನಡೆದರು.

ಆಗ ಮಾತಾಡುತ್ತಿದ್ದಾಗ, ಇಂಥದೇ ಇನ್ನೊಂದು ಸಂದರ್ಭವನ್ನವರು ನೆನಪಿಸಿಕೊಂಡರು. ''1965 ಇರಬೇಕು. ವರ್ಧಾದ (ಮಹಾರಾಷ್ಟ್ರ) ಸಂಸ್ಥಾನದ ಮೆಹಕರ್‌ನೊಳಗ ಅಲ್ಲಿಯ ವೀರಶೈವ ಸಮಾಜದವರು ನನ್ನ ಕಚೇರಿ ಏರ್ಪಡಿಸಿದರು. ಎರಡು ವರ್ಷದಿಂದ ಅಲ್ಲೆ ಬರಗಾಲ ಬಿದ್ದಿತ್ತು. 'ಮಳಿ ಇಲ್ಲಾ-ಬೆಳಿ ಇಲ್ಲಾ-ಅಂಥಾದ್ರಾಗ ಇಂಥಾ ಸಂಗೀತ ಕಚೇರಿ ಯಾಕ ಬೇಕು?'' ಎಂದು ಸಂಘಟಕರಿಗೆ ವಂತಿಗೆ ಕೊಡಲು ಹಿಂದೇಟು ಹಾಕಿದ ಅಲ್ಲಿಯ ಮಾರವಾ

ಡಿಯೊಬ್ಬ ಛೇಡಿಸಿ ಕಳಿಸಿದ್ನಂತ. ನಾನು ದುಡ್ಡಿಗಾಗಿ ಹಾಡುವವ ಅಲ್ಲಾ ಅಂತ ಅವನಿಗೆ ಹೆಂಗ ಗೊತ್ತಾಗಬೇಕು? ಕಚೇರಿ ಸಾಗಿತ್ತು. ಶ್ರೋತೃಗಳಲ್ಲಿ ಒಬ್ಬ ಎದ್ದು ನಿಂತು, 'ದಯಮಾಡಿ ಮೇಘ ರಾಗ ಹಾಡಿ ಮಳಿ ಬರೂಹಂಗ ಮಾಡ್ರಿ' ಎಂದ. 'ಮಳೆ ಬರಸುವುದು-ದೀಪಾ ಹೊತ್ತಸೂದು ಸಂಗೀತದಿಂದ ಸಾಧ್ಯ ಅನ್ನೂ ಮಾತು ತಾನಸೇನರ ಕಾಲದ್ದು. ಈಗ ಅಂಥಾ ಸಿದ್ಧಿ ಯಾರಿಗಿದ್ದೀತು?' ಅಂದೆ. ಆದರೆ ರಸಿಕರು ಕೇಳಬೇಕಲ್ಲ. 'ಮೇಘ ರಾಗ ಹಾಡಲಿಕ್ಕೇಬೇಕು' ಅಂತ ಹಟಾ ಹಿಡದ್ರು. ಅವರನ ನಿರಾಶಾ ಮಾಡೂದಕ್ಕ ಮನಸಾಗದ ಮೇಘ ಮಲ್ಹಾರ ಹಾಡಿದೆ. ಷಡ್ಜದಿಂದ ಪಂಚಮ ಮುಟ್ಟೋ ಹೊತ್ತಿಗೆ ಯೋಗಾಯೋಗ ಅನ್ನೋ ಹಾಂಗ ಜೋರ ಮಳಿ! ಹಾಡು ನಿಂತ್ರೂ, ಅದು ನಿಲ್ಲಲಿಲ್ಲಾ! ಆ ಊರಿನವರು ಐನೂರು, ಮತ್ತ ಆ ಮಾರವಾಡಿ 1300 ರೂಪಾಯಿ ಗೌರವಧನ ನೀಡಿ ಸತ್ಕಾರ ಮಾಡೀದ್ರು.''

ಸುಮಧುರ ಶಾರೀರದಿಂದ, ಸಸ್ನೇಹ ಮಂದಹಾಸದಿಂದ ನಮ್ಮನ್ನೆಲ್ಲ ಮುದಗೊಳಿಸುತ್ತಿದ್ದ, ರಸಿಕರನ್ನು ರಸಪ್ರವಾಹದಲ್ಲಿ ಮೀಯಿಸುತ್ತಿದ್ದ ಪಂ. ಬಸವರಾಜ ರಾಜಗುರು ''ಸಂಗೀತದೊಂದಿಗೆ ನನ್ನ ಜೀವನವನ್ನೆಲ್ಲ ಸವೆಸಬೇಕು-ಸಂಗೀತದಲ್ಲೇ ನಾನು ಐಕ್ಯನಾಗಬೇಕು'' ಎಂಬ ಪರಮಗುರಿ ಹೊಂದಿದ್ದರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ 'ಸಂಗೀತ ಸಮ್ರಾಟ'ನಾಗಿ ಮೆರೆದು ಸಂಗೀತದಲ್ಲೇ ಐಕ್ಯವಾಗಿ ತಮ್ಮ ಜೀವನ ಧ್ಯೇಯವನ್ನು ಅವರು ಸಾಧಿಸಿಬಿಟ್ಟರು! ಅವರು ನಮ್ಮೊಂದಿಗಿಲ್ಲ. ನಿಜ. ಆದರೆ ಮಧುರ ಸ್ಮೃತಿಗಳಿಗೆ ಸಾವಿಲ್ಲ.

''ಗದುಗಿನ ಗಾರುಡಿಗ ಗಾನಯೋಗಿ ಪಂಚಾಕ್ಷರ ಗವಾಯಿಗಳ ಕೃಪಾಕಟಾಕ್ಷದಿಂದಲೇ ನಾನು ಹಿಂದೂಸ್ತಾನಿ ಕ್ಷೇತ್ರದಲ್ಲಿ ಬೆಳೆಯಲು ಸಾಧ್ಯವಾಯಿತು'' ಎಂದು ತಮ್ಮ ಕೊನೆಯುಸಿರಿನವರೆಗೂ ಗುರುಸ್ಮರಣೆ ಮಾಡುತ್ತಿದ್ದರು ರಾಜಗುರು. ಕನ್ನಡ, ಸಂಸ್ಕೃತ, ಹಿಂದಿಗಳನ್ನಲ್ಲದೆ ಆಯು



ರ್ವೇದ ಶಾಸ್ತ್ರವನ್ನೂ ಅರಿತಿದ್ದರು ಶಿವಯೋಗ ಮಂದಿರದಲ್ಲಿ ಮುಂಜಾನೆ, ಮಧ್ಯಾಹ್ನ ಹಾಗೂ ಸಾಯಂಕಾಲ ವೇಳೆಗೆ ಅನುಗುಣವಾದ ರಾಗಗಳ ಕಲಿಕೆ, ಆಲಾಪನೆಯಲ್ಲಿ ಪಂಚಾಕ್ಷರ ಗವಾಯಿಗಳಿಂದ ನಿರಂತರ ಪಾಠ. ಕಲಿತದ್ದನ್ನು ತಾಲೀಮು ಮಾಡುವುದು. ದಿಗ್ಗಜಗಳ ಸಂಗೀತವನ್ನು ಕೇಳಿ ಮನನ ಮಾಡಿಕೊಳ್ಳುವುದು-ಹೀಗೆ ಬಸವರಾಜ ರಾಜಗುರುಗಳು ತಮ್ಮದೇ ಛಾಪು ಸಾಧಿಸುವತ್ತ ಅತ್ಯಂತ ಪರಿಶ್ರಮಪಟ್ಟರು.

''ಹಿಂದಿನ ಕಾಲದಲ್ಲಿ ಶ್ರೇಷ್ಠ ಸಂಗೀತಗಾರರಿದ್ದರು. ಆಗಿನ ವಿದ್ವಾಂಸರ ಸಾಧನೆ ಮಹೋನ್ನತವಾಗಿತ್ತು. ಈಗಿನವರು ಕಲಿತಿರುವುದೇ ಕಡಿಮೆ. ರೇಡಿಯೋದಲ್ಲಿ ಪ್ರಸಾರ ಮಾಡುವುದನ್ನೇ ಕೇಳಿ, ನಾಲ್ಕು ತಾನ್ ಬಾಜಿ ಮಾಡುವುದರಲ್ಲೇ ಸುಸ್ತಾಗಿ ಬಿಡುತ್ತಾರೆ. ಇದಕ್ಕೆ ಹಲವಾರು ಕಾರಣಗಳಿವೆ. ಸಿನಿಮಾ ಬಂತು, ಟಿ.ವಿ. ಬಂತು, ರೇಡಿಯೋ ಅಂತೂ ಸರಿ. ಈ ರೀತಿ ನಮ್ಮ ಗಮನ ಬೇರೆ ಬೇರೆ ಮಾಧ್ಯಮಗಳತ್ತ ಹಂಚಿ ಹೋಗಿದೆ. ವ್ಯವಧಾನದಿಂದ ಗುರುಮುಖೇನ ಸಂಗೀತ ಕಲಿಯುವ ಆಸಕ್ತಿ ಯಾರಲ್ಲಿ ಉಳಿದಿದೆ?'' ಎಂದು ಬಸವರಾಜರು ಇಂದಿನ ಪೀಳಿಗೆಯ ಬಗ್ಗೆ ಹೇಳಿದ್ದುಂಟು.

''ಲಹರಿ ಬಂದಾಗ ತಾಸು-ದೀಡ್‌ತಾಸು

ಮುಖಪುಟದಲ್ಲಿ
ಪ್ರಕಟವಾದ ರಾಜಗುರು
ಅವರ ಛಾಯಾಚಿತ್ರ,
ಶಿಶಿ ಸಾಲಿ ಸೆರೆಹಿಡಿದದ್ದು.

ಮಹಾಲೆ ಕಂಡಂತೆ ....

ಬಸವರಾಜ ರಾಜಗುರು ಅವರ ಆಲಾಪನೆ ಅಲೆಗಳು ಸೆರೆ ಹಿಡಿದ ಸಹೃದಯರ ಸಂಖ್ಯೆ ಲೆಕ್ಕದ ತೆಕ್ಕೆಗೆ ಸಿಕ್ಕಲಾರದು. ಆದರೆ ಪ್ರಶಸ್ತಿ ವಿಜೇತ ಪ್ರಸಾಧನ ಪಟು ಗಜಾನನ ಮಹಾಲೆಗೆ ಆ ಸಂಖ್ಯೆಯಲ್ಲಿ ವಿಶಿಷ್ಟ ಸ್ಥಾನವಿದೆ. ಬಡಕಲು ದೇಹದ ಮಹಾಲೆ ರಾಜಗುರು ಅವರ ಮನೆ ಪ್ರವೇಶಿಸಿದ್ದು ಸಂಗೀತಪ್ರೇಮಿಯಾಗಿ, ರಂಗರಸಿಕನಾಗಿ ಮತ್ತು ನಾಪಿತನಾಗಿ; ಮನದಲ್ಲಿ ನೆಲೆ ನಿಂತದ್ದು ಮಾತ್ರ ಸಂಗೀತ ಯಾತ್ರೆಯ ಸಾಥಿಯಾಗಿ. ಅರವತ್ತರ ಮಹಾಲೆ ರಾಜಗುರು ಬಗೆಗಿನ ತನ್ನ ನೆನಪಿನ ಸುರುಳಿ ಬಿಚ್ಚಿಕೊಳ್ಳುವ ರೀತಿ ಅನನ್ಯವೇ ಸರಿ.

ಮಹಾಲೆಗೆ ರಾಜಗುರು ಅವರೊಂದಿಗಿನ ಒಡನಾಟ ನಾಲ್ಕು ದಶಕದಷ್ಟು ಹಳೆಯದು. ಆಗಿನ್ನೂ ಇಪ್ಪತ್ತರೊಳಗಿನ ತರುಣ ಮಹಾಲೆ. ಕರ್ನಾಟಕ ವಿ.ವಿ.ದ ಸಂಗೀತ ವಿಭಾಗಕ್ಕೆ ರಾಜಗುರು ಅವರು ಅತಿಥಿ ಉಪನ್ಯಾಸಕರಾಗಿ ಬರುತ್ತಿದ್ದರು. ಆಗೆಲ್ಲ ಮಹಾಲೆಯನ್ನು ಸಂಗೀತ ಉಪಕರಣಗಳ ಮೇಲ್ವಿಚಾರಕನೆಂದು ಅಲ್ಲಿ ಕರೆದೊಯ್ಯುತ್ತಿದ್ದರು.

ಕೆಲವು ಕಚೇರಿಗಳಲ್ಲಿ ಮಹಾಲೆ ಬಸವರಾಜರಿಗೆ ಹಾರ್ಮೋನಿಯಂ ಸಾಥಿ ನೀಡಿದ್ದುಂಟು.

ರಾಜಗುರು ಅವರಿಗೆ ಶಿಷ್ಯರೆಂದರೆ, ಅಭಿಮಾನಿಗಳೆಂದರೆ ತುಂಬಾ ಮಮತೆ. ಅದರೊಳಗೆ ಜಾತಿ ಎಂದೂ ಮೂತಿ ತೂರಿಸುತ್ತಿರಲಿಲ್ಲ. ತರತರಮದ ನಡವಳಿಕೆಯನ್ನು ಅವರು ಎಲೆಡಿಕೆಯೊಂದಿಗೇ ಜಗಿದು ಉಗಿದವರು.

ದಿನ ಬಿಟ್ಟು ದಿನ ಅವರ ಗಲ್ಲದ ಮೇಲಿನ ಗಡ್ಡ ಇಲ್ಲವಾಗಿ ನುಣುಪು ನೆಲೆಸಬೇಕು. ಅದಕ್ಕೆ ಮಹಾಲೆಯೇ ಬೇಕು. ಅದು ಬರಿ ಹಾಳು ಹರಟೆಯ ಕ್ಷೌರವಾಗುತ್ತಿರಲಿಲ್ಲ. ದೇಶದ ಯಾವುದೋ ಮೂಲೆಯಲ್ಲಿ ನಡೆಸಿಕೊಟ್ಟ ಕಚೇರಿ ಪ್ರಸಂಗವನ್ನು ಹಾಸ್ಯಮತ್ತಾಗಿ ಮಹಾಲೆಯೆದುರು ಬಣ್ಣಿಸುತ್ತಿದ್ದರು. ಇತರ ಗಾಯಕರ ಶೈಲಿಯನ್ನು ನಿರ್ದಯವಾಗಿ ವಿಡಂಬಿಸುವ ಅಧಿಕಾರವನ್ನೂ ಬಸವರಾಜರು ಚಲಾಯಿಸದೇ ಬಿಡುತ್ತಿರಲಿಲ್ಲ. ಆದರೆ ಟೀಕೆಗಳೆಲ್ಲವೂ ಸಕಾರಣವಾಗಿರುತ್ತಿದ್ದವು.

ಬೈಠಕ್ಕಿಗೆ ಕುಳಿತು ಶಿಷ್ಯರೊಂದಿಗೆ ಸಂಗೀತದಲ್ಲಿ ಕರಗಿ ಹೋದರೆಂದರೆ ರಾಜಗುರು ಅವರಿಗೆ ನಿತ್ಯದ ಕ್ಷೀರಪಾನದ ನೆನಪೂ ಉಳಿಯುತ್ತಿರಲಿಲ್ಲ. ಅಂತೆಯೇ ಆಲಾಪನೆ ಆಳಕ್ಕಿಳಿಯುವ ಮುಂಚೆ ಲೋಟ ತುಂಬ ಹಾಲು ಕುಡಿಸುವ ಹೊಣೆ ಅವರ ಹೆಂಡತಿಯದು. ಚೀಸುಗಳ ಹೊಳೆಯಲ್ಲಿ ರಾಜಗುರು ಮೀಯುತ್ತಿರುವಾಗ ಮಹಾಲೆಯ ಚಿತ್ತ ಹುತ್ತಗಟ್ಟುತ್ತಿತ್ತು.

ಪ್ರವಾಸದಲ್ಲಿ ಬೇರೆಡೆ ದಾಡಿ ಮಾಡಿಸಿಕೊಂಡಾಗ ರಾಜಗುರು ಅವರಲ್ಲಿ ಕಸಿಮಿಸಿ ಕದಡುತ್ತಿತ್ತು. "ಮಹಾಲೆ, ಕ್ಷೌರ ಮಾಡೂದೂ ಒಂದು ಕಲೆ" ಮಹಾಲೆಯ ಬೆನ್ನು ಚಪ್ಪರಿಸುತ್ತಿದ್ದರು.

ಸಂಗೀತ, ಚಿತ್ರಕಲೆ, ಕ್ಷೌರ ಮೇಕಪ್ ಹೀಗೆ ಮಹಾಲೆ ಮುಟ್ಟಾಟವಾಡುವಾಗ ರಾಜಗುರು ಸೂಚಿಸಿದ್ದರು: "ಯಾವುದಾದರೂ ಒಂದು ಬಿಗಿ ಹಿಡಕೋ, ಅದರಲ್ಲೇ ಸಾಧನೆ ಮಾಡು."

ಶುದ್ಧ ತುಪ್ಪದ ತಾಜಾ ಸಿಹಿ ತಿಂಡಿಗಳೆಂದರೆ ಬಸವರಾಜರಿಗೆ ಪಂಚಪ್ರಾಣ. ಆದರೆ ಸಿಹಿಮೂತ್ರ ರೋಗಿಯಾಗಿದ್ದ ಅವರಿಗೆ ಸಿಹಿ ತಿನ್ನದಂತೆ ವೈದ್ಯರು ನಿರ್ಬಂಧ ಹೇರಿದಾಗ, "ಏನೂ ತಿನ್ನಬ್ಯಾಡದಂದರ ಹೆಂಗೋ ಮಹಾಲೆ? ವಿಷಾ ತಗೋಬೇಕೇನು?" ಎಂದು ವ್ಯಥೆಪಟ್ಟಿದ್ದರು.

ಗೂಟಕ್ಕೆ ನೂಲಿನ ಹಗ್ಗ ಬಿಗಿದು ಕಾಲು ಕಟ್ಟಿಕೊಂಡು ನೆಲದ ಮೇಲೆ ಅಂಗಾತ ಮಲಗುತ್ತಿದ್ದ ಬಸವರಾಜರು ಮಾಲಿಶ್ ಮಾಡಲು ಮಹಾಲೆಗೆ ಅನುವು ಮಾಡುತ್ತಿದ್ದರು. "ಎಂಟೆಂಟು ತಾಸು ಕುಂದ್ರಬೇಕು ಮಹಾಲೆ, ಕಾಲಾಗ ರಕ್ತ ಹೆಪ್ಪುಗಟ್ಟತೈತಿ." ಮಹಾಲೆ ನೀವುತ್ತಿದ್ದ. ಮತ್ತೊಂದು ಕಚೇರಿಯಲ್ಲಿ ಕೂಡಲು ಸಜ್ಜಾಗುತ್ತಿದ್ದವು ಕಾಲುಗಳು.

ಬೆಂಗಳೂರು ಕರೆಯಿತು. ಸಾವು ಅಲ್ಲಿ ಹೊಂಚು ಹಾಕಿ ಕಾಯುತ್ತಿತ್ತು. ಅಲ್ಲಿಗೆ ತೆರಳುವ ಹಿಂದಿನ ದಿನವಷ್ಟೆ ಮಹಾಲೆ ರಾಜಗುರು ಅವರ ದಾಡಿ ಮಾಡಿದ್ದ. ಮತ್ತೆಂದೂ ಮಹಾಲೆಗೆ ಆ ಭಾಗ್ಯ ಲಭಿಸದಂತೆ ಬಸವರಾಜರು ಬದುಕಿನಿಂದ ಎದ್ದು ಹೋದರು.

●

● ಚಂದ್ರಕಾಂತ ವಡ್ಡು

ನಾನೊಬ್ನಽ ಹಾಡ್ತೀನಿ. ಅದನ್ನ ಕೇಳಿದಾಗ ವಿದ್ಯಾರ್ಥಿಗಳಿಗೆ ಕನಿಷ್ಠ ಪಕ್ಷ ರಾಗದ ವಿಸ್ತಾರ-ಆಳ ಎಷ್ಟು ಅನ್ನುವುದಾದರೂ ತಿಳಿಯುತ್ತದೆ. ಕಲಿಯುವವರ ಸಂಖ್ಯೆ ಹೆಚ್ಚಬೇಕು. ಅದರಲ್ಲಿ ಒಂದಿಬ್ಬರಾದರೂ ಉತ್ತಮ ಸಂಗೀತಗಾರರಾಗಬಹುದು,'' ಎಂದು ಬಸವರಾಜರು ಯುವ ಪೀಳಿಗೆ ಸಂಗೀತಾಭ್ಯಾಸಿಗಳ 'ಕಾಟಾಚಾರದ ಕಲಿಕೆ'ಯ ಬಗ್ಗೆ ಕಟುವಾಗಿ ಟೀಕಿಸಿದ್ದುಂಟು. ಆದರೆ, ಶಾಸ್ತ್ರೀಯ ಸಂಗೀತವನ್ನು ಕಲಿಯುವವರ ಸಂಖ್ಯೆ ಕಡಿಮೆಯಾಗುತ್ತಿದೆಯಾದರೂ ಕೇಳುಗರ ಸಂಖ್ಯೆಗೇನೂ ಕೊರತೆಯಿಲ್ಲ ಎಂಬ ಸಮಾಧಾನವೂ ಅವರಿಗಿತ್ತು.

ರಾಜಗುರು ಹೆಜ್ಜೆಗಳು ....

- **1920** – ಆಗಸ್ಟ್ 24, ಜನನ (ಯಲಿವಾಳ, ಧಾರವಾಡ ಜಿಲ್ಲೆ)
- **1929** – ವಾಮನರಾವ್ ಮಾಸ್ತರರ ನಾಟಕ ಕಂಪನಿಗೆ ಸೇರ್ಪಡೆ.
- **1930** – ಹುಬ್ಬಳ್ಳಿ, ಮೂರುಸಾವಿರಮಠದಲ್ಲಿ ಸಂಸ್ಕೃತಾಭ್ಯಾಸ. ಪಂಚಾಕ್ಷರಿ ಗವಾಯಿಗಳ ಶಿಷ್ಯನಾದರು.
- **1936** – ಹಂಪೆಯ ವಿಜಯನಗರ ಉತ್ಸವದಲ್ಲಿ ಮೊದಲ ಸಂಗೀತ ಕಚೇರಿ.
- **1940** – ಪಂಚಾಕ್ಷರಿ ಗವಾಯಿಗಳ ನಾಟಕ ಕಂಪನಿ ಸ್ಥಾಪನೆ, ನಟನಾಗಿ ಸೇವೆ.
- **1943**–**1946** ಸಿಂಧ್-ಪಂಜಾಬ್‌ಗಳಲ್ಲಿ ವಾಸ್ತವ್ಯ, ಸಂಗೀತಕಚೇರಿ.
- **1950** – ಧಾರವಾಡದಲ್ಲಿ ಖಾಯಂ ವಸತಿ.
- **1971** – 'ಪದ್ಮಶ್ರೀ' ಪ್ರಶಸ್ತಿ.
- **1982** – ಕೇಂದ್ರ ಸಂಗೀತ–ನಾಟಕ ಅಕಾಡೆಮಿ ಪ್ರಶಸ್ತಿ.
- **1983** – ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.
- **1990** – ಕರ್ನಾಟಕ ವಿ.ವಿ.ಯ ಗೌರವ ಡಾಕ್ಟರೇಟ್.
- **1991** – ಜುಲೈ 21, ನಿಧನ.



"ಮಾನಸಿಕ ನೆಮ್ಮದಿಯಂಥ ಸಂಪತ್ತು ಮತ್ತೊಂದಿಲ್ಲ'' ಎನ್ನುತ್ತಿದ್ದ ರಾಜಗುರು ರಾಗಪಾಂಡಿತ್ಯದಷ್ಟೆ ರುಚಿಪಾಂಡಿತ್ಯವನ್ನೂ ಪಡೆದಿದ್ದರು. ಸಂಗೀತದ ಜೈತ್ರ ಯಾತ್ರೆಗೆ ಹೊರಡುವ ಮುನ್ನ ಅವರು ಅಷ್ಟು ದಿನಗಳಿಗಾಗಿ 'ಬುತ್ತಿ ಕಟ್ಟಿಕೊಳ್ಳು'ವುದರಲ್ಲಿ ಮಗ್ನರಾಗಿರುತ್ತಿದ್ದರು. ಎಂಥಾ ಬುತ್ತಿ ಎನ್ನುತ್ತೀರಿ ... ಬೇಸನ್ ಉಂಡಿ, ಚಕ್ಕುಲಿಯ ಡಬ್ಬಗಳು, ಎಣ್ಣೆಗಾಯಿ ಪಲ್ಯ, ಚಪಾತಿ ಗಂಟು. ಜತೆಗೆ ನಾನಾ ನಮೂನೆಯ ಚಟ್ನಿಪುಡಿಗಳು. ಇದೆಲ್ಲವನ್ನು ಬೇರೆಯವರು ಮಾಡಿಕೊಡುತ್ತಿರಲಿಲ್ಲ-ಹಾಡುತ್ತಲೇ ರಾಜಗುರು ಇವನ್ನೆಲ್ಲ ಸಿದ್ಧಪಡಿಸಿಕೊಳ್ಳುತ್ತಿದ್ದರು.

''ಶಾಸ್ತ್ರೀಯ ಸಂಗೀತಕ್ಕೆ ಭವಿಷ್ಯ ಇದೆ. ಆದರೆ ನಮ್ಮ ಪರಂಪರೆಯ ದಿನಮಾನ ಬೇರೆಯಾಗಿತ್ತು. ಆ ದಿನಗಳು ಮತ್ತೆ ಬರಲಿ ಎಂದು ಹಂಬಲಿಸುವುದರಲ್ಲಿ ಅರ್ಥ ಇಲ್ಲ. ಗುರುಗಳ ಸೇವೆ ಮಾಡಿ ಭಕ್ತಿಯಿಂದ ಆರಾಧನಾ ಭಾವದಿಂದ ಕಲಿತೆವು. ಕಲಿಸುವವರು ಇದ್ದೇವೆ. ಕಲಿಯುವವರು ನಮ್ಮ ಕಡೆ ಬರಬೇಕು. ಪರಂಪರೆ, ಪದ್ಧತಿ, ಶಾಸ್ತ್ರೀಯತೆ ಉಳಿಸಿಕೊಳ್ಳುವಷ್ಟು ಮೂಲಭೂತ ನಿಷ್ಠೆಯುಳ್ಳವರು ಸಂಗೀತ ಕಲಿಯಲು ಮುಂದೆ ಬಂದರೆ ಈಗಲೂ ಈ ಕ್ಷೇತ್ರ ಹುಲುಸಾಗಿಯೇ ಇರುತ್ತದೆ'' ರಾಜಗುರುಗಳ ಈ ಸಲಹೆ ಯುವ ಸಂಗೀತಾಭ್ಯಾಸಿಗಳಿಗೆ ಬಹು ಉಪಯುಕ್ತ.

ಗ್ವಾಲಿಯರ್, ಕಿರಾಣಾ ಮತ್ತು ಪತಿಯಾಳಾ ಘರಾಣೆಗಳ ತ್ರಿವೇಣಿ ಸಂಗಮವಾಗಿದ್ದ ರಾಜಗುರು ಅವರದು ವಿಭಿನ್ನ-ವಿಶಿಷ್ಟ ಶೈಲಿ. ಪಂಡಿತ-

ಪಾಮರರೆಲ್ಲರನ್ನೂ ಮೋಡಿಮಾಡುವಂಥದು. ಗ್ವಾಲಿಯರ್ ಘರಾಣಾದ ಹಿರಿಯ ಉಸ್ತಾದ್ ನೀಲಕಂಠ ಬುವಾ ಮಿರಜಕರ್, ಕಿರಾಣಾ ಶೈಲಿಯ ಲಾಹೋರಿನ ಖಾನ್ ಸಾಹೇಬ್ ಅಬ್ದುಲ್ ವಹೀದ್ ಖಾನ್, ಪುಣೆಯ ಸುರೇಶ್ ಬಾಬು ಮಾನೆ, ಇನಾಯತ್ ಖಾನ್, ಪಾಕಿಸ್ತಾನದ ಲತೀಫ್ ಖಾನ್ ಮುಂತಾದ ದಿಗ್ಗಜಗಳ ಬಳಿ ಸಂಗೀತಾಭ್ಯಾಸ ಮಾಡಿ ರಸಿಕರಿಗೆ ತಮ್ಮ ಸಂಗೀತ ಸುಧೆಯನ್ನು ಧಾರೆ ಎರೆದವರು ರಾಜಗುರುಗಳು.

ಈ ಎಲ್ಲ ಗುರುಗಳ 'ಗುಲಾಮ'ನಾಗಿ ಬೆಳೆದ ಬಸವರಾಜರಿಗೆ ಆ ಕೈಂಕರ್ಯದಿಂದ ಸಿಕ್ಕದ್ದು ಹನ್ನೆರಡು ಸಾವಿರ ಚೀಜುಗಳ ದೊಡ್ಡ ಲಾಭ. ಹನ್ನೆರಡು ಸಾವಿರ ಸಂಗೀತ ಕಚೇರಿಗಳನ್ನು ನಡೆಸಿಕೊಟ್ಟ ಖ್ಯಾತಿಯೂ ಅವರಿಗಿದೆ. ದಾಸರ ಪದಗಳು, ಮರಾಠಿ ಅಭಂಗ, ಶರಣರ ವಚನಗಳನ್ನು ಜನಪ್ರಿಯಗೊಳಿಸಿದ ರಾಜಗುರು ನಾಟ್ಯ

ಸ್ವರ ಧಾರೆಯೆರೆದವರು

ನನ್ನೂರು ಗೋರ್ಸಗದ್ದೆ (ಉತ್ತರ ಕನ್ನಡ)ಯಿಂದ ಪದವಿ ಪಡೆಯಲೆಂದು ಧಾರವಾಡಕ್ಕೆ ಬಂದಾಗ ಮೊದಲು ನನ್ನ ಕಣ್ಣಿಗೆ ಬಿದ್ದದ್ದು ಸಿತಾರ್. ಆದರೆ ತಂತಿಯೊಡಲು ನನ್ನನ್ನೇಕೋ ಸಲೀಸಾಗಿ ಒಪ್ಪಿಕೊಳ್ಳಲಿಲ್ಲ. ಹುಡುಗನಾಗಿದ್ದಾಗ ನಾಟಕಗಳಿಗೆ ಹಾಡುತ್ತಿದ್ದುದು, ಸ್ತ್ರೀ ಪಾತ್ರ ಮಾಡಿ ಖುಷಿಪಡುತ್ತಿದ್ದುದು, ಯಕ್ಷಗಾನ ಭಾಗವತರಾದ ನನ್ನ ತಂದೆಯ ಸ್ವರ ಮಾಧುರ್ಯ ನನಗೂ ಬಂದೀತೆಂಬ ಅಭಿಲಾಷೆ ಮುಂತಾದವುಗಳೆಲ್ಲ ಸೇರಿ ನನ್ನನ್ನೊಯ್ದು ಕೆಡವಿದ್ದು ಪಂ.ಬಸವರಾಜ ರಾಜಗುರುಗಳ ಪಾದಕ್ಕೆ!

ನಾನಿರುತ್ತಿದ್ದ ರೂಮು ಗುರುಗಳ ಮನೆಗೆ ತೀರ ಹತ್ತಿರದಲ್ಲಿತ್ತು. ಒಂದಿನ ಧೈರ್ಯ ಮಾಡಿ ಹೋದೆ. ಆ ಮನೆಯ ಅಂಗಳದಲ್ಲಿ ಒಬ್ಬ ವ್ಯಕ್ತಿ ದೊಡ್ಡ ಹೊಟ್ಟೆ ಬಿಟ್ಟುಕೊಂಡು ಒಂದು ನಿಕ್ಕರು, ಕನ್ನಡಕ ಮತ್ತು ಟೋಪಿಗಳಲ್ಲಿ ತಮ್ಮನ್ನು ಅಲಂಕರಿಸಿಕೊಂಡು ನಿಂತಿದ್ದರು. ನನ್ನೆಡೆಗೆ ಏನಾಗಬೇಕಿತ್ತು? ಎಂಬಂತೆ ನೋಡಿದರು. ''ಇಲ್ಲಿ ರಾಜಗುರುಗಳು ಎಲ್ಲಿರ್ತಾರೆ?'' ಅಂದೆ. ''ನಾನೇ ಇದ್ದೀನಿ, ಹೇಳು'' ಅಂದರು. ಒಂದು ಕ್ಷಣ ಜೀವ ತಣ್ಣಗಾಯಿತು. ''ಸಂಗೀತ ಕಲಿತೀನಿ'' ಅಂದೆ.

''ಆರು ತಿಂಗಳ ತನಕ ನಿನಗೆ ಸಂಗೀತ ಕಲಿಸುತ್ತೇನೆ. ನಿನಗೆ ಅದು ಮೈಗೂಡಿತೋ, ಸರಿ. ಇಲ್ಲವಾದರೆ ನಿಲ್ಲಿಸಿಬಿಡುತ್ತೇನೆ. ನಂತರ ಸುಮ್ಮನೆ ಕಾಡಬೇಡ,'' ಎಂದು ಎಚ್ಚರಿಸಿಯೇ ನನಗೆ ಸ್ವರ ಪರಿಚಯ ಮಾಡಿಕೊಟ್ಟರು ರಾಜಗುರುಗಳು. ಅವರಿಗಾಗ ತುಂಬ ಕಚೇರಿಗಳು, ಕಾರ್ಯಕ್ರಮಗಳು. ನಡುವೆ ದೊರೆತ ಬಿಡುವಿನಲ್ಲೇ ನನ್ನನ್ನು ಕರೆದು ಕೂಡಿಸಿಕೊಳ್ಳುತ್ತಿದ್ದರು.

ಗುರುಗಳಿಗೊಂದು ಅಭ್ಯಾಸವಿತ್ತು ನೋಡಿ. ಅವರು ಹಾಡುವಾಗ ಜೊತೆಗೊಬ್ಬರಿದ್ದು, ಅವರು ಹಾಡಿದ್ದನ್ನೇ ಹಾಡಿದರೆ ಅದೇನೋ ಸ್ಫೂರ್ತಿ. ತುಂಬ ಉತ್ತೇಜಿತರಾಗುತ್ತಿದ್ದರು. ಹಾಗೆ ಅವರೊಂದಿಗೆ ದನಿಗೂಡಿಸುವ ಅವಕಾಶ ನನಗೆ ಅಕಸ್ಮಾತ್ತಾಗಿ ದೊರಕಿದ್ದು ಮಿರಜ್ ಹತ್ತಿರದ ಊರಿನ ಕಾರ್ಯಕ್ರಮದಲ್ಲಿ. ಅವರೊಂದಿಗೆ ಕುಳಿತಿದ್ದ ನಾನು ಹಾಡತೊಡಗಿದೆ. ಅಂದು ನನ್ನ ಭಾಗ್ಯದ ಬಾಗಿಲು ತೆರೆಯಿತು. ಮುಂದೆ ಅವರು ಕೈ ಬಿಡಲಿಲ್ಲ. ಕುಳಿತುಬಿಟ್ಟರು ಪಾಠಕ್ಕೆ. ತುಂಬು ಮಮತೆಯಿಂದ ಸ್ವರಗಳ ಧಾರೆಯೆರೆದರು. ಮುಂದೆ ಅವರ ಎಲ್ಲ ಕಾರ್ಯಕ್ರಮಗಳಿಗೂ ನಾನು ಜೊತೆಯಾಗಿ ಹೋದೆ. ಊರು ಸುತ್ತುತ್ತ, ಸುತ್ತುತ್ತ ಸಂಗೀತ ಗಟ್ಟಿಯಾಯಿತು. ●

● **ಹಾಸಣಗಿ ಗಣಪತಿ ಭಟ್ಟ**

(ಸಂಯುಕ್ತ ಕರ್ನಾಟಕದ 'ಸಾಪ್ತಾಹಿಕ ಸೌರಭ'ದಿಂದ)

ಸಂಗೀತ(ರಂಗಗೀತೆ)ದಲ್ಲೂ ಮರೆಯದ ಹೆಸರು.

"ಅವರ ಬಳಿ ತಂಬೂರಿ ಒಂದಿದ್ದರೆ ಸಾಕು, ತಮ್ಮ ಸುಶ್ರಾವ್ಯ ಕಂಠದಿಂದ ಬಾಳಿನ ಎಂಥ ವಿಷವನ್ನಾದರೂ ಅಮೃತವಾಗಿಸಬಲ್ಲರು" ಎಂಬ ಮಾತು ರಾಜಗುರುಗಳ ಮಟ್ಟಿಗೆ ಸತ್ಯ. ಮುಗ್ಧ ಮನಸ್ಸು, ನಿರ್ಭಿಡೆಯ ಮಾತು, ಪ್ರತಿ ಮಾತಿನಲ್ಲೂ ಸೊಗಸು-ರಸಿಕತೆ. ಸಿಟ್ಟು ಇವರ ಬಳಿ ಸುಳಿಯುತ್ತಿರಲೇ ಇಲ್ಲ. ಸದಾ ಸಂಗೀತದ ಚಿಂತೆ. 'ಪರ ಚಿಂತೆ ಎಮಗೆ ಏಕಯ್ಯಾ' ಎಂಬ ವಚನವನ್ನು ಹಾಡುತ್ತಿದ್ದ ರಾಜಗುರು ಬೇರೆಯಾರ ಉಸಾಬರಿಗೂ ಹೋಗುತ್ತಿರಲಿಲ್ಲ.

"ನಾವು ಹೋಗೋದು ರಾಜಮಾರ್ಗ. ಕೆಳಗಿರೋ ಅಥ್ವಾ, ಎಡಬಲಕ ಇರೋ ಮುಳ್ಳು-ಕಂಟಿ, ಗಟಾರಾ-ಪಟಾರಾ ಯಾಕ ನೋಡಬೇಕು? ಬ್ಯಾರೇದವರ ಸ್ವಭಾವದ ಬಗ್ಗೆ ತಲಿ ಕೆಡಿಸಿಕೊಳ್ಳಲಿಕ್ಕೆ ನಾ ಹೋಗೂದಿಲ್ಲಾ" ಎಂದವರು ಕಲಾವಿದರಲ್ಲಿ ಮಧುರಬಾಂಧವ್ಯದ ಕೊರತೆಯಿದೆ ಎಂಬ ಮಾತಿಗೆ ಸ್ಪಷ್ಟ ಉತ್ತರ ನೀಡುತ್ತಿದ್ದರು.

ಸ್ವಾಭಿಮಾನಕ್ಕೆ ಚ್ಯುತಿ ಬಂದರೆ ಉಗ್ರವಾಗಿ ಪ್ರತಿಭಟಿಸುತ್ತಿದ್ದ ರಾಜಗುರು ಸ್ವಾವಲಂಬಿಯಾಗೇ ಬಾಳಿದವರು. ಪ್ರಚಾರಪ್ರಿಯರಾಗದೆ ಜನಪ್ರಿಯರಾದರು. ಹಣಕ್ಕಾಗಿ ಸಂಗೀತ ಕಚೇರಿಯನ್ನು ನೀಡುವುದರಲ್ಲಿ ಅವರಿಗೆ ಎಳ್ಳಷ್ಟೂ ವಿಶ್ವಾಸವಿರಲಿಲ್ಲ. "ಹೆಚ್ಚು ರೊಕ್ಕಾ ಕೊಡಬ್ಯಾಡ್ರಿ. ಎಣಸೂದು ತ್ರಾಸಿನ ಕೆಲಸಾ" ಎಂದು ಕಚೇರಿಗಳ ಸಂಘಟಕರಿಗೆ ಹೇಳುತ್ತಿದ್ದುದೂ ಉಂಟು. ಸಿದ್ಧಿಯ ಉತ್ತುಂಗಕ್ಕೇರಿದ್ದರೂ ವಶೀಲಿಯನ್ನೆಂದೂ ನಂಬಲಿಲ್ಲ ರಾಜಗುರು.

ರಾಜಗುರು ನಿಧನದಿಂದ ಮಧುರಗೀತೆಯೊಂದು ಮರೆತಂತಾಗಿದೆ. ಆದರೆ ಆ ಮಾಧುರ್ಯ ಮಸಳಿಸದ ಹಾಗೆ ನೋಡಿಕೊಳ್ಳುವುದು ತಮ್ಮ ಪರಂಪರೆಯ ವಾರಸುದಾರರೆಂದು ಅವರೇ ಗುರುತಿಸಿದ ಶಿಷ್ಯವೃಂದಕ್ಕಿರುವ ದೊಡ್ಡ ಜವಾಬ್ದಾರಿ. ●

ಬೆಳಕಿಂಡಿ

★ ಅಪರಾಧದಿಂದ ಲಾಭ ಪಡೆಯುವವರೆಲ್ಲರೂ ಅಪರಾಧಿಗಳೇ.

- ಫ್ರೆಂಚ್ ಗಾದೆ

★ ತಿಳಿದುಕೊಳ್ಳಬಯಸುವುದೆಂದರೆ ಅನೇಕ ವೇಳೆ ಕೇವಲ ಅನುಮಾನಿಸುವುದನ್ನು ಕಲಿತ ಹಾಗೆ.

- ಅಂಟಾಯ್ನೆಟ್ ಡಿಪಾಲಿಯರ್ಸ್

★ ಜೀವನದಲ್ಲಿ ಎರಡು ದುರಂತಗಳಿವೆ, ನಿಮ್ಮ ಮನದಾಸೆಗಳು ಕೈಗೂಡದಿರುವುದು ಒಂದಾದರೆ, ಕೈಗೂಡುವುದು ಇನ್ನೊಂದು.

- ಜಾರ್ಜ್ ಬರ್ನಾರ್ಡ್ ಷಾ

★ ನಾನೊಂದು ಧರ್ಮವನ್ನು ಆರಿಸಿಕೊಳ್ಳುವುದಾದರೆ, ಲೋಕಕ್ಕೆಲ್ಲ ಪ್ರಾಣದಾಯಕನಾದ ಸೂರ್ಯನೇ ನನ್ನ ದೇವರು.

- ನೆಪೋಲಿಯನ್ ಬೋನಾಪಾರ್ಟ

★ ಒಂದು ಗೆಳೆತನಕ್ಕೆ ನಗು ಕೆಟ್ಟ ಆರಂಭವೇನೂ ಅಲ್ಲ. ಅದು ಕೊನೆಗೊಳ್ಳಲಂತೂ ಬಲು ಒಳ್ಳೆಯದು.

- ಆಸ್ಕರ್ ವೈಲ್ಡ್

★ ರಾತ್ರಿಯಾಗುವ ಹೊತ್ತಿಗೆ ನಾಸ್ತಿಕ ದೇವರನ್ನು ಅರ್ಧ ನಂಬಿರುವನು.

- ಎಡ್ವರ್ಡ್ ಯಂಗ್

★ ಪ್ರೇಮವೇ ಒಂದು ಸನ್ನಿಯಲ್ಲ. ಆದರೂ ಎರಡರಲ್ಲೂ ಹೋಲಿಕೆಗಳೇ ಹೆಚ್ಚು.

- ಥಾಮಸ್ ಕಾರ್ಲೈಲ್

★ ಕಾವ್ಯ ರಚನೆಯಷ್ಟೇ ಘನತೆ ಹೊಲವನ್ನು ಉಳುವುದರಲ್ಲೂ ಇದೆ ಎಂದು ಅರಿತುಕೊಳ್ಳುವ ತನಕ ಯಾವ ಜನಾಂಗವೂ ಏಳಿಗೆಗೆ ಬರುವುದಿಲ್ಲ.


- ಬೂಕರ್ ತಲ್ಯೆಫೆರೊ

★ ವೃತ್ತಪತ್ರಿಕೆಗಳು ಇರುವುದು ಸುದ್ದಿಗಳನ್ನು ಇದ್ದುದು ಇದ್ದ ಹಾಗೆ ವರದಿ ಮಾಡುವುದಕ್ಕಲ್ಲ, ಅವುಗಳ ವಿಚಾರವಾಗಿ ಏನನ್ನಾದರೂ ಮಾಡುವಂತೆ ಜನರನ್ನು ರೇಗಿಸುವುದಕ್ಕೆ.

- ಮಾರ್ಕ್ ಟ್ವೇಯ್ನ್

★ ಜ್ಞಾನವು ಪರಿಪಕ್ವವಾದ ಬಳಿಕ ಆಚಾರ-ವಿಚಾರಗಳು, ಜಾತಿ ಭೇದಗಳು ತಾವಾಗಿಯೇ ತೊಲಗುವವು.

- ಪರಮಹಂಸ



ಜೇನು ಕಚ್ಚಿಸಿ ರೋಗ ಚಿಕಿತ್ಸೆ

ವಿಷವನ್ನು ಔಷಧಿಯಾಗಿ ಬಳಸಿ ರೋಗನಿವಾರಣೆ ಮಾಡುವುದು ಹೊಸತಾದ ವಿಷಯವೇನಲ್ಲ. ನಾಗರಹಾವಿನ ವಿಷವು ಅತ್ಯಂತ ಮಾರಕ. ಅದನ್ನು ಸಂಗ್ರಹಿಸಿ ಔಷಧಿಯಾಗಿ ಬಳಸುತ್ತಿರುವ ವಿಚಾರ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಅದೇ ರೀತಿ ಚೇಳಿನ ವಿಷವನ್ನು ಕೂಡಾ ಸಂಗ್ರಹಿಸಿ ಅದನ್ನು ಅನೇಕ ರೋಗಗಳಿಗೆ ಔಷಧಿಯಾಗಿ ಉಪಯೋಗಿಸುವ ಕ್ರಮವೂ ರೂಢಿಯಲ್ಲಿದೆಯೆಂದು ರಶಿಯದ ಪತ್ರಿಕೆಗಳು ಪ್ರಕಟಿಸಿವೆ. ಆದರೆ ಇತ್ತೀಚೆಗೆ ದೊರೆತ ವರದಿ ಪ್ರಕಾರ ಕೇರಳದಲ್ಲಿ ನಾಡವೈದ್ಯರೊಬ್ಬರು ಜೇನುನೊಣಗಳನ್ನು ಕಚ್ಚಿಸಿ ಚಿಕಿತ್ಸೆ ನಡೆಸುವುದು ತಿಳಿದು ಬಂದಿದೆ.

ಸೋರಿಯಾಸಿಸ್ (Psoriasis) ಎಂಬುದೊಂದು ಅಪೂರ್ವ ಚರ್ಮವ್ಯಾಧಿ. ಇದರಿಂದ ನರಳುವ ರೋಗಿಗಳಿಗೆ ಈವರೆಗೆ ಯಾವ ತರಹದ ಔಷಧಿಯಿಂದಲೂ ಪರಿಹಾರ ದೊರಕಿರುವ ವರದಿಗಳು ಬಂದಿಲ್ಲ. ಜೇನುನೊಣಗಳನ್ನು ಕಚ್ಚಿಸಿ ಅದರ ವಿಷವನ್ನು ದೇಹದೊಳಕ್ಕೆ ಬಿಡುವುದರಿಂದ ಅದು ಸಂಪೂರ್ಣ ಗುಣ ಹೊಂದುವಂತೆ ಮಾಡಿದ ಕೀರ್ತಿ ಕೇರಳದ ಮಲಬಾರು ಪ್ರದೇಶದ ಶೋರನೂರು ನಗರದ ಗಣೇಶಗಿರಿ ಎಂಬಲ್ಲಿ ವಾಸಿಸುವ ಸುಮಾರು ಎಂಬತ್ತರ ವಯೋವೃದ್ಧ ಎಡತ್ತಿಲ್ ಕೃಷ್ಣನ್ ಎಂಬವರಿಗೆ ಸಲ್ಲುತ್ತದೆ.

ಇ.ಮಾಧವನ್ ಎಂಬ ಓರ್ವ ರೈಲ್ವೇ ಇಂಜಿನ್ ಡ್ರೈವರನು ಇದೇ 'ಸೋರಿಯಾಸಿಸ್' ರೋಗದಿಂದ ಬಳಲುತ್ತಿದ್ದನು. ಈ ವೃದ್ಧ ಚಿಕಿತ್ಸಕರ ಈ ವಿಷ ಪ್ರಯೋಗದಿಂದ ಅವನು ಈಗ ಸಂಪೂರ್ಣ ರೋಗಮುಕ್ತನಾಗಿ ಎರಡೂವರೆ ವರ್ಷಗಳು ಸಂದವು ಎಂಬುದಾಗಿ ಶೋರನೂರು ಕೇಂದ್ರವನ್ನು ಸಂದರ್ಶಿಸಿ ಬಂದ ಕಾಸರಗೋಡಿನ ನಿವಾಸಿಯೋರ್ವರು ವರದಿ ಮಾಡಿರುತ್ತಾರೆ. ಈ ಮಹನೀಯರು ಕೂಡಾ ಅದೇ ಚರ್ಮರೋಗದಿಂದ ಬಾಧೆಪಡುತ್ತಿದ್ದು ಅನೇಕ ರೀತಿಯ ಔಷಧಿಗಳನ್ನು ಹಾಗೂ ಚಿಕಿತ್ಸಾ ವಿಧಾನಗಳನ್ನು ಅನುಸರಿಸಿ ಫಲಕಾರಿಯಾಗದೆ ಶೋರನೂರು ಸಂದರ್ಶಿಸಿ ಚಿಕಿತ್ಸೆ ಪಡೆದ ಬಳಿಕ ಈಗ ಗುಣಮುಖರಾಗುತ್ತಿದ್ದಾರಾದರೂ ಸಂಪೂರ್ಣ ಮುಕ್ತರಾಗಲು ಸ್ವಲ್ಪ ಕಾಲಾವಕಾಶ ಬೇಕಾಗಿರುವುದರಿಂದ ತಮ್ಮ ಹೆಸರನ್ನು ಅಜ್ಞಾತವಾಗಿರಿಸಬೇಕೆಂದು ಕೋರಿದ್ದಾರೆ. ಅವರ ಪತ್ನಿ ಕೂಡಾ ಅವರೊಂದಿಗೆ ಅಲ್ಲಿಗೆ ತೆರಳಿ ಕಾಲು ಗಂಟುಗಳ ನೋವಿನಿಂದ ಆರ್ಥರೈಟಿಸ್- (arthritis) ಬಾಧೆ ಪಡುತ್ತಿದ್ದುದಕ್ಕೆ ಇದೇ ಜೇನು ನೊಣದ ವಿಷದ ಪ್ರಯೋಗದಿಂದ ಸಂಪೂರ್ಣ ಗುಣ ಹೊಂದಿ ಈಗ ಅವರಿಗೆ ಯಾವ ನೋವೂ ಇಲ್ಲದೆ ಗುಡ್ಡವನ್ನು ಹತ್ತಬಲ್ಲ ಆರೋಗ್ಯ ಮರಳಿದೆಯೆಂದು ಅವರು ವರದಿ ಮಾಡಿರುತ್ತಾರೆ. ಅದೇ ರೀತಿ ಹಲ್ಲು ನೋವು, ರಕ್ತದ ಒತ್ತಡ, ತಲೆನೋವುಗಳ ನಿವಾರಣೆಯೂ ಅದರಿಂದ ಸಾಧ್ಯವೆಂದು ಆ ಕೇಂದ್ರದ ಮಾಹಿತಿ ಒದಗಿಸುವ ಪತ್ರ ತಿಳಿಸುತ್ತದೆ.

ಈ ನಾಡವೈದ್ಯ ಎಡತ್ತಿಲ್ ಕೃಷ್ಣನ್ ಯಾರು?

ಎಡತ್ತಿಲ್ ಕೃಷ್ಣನ್ ಕೇರಳದ ಮಲಬಾರು ಪ್ರದೇಶದ ಶೋರನೂರು ಎಂಬ ನಗರದವರು. ಭಾರತದ ರೈಲು ಇಲಾಖೆಯಲ್ಲಿ ತಮಿಳುನಾಡಿನಲ್ಲಿ (ಹಿಂದಿನ ಮದರಾಸು ಪ್ರಾಂತ್ಯ) ರೈಲು ವರ್ಕ್‌ಶಾಪಿನಲ್ಲಿ ಬಡಗಿಯಾಗಿ ಸೇರಿ ಸೇವೆ.

ಸಲ್ಲಿಸಿ ನಿವೃತ್ತಿ ಹೊಂದಿದವರು. ತನ್ನ ವಿರಾಮ ಕಾಲವನ್ನು ಜೇನುಸಾಕಣೆಯಲ್ಲಿ ವಿನಿಯೋಗಿಸಿ ಕೊಂಡು ಆ ಕುರಿತಾದ ಪುಸ್ತಕಗಳ ಸಹಾಯದಿಂದ ಅನುಭವಗಳನ್ನು ಸಂಗ್ರಹಿಸಿಕೊಂಡು ಜೇನುನೊಣಗಳನ್ನು ಕಚ್ಚಿಸುವುದರ ಮೂಲಕ ರೋಗಿಗಳ ಚಿಕಿತ್ಸೆ ನಡೆಸುವುದರಲ್ಲಿ ಸ್ವಂತ ಸಂಶೋಧನೆ ನಡೆಸಿ ಈಗ ತೋರನೂರು ನಗರದಲ್ಲಿ ತನ್ನ ಚಿಕಿತ್ಸಾಕೇಂದ್ರವನ್ನು ನಡೆಸುತ್ತಿದ್ದಾರೆ. ತೋರನೂರು ಪಶ್ಚಿಮ ರೈಲ್ವೇಯ ಒಂದು ಪ್ರಮುಖ ಜಂಕ್ಷನ್ ಸ್ಥಳ. ಬಡಗಿಯಾಗಿ ನೇಮಕಗೊಂಡು ತಮಿಳುನಾಡಿನಲ್ಲಿರುವ ತಿರುಚಿನಾಪಳ್ಳಿಯ ಗೋಲ್ಡನ್‌ರಾಕ್ (GoldenRock) ರೈಲು ವರ್ಕ್‌ಶಾಪಿನಲ್ಲಿ ನಲ್ವತ್ತರ ದಶಕದಲ್ಲಿ ದುಡಿಯುತ್ತಿದ್ದುದರಿಂದ ಇವರು ಹೆಚ್ಚೇನೂ ಆಂಗ್ಲ ವಿದ್ಯಾಭ್ಯಾಸ ಪಡೆದವರಲ್ಲ. ಆಧುನಿಕ ವೈದ್ಯ ವಿದ್ಯೆಯ ಗಂಧಗಾಳಿಯಿದ್ದವರೂ ಆಗಿರಲಿಲ್ಲ. ಬಡಗಿ ವೃತ್ತಿಯಲ್ಲಿ ಊರಿಂದೂರಿಗೆ ವರ್ಗವಾಗಿ ಹೋಗುತ್ತಿದ್ದುದರಿಂದ ರೈಲು ಖಾತೆಯ ನೌಕರರಿಗೆಲ್ಲ ಇವರ ಪರಿಚಯ ಹೆಚ್ಚು. ಜೇನುನೊಣ ಸಾಕಣೆ, ಜೇನುನೊಣ ವಿಷಪ್ರಯೋಗ ಇವುಗಳಿಂದಾಗಿ ಅವರನ್ನು 'ಜೇನುನೊಣ ಕೃಷ್ಣನ್' ಎಂದು ಅರ್ಥ ಬರುವ 'ತೇನೀಚ ಕೃಷ್ಣನ್' ಎಂಬ ಅಡ್ಡ ಹೆಸರಿನಿಂದಲೇ ಗುರುತಿಸುವವರು ಹೆಚ್ಚು.

ಜೇನುನೊಣ ವ್ಯವಸಾಯದಲ್ಲಿ ಅಭಿರುಚಿ :

ತಿರುಚಿನಾಪಳ್ಳಿ ಗೋಲ್ಡನ್ ರಾಕ್ ವರ್ಕ್‌ಶಾಪಿನಲ್ಲಿ ನೌಕರಿಯಲ್ಲಿದ್ದಾಗ ಅಲ್ಲಿಗೆ ರೋಯಲ್ ಏರ್ ಫೋರ್ಸ್ ವಿಮಾನದಳದಲ್ಲಿ ಅಧಿಕಾರಿಯಾಗಿದ್ದ ಗೊಡ್ಸನ್ ಎಂಬ ಆಂಗ್ಲೇಯನು ಅಲ್ಲಿಗೆ ಬಂದು ತನ್ನ ಜೇನು ಸಾಕಣೆಯ ಹುಚ್ಚಿನಿಂದ ಬಡಗಿ ಕೃಷ್ಣನ್‌ನನ್ನು ಕರೆದು ತನಗೆ ಕೆಲವು ಜೇನು ಗೂಡುಗಳನ್ನು ತಯಾರಿಸಿ ಕೊಡುವಂತೆ ಆಜ್ಞಾಪಿಸಿದನು. ಸ್ವಾತಂತ್ರ್ಯ ಪೂರ್ವದ ಆ ಕಾಲದಲ್ಲಿ ಆತನ ಸಂಪರ್ಕದಿಂದ ಕೃಷ್ಣನ್ ಆಂಗ್ಲೇಯನಿಗೆ ಜೇನುಸಾಕಣೆಯಲ್ಲಿ ಸಹಾಯಕನಾದನು. ಜೇನುನೊಣಗಳನ್ನು ಹಿಡಿಯುವುದೂ ಆತನ ಕೆಲಸವಾಯಿತು. ಆದರೆ ಗೊಡ್ಸನ್ನನು ಭಾರತ ಸ್ವಾತಂತ್ರ್ಯ

ಗಳಿಸುವುದರ ಮೊದಲೇ ಅಂದರೆ ಹಿಂದಿನ ವರ್ಷವೇ ಭಾರತವನ್ನು ತೊರೆದು ತೆರಳಿದ. ತನ್ನ ಜತೆಯಲ್ಲಿದ್ದ ಅಮೋಘ ಸೇವೆ ಸಲ್ಲಿಸಿದ ಕೃಷ್ಣನ್‌ನಿಗೆ ಆತ ತನ್ನ ಜೇನು ಗೂಡುಗಳೆಲ್ಲವನ್ನೂ ಕೊಟ್ಟು 'ದಕ್ಷಿಣ ಭಾರತದಲ್ಲಿ ಜೇನು ಸಾಕಣೆಯ ಚರಿತ್ರೆ' (The History of Beekeeping in South India) ಎಂಬ ಕೊಯಂಬತ್ತೂರಿನ ಕೃಷಿ ಸಂಶೋಧನಾ ಸಂಸ್ಥೆಯು ಪ್ರಕಟಿಸಿದ ಪುಸ್ತಕವನ್ನು ಆತನಿಗೆ ಇತ್ತ.

ಗೊಡ್ಸನ್ನನ ಜತೆಯಲ್ಲಿ ಜೇನು ಸಾಕಣೆ, ಜೇನು ವಿಷಯದ ಬಗ್ಗೆ ಪ್ರತ್ಯಕ್ಷ ಹಾಗೂ ಪ್ರಾಯೋಗಿಕ ಅನುಭವಗಳನ್ನು ಹೊಂದಿದ್ದರೂ ಈ ಪುಸ್ತಕದಲ್ಲಿದ್ದ ಹಲವಾರು ವಿಚಾರಗಳು ಆತನ ಅನುಭವಗಳನ್ನು ಹೆಚ್ಚಿಸಿದವು. ಜೇನು ನೊಣದ ವಿಷದ ಉಪಯೋಗದಿಂದ ಗಂಟು ನೋವು, ಪಕ್ಷವಾತ, ವಾತರೋಗಗಳನ್ನು ಗುಣಪಡಿಸುವ ವಿಚಾರಗಳು ಅದರಲ್ಲಿ ಅಡಕವಾಗಿದ್ದವು. ಅವರ ಸಹಾಯದಿಂದಲೇ ಆತ ಅನೇಕ ಸಂಶೋಧನೆಗಳನ್ನು ಜರುಗಿಸಿ ತನ್ನ ವೈದ್ಯಕೀಯ ಜ್ಞಾನವನ್ನು ಬೆಳೆಸಿಕೊಂಡ. ಇದು ಕೃಷ್ಣನ್ನರ ಈಗಿನ ಚಿಕಿತ್ಸಾ ವಿಧಾನಗಳಿಗೆ ಆಧಾರವಾಯಿತು. ಕ್ಯಾನ್ಸರ್ ಹುಣ್ಣುಗಳು, ತಲೆಶೂಲೆ, ರಕ್ತದ ಒತ್ತಡ ಮೊದಲಾದವುಗಳ ಚಿಕಿತ್ಸೆಯ ಯಶಸ್ವೀ ಪ್ರಯೋಗಗಳಿಗೆ ದಾರಿ ಮಾಡಿಕೊಟ್ಟಿತು.

ನಿರಂತರ ಸಾಧನೆ :

ಕೃಷ್ಣನ್‌ರವರು ರೈಲು ಖಾತೆಯಲ್ಲಿ ನೌಕರಿಯಲ್ಲಿದ್ದಾಗ ತಾನು ವರ್ಗವಾಗಿ ಹೋದ ಸ್ಥಳಗಳಲ್ಲೆಲ್ಲಾ ಜೇನುಸಾಕಣೆಯನ್ನು ತನ್ನ ವಿರಾಮ ಕಾಲದ ಚಟುವಟಿಕೆಯನ್ನಾಗಿ ಮಾಡಿಕೊಂಡರು. ಜೇನುನೊಣಗಳನ್ನು ರೋಗಿಗಳಿಗೆ ಕಚ್ಚಿಸಿ ಚಿಕಿತ್ಸೆ ನಡೆಸುವ ವಿಧಾನದಲ್ಲಿ ಕೈಯಾಡಿಸಿ ಯಶಸ್ಸುಗಳಿಸಿದರು. ರೈಲುಖಾತೆಯಲ್ಲಿ ನೌಕರಿಯಲ್ಲಿದ್ದುದರಿಂದಲೋ ಏನೋ ರೈಲುಖಾತೆಯಲ್ಲಿ ಇವರ ಹೆಸರು ಪ್ರಖ್ಯಾತಿ ಹೊಂದಿದಷ್ಟು ಹೊರ

ಗಿನ ಜಗತ್ತಿಗೆ ಅವರು ಹೆಚ್ಚಾಗಿ ಪರಿಚಿತರಾಗಲಿಲ್ಲ. ಆದರೆ ಇವರನ್ನರಿತ ಮಂದಿಗೆಲ್ಲಾ ಮುಖ್ಯವಾಗಿ ಮಲೆಯಾಳಿಗಳ ಮಧ್ಯೆ 'ತೇನೀಚ ಕೃಷ್ಣನ್' ಎಂದೇ ಕರೆಯಲ್ಪಟ್ಟರು.

1974ರಲ್ಲಿ ರೈಲು ಖಾತೆಯಿಂದ ನಿವೃತ್ತಿ ಪಡೆದ ಬಳಿಕ ಹನ್ನೊಂದು ವರ್ಷಗಳ ತನಕ ಅಂದರೆ 1985ರವರೆಗೆ ಜೇನುನೊಣದ ವಿಷ ಪ್ರಯೋಗವನ್ನು ನಿತ್ಯ ವೃತ್ತಿಯನ್ನಾಗಿ ಇರಿಸಿಕೊಂಡು ಇನ್ನೂ ಹೆಚ್ಚಿನ ಪ್ರಯೋಗಗಳಿಗೆ ತೊಡಗಿದರು. ಗೊಡ್ಸನ್ನನು ಇವರಿಗಿತ್ತ ಪುಸ್ತಕವು ಇವರ ಚಟುವಟಿಕೆಗಳಿಗೆ ಆಧಾರವಾಯಿತು. ಜತೆಗೆ ರಷ್ಯನ್ನರ ಗ್ರಂಥವೊಂದರ ಅನುವಾದಿತ ಪುಸ್ತಕವೂ ಗೊಡ್ಸನ್ನರಿಂದ ದೊರಕಿತ್ತು. ನಾಂಲೊಯ್ರಿಸ್ ಎಂಬವರು ಬರೆದ ರಶಿಯದ 'ಪ್ರೆಸಿಡಿಯಮ್ ಆಫ್ ಲರ್ನಡ್ ಕೌನ್ಸಿಲ್' (Presidium of Learned Council) ಎಂಬ ಆರೋಗ್ಯ ಖಾತೆ ಪ್ರಕಟಿಸಿದ 'ಎಪಿಟೋಕ್ಸಿನ್ ಥೆರಪಿ' (Apitoxin Therapy)ಯ ಉಪಯೋಗದ ಸೂಚನೆಗಳನ್ನೊಳಗೊಂಡ ಪ್ರಕಟಣೆಯೂ ಇವರ ಕೈಸೇರಿದವು. ಇವುಗಳಿಂದ ಇವರು ಈ ನಾಡವೈದ್ಯ ವೃತ್ತಿಯಲ್ಲಿ ನಿರತರಾಗುವಂತೆ ಪ್ರೇರೇಪಿತರಾದರು.

ಚಿಕಿತ್ಸಾವಿಧಾನ :

ಆಧುನಿಕ ಚಿಕಿತ್ಸೆಗಳನ್ನೊಳಗೊಂಡ ಹಲವಾರು ವೈದ್ಯಕೀಯ ವಿಧಾನಗಳೊಡನೆ ಹೋಲಿಸಿದಲ್ಲಿ ಈ ಚಿಕಿತ್ಸಾಕ್ರಮವು ಅತೀ ಸುಲಭವಾದ ತೀರಾ ಕಡಿಮೆ ವೆಚ್ಚದ ಒಂದು ವಿಧಾನವೆಂದು ಕೃಷ್ಣನ್ ಅಭಿಪ್ರಾಯ ಪಡುತ್ತಾರೆ. ಆದರೇನು ಮಾಡಲಿ? ನಮ್ಮ ದೇಶದ ಜನರಿಗೆ ಅದು ತಿಳಿದಿಲ್ಲವೆಂದು ಅವರ ಖೇದ.

ಜೇನುನೊಣಗಳನ್ನು ಹಿಡಿದು ದೇಹದ ಆಯ್ದ ಒಂದು ಭಾಗಕ್ಕೆ ಅದು ಕಚ್ಚುವಂತೆ ಮಾಡಿ ರಕ್ತದಲ್ಲಿ ಅದರ ವಿಷ ಸೇರುವಂತೆ ಮಾಡುವುದು ಅವರು ಅನುಸರಿಸುವ ಪದ್ಧತಿ. ಜೇನುನೊಣಗಳು ನಮ್ಮನ್ನು ಕಡಿದ ಕೂಡಲೇ ಅದರ ವಿಷದ ಕೊಂಡಿ ಕಳಚಿ ನಮ್ಮ ದೇಹದಲ್ಲೇ ಉಳಿದು ಅವು ಸಾಯುತ್ತವೆ. ಹೀಗಾಗಿ ಈ ಚಿಕಿತ್ಸೆಗೆ ಅನೇಕ ಜೇನು ನೊಣಗಳು ಅಗತ್ಯವಾದುದರಿಂದ ಜೇನು ಸಾಕಣೆ ಕಾರ್ಯವು ಅನಿವಾರ್ಯ ಅಗತ್ಯ.

ಚಿಕಿತ್ಸೆ ಆರಂಭಿಸುವ ಮೊದಲು ರೋಗಿಯ ಮೂತ್ರ, ರಕ್ತಗಳ ಪರೀಕ್ಷೆ ನಡೆಸುವುದು ಅಗತ್ಯ. ಕಾರಣವೇನೆಂದರೆ ಕ್ಷಯ, ಗುಹ್ಯ (ಲೈಂಗಿಕ) ರೋಗಗಳು ಮತ್ತು ಸಿಹಿಮೂತ್ರ (diabetes) ಮೊದಲಾದವುಗಳಿಂದ ಬಳಲುವವರು ಜೇನು ನೊಣಗಳಿಂದ ಕಚ್ಚಿಸಿಕೊಂಡಲ್ಲಿ ಅವರಲ್ಲಿ ವಿಷಮ ಪ್ರತಿಕ್ರಿಯೆಯುಂಟಾಗುವುದೆಂದು ಅವರ ಹೇಳಿಕೆ. ಆ ಬಳಿಕ ರೋಗಿಗೆ ಮೇಲಿನ ರೋಗಗಳಿಲ್ಲವೆಂದು ಕಂಡು ಬಂದಲ್ಲಿ ಈ ಜೇನು ನೊಣಗಳಿಂದ ಕಚ್ಚಿಸಿಕೊಳ್ಳುವ ಕಾರ್ಯ ಸುಮಾರು ಹತ್ತು ದಿನಗಳ ತನಕ ನಡೆಯುವುದು. ದಿನಕ್ಕೆ ಒಂದರಿಂದ ಆರಂಭಿಸಿ, ಎರಡನೆಯ ದಿನ ಎರಡು, ಮೂರನೆಯ ದಿನ ಮೂರು, ಹೀಗೆ ಹತ್ತನೇ ದಿನಗಳ ತನಕ ಹೆಚ್ಚುತ್ತಾ ಹೋಗುವ ಜೇನುನೊಣಗಳ ಕಡಿತವನ್ನು ರೋಗಿಯು ಅನುಭವಿಸಬೇಕಾಗಿ ಬರುವುದು. ಹೆಚ್ಚೆಂದರೆ ಒಬ್ಬ ರೋಗಿಗೆ ಐವತ್ತೈದು ನೊಣಗಳನ್ನು ಕಚ್ಚಲು ಉಪಯೋಗಿಸಲಾಗುವುದು. ಹೆಚ್ಚಿನ ಜನರಿಗೆ ಈ ಚಿಕಿತ್ಸೆ ಆರೋಗ್ಯ ಪಡೆಯಲು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಒಂದು ವೇಳೆ ಪರಿಣಾಮಕಾರಿಯಲ್ಲವೆಂದು ಕಂಡು ಬಂದರೆ ಆ ಬಳಿಕವೂ ದಿನಕ್ಕೆ ಮೂರು ನೊಣಗಳ ಕಚ್ಚುವಿಕೆಯಂತೆ ಮತ್ತೆ ಆರು ವಾರಗಳ ತನಕ ಮುಂದರಿಸಬೇಕಾಗುತ್ತದೆ. ಅದೂ ಪರಿಣಾಮಕಾರಿಯಾಗದಿದ್ದಲ್ಲಿ ಮತ್ತೆ ಮೂರು ನಾಲ್ಕು ತಿಂಗಳು ಕಾಲ ಮುಂದುವರಿಸುವರು. ಅಂತೂ ಗುಣ ಖಂಡಿತ. ದೀರ್ಘಕಾಲದಿಂದ ಇಂತಹ ರೋಗಗಳಿಂದ ನರಳುತ್ತಿದ್ದವರು ಸುಮಾರು 200 ಮಂದಿ ಈಗಾಗಲೇ ಗುಣಮುಖರಾಗಿ ಆರೋಗ್ಯವಂತರಾಗಿದ್ದಾರೆಂದು ಅವರ ಪಟ್ಟಿಯಿಂದ ತಿಳಿದು ಬರುತ್ತದೆ. ಅವರಲ್ಲಿ ಹೆಚ್ಚಿನವರು ರೈಲು ಇಲಾಖೆಗೆ ಸೇರಿದವರು.

ಜೇನುನೊಣಗಳಿಂದ ದೇಹದ ಆಯ್ದ ಒಂದು ಭಾಗಕ್ಕೆ (ಹೆಚ್ಚಾಗಿ ಕೈಗೆ) ಕಚ್ಚಿಸಿಕೊಂಡ ಬಳಿಕ

ಸುಮಾರು ಹದಿನೈದು ನಿಮಿಷಗಳ ತನಕ ಅದರ ಕೊಂಡಿಯನ್ನು ಅಲ್ಲೇ ಉಳಿಯಲು ಬಿಡಬೇಕು. ದೇಹದ ಯಾವ ಭಾಗಕ್ಕೆ ಚುಚ್ಚಿಸಿಕೊಳ್ಳಬೇಕೆಂಬ ನಿರ್ಧಾರವನ್ನು ರೋಗದ ಸ್ಥಿತಿ ಮತ್ತು ರಕ್ತದ ಒತ್ತಡವನ್ನು ತಿಳಿದುಕೊಂಡು ಈ ವೈದ್ಯರೇ ಕೈಗೊಳ್ಳುವರು.

ಚಿಕಿತ್ಸೆಗೆ ನೊಣಗಳು ವಿಶೇಷವಾಗಿ ಅಗತ್ಯ ಬೀಳುವುದರಿಂದ ಅದರ ಸಂಖ್ಯೆಯನ್ನು ಸದಾ ಕಾಯ್ದುಕೊಳ್ಳಲು ಆ ಬಗ್ಗೆ ಖರ್ಚಿನ ಬಾಬ್ತಾಗಿ ಎರಡು ರೂಪಾಯಿ ಪಡೆದುಕೊಳ್ಳುತ್ತಾರೆ. ಬೇರೆ ಬೇರೆ ತರಹದ ವ್ಯಾಧಿಗಳಿಗಾಗಿ ವಿವಿಧ ಬಗೆಯ ಜೇನನ್ನು ಕೂಡಾ ತಯಾರಿಸಿ ಔಷಧಿಯಾಗಿ ನೀಡುತ್ತಾರೆ. ಕೆಲವೊಮ್ಮೆ ನೊಣಗಳಿಂದ ಕಚ್ಚಿಸಿಕೊಂಡೂ ಗುಣ ಹೊಂದದ ರೋಗಿಗಳು ಜೇನಿನ ಉಪಯೋಗದಿಂದ ಗುಣ ಹೊಂದುತ್ತಾರೆಂದು ಅವರು ಹೇಳುತ್ತಾರೆ.

ಆಯುರ್ವೇದ ಶಾಸ್ತ್ರದಲ್ಲಿ :

ಜೇನಿನ ಉಪಯೋಗದ ಕುರಿತು ಆಯುರ್ವೇದ ವೈದ್ಯಶಾಸ್ತ್ರದಲ್ಲಿ ಉಲ್ಲೇಖಗಳಿವೆಯೇ ಹೊರತು ಜೇನುನೊಣ ವಿಷಪ್ರಯೋಗದ ಕುರಿತಾಗಿ ನಿರ್ದಿಷ್ಟವಾಗಿ ಅದರ ಕುರಿತು ಅರಿವು ದೊರಕುವುದಿಲ್ಲ. ಆದುದರಿಂದ ಸರಕಾರವು ಈ ಜೇನುನೊಣದ ವಿಷದ ಉಪಯೋಗವನ್ನು ಆಯುರ್ವೇದ ಚಿಕಿತ್ಸೆಯ ಒಂದು ಭಾಗವನ್ನಾಗಿ ಸ್ವೀಕರಿಸಿ ಜನರಿಗೆ ಅದರಲ್ಲಿ ವಿಶ್ವಾಸವುಂಟಾಗುವಂತೆ ಮಾಡುವುದು ಅಗತ್ಯವೆಂದು ವೈದ್ಯರು ಅಭಿಪ್ರಾಯ ಪಡುತ್ತಾರೆ. ಕೇರಳದ ಚೆರುತುರುತ್ತಿ ಎಂಬಲ್ಲಿರುವ ಆಯುರ್ವೇದ ಮತ್ತು ಸಿದ್ಧ ಕೌನ್ಸಿಲಿನ ಪಂಚಕರ್ಮ ಸಂಸ್ಥೆಯಲ್ಲಿ ಈ ಬಗ್ಗೆ ಅನುಕೂಲತೆಗಳನ್ನು ಒದಗಿಸಿದರೆ ಅವರು ಎಲ್ಲಾ ವಿಧದಲ್ಲಿ ಕಾರ್ಯ ಪ್ರವೃತ್ತರಾಗಿರುವುದಾಗಿ ತಿಳಿಸುತ್ತಾರೆ. ''ಈ ರೀತಿ ಸುಲಭವಾಗಿ ದೊರೆಯಬಲ್ಲ, ವೆಚ್ಚರಹಿತ ಚಿಕಿತ್ಸಾ ವಿಧಾನವನ್ನು ಹೆಚ್ಚಿನ ವಿದೇಶೀ ರಾಜ್ಯಗಳು ಅಂಗೀಕರಿಸಿರುವಾಗ ನಮ್ಮ ಜನರೇಕೆ ಇಂತಹ ಚಿಕಿತ್ಸಾ ಕ್ರಮದಿಂದ ವಂಚಿತರಾಗಬೇಕು?'' ಎಂದು ಅವರು ಪ್ರಶ್ನಿಸುತ್ತಾರೆ.

ವಿದೇಶಗಳಲ್ಲಿ :

ರಶಿಯದಲ್ಲಿ ಈ ಕುರಿತಾದ ಚಿಕಿತ್ಸಾ ವಿಧಾನ ಉಪಯೋಗದಲ್ಲಿದೆಯೆಂದು ಅಲ್ಲಿನ ಪುಸ್ತಕದಿಂದ ತಿಳಿಯುತ್ತದೆ. ಇಂಗ್ಲೆಂಡು ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲಿಯೂ ಇದರ ಕುರಿತು ಜ್ಞಾನವಿದೆಯೆಂದು ತಿಳಿದುಬರುತ್ತದೆ. ಆದರೆ ಹೊರಜಗತ್ತಿಗೆ ಈ ಎಪಿಟೋಕ್ಸಿನ್ ವಿಷ ಚಿಕಿತ್ಸೆಯ ಕುರಿತು ತಿಳುವಳಿಕೆಯುಂಟಾದುದು ಇತ್ತೀಚೆಗೆ. 'ಅರಬ್ ಟೈಮ್ಸ್' ಎಂಬ ಪತ್ರಿಕೆಯೂ ತನ್ನ 1988ರ ಎಪ್ರಿಲ್ 16ರ ಸಂಚಿಕೆಯಲ್ಲಿ ಚೀನಾ ದೇಶದ ಡಾ। ಚೆನ್ ಪೆಲ್ ಎಂಬ 80ರ ಪ್ರಾಯದ ವೃದ್ಧ ವೈದ್ಯ ಸುಮಾರು ಇಪ್ಪತ್ತು ಬಗೆಯ ವಿವಿಧ ರೋಗಗಳ ಚಿಕಿತ್ಸೆಯಲ್ಲಿ ಜೇನುನೊಣ ವಿಷಬಳಕೆಯ ವಿಧಾನವನ್ನು ಕಂಡು ಹಿಡಿದಿರುವ ಬಗ್ಗೆ ಪ್ರಕಟಿಸಿದುದರಿಂದ ಈ ವಿಚಾರ ಪ್ರಚಾರವಾಯಿತು. ಅದರಂತೆ ಸುಮಾರು ಐದು ದಶಕಗಳಿಂದ ಈ ಎಪಿಟೋಕ್ಸಿನ್ ವಿಧಾನವನ್ನು ಪಯೋಗಿಸಿ ಸುಮಾರು ಮೂವತ್ತು ಸಾವಿರ ರೋಗಿಗಳಿಗೆ ಚಿಕಿತ್ಸೆ ಮಾಡಿರುವ ಪ್ರಥಮ ವ್ಯಕ್ತಿ ನಿರತ ವೈದ್ಯನಾತ. ಈಗಲೂ ಆ ವೈದ್ಯರ ಬಳಿಗೆ ದಿನಾಲೂ ಸುಮಾರು ಐವತ್ತರಂತೆ ರೋಗಿಗಳು ಚಿಕಿತ್ಸೆಗಾಗಿ ಬರುತ್ತಿರುವರೆಂದು ವರದಿಯಿದೆ. ಈತನ ಚಿಕಿತ್ಸಾ ಕೇಂದ್ರವು ಚೀನಾದ ಹ್ಯುವಾನ್ ಪ್ರಾಂತ್ಯದ ಚಾಂಗ್‌ಶಾ ನಗರದಲ್ಲಿರುವ ಸೆಂಟ್ರಲ್ ಸೌತ್ ಇಂಡಸ್ಟ್ರಿಯಲ್ ವಿಶ್ವವಿದ್ಯಾಲಯದಲ್ಲಿದೆ.

ಈ ರೀತಿ ಜೇನುನೊಣದ ವಿಷವನ್ನು ಚಿಕಿತ್ಸೆಗಾಗಿ ಬಳಕೆ ಮಾಡುತ್ತಿರುವ ಕೇಂದ್ರ ಭಾರತದಲ್ಲಿ ಬೇರೆಯಲ್ಲಿಯೂ ಇರುವುದು ಕಂಡುಬಂದಿಲ್ಲ. ಸುಮಾರು ಒಂದು ದಶಕದ ಹಿಂದೆ ಸ್ಥಾಪಿತವಾದ ಈ ನಾಡವೈದ್ಯ ಎಡತ್ತಿಲ್ ಕೃಷ್ಣನ್ ನಡೆಸುತ್ತಿರುವ ಕೋರನೂರಿನ ಕೇಂದ್ರ ಏಕೈಕ ಸಂಸ್ಥೆ ಮಾತ್ರವಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ, ರಶಿಯದಲ್ಲಿ, ಚೀನಾದಲ್ಲಿ ಈ ಜೇನುನೊಣ ವಿಷದ ಚಿಕಿತ್ಸಾ ವಿಧಾನ ಜನಪ್ರಿಯವಾಗಿದ್ದರೂ ಭಾರತದಲ್ಲಿರುವ ಏಕೈಕ ವೈದ್ಯನೆಂದರೆ ತಾನೊಬ್ಬನೇ ಎಂಬುದು ಎಡತ್ತಿಲ್ ಕೃಷ್ಣನ್‌ರ ಹೆಗ್ಗಳಿಕೆ. ●

ಲಾವಾಪಾತ್ರೆ ಉಕ್ಕಿದಾಗ....

● ಗೋಪಾಲ ವಾಜಪೇಯಿ



"ಕೊಳ ಕುಳಿಯಾಗುತ್ತದೆ ... ಸುಂದರ ಕಾಡು ಸುಡುಗಾಡಾಗುತ್ತದೆ ... ಬಯಲು ಬೆಟ್ಟವಾಗುತ್ತದೆ, ಬೆಳ್ಳಿ ಬೆಟ್ಟ ರುಂಡ ಕಡಿದ ಮುಂಡವಾಗಿ ನಿಲ್ಲುತ್ತದೆ ..." - ಸಾರುವ ಅಯ್ಯನವರ ಉಗ್ಗಡಿಕೆ ಅಲ್ಲ ಇದು, ಸೃಷ್ಟಿಯ ವಿಚಿತ್ರ ವಾಸ್ತವ.

ಕರ್ತಾರ ತನ್ನ ಕುಲುಮೆಯ ತಿದಿಯನ್ನು ಒತ್ತಿದಾಗಲೆಲ್ಲ ಹೀಗೆಯೆ. ಲಾವಾಪಾತ್ರೆ ಉಕ್ಕುತ್ತದೆ. ಭೂಮಿ ಬಾಯ್ದೆರೆದು ಕಿಚ್ಚನ್ನು ಕಕ್ಕುತ್ತದೆ. ನಿಗಿನಿಗಿ ಕೆಂಡದೊಂದಿಗೆ ಶಿಲಾರಸ ಸುತ್ತೆಲ್ಲ ಹರಿಯುತ್ತದೆ. ಹಗಲು ರಾತ್ರಿಯಾಗುತ್ತದೆ. ನೀಲಾಗಸದಲ್ಲಿ ಎತ್ತರಕ್ಕೇರಿ ಅಂದಾದುಂದಿಯಾಗಿ ಮುಸುಕುತ್ತದೆ 'ಅಂಧಾಧುಂದ್'! ಅದರಿಂದ ಬಿಸಿ ಬೂದಿ ಮತ್ತು ವಸುಧೆಯ ಉಡಿಯೊಳಗಿನ ಅಪರಿಮಿತ ದ್ರವ್ಯಗಳ ಅವ್ಯಾಹತ ಮಳೆ. ಉಲಿವ ಹಕ್ಕಿ, ನಲಿವ ನವಿಲು, ಗುಡುಗುವ ಹುಲಿ, ನಡುಗುವ ಹುಲ್ಲೆ-ಒಟ್ಟಿನಲ್ಲಿ ಜೀವರಾಶಿಗಳೆಲ್ಲ ಆ ಬಿಸಿಗೆ ಬೂದಿಗೆ ದೂಳಿಗೆ ಉಸಿರುಕಟ್ಟಿ ಶವರಾಶಿ ಒಟ್ಟುತ್ತದೆ.

ಇದು ಎಂದಿನಿಂದಲೂ ನಡೆದು ಬಂದ ನಿಯತಿ ನಿಯಮ.


★

ಪ್ರಕೃತಿಯ ಈ ಅನಲಾದ್ಭುತವಾದರೂ ಏನು? ಹೇಗೆ? ಏಕೆ?

ವಸುಂಧರೆಯ ಒಡಲಾಳದಲ್ಲಿ, ಶಿಲಾಖಂಡಗಳಡಿಯಲ್ಲಿನ ಆ ತಾಪಕ್ಕೆ ಕಲ್ಲು ಬಂಡೆ ಲೋಹ ಖನಿಜಗಳೆಲ್ಲ ಕುದಿವ ದ್ರವರೂಪದಲ್ಲಿವೆ. (Molten rocks). ಅವುಗಳೊಂದಿಗೆ, ಅವು ಕರಗುವ ಸಂದರ್ಭದಲ್ಲಿ ಸೂಸಿದ ಅನಿಲಗಳ ಗುಳ್ಳೆಗಳು ಬೇರೆ. ಈ ಮಿಶ್ರದ್ರವ (ಮ್ಯಾಗ್ಮಾ-Magma)ಕ್ಕೆ ಸದಾ ಕಾಲವೂ ಭೂಮಿಯ ಮೇಲ್ಪದರದೆಡೆ ನುಗ್ಗುವ ಹವಣಿಕೆ. ಕೊರಕಲುಗಳ ಮೂಲಕ ಊರ್ಧ್ವಮುಖಿಯಾಗಿ ಸಾಗುವ ಈ ಮ್ಯಾಗ್ಮಾ ಪೊಳ್ಳುಗಳಲ್ಲಿ-ಕುಳಿಗಳಲ್ಲಿ ಮಡುಗಟ್ಟುತ್ತದೆ. (ಭೂಪದರದ ಕೇವಲ ಮೂರು ಕಿಲೋಮೀಟರುಗಳ ಆಳದಲ್ಲಿ ಕೆಲವೆಡೆ ಇಂಥ 'ಮ್ಯಾಗ್ಮಾ ಮಡುವು'ಗಳು ಸಿಕ್ಕಾವು.)

ನಾವೆಂದುಕೊಂಡಂತೆ ಶಿಲಾಖಂಡಗಳು ತೆಪ್ಪಗೆ ಕೂಡುವ ಜಡಜಾಯಮಾನದವಲ್ಲ. ಅವಕ್ಕೂ ತಮ್ಮ ಮೇಲುಗೈಯಾಗಬೇಕೆಂಬ ಛಲ. ಅವು ನಡೆಸುವ ಒತ್ತಾಟ-ಕಿತ್ತಾಟಗಳ ಫಲ ಈ ಜ್ವಾಲಾಮುಖಿ ಸ್ಫೋಟಗಳು. ಈ ಪೈಪೋಟಿ-ಡಿಕ್ಕಿಯಾಟಗಳಿಂದಾಗಿ ಶಿಲಾರಸ ಹುಚ್ಚೆದ್ದು ಭೂಪದರವನ್ನಾದರೂ ಸೀಳೀತು. ಇಲ್ಲವೆ ಪರ್ವತಾಗ್ರವನ್ನಾದರೂ ಭೇದಿಸೀತು. ಭೂತಾಯಿಯ ಹೊಟ್ಟೆಯನ್ನು ಬಗೆದು ಪಾತಾಳದಿಂದ ಪುಟಿದೇಳುವ ಈ ರಕ್ಕಸದ ಅಕ್ಕಸ ಅಟ್ಟಹಾಸ ಹೇಳಲಸದಳ.

ಹೀಗೆ ಮೇಲುಗೈ ಸಾಧಿಸುವ ಮ್ಯಾಗ್ಮಾ ಭೂಮಿಯ ಮೇಲ್ಮೈ ವಾತಾವರಣದೊಂದಿಗೆ ಒಂದಾದಾಗ, ಆ ಅನಿಲಗಳು ಅನಲವಾಗಿ ಕುದಿವ



ಆಫ್ರಿಕದ ಕಾಂಗೋ ಜಗತ್ತಿನ ಏಕಮೇವ ಲಾವಾಕೊಳ ಇರುವ ದೇಶ. ಕಿವು ಕೊಳದ ಉತ್ತರಕ್ಕಿರುವ ನಿರಾಗೊಂಗೊ ಜ್ವಾಲಾಮುಖಿಯ ಬಾಯಿ 3600 ಅಡಿ ಅಗಲಕ್ಕೆ ತೆರೆದುಕೊಂಡು ಕತಕತ ಕುದಿಯುವ ಲಾವಾವನ್ನು ಅನುಗಾಲವೂ ಉಗುಳುತ್ತಿರುತ್ತದೆ. ಈ ಲಾವಾ ಕಡಾಯಿಯ ಆಸುಪಾಸಿನಲ್ಲೇ ಇನ್ನೂ ಎಂಟು ಜಾಗೃತ ಜ್ವಾಲಾಮುಖಿಗಳಿವೆ. ಇಲ್ಲಿ ಭೂಕಂಪಗಳು ತೀರ ಸಾಮಾನ್ಯ.

ರಸ 'ಲಾವಾ' ಆಗಿ ಸುತ್ತೆಲ್ಲ ಸೂರೆಯಾಗುತ್ತದೆ. ಈ ಲಾವಾ, ಒಂದು ವೇಳೆ ತಿಳಿಯಾಗಿದ್ದರೆ ಪಸರಿಸಿಕೊಂಡು ಚಪ್ಪಟೆಯಾಕಾರದ ಜ್ವಾಲಾಮುಖಿ ಪ್ರದೇಶವಾದೀತು. (ಪ್ಯಾಸಿಫಿಕ್ ಸಾಗರದ ಹವಾಯಿ ದ್ವೀಪದ 'ಮಾವುನಾ ಲೋಅ'[1] ಎಂಬ ಜ್ವಾಲಾಮುಖಿಯ ನಿರ್ಮಾಣವಾದದ್ದು ಹೀಗೇ.) ಒಂದೊಮ್ಮೆ ಗಟ್ಟಿಯಾಗಿದ್ದರೆ ಜಪಾನಿನ ಮೌಂಟ್ ಫ್ಯೂಜಿಯ ಜ್ವಾಲಾಮುಖಿಯಂತೆ ಕಡಿದಾದ ಪರ್ವತ ರೂಪದಲ್ಲಿ ನಿಂತೀತು.

★

ರೋಮನ್ ಅಗ್ನಿದೇವತೆ 'ವಲ್ಕನಸ್'ನಿಂದಾಗಿ 'ವಲ್ಕನೊ' ಪದ ಹುಟ್ಟಿಕೊಂಡಿತಂತೆ. ಭೂಮಧ್ಯ ಸಮುದ್ರದ ದ್ವೀಪವೊಂದಕ್ಕೆ 'ವಲ್ಕನೊ ಐಲೆಂಡ್' ಎಂಬ ಹೆಸರು ಬಂದದ್ದು ಈ ದೇವತೆಯಿಂದಲೇ. (ಅಲ್ಲಿನ ಜ್ವಾಲಾಮುಖಿಯೀಗ ಸುಪ್ತ.)

ಜಗತ್ತಿನ ಜಾಗೃತ ಜ್ವಾಲಾಮುಖಿಗಳ ಒಟ್ಟು ಸಂಖ್ಯೆ 850 ಎಂದು ಒಂದು ಅಂದಾಜು. ಈ ಪೈಕಿ ಕೆಲವು ಜಲಾಂತರ್ಗತ ಜ್ವಾಲಾಮುಖಿಗಳು[2]. ದಾಖಲೆಯ ಪ್ರಕಾರ ಇಂಡೋನೇಶ್ಯ ಅತಿ ಹೆಚ್ಚು 'ಜಾಗೃತ ಜ್ವಾಲಾಮುಖಿಗಳ ದೇಶ'. ಅಲ್ಲಿರುವ 167ರ ಪೈಕಿ 77 ಜ್ವಾಲಾಮುಖಿಗಳು ಈವರೆಗೆ ಅಗ್ನಿವಮನ ಮಾಡಿಕೊಂಡಿವೆ. ಉಳಿದವು ಇತಿಹಾಸ ಪೂರ್ವಕಾಲದಲ್ಲಿ ಕೆಂಡಕಾರಿರಬೇಕು.

★

ರೋಮನ್ ಸಾಮ್ರಾಜ್ಯದ ಪಾಂಪೆ ಭೂಗತವಾದ ಕಥೆಯನ್ನು ಹೇಳಲೇಬೇಕು. ಕ್ರಿಸ್ತಶಕಾರಂಭದ ಮೊದಲ ಶತಮಾನದಲ್ಲಿ ವೆಸುವಿಯಸ್ ಜ್ವಾಲಾಪಕೋಪದಿಂದಾಗಿ ಅದು ಅಧ್ವಾನಕ್ಕೀಡಾಯಿತು. (ಅಂಥ ಅನಾಹುತಗಳಿಗೇ ಮುಂದೆ ಅನ್ವರ್ಥವೂ ಆಯಿತು). ಕಿರಿಯ ಪ್ಲಿನಿ ಅದನ್ನು ಕಣ್ಣಿಗೆ ಕಟ್ಟುವಂತೆ ಬರೆದಿಟ್ಟಿದ್ದಾನೆ. ಆತ ನೋಡಿದ, ''ಭೂತಲಸ್ವರ್ಗವನ್ನು ನರಕಸದೃಶವನ್ನಾಗಿ ಮಾಡಿದ'' ಆ ಅಗ್ನಿತಾಂಡವದ ವಿವರಗಳನ್ನೋದಿದರೆ ನಮ್ಮ ರಕ್ತ ಹೆಪ್ಪುಗಟ್ಟುತ್ತದೆ.

ಕ್ರಿಸ್ತಶಕ 79ರ ಅಗಸ್ಟ್ 24. ನಡುಮಧ್ಯಾಹ್ನದಲ್ಲಿ ವೆಸುವಿಯಸ್ ಮುಗಿಲೆತ್ತರಕ್ಕೆ ಭುಗಿಲೆದ್ದಿತು. ಅದರ ಪಶ್ಚಿಮಕ್ಕೆ 32 ಕಿಲೋಮೀಟರ್ ದೂರದ ಮಿಸೆನಮ್‌ವರೆಗೂ ಆ ಅಗ್ನಿಜ್ವಾಲೆಗಳು, ಆ ಹೊಗೆ ಕಾಣುತ್ತಿದ್ದವು! ಇದನ್ನು ಕಂಡು ಬೆಕ್ಕಸಗೊಂಡ ಹಿರಿಯ ಪ್ಲಿನಿ (ಮೇಲೆ ಹೇಳಿದ ಕಿರಿಯನ ಚಿಕ್ಕಪ್ಪ). ಆತ ಪ್ರಕೃತಿಶಾಸ್ತ್ರಜ್ಞ. ವಿಜ್ಞಾನಿಯೂ ಹೌದು. ಮಿಸೆನಮ್‌ನಲ್ಲಿದ್ದ ಆ ಸಾಮ್ರಾಜ್ಯದ ನೌಕಾಪಡೆಯ ಅಧಿಕಾರಿಯೂ ಆಗಿದ್ದ. ಅಲ್ಲೆಷ್ಟೆಲ್ಲ ನಾಶವಾಗಿದೆಯೋ, ಏನೆಲ್ಲ ಭಸ್ಮವಾಗಿದೆಯೋ, ತನ್ನ ಗೆಳೆಯರು ಅದೆಂಥ ಕಷ್ಟಕ್ಕೀಡಾಗಿದ್ದಾರೊ, ಅವರನ್ನು ಪಾರುಮಾಡಬೇಕು ಎಂದುಕೊಂಡ. ಹಡಗೊಂದರಲ್ಲಿ ಆ ಬೆಂಕಿಬೆಟ್ಟದೆಡೆ ಪಯಣಿಸಿದ. ''ದೈತ್ಯನಂಥ ನನ್ನ ಚಿಕ್ಕಪ್ಪ, ಭಯವಿಹ್ವಲರಾಗಿ ಬೇರೆಲ್ಲರೂ ಬೆಟ್ಟದಿಂದ ದೂರವಾಗುತ್ತಿದ್ದ ಸಮಯದಲ್ಲಿ, ಅದರೆಡೆ ಧಾವಿಸಿದ'' ಎನ್ನುತ್ತಾನೆ ಕಿರಿಯ ಪ್ಲಿನಿ.

1 ಇದು ಜಗತ್ತಿನ ಅತಿ ದೊಡ್ಡ ಜಾಗೃತ ಜ್ವಾಲಾಮುಖಿ. ಮೊನ್ನೆ ಮೊನ್ನೆ, 1975 ಹಾಗೂ 1984ರಲ್ಲಿ, ಇದು ಅಗ್ನಿತಾಂಡವವಾಡಿತು.

2 ಸಾಗರ ತಲದಲ್ಲಿರುವ ತಗ್ಗುಗಳಿಂದಲೂ, ಕಿರಿದಾದ ಶಿಲಾಶಿಖರಗಳಿಂದಲೂ ಜ್ವಾಲಾಮುಖಿ ಸ್ಫೋಟವಾಗುವುದುಂಟು. ಇಂಥ ಕೆಲ ಜ್ವಾಲಾಸ್ಫೋಟಗಳು ಸಾಗರದ ಪಾತಳಿಯನ್ನೂ ಮೀರಿ ಬೆಂಕಿ-ಬಂಡೆಗಳನ್ನು ಉಗುಳಬಹುದು. ಹೀಗಾದಾಗಲೆಲ್ಲ ಅಲ್ಲಿ ಜ್ವಾಲಾಮುಖಿಜನ್ಯ ವಸ್ತುಗಳು ಒಟ್ಟಿ ಬಿದ್ದು ದ್ವೀಪಗಳ ನಿರ್ಮಾಣವಾಗುತ್ತದೆ. ಫಿಲಿಪ್ಪೈನ್ಸ್‌ನ ಮನಿಲಾದಿಂದ 56 ಕಿಲೋಮೀಟರುಗಳ ಅಂತರದಲ್ಲಿರುವ ಟಾಗಾಯ್ಟೇಯ್‌ನಲ್ಲಿರುವ ತಾಲ್ ಕೊಳದ ಮಧ್ಯದ ಐದು ಮೈಲು ಉದ್ದ-ಮೂರು ಮೈಲು ಅಗಲದ ದ್ವೀಪ ಹುಟ್ಟಿದ್ದು ಹೀಗೆಯೆ. 1911ರಲ್ಲಿ ಆಗಿನ ಸ್ಫೋಟದಲ್ಲಿ 1,335 ಜನ ಸಾವನ್ನಪ್ಪಿದರು. 1965ರಲ್ಲಿ ಇದು ಮೂರು ದಿನ ಗುರುಗುಟ್ಟಿ ಹಲವು ಟನ್ನುಗಳಷ್ಟು ಮಣ್ಣು-ಕಲ್ಲುಗುಂಡು ಮತ್ತು ನೊರೆಗಲ್ಲುಗಳನ್ನು ಉಗುಳಿತು. ಇದು ಉದುರಿಸಿದ ಬೂದಿಯ ಹೂಳು ತುಂಬಿ ಗದ್ದೆಗಳು, ಮನೆಗಳು ಮುಚ್ಚಿದವು. 200 ಜನ ಜೀವ ಕಳೆದುಕೊಂಡರು.

ಆದರೆ ಭಯಂಕರ ಭಸ್ಮಪಾತದಿಂದಲೂ, ನೀರಲ್ಲಿ ದಿಮ್ಮಿಗಳಾಕಾರದಲ್ಲಿ ತೇಲುತ್ತಿದ್ದ ಜ್ವಾಲಾಮುಖಿಜನ್ಯ ನೊರೆಗಲ್ಲು (Pumice)ಗಳ ಹೊಡೆತದಿಂದಲೂ ಗಾಸಿಗೊಂಡಿತು ನೌಕೆ. ಹಾಗೂ ಹೀಗೂ ವೆಸುವಿಯಸ್‌ನ ದಕ್ಷಿಣಕ್ಕಿರುವ ಸ್ಟ್ಯಾಬಿಯೆ ಎಂಬಲ್ಲಿಗೆ ಬಂದು ತಲುಪಿದ ಹಿರಿಯ ಪ್ಲಿನಿ.

ಆಗಾಗಲೇ ಜೀವಚ್ಛವಗಳಂತಾಗಿದ್ದ ಗೆಳೆಯರಿಗೆ ಆತ ಧೈರ್ಯ ಹೇಳಿದ: ''ಛೆ, ಅದೇನೆಂದುಕೊಂಡಿದ್ದೀರಿ? ಆ ಬೆಂಕಿಗೆ ಹೆದರುವುದೆ? ಹುಚ್ಚಪ್ಪಗಳಿರಾ, ಅದು ರೈತರು ಹಚ್ಚಿದ ಗುಡ್ಡಗಿಚ್ಚು (Bonfire)'' ಎಂದ. (ಆದರೂ ಈ 'ವಿಚಿತ್ರ' ಏನಿರಬಹುದು ಎಂದು ಯೋಚಿಸುತ್ತಲೇ ಇದ್ದ.) ''ಸುಮ್ಮನೆ ಮಲಗಿಕೊಳ್ಳಿ. ಏನೂ ಆಗುವುದಿಲ್ಲ'' ಎಂದು ಆತ ನೆಲಕ್ಕೆ ಬೆನ್ನು ಹಚ್ಚಿದ. ದಣಿದ ಕಣ್ಣುಗಳು ಮುಚ್ಚಿಕೊಂಡವು. ಭಯಗ್ರಸ್ತ ಗೆಳೆಯರಿಗೆಲ್ಲಿಯ ನಿದ್ದೆ? ರಾತ್ರಿಯಿಡಿ ಅವರು ಇಲ್ಲಿರುವುದೇ, ಇಲ್ಲ ಎಲ್ಲಿಗಾದರೂ ಹೋಗಿ ಬಿಡುವುದೇ ಎಂದು ಪರಸ್ಪರ ಕೇಳಿಕೊಳ್ಳುತ್ತಲೇ ಇದ್ದರು. ಯಾರ ಬಳಿಯೂ ಉತ್ತರವಿರಲಿಲ್ಲ. ಮಧ್ಯರಾತ್ರಿ ಮೀರಿತ್ತು. ಇದ್ದಕ್ಕಿದ್ದಂತೆ ಮತ್ತದೇ ಸದ್ದು.. ಭೂಮಿ ಗರ್ಜಿಸಿದಂತೆ, ಗದುಗುಟ್ಟಿದಂತೆ. ಗೆಳೆಯರ ಬೆನ್ನುಹುರಿಯಲ್ಲಿ ಚಳಕ್ಕೆಂದಿತು. ಪ್ಲಿನಿಯೂ ಧಿಗ್ಗನೆದ್ದು ಕುಳಿತ. ಅವರೆಲ್ಲ ಹಾಸಿಗೆ-ದಿಂಬು ಹಿಡಿದೇ ಹೊರಬಂದರು. ಹೊರಗೆ ಶಿಲಾವೃಷ್ಟಿ ಶುರುವಾಗಿತ್ತು. ಅವರೆಲ್ಲ ಬೀಸಿ ಬರುವ ಬಿಸಿ ಕಲ್ಲುಗಳಿಂದ ತಲೆ ಹೋಳಾಗದಿರಲೆಂದು ದಿಂಬುಗಳನ್ನು ತಲೆ ಮೇಲಿರಿಸಿಕೊಂಡು ಕಾಲಿಗೆ ಬುದ್ಧಿ ಹೇಳಿದರು.

ಅಗಸ್ಟ 25. ಬೆಳಗಾಗಿತ್ತು. ಆದರೆ ಕೋಳಿಗಳು ಕೂಗಲಿಲ್ಲ. ಸೂರ್ಯ ಕಾಣಿಸಿಕೊಳ್ಳಲೂ ಇಲ್ಲ. ಮಧ್ಯರಾತ್ರಿಗಿಂತಲೂ ದಟ್ಟವಾದ ಕತ್ತಲೆ ಆವರಿಸಿಕೊಂಡಿತ್ತು. ಗೆಳೆಯರೊಂದಿಗೆ ಪಾರಾಗಿ ಮಿಸೆನಮ್‌ಗೆ ಹೋಗಬೇಕೆಂದುಕೊಂಡ ಪ್ಲಿನಿ. ಆದರೆ ಸಮುದ್ರದ ನೀರು ಬಿಸಿಯಾಗಿತ್ತು, ಬೆಟ್ಟದೆತ್ತರ ಅಲೆಗಳು ಅಲ್ಲೆಲ್ಲ ಮುಟ್ಟಾಟ ನಡೆಸಿದ್ದವು. ಪ್ಲಿನಿಗೆ ತಾಳಲಾರದ ಬಾಯಾರಿಕೆ. ''ತಣ್ಣೀರು ಕೊಡಿ'' ಎಂದ. ಎಲ್ಲಿ ಸಿಗಬೇಕು? ಮತ್ತೆ ಭುಗಿಲೆದ್ದಿತು ಬೆಟ್ಟ. ಗಂಧಕದ ನಾತದಿಂದ ಅವರೆಲ್ಲರ ಶ್ವಾಸ ಕಟ್ಟಿತು. ಗೆಳೆಯರು ಸಿಕ್ಕತ್ತ ಓಡಿದರು. ಪ್ಲಿನಿಗೆ ಅದು ಅಸಾಧ್ಯದ ಮಾತಾಯಿತು. ಕುಸಿದು ಬಿದ್ದ. (ಎರಡು ದಿನಗಳ ನಂತರ ಆತನ ಶವ ಸ್ಟ್ಯಾಬಿಯೆಯ ಮರಳು ದಂಡೆಯ ಮೇಲೆ ಮುಗಿಲಿಗೆ ಬೆನ್ನಾಗಿ ಬಿದ್ದುಕೊಂಡಿತ್ತೆಂದು ಕಂಡವರು ಕಿರಿಯ ಪ್ಲಿನಿಗೆ ಸುದ್ದಿ ಮುಟ್ಟಿಸಿದರು.)

ತನ್ನ ಚಿಕ್ಕಪ್ಪ ಅತ್ತ ಸೆಣಸುತ್ತಿದ್ದಾಗ ಇತ್ತ ಮಿಸೆನಮ್‌ನಲ್ಲಿ ಕಿರಿಯ ಪ್ಲಿನಿ ''ಅಷ್ಟು ದೂರದಿಂದ (32 ಕಿ.ಮೀ.) ನಮ್ಮೆಡೆಗೆ ವೇಗವಾಗಿ ಸಾಗಿಬರುವ ಕರಿ ರಕ್ಕಸನನ್ನು ಕಂಡು ದಿಕ್ಕೆಟ್ಟೆವು. ಆ ಧೂಮಪೈಶಾಚದ ವಿಕಟಾಟ್ಟಹಾಸಕ್ಕೆ ನಡುಗಿದೆವು. ಕಣ್ಣು ಮುಚ್ಚಿ ತೆರೆವುದರಲ್ಲೇ ಅದರ ಮುಷ್ಟಿಗೆ ಸಿಲುಕುವೆವೇನೋ ಎಂದು ಹೆದರಿ ಓಡತೊಡಗಿದೆವು'' ಎಂದು ತಾಯಿಯೊಂದಿಗೆ, ಇತರ ಸಾವಿರಾರು ಜನರಂತೆ ಪಲಾಯನ ಹೇಳುತ್ತಾನೆ. ''ಹಗಲೇ ಇರುಳಾಗಿ, ನಾವೆಲ್ಲ ಕಣ್ಣು ತಿಕ್ಕಿಕೊಳ್ಳುತ್ತ, ಕೆಮ್ಮುತ್ತ-ಕ್ಯಾಕರಿಸುತ್ತ ನಡೆದಿದ್ದೆವು. ಎಲ್ಲರೂ 'ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನ'ನೆಂದು ದೇವರಲ್ಲಿ ಮೊರೆಯಿಡುತ್ತಿ

ವ್ಯೋಮದೆತ್ತರದ ಮಹೋನ್ನತ್ತ ಆನೆಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಒಂದರ ಪಕ್ಕ ಒಂದು ನಡೆದು ಬಂದಂತೆ 'ಬೂದಿ ಸುಂಟರಗಾಳಿ'ಯೊಂದು ಪಶ್ಚಿಮದೆಡೆಯ ಜ್ವಾಲಾಮುಖಿಯಿಂದ ಬೀಸಿ ಬಂತು. ಆ ಮಹಾಸಾಗರದಂಥ ಜಲಾಶಯವನ್ನು ನುಂಗಿ ನೊಣೆಯಿತು. ಅದರಲ್ಲಿ ನೀರು ಕುಡಿಯುತ್ತಿದ್ದ ಬೆಟ್ಟದೆತ್ತರದ ರ್‍ಹಿನೋಗಳು, ಕಾಡು ಕುದುರೆಗಳು ಮತ್ತೆಂದೂ ಹುಟ್ಟದಂತೆ ಐಕ್ಯವಾದವು.

'ಇತಿಹಾಸ ಪೂರ್ವ ಪ್ರಾಣಿಗಳ ಪಾಂಪೆ' ಯಾದದ್ದು ಕೋಟಿ ವರ್ಷಗಳ ಹಿಂದೆ.

ದ್ದರು. ಇನ್ನು ಕೆಲವರು 'ದೇವತೆಗಳೂ ಬೆದರಿ ಓಡಿಹೋಗಿರಬೇಕು. ಅಂತೆಯೇ ಈ ಅಂತಕ ಅಟಾಟೋಪ ನಡೆಸುತ್ತಿದ್ದಾನೆ' ಎಂದುಕೊಳ್ಳುತ್ತಿದ್ದರು. ವಿಶ್ವವಿನ್ನು ಬೆಳಕು ಕಾಣಲಾರದು, ನಮಗಿನ್ನು ಅಂಧ ಜೀವನವೇ ಗತಿ ಎಂದೇ ಭಾವಿಸಿದೆ,'' ಎಂದು ಬರೆದಿರುವ ಕಿರಿಯ ಪ್ಲಿನಿ, ''ಕ್ರಮೇಣ ಮದೋನ್ಮತ್ತ ಮೋಡ ಸರಿಯಿತು. ಸೂರ್ಯ ಕಾಣದಿದ್ದರೂ ಬೆಳಕು ಹರಿಯಿತು. ಎಲ್ಲೆಲ್ಲೂ ಆಳೆತ್ತರದ ಬೂದಿ ಸಮಾಧಿ. ನಾವು ಕಷ್ಟಪಟ್ಟು ಕಾಲೆತ್ತೆತ್ತಿ ನಡೆದೆವು,'' ಎನ್ನುತ್ತಾನೆ. ಕೊನೆಯಲ್ಲಿ ಆತ, ''ಈ ವಿವರಗಳು ಇತಿಹಾಸಕ್ಕೆಷ್ಟು ಮಹತ್ವದ ಮಾಹಿತಿಗಳಲ್ಲ ಬಿಡಿ'' ಎಂದು ಬರೆದರೂ ಈ ಟಿಪ್ಪಣಿ ದಕ್ಕದೆ ಹೋಗಿದ್ದರೆ ಅಂದು ವೆಸುವಿಯಸ್‌ನಲ್ಲಿ ಏನು ನಡೆಯಿತೆಂಬುದರ ಅರಿವು ಬಹುಶಃ ನಮಗಿರುತ್ತಿರಲಿಲ್ಲವೇನೋ. ವೆಸುವಿಯಸ್‌ನ ಇತಿಹಾಸ ಆರಂಭವಾಗುವುದೇ 'ಪ್ಲಿನಿಯ ಟಿಪ್ಪಣಿ'[3] ಯಿಂದ.

ಸುಮಾರು ಎರಡು ಸಾವಿರ ವರ್ಷಗಳವರೆಗೆ ಗಟ್ಟಿ ಬೂದಿಯ ರಾಶಿಯಡಿಯಲ್ಲಿ ಮಲಗಿದ್ದ ಪಾಂಪೆ ಮತ್ತು ಹರ್ಕ್ಯುಲೇನಿಯಮ್ (ಇಂದಿನ ಎರ್ಕೊಲ್ಯಾನೊ) ಅವಶೇಷಗಳೀಗ ಅಂದಿನ ಕಥೆಯನ್ನು ನಮಗೆ ಹೇಳುತ್ತಲಿವೆ. ಆ ಪರ್ವತದ ತಪ್ಪಲಿನಲ್ಲಿ ನೈಋತ್ಯಕ್ಕಿದೆ ಹರ್ಕ್ಯುಲೇನಿಯಮ್, ಆಗ್ನೇಯಕ್ಕೆ ಪಾಂಪೆ. ಕ್ರಿಸ್ತಶಕ 1709ರಲ್ಲಿ, ಬಾವಿ ಅಗೆಯುತ್ತಿದ್ದ ಆಳೊಬ್ಬ ಭಸ್ಮ ಸಮಾಧಿಯಲ್ಲಡಗಿದ್ದ ಹರ್ಕ್ಯುಲೇನಿಯಮ್ ನಗರವನ್ನು ಪತ್ತೆ ಹಚ್ಚಿದ.

ಆತ ಅಗೆದ ಜಾಗದಲ್ಲಿ ಸಿಕ್ಕದ್ದೊಂದು ರಂಗಮಂದಿರ. ಆ ಆ್ಯಂಫಿಥಿಯೇಟರಿನ ರಂಗಮಂಟಪ ಹಾಗೂ ಪ್ರಸಾಧನಾಗಾರಗಳು ಅಡಗಿಸಿಕೊಂಡದ್ದು ಅಪಾರ ಸಂಪತ್ತು ಹಾಗೂ ಅಪೂರ್ವ ಕಲಾಕೃತಿಗಳನ್ನು. ನೇಪಲ್ಸಿನ ಆಳುವ ದೊರೆಗೆ ಸುದ್ದಿ ಗೊತ್ತಾಯಿತು. ಆ ಇಡಿ ರಂಗಮಂದಿರವನ್ನು ಅಗೆಯಿಸಿ, ದೊರೆತದ್ದನ್ನೆಲ್ಲ ಅರಮನೆಗೊಯ್ದು ಒಟ್ಟೈಸಿದ ಆ ಭೂಪ.

ವೆಸುವಿಯಸ್ ಆಕ್ರೋಶದ ಆ ಮಧ್ಯಾಹ್ನ. ಎರಡೂವರೆಯಿಂದ ಮೂರು ಸಾವಿರದವರೆಗೆ ಪ್ರೇಕ್ಷಕರು ಕೂರಬಹುದಾಗಿದ್ದ ಆ ರಂಗಮಂದಿರದಲ್ಲಿ 'ದುರಂತ' ನಾಟಕವೊಂದರ ಪ್ರದರ್ಶನ ನಡೆಯುತ್ತಿತ್ತು. ರಂಗದ ಮೇಲೆ ರಕ್ಕಸ ಮುಖವಾಡದ ನಟ ಗರ್ಜಿಸುತ್ತಿದ್ದ ಹೊತ್ತಿನಲ್ಲೇ ಅತ್ತ ವೆಸುವಿಯಸ್‌ನಿಂದ 'ನೂರು ರಕ್ಕಸರ ಒಕ್ಕೊರಲ ಗರ್ಜನೆ.'

ಕ್ರಿಸ್ತಪೂರ್ವ 80ರಲ್ಲಿ ರೋಮನ್ನರು ಪಾಂಪೆಯನ್ನು ತಮ್ಮ ವಸಾಹತುವನ್ನಾಗಿಸಿಕೊಂಡು, ಅದನ್ನು ಸುಸಂಸ್ಕೃತ, ಕೃಷಿ ಪ್ರಧಾನ ಪ್ರದೇಶವನ್ನಾಗಿಯೂ ಮೀನುವ್ಯಂಜನ ಮತ್ತು ಮದ್ಯಗಳ ರಫ್ತು ಕೇಂದ್ರವನ್ನಾಗಿಯೂ ಬೆಳೆಸಿದರು. ಗೃಹ ಕೈಗಾರಿಕೆಗಳು ಅಂದಿನ ಪಾಂಪೆ ವಾಸಿಗಳ ಆದಾಯದ ಮುಖ್ಯ ಮೂಲಗಳಾಗಿದ್ದವು.

ಹದಿನೇಳು ವರ್ಷಗಳ ಹಿಂದಷ್ಟೇ (ಕ್ರಿಸ್ತಶಕ 62) ಆದ ಭಯಂಕರ ಭೂಕಂಪದಿಂದ ತತ್ತರಿಸಿ ಚೇತರಿಸಿಕೊಳ್ಳುತ್ತಿದ್ದ ಪಾಂಪೆಗೆ ಲಘು ಭೂಕಂಪಗಳೊಂದಿಗೆ 'ಪ್ರಾರಂಭವಾದ ವೆಸುವಿಯಸ್

ಫಿಲಿಪ್ಪೈನ್ಸ್ ಸಮೂಹದಲ್ಲಿ ಅದೆಷ್ಟು ದ್ವೀಪಗಳಿವೆಯೊ! 7,100 ಎಂದು ಒಂದು ಅಂದಾಜು. ಹೊಸ ದ್ವೀಪಗಳ ಹುಟ್ಟು-ಸಾವು ಇಲ್ಲಿ ಸಾಮಾನ್ಯ. ಅಚ್ಚರಿಪಡಬೇಡಿ. ಜಲಾಂತರ್ಗತ ಜ್ವಾಲಾಮುಖಿಗಳ ಕಣ್ಣುಮುಚ್ಚಾಲೆಯಿದು. ಹೊಸ ದ್ವೀಪ ಹುಟ್ಟುತ್ತದೆ, ಒಂದೆರಡು ವರ್ಷಗಳಲ್ಲೇ ತೆರೆಗಳು ನಡೆಸುವ 'ಧೃತರಾಷ್ಟ್ರ ಆಲಿಂಗನ'ದಲ್ಲಿ ಪುಡಿಯಾಗಿ ನೀರಿನೊಂದಿಗೆ ಬೆರೆಯುತ್ತದೆ.

3 ಇಟಲಿಯ ಫ್ಲಾರೆನ್ಸ್‌ನಲ್ಲಿರುವ ಲಾರೆಂತಿಯನ್ ಲೈಬ್ರರಿಯಲ್ಲಿದು ಸುರಕ್ಷಿತ. ಮೆಡಿಸಿ ಕುಟುಂಬದವರು ಈ ಲೈಬ್ರರಿಯನ್ನು 'ಪುನರುತ್ಥಾನ ಕಾಲ'ದಲ್ಲಿ ಸ್ಥಾಪಿಸಿದರು. ಇಲ್ಲಿ ವರ್ಜಿಲ್, ದಾಂತೆ, ಟ್ಯಾಕಿಟಸ್ ಮುಂತಾದವರ ಒಟ್ಟು 13,000 ಹಸ್ತಪ್ರತಿಗಳಿವೆ. ಆಯಾ ಪ್ರಸಿದ್ಧರ ಹಸ್ತಾಕ್ಷರವುಳ್ಳ, ಇಲ್ಲವೆ ಅತಿ ವಿಶೇಷವೆನಿಸಬಹುದಾದ ಅಮೂಲ್ಯ ಹಸ್ತಪ್ರತಿಗಳನ್ನು ಮಾತ್ರ ಅಧಿಕೃತವೆಂದು ರಕ್ಷಿಸಿಡಲಾಗಿದೆ.

ವಿಶೋಧಪ ಮರಣಾಂತಿಕ ಪೆಟ್ಟನ್ನಿತ್ತಿತು. ತಮ್ಮ ಫಲವತ್ತಾದ ಬದುಕಿನ ನೆಲೆಯಾಗಿ ನಿಂತಿದ್ದ ಪರ್ವತವೇ ಸಾವಿನ ಸೆಲೆಯಾಗಿ ಮಾರ್ಪಟ್ಟೀತೆಂದು ಆ ಜನ ಅಂದುಕೊಂಡಿರಲೇ ಇಲ್ಲ.

ಆ ಎರಡು ದಿನಗಳಲ್ಲಿ ವೆಸುವಿಯಸ್‌ನ ಉನ್ಮಾದದ ಪ್ರಮಾಣ ಮತ್ತು ಪರಿಣಾಮಗಳೇನು ಎಂಬುದನ್ನು ಈ ಶತಮಾನದಲ್ಲಿ ಹೊರಗೆಡಹಿದ್ದಾರೆ ಜ್ವಾಲಾಮುಖಿ ಶಾಸ್ತ್ರಜ್ಞರು, ಭೂಗರ್ಭಶಾಸ್ತ್ರ ಪರಿಣತರು. ಜ್ವಾಲಾಮುಖಿ ಸ್ಫೋಟವೊಂದರ ಪ್ರಕ್ರಿಯೆಯಲ್ಲಿ ನಡೆಯುವುದೇನೇನು ಎಂಬುದನ್ನೂ ಬಿಡಿಸಿಟ್ಟಿದ್ದಾರವರು.

ನೇಪಲ್ಸ್ ಕೊಲ್ಲಿಯ ಆಳದಲ್ಲಿ ನಡೆಯುವ ಆಫ್ರಿಕನ್ ಮತ್ತು ಯುರೋಪಿಯನ್ ಖಂಡ ಪೀಠಗಳ 'ಡೀಡಿಯಾಟ'ದಲ್ಲಿ ಗಾಸಿಗೊಳ್ಳುತ್ತಲೇ ಬಂದಿವೆ ಇಟಾಲಿಯನ್ ದ್ವೀಪಕಲ್ಪ. ಈ ಪ್ರದೇಶದಲ್ಲಿ ಭೂಕಂಪಗಳು ಹೆಚ್ಚು. ಜ್ವಾಲಾಮುಖಿ ಪರ್ವತಗಳ ಸರಮಾಲೆಯೇ ಇಲ್ಲಿರುವುದು ಈ ಕಾರಣದಿಂದ (ರೋಂನಿಂದ ಸಿಸಿಲಿವರೆಗೆ ಒಂಬತ್ತು ಜ್ವಾಲಾಮುಖಿಗಳಿವೆ). ನೇಪಲ್ಸಿಗೆ ತೀರ ಸಮೀಪದ, 4,203 ಅಡಿ ಎತ್ತರದ, ವೆಸುವಿಯಸ್ ಜ್ವಾಲಾಮುಖಿ ಈ ಎರಡು ಸಾವಿರ ವರ್ಷಗಳ ಅವಧಿಯಲ್ಲಿ ಎಂಬತ್ತು ಸಲ ಉಕ್ಕಿ ಹರಿದಿದೆ. 1631 ಹಾಗೂ 1906ರಲ್ಲಂತೂ ಇದರ 'ಉರುವಣಿಗೆ' ಮನುಕುಲ ಮರೆಯಲಾರದಂಥದು. 1944 ರಿಂದ ಮೌನವ್ರತವನ್ನಾಚರಿಸುತ್ತಿದೆಯಾದರೂ ಈ ಅಜಗರ ಯಾವ ಹೊತ್ತಿಗಾದರೂ ಬುಸುಗುಡುತ್ತ ಏಳುವ ಭಯ ಇದ್ದದ್ದೆ.

ಕ್ರಿಸ್ತಶಕ 79ರ 'ಕಿಚ್ಚುಗುಳುವಿಕೆ'ಯ ನಂತರ ಒಟ್ಟೈಸಿದ ಬೂದಿ ಇತ್ಯಾದಿಗಳನ್ನು ಕಳೆದ ದಶಕದಲ್ಲಿ ಪರೀಕ್ಷಿಸಿದ ರ್‍ಹೋಡ್ ಐಲೆಂಡ್ ವಿಶ್ವವಿದ್ಯಾಲಯದ ಜ್ವಾಲಾಮುಖಿ ಶಾಸ್ತ್ರಜ್ಞ ಹೆರಾಲ್ಡರ್ ಸಿಗರ್ಡ್‌ಸನ್ ಅಗಸ್ಟ್ 24ರ ಆ ಸನ್ನಿವೇಶವನ್ನು ನಮ್ಮೆದುರು ನಿಲ್ಲಿಸುತ್ತಾರೆ.

"ವೆಸುವಿಯಸ್ ಸುಮಾರು ಹನ್ನೊಂದು ಗಂಟೆಗಳ ಕಾಲ ಬೆಂಕಿ ಕಾರಿಕೊಂಡಿತು. ವಾಯುಮಂಡಲ ಸ್ತರ (Strato sphere)ದಲ್ಲಿ ಸುಮಾರು 20 ಕಿಲೋಮೀಟರುಗಳೆತ್ತರಕ್ಕೆ ಅದು ಬೆಂಕಿ ಬಂಡೆಗಳನ್ನು ಚಿಮ್ಮಿತು. ಮುಂದೆ ಪ್ರತಿ ಗಂಟೆಗೆ ಅರ್ಧ ಅಡಿಯಂತೆ ಬೂದಿ ಮತ್ತು ನೊರೆಗಲ್ಲುಗಳು ಪಾಂಪೆಯ ಮೇಲೆ ಒಟ್ಟಬೀಳತೊಡಗಿದವು. ಮಧ್ಯ ರಾತ್ರಿಯ ಹೊತ್ತಿಗೆ ಈ ಅಗ್ನಿ ಕಾರಂಜಿಯ ಇಳಿತವುಂಟಾಗಿ ಪರ್ವತದ ಇಳಿಜಾರುಗಳಲ್ಲಿ ಅತಿ ತಾಪದ ಅನಿಲಗಳು ನೊರೆಗಲ್ಲು ಮತ್ತು ಅಗ್ನಿಶಿಲೆಗಳ ಪ್ರಜ್ವಲಿತ ಪ್ರವಾಹ[4] ಭರದಿಂದ ಸಾಗಿದವು. ನಂತರ ಈ ಪ್ರವಾಹಗಳು ಪಾತಳಿ ಮತ್ತು ವೇಗ ಹೆಚ್ಚಿಸಿಕೊಂಡು. ಹರ್ಕ್ಯುಲೇನಿಯಂ ಬಳಿ ಆಸ್ಫೋಟಿಸಿದಾಗ ಆ ನಗರ ಯಮಪುರಿಯಾಯಿತು. ಮುಂದೆ ಈ 'ಬೆಂಕಿಯ ಹೊಳೆ' ಮೆಲ್ಲಗೆ ಸರಿಯಿತು.

"ಈ ಜ್ವಾಲಾಮುಖಿ ಸ್ಫೋಟದಲ್ಲಿ ಲಾವಾ ಇರಲಿಲ್ಲ. ಮ್ಯಾಗ್ಮಾ ಅತಿ ಆಸ್ಫೋಟಕವಾಗಿತ್ತು. ಉಗಿ ಮತ್ತು ಇತರ (ಕ್ಷಿಪ್ರ ಬಾಷ್ಪ ಗುಣದ) ಅನಿಲಗಳಿದ್ದವು. ಉಗಿ ಮ್ಯಾಗ್ಮಾವನ್ನು ನೊರೆಗಲ್ಲುಗಳನ್ನಾಗಿ ಪರಿವರ್ತಿಸುತ್ತದೆ. ಈ ನೊರೆಗಲ್ಲು ಸಾಮಾನ್ಯವಾಗಿ ಪೆಟ್ಟು ಕೊಡಬಲ್ಲಷ್ಟು ಗಟ್ಟಿಯಾಗಿರುವುದಿಲ್ಲ. ಆದರೆ ದೊಡ್ಡ ಗಾತ್ರ ನೊರೆಗಲ್ಲುಗಳು ಆಗ ಕ್ಷಿಪಣಿಗಳಂತೆ ಬೀಸಿ ಬಂದಿರಬೇಕು. (ಹಿರಿಯ ಪ್ಲಿನಿ ಹಾಗೂ ಆತನ ಸಂಗಡಿಗರು ಅವುಗಳಿಂದ ತಲೆ ಉಳಿಸಿಕೊಳ್ಳಲು ದಿಂಬು ಹೊತ್ತು ಓಡಿರಬೇಕು.)

"ಅಗಸ್ಟ್ 24ರ ಮಧ್ಯಾಹ್ನ ಪ್ರಾರಂಭವಾದ ನೊರೆಗಲ್ಲು ಹಾಗೂ ಬೂದಿ ಮಳೆ ಮತ್ತು ಪ್ರಜ್ವಲಿತ ಪ್ರವಾಹಗಳು ಮರುದಿನ ಮುಂಜಾನೆಯವರೆಗೂ ಸಾಗಿಯೇ ಇದ್ದವು. ಮೊದಲು ಬಲಿಯಾದದ್ದು ಹರ್ಕ್ಯುಲೇನಿಯಂ. ನಂತರ ಪಾಂಪೆ. (ಅಗಸ್ಟ್ 25ರ ಇಂಥ ಪ್ರವಾಹ ಮತ್ತು ದಟ್ಟ ಹೊಗೆಯಿಂದಾಗಿ ಕಿರಿಯ ಪ್ಲಿನಿ ತಾಯಿಯೊಂದಿಗೆ

---

4 ಇಳಿಜಾರಿನಲ್ಲಿ ಗಂಟೆಗೆ 100ರಿಂದ 300 ಕಿಲೋಮೀಟರ್ ವೇಗದಲ್ಲಿ ಸಾಗುವ ಈ ಪ್ರವಾಹ 100 ಡಿಗ್ರಿ ಸೆಲ್ಸಿಯಸ್ (212 ಡಿಗ್ರಿ ಫೆ.ಹೀ.) ಗಿಂತ ಹೆಚ್ಚು ಉಷ್ಣವಾಗಿರುತ್ತದೆ. ಸಮತಟ್ಟು ಭಾಗದಲ್ಲಿ ಇದರ ವೇಗ ಗಂಟೆಗೆ ನಮ್ಮ ಕೆಎಸ್ಆರ್‌ಟಿಸಿ ಬಸ್ಸಿನಷ್ಟು.

'ವಲ್ಕನ್'ನ ಆ್ಯಂಫಿಥಿಯೇಟರಿನ ರಂಗದ ಮೇಲೆ ಧಾರಾವಾಹಿ ನಾಟಕವೊಂದು ಭೂಮಿ ಹುಟ್ಟಿದಾಗಿನಿಂದಲೂ ನಡೆಯುತ್ತಲೇ ಇದೆ- ''ವಸುಂಧರೆಯ ಒಡಲ ವೈಚಿತ್ರ್ಯ'' ಎಂದದರ ಹೆಸರು.


ಮಿಸೆನಮ್‌ನಿಂದ ಓಡಿಹೋದದ್ದು.) ಸೊರೆಗಲ್ಲು ಮತ್ತು ಬೂದಿಗಳ ಭಾರದಿಂದಾಗಿ ಮನೆಯ ಮಾಳಿಗೆಗಳು ಕುಸಿದವು. ಕಿಟಕಿ, ಬಾಗಿಲು, ಬೆಳಕಿಂಡಿಗಳ ಮೂಲಕ ಒಳಸೇರಿದ ಬೂದಿಯಿಂದಾಗಿ ಜನ ಉಸಿರು ಕಟ್ಟಿ ಸತ್ತರು. ಬೂದಿ ತುಂಬಿದ ಮೋಡದಲ್ಲಿ ಪ್ರಾಣಾಂತಕ ಅನಿಲವೂ ಸೇರಿತ್ತು. ಮರಳುಗಾಡಿನ ಸುಂಟರಗಾಳಿಯಂತೆ ಬೀಸಿ ಬಂದ ಈ ಬೂದಿ ಶ್ವಾಸಕೋಶದಲ್ಲಿ ಸೇರದಂತೆ ತಡೆಗಟ್ಟಲು ಜನ ಉಸಿರು ಬಿಗಿ ಹಿಡಿದಿರಬೇಕು. ಆದರೆ ಎಷ್ಟು ಹೊತ್ತು? ಬಾಯಿಂದ ಉಸಿರಾಡಿದ ಸಂದರ್ಭದಲ್ಲಿ ಈ ಬೂದಿ ಅವರ ಶ್ವಾಸನಾಳದಲ್ಲಿ ಸಿಮೆಂಟಿನಂತೆ ಗಟ್ಟಿಗೊಂಡಿರಬೇಕು ...''

ಆ ದುರಂತದ ಮೊದಲು ಮುನ್ನೂರು ವರ್ಷ ಸುಮ್ಮನಿತ್ತು ವೆಸುವಿಯಸ್. ಆಗಿನವರಿಗೆ ತಾವಿರುವುದು ಬಿಸಿ ಬಾಣಲೆಯಲ್ಲಿ ಎಂಬುದರ ಅರಿವಿರಲಿಲ್ಲ. ಆಧುನಿಕ ಹರ್ಕ್ಯುಲೇನಿಯಂ ನಿವಾಸಿಯೊಬ್ಬ ಹೇಳುತ್ತಾನೆ- ''ನಾವು ವಾಸಿಸಿರುವುದು ಬೆಂಕಿ ಗೂಡಿನ ಮೇಲೆ ಕಟ್ಟಿದ ಮನೆಗಳಲ್ಲಿ'' ಎಂದು. ಬಹುಶಃ ಈಗ ಜಗತ್ತಿನ ಎಲ್ಲ ಜ್ವಾಲಾಮುಖಿ ಪ್ರದೇಶಗಳವರಿಗೆ, ತಾವು ನಿಂತುಕೊಂಡಿರುವುದು ಅಗ್ನಿಸರ್ಪ ಹುತ್ತದ ಅಕ್ಕಪಕ್ಕ ಎಂಬುದರ ಅರಿವಿದೆ.

★

ನಿಮ್ಮ ಮನೆಯ ಪ್ರೆಶರ್ ಕುಕ್ಕರ್ ಸೀಟಿ ಹಾಕುತ್ತ ಉಗಿಯನ್ನು ಚಿಮ್ಮುವ ಹಾಗೆ, ಕೆಲವೆಡೆ ಭೂಪದರದ ಕೊರಕಲುಗಳಿಂದ ಹಠಾತ್ತಾಗಿ ಮೇಲೆತ್ತರಕ್ಕೆ ಉಗಿ ಎಗರಿ ಮ್ಯಾಗ್ಮಾಕ್ಕೆ ದಾರಿ ಮಾಡಿಕೊಡುವುದುಂಟು. ಹೊಸ ಅಗ್ನಿ ರಾಕ್ಷಸನ ಅವತಾರವಾಗುವುದೇ ಹೀಗೆ. ಇಟಲಿಯ ಫ್ಲೆಗ್ರಿಯನ್ ಫೀಲ್ಡ್‌ನಲ್ಲಿ 3800 ವರ್ಷಗಳ ಹಿಂದೆ ಆಸ್ಟ್ರೊನಿ ಜ್ವಾಲಾಮುಖಿ ಇದೇ ರೀತಿ ತಲೆಯೆತ್ತಿತ್ತು. ಅದರ ಹಾವಳಿ ವೆಸುವಿಯಸ್‌ನ ಕ್ರಿಸ್ತಶಕ 79ರದಕ್ಕಿಂತ ದುರ್ಭರ. ಈ ಫಾಸಲೆಯಲ್ಲಿ 1538ರಲ್ಲಿ ಕತ್ತೆತ್ತಿ ನಿಂತ ಟ್ರಿಪರ್ ಗೋಲ್‌ನ ನೂಯೊವೊ ಜ್ವಾಲಾಮುಖಿ ಮುಂದಿನ ನಾಲ್ಕು ಶತಮಾನಗಳವರೆಗೆ ಆಗೀಗ ಬುಸುಗುಟ್ಟಿ ಸುಮ್ಮನಾಯಿತು. ಇದೇ ಪ್ರದೇಶದಲ್ಲಿ 36,000 ವರ್ಷಗಳ ಹಿಂದೆ ಉಪಟಳ ನಡೆಸಿದ ಉದ್ದಂಡ ಜ್ವಾಲಾಮುಖಿಯನ್ನು ''ಈ ಎಲ್ಲ ಮರಿ ಜ್ವಾಲಾಮುಖಿಗಳ ತಾಯಿ'' ಎಂದಿದ್ದಾರೆ ಪರಿಣತರು. ಸುತ್ತಲಿನ ಸುಮಾರು ಪ್ರದೇಶವನ್ನು ಐವತ್ತು ಮೀಟರ್ ದಪ್ಪದ ಬೂದಿಯಿಂದ ಮುಚ್ಚಿ ಹಾಕಿದ ಈ ಜ್ವಾಲಾಮುಖಿ ಸಿಡಿತದಂಥದನ್ನು ಇತಿಹಾಸ ಕಾಲದಲ್ಲಿ ಮತ್ತೆಂದೂ ಕಂಡಿಲ್ಲ ಎಂದು ದಾಖಲೆ ಹೇಳುತ್ತದೆ.

1815ರಲ್ಲಾದ (ಏಪ್ರಿಲ್ 5ರಿಂದ 7) ಇಂಡೋ



ನೇಶ್ಯದ ಸುಂಬಾವಾ ದ್ವೀಪದ ತಂಬೊರಾ ಜ್ವಾಲಾಮುಖಿ ಸ್ಫೋಟದಂಥದು ಇನ್ನೆಂದೂ ಆಗಿಲ್ಲ. ಏಳು ಮೈಲು ಅಗಲ ಬಾಯಿ ತೆರೆದು ನಿಂತ ಈ ಅನಾಹುತದಲ್ಲಿ 90,000 ಜನ ಅಸು ನೀಗಿದರು. ಕ್ರಿಸ್ತಶಕ 130ರಲ್ಲಿ ನ್ಯೂಝೀಲಂಡದಲ್ಲಿ ಟೌಪೊ ಜ್ವಾಲಾಮುಖಿ ಮುನ್ನೂರು ಕೋಟಿ ಟನ್‌ಗಳಷ್ಟು ನೊರೆಗಲ್ಲನ್ನು ಹೊರ ಚೆಲ್ಲಿತು. ಇದು ಗಂಟೆಗೆ 400 ಮೈಲು ವೇಗದಲ್ಲಿ ಸಾಗಿ 6180 ಮೈಲು ಪ್ರದೇಶವನ್ನು ಹಾಳುಗೆಡವಿತು. ಅತಿ ಉದ್ದದ ಲಾವಾ ಪ್ರವಾಹ ಉಂಟಾದದ್ದು 1783ರಲ್ಲಿ, ಆಗ್ನೇಯ ಐಸ್‌ಲ್ಯಾಂಡಿನ ಲಾಕಿ ಜ್ವಾಲಾಮುಖಿಯಿಂದ. ಈ ಪ್ರವಾಹ 140 ಚದರ ಮೈಲು ಹರಡಿತು.

1883ರಲ್ಲಿ (ಅಗಸ್ಟ 27) ಅತಿ ದೊಡ್ಡ ಆಸ್ಫೋಟವುಂಟಾದದ್ದು ಸುಮಾತ್ರಾ, ಮತ್ತು ಜಾವಾಗಳ ನಡುವಿನ (ಸುಂದಾ ಗುಂಪಿನ) ಕ್ರ್ಯಾಕಾ ಟಾವೊ ಜ್ವಾಲಾಮುಖಿಯಲ್ಲಿ. ಒಟ್ಟು 163 ಗ್ರಾಮಗಳು ನಿರ್ನಾಮಗೊಂಡು 36,380 ಜನ ಹತರಾದರು. ಮೂವತ್ನಾಲ್ಕು ಮೈಲು ಎತ್ತರದವರೆಗೆ ಬಂಡೆಗಲ್ಲುಗಳು ಚಿಮ್ಮಿದ ಈ ಜ್ವಾಲಾಸ್ಫೋಟದ ಹತ್ತು ದಿನಗಳ ನಂತರ ಬೂದಿ ಮಳೆ ಆರಂಭವಾಗಿ 3313 ಮೈಲುಗಳಗಲ ವ್ಯಾಪಿಸಿತು. ಸ್ಫೋಟದ ನಾಲ್ಕು ಗಂಟೆಗಳ ನಂತರ ಅದರ ಸದ್ದು 2968 ಮೈಲು ದೂರದ ರೊಡ್ರಿಗ್ಸ್ ದ್ವೀಪದಲ್ಲಿ ದಾಖಲಿಸಲ್ಪಟ್ಟಿತು. ಈ ಆಸ್ಫೋಟದ ಶಕ್ತಿ ರಶಿಯದ ಜಲಜನಕ ಬಾಂಬ್ ಪರೀಕ್ಷಾ ಸ್ಫೋಟದ 26 ಪಟ್ಟು ಹೆಚ್ಚಾಗಿತ್ತಂತೆ. ಸುಮಾತ್ರಾದ ಉತ್ತರಕ್ಕಿರುವ ಟೋಬಾ ಜ್ವಾಲಾಮುಖಿ 685 ಮೈಲು 'ಅಗಲ ಬಾಯಿ' ತೆರೆದು ನಿಂತಿದೆ. ಇದೇ ಪ್ರದೇಶದ ಟಾಂಬೋರಾ ಜ್ವಾಲಾಮುಖಿ 1816ರಲ್ಲಿ 12,000 ಜನರನ್ನು ಕೊಲ್ಲುವುದರ ಜತೆಗೆ ಸುರಿದ ಬೂದಿ ಮಳೆಯಿಂದಾಗಿ ಅದು 'ಬೇಸಿಗೆಯಿಲ್ಲದ ವರ್ಷ'ವೆನಿಸಿತು.

★

ಉತ್ತರ ಅಮೆರಿಕದ ಸೆಂಟ್ ಹೆಲೆನ್ಸ್‌ಗೆ 'ಸಾವಿನ ಬೆಟ್ಟ'ವೆಂದೇ ಹೆಸರು. ಕ್ರಿಸ್ತಪೂರ್ವ 1900ರಿಂದಲೂ ಅದು ಆಘಾತವೊಡ್ಡುತ್ತಲೇ ಬಂದಿದೆ. ಕ್ರಿಸ್ತಶಕ 1500, 1831 ಹಾಗೂ ಮೊನ್ನೆ ಮೊನ್ನೆ 1980ರಲ್ಲಿ ಹೆಲೆನ್ಸ್ 'ಮಾರಣ ಹೋಮ'ಗಳನ್ನು ನಡೆಸಿತು. 1831ರ ನಂತರದ ಇಪ್ಪತ್ತೈದು ವರ್ಷಗಳವರೆಗಿನ ಅದರ ಬಂಬಾಟದಿಂದಾಗಿಯೆ ಹೆಲೆನ್ಸ್‌ಗೆ 'ಸಾವಿನ ಬೆಟ್ಟ'ವೆಂಬ ಹೆಸರು ಬಂದದ್ದು. 1980ರ ಮೆ 18ರ ಹೆಲೆನ್ಸ್‌ನ ಕ್ರೌರ್ಯದ ಕಥೆಯನ್ನಿಷ್ಟು ಸಂಕ್ಷಿಪ್ತವಾಗಿ ಹೇಳಿಬಿಡುತ್ತೇನೆ. ಆ ರವಿವಾರ ... ಹೆಲೆನ್ಸ್ ಸ್ಫೋಟ ಹತ್ತು ಮೆಗಾಟನ್ ಬಾಂಬುಗಳ ಸಮಶಕ್ತಿಯದಾಗಿತ್ತು. ಅನಿಲಗಳು, ಬೂದಿ ಮತ್ತು ನೊರೆಗಲ್ಲುಗಳ ಪ್ರವಾಹ ಗಂಟೆಗೆ 200 ಮೈಲುಗಳ ವೇಗದಲ್ಲಿ ಸಾಗಿತು. ಪೂರ್ವದೆಡೆಗೆ ಬೀಸಿದ ಗಾಳಿ ಮುಂದೆ ಹದಿನೈದು ದಿನಗಳಲ್ಲಿ ನ್ಯೂಯಾರ್ಕ್, ವಾಶಿಂಗ್ಟನ್ ಡಿ.ಸಿ., ಪೆನ್‌ಸಿಲ್ವೇನಿಯಾ, ಜಾರ್ಜಿಯಾ, ಟೆಕ್ಸಾಸ್ ಮೊದಲಾದ ನಗರಗಳ ಮೇಲೆಲ್ಲ ಬೂದಿ ಬೀಳಿಸಿ ಅಟ್ಲಾಂಟಿಕ್ ಸಾಗರದಲ್ಲೂ ಅದನ್ನು ವಿಸರ್ಜಿಸಿತು. ಯಾಕಿಮಾ ನಗರಕ್ಕದು ತಂದ ತಲೆನೋವು 600,000 ಟನ್ ಭಾರದ್ದು. ಇದರಿಂದ ಕೂಡಿದ್ದ ಹೆಪ್ಪುಗಲ್ಲಾದರೂ ಎಷ್ಟು? ನಾಲ್ಕುನೂರು ಟನ್ನುಗಳು! ಸ್ಫೋಟದಿಂದ 500 ಹಿರೋಶಿಮಾಗಳು

> *ಲಾವಾಪಾತ್ರ ಉಕ್ಕಿ ಹರಿದು ಆರಿದ ಮೇಲೆ .. ಆ ದೂಳು, ಆಮ್ಲ ಹನಿಗಳು ಮರುವಿಕೆಯ ಪರಿಣಾಮವಾಗಿ ಎಷ್ಟೋ ಕಾಲದವರೆಗೆ ಭೂಮಿ ತಣ್ಣಗಾಗುವುದುಂಟು. ವಾತಾವರಣದ ಉಷ್ಣತೆ ಇಳಿಯುವುದುಂಟು. ತತ್ಪರಿಣಾಮವಾಗಿ ಬೇಸಗೆ ರಹಿತ ವರ್ಷಗಳೂ ಹಿಮಪಾತದ [illegible] ಹೆಪ್ಪುಗಟ್ಟುವಿಕೆಯೂ ಸಂಭವಿಸುವುದುಂಟು. ಜ್ವಾಲಾಮುಖಿಸಿಡಿತ ವಾತಾವರಣದಲ್ಲಿ [illegible] ಯಲ್ಲಿ ತಂದೊಡ್ಡುವ ಪರಿಯಿದು! ಇದರಿಂದ ಸೂರ್ಯಪ್ರಕಾಶ ಭೂಮಿಯಿಂದ ದೂರವಾಗುವ [illegible] ನಿಗಳು.*



''ಮ್ಯಾಗ್ಮಾ ಇರುವ ಆಳವೆಷ್ಟು? ಅದು ಭೂವದರದೆಡೆ ಹೇಗೆ ನುಗ್ಗುತ್ತದೆ?'' ಎಂಬ ಮೂಲ ಪ್ರಶ್ನೆಗಳಿಗೆ ಉತ್ತರ ಹುಡುಕಲು ವಿಜ್ಞಾನ ಇನ್ನೂ ಪ್ರಯತ್ನಿಸುತ್ತಲೇ ಇದೆ.

ನಡುಗಬೇಕು ಅಷ್ಟು ಪ್ರಚಂಡ ಅದರ ಶಕ್ತಿ. ಎಲ್ಲೆಲ್ಲೂ ಗಂಧಕದ ನಾತ ಇಡುಗಿತ್ತು. ತಿಳಿ ನೀಲಿ ಹೊಗೆ ಹಬ್ಬಿತ್ತು. ಇಪ್ಪತ್ತು ಲಕ್ಷ ಪಕ್ಷಿಗಳು, ಮತ್ಸ್ಯ ಪ್ರಭೇದಗಳು ಹಾಗೂ ಪಶುಗಳು ಆ ನಿರ್ಮಮ ಧೂಮವಲಯದಲ್ಲಿ ನಿರ್ನಾಮಗೊಂಡವು. ಶ್ವಾಸಕೋಶ ಮತ್ತು ಶ್ವಾಸನಾಳದಲ್ಲಿ ಬೂದಿ ಸೇರಿ ಸತ್ತವರೆಷ್ಟೋ. ಸಸ್ಯಗಳ ಮೇಲಾದ ಪರಿಣಾಮವಂತೂ ಇನ್ನೂ ಭೀಕರ. ವಾಯವ್ಯ ಪ್ಯಾಸಿಫಿಕ್ಕಿಗೆ ಇದರಿಂದ ಹಲವು ಕೋಟಿ ಡಾಲರುಗಳ ಕೃಷಿ ಉತ್ಪನ್ನದ ಹಾನಿ. ತಜ್ಞರ ಪ್ರಕಾರ ಈ ಭಾಗದಲ್ಲಿ ಹಾಳಾಗಿರುವ ಆಹಾರ ಉತ್ಪಾದನೆಯನ್ನು ಮತ್ತೆ ಮೊದಲಿನಂತಾಗಿಸಲು ನಲವತ್ತು ವರ್ಷಗಳಾದರೂ ಬೇಕಂತೆ. (ಸಂಟ್ ಹೆಲೆನ್ಸ್ ಸಮೀಪವೇ ಇರುವ ಇನ್ನುಳಿದ ಎಂಟರ ಪೈಕಿ ಹುಡ್ ಮತ್ತು ರೇನಿಯರ್ ಜ್ವಾಲಾಮುಖಿಗಳು ಮುಖ್ಯವೆನಿಸುತ್ತವಾದರೂ ಅವು 'ಹಿರಿಯಣ್ಣ'ನಷ್ಟು ಪ್ರಬಲವಲ್ಲ.)

★

ಎರಡನೆಯ ಮಹಾಯುದ್ಧದ ಹೊಗೆ ಜಗತ್ತಿನ ನಗೆಯನ್ನು ಮರೆಸುತ್ತಿದ್ದ ಸಂದರ್ಭದಲ್ಲಿಯೇ ಮೆಕ್ಸಿಕೋದ ಮಕ್ಕೆ ಜೋಳದ ಹೊಲವೊಂದು ಜ್ವರಪೀಡಿತವಾಯಿತು. ಆಗಲ್ಲಿ ಚಳಿಗಾಲ. ವಾಯವ್ಯ ಮೆಕ್ಸಿಕೋದ ಕ್ಯುಯಿಝಿಯೋ ಕೊಳ್ಳ ಪ್ರದೇಶದ ಪ್ಯಾರಿಕ್ಯುಟಿನ್ ಹಳ್ಳಿಯ ರೈತ ಡಿಯೊನಿಸಿಯೊ ಪೊಲಿಡೋಗೆ ಆ ಬಿಸಿ ಆಪ್ಯಾಯಮಾನವೆನಿಸಿತು. ರಾತ್ರಿಯೆಲ್ಲ ತನ್ನ ಹೊಲದಲ್ಲಿ ಬೆಚ್ಚಗೆ ಮಲಗತೊಡಗಿದ ಆತನಿಗೆ ನೆಲದಡಿಯಲ್ಲಿ ಪ್ಯಾಟನ್ ಟ್ಯಾಂಕುಗಳು ಓಡಾಡಿದಂಥ ಅನುಭವ. ಹಳವಂಡವಿರಬೇಕೆಂದುಕೊಂಡನವ. ಮರುದಿನ ರಂಟೆ ಹೊಡೆಯುತ್ತಿದ್ದಾಗ ಒಡ್ಡಿನ ಬಿರುಕಿನಲ್ಲಿ ಹೊಗೆಯನ್ನು ಕಂಡ. ತರಗೆಲೆಗಳ ಮೇಲೆ ಸೇದಿದ ಬೀಡಿಯನ್ನಾರಿಸದೆ ಯಾರೋ ಚೆಲ್ಲಿರಬೇಕೆನಿಸಿತು. ಮಣ್ಣು ಮುಚ್ಚಿ ಮನೆಗೆ ನಡೆದ. ಮರುದಿನ ಆ ಬಿರುಕು ಬೆಳೆದಿತ್ತು. ಹೊಗೆಯೂ ಹೆಚ್ಚಾಗಿತ್ತು. ಜತೆಗೆ ವಿಚಿತ್ರ ಬುಸುಗುಟ್ಟುವಿಕೆ. ಬೆದರಿದ ಆತ ಹಳ್ಳಿಗೆ ಓಡಿದ. ಪಾದ್ರಿಯನ್ನು ಕಂಡು ಸಂಗತಿಯನ್ನು ಹೇಳಿದ. ''ರಾತ್ರಿಯದು ಇನ್ನೂ ಇಳಿದಿಲ್ಲವೇನು? ಬಾಯಿಗೆ ಬಂದ ಹಾಗೆ ಬಡಬಡಿಸಬೇಡ. ಕುಡಿತ ಕಡಿಮೆ ಮಾಡು, ಎಲ್ಲ ಸರಿಹೋಗುತ್ತದೆ'' ಎಂದುಬಿಟ್ಟ ಪಾದ್ರಿ. ರಾತ್ರಿಯಿಡಿ ಪೊಲಿಡೋನ ತಲೆಯಲ್ಲಿ ಆ 'ವಿಚಿತ್ರ'ದ ವಿಚಾರವೆ ಕುದಿಯತೊಡಗಿತ್ತು. ಮರುದಿನ ಬುತ್ತಿಕಟ್ಟಿಕೊಂಡು ಹೊಲಕ್ಕೆ ಹೋದರೆ ಎಲ್ಲಿದೆ ಅದು? ಬಯಲು ಬೆಟ್ಟವಾಗಿತ್ತು. ಬೆಟ್ಟ ಕೆಟ್ಟ ಹೊಗೆ ಕಾರುತ್ತಿತ್ತು. ಆ ಹೊಗೆ ನಾರುತ್ತಿತ್ತು. ದಮ್ಮಿನ ದೈತ್ಯನೊಬ್ಬ ಕೆಮ್ಮಿದಂತೆ-ಕೆಮ್ಮಿ ಕಫ ಸಡಿಲ ಮಾಡಿಕೊಂಡಂತೆ-ಗಂಟಲಿಗೆ ಬಂದ ಕಫವನ್ನು ಕ್ಯಾಕರಿಸಿ ಉಗುಳಿದಂತೆ. ರೈತ ಕುಸಿದು ಬಿದ್ದ. 1943ರ ಜನವರಿ 20. ಹೊಸ ಜ್ವಾಲಾಮುಖಿಯೊಂದು ಜನಿಸಿತ್ತು. ದಿನಗಳೆದಂತೆ ಆ ಕೊಳ್ಳವನ್ನೂ ತನ್ನ ಕಬಂಧ ಬಾಹುವಿನಲ್ಲಿ ಕಬಳಿಸಿ ಬೆಳೆದಿದ್ದ ಅಗ್ನಿ ದೈತ್ಯ.

ಪ್ಯಾರಿಕ್ಯುಟಿನ್ ಜ್ವಾಲಾಮುಖಿಯ 'ವಾಂತಿ' 2000 ಅಡಿ ಉದ್ದಕ್ಕೆ 600 ಅಡಿ ಅಗಲಕ್ಕೆ ಇಪ್ಪತ್ತು ಅಡಿ ದಪ್ಪದ ಪ್ರವಾಹವಾಗಿ ಹರಿಯಿತು. ಆರು ವಾರಗಳಲ್ಲಿ ಉದ್ದವನ್ನು ಮೂರು ಪಟ್ಟಿಗೂ ಅಗಲ ಹಾಗೂ ದಪ್ಪವನ್ನು ಐದು ಪಟ್ಟಿಗೂ

ಹಿಗ್ಗಿಸಿಕೊಂಡಿತು. ಹತ್ತು ವಾರಗಳ ಹೊತ್ತಿಗೆ ಬೆಟ್ಟ 11,000 ಅಡಿಗಳೆತ್ತರ ಬೆಳೆಯಿತು.

ಸುತ್ತಲಿನ ಹಳ್ಳಿಗಳೆಲ್ಲ ಹೂತುಹೋಗಿದ್ದವು. ಲಾವಾ ಹರಿದಲ್ಲೆಲ್ಲ ಒಂದೊಮ್ಮೆ ಹಸಿರು ಮುರಿದ ಗಿಡಮರಗಳೂ, ಹಿಂದೆಲ್ಲ ಉಸಿರಾಡಿದ ಪ್ರಾಣಿ ಪಕ್ಷಿಗಳೂ ಕರಕು ಶವಗಳಾಗಿ ಬಿದ್ದಿದ್ದವು. ಒಟ್ಟು ಹತ್ತು ಲಕ್ಷ ಯಾರ್ಡಿಗೂ ಹೆಚ್ಚು ಪ್ರದೇಶ ಲಾವಾದಡಿ ಮಲಗಿತ್ತು. ಹೊಗೆ ಮತ್ತು ಉಗಿ 4,500 ಅಡಿ ಎತ್ತರಕ್ಕೂ, ಕಲ್ಲು ಬಂಡೆಗಳು 3,000 ಅಡಿ ಎತ್ತರಕ್ಕೂ ಚಿಮ್ಮುತ್ತಿದ್ದವು. ಆ ಬೆಂಕಿ ರಕ್ಕಸನಿಂದ ಸುರಕ್ಷಿತವೆನ್ನಬಹುದಾದ ದೂರದಲ್ಲಿ ಕೂಡ ದನಕರು-ಮಕ್ಕಳುಮರಿಗಳು ಎಲುವಿನ ಹಂದರಗಳಂತಾಗತೊಡಗಿದರು.

ಹುಟ್ಟಿದ ಎಂಟು ತಿಂಗಳಿಗೆ ಈ ಜ್ವಾಲಾಮುಖಿಗೊಬ್ಬ ತಮ್ಮ ಜೊತೆಯಾದ. ಆ ಹೊಸ ಅಗ್ನಿಶಿಖರಕ್ಕೆ ಜನ 'ಝುಪಿಕೊ' (ಚಿಕ್ಕವ) ಎಂದರು. ಲಾವಾ ಬಾಂಬು[5] ಗಳನ್ನೆಸೆಯತೊಡಗಿದ ಈ ಮರಿರಕ್ಕಸ ಅಣ್ಣನಿಗಿಂತ ಎತ್ತರ ಬೆಳೆದ. ಈಗ 'ಪ್ಯಾರಿಕ್ಯುಟಿನ್' ತಮ್ಮನ ಆರ್ಭಟವನ್ನು ನೋಡುತ್ತಾ ಸುಮ್ಮನುಳಿಯಿತು. 'ಝುಪಿಕೊ' ಜೀವದಿಂದುಳಿದದ್ದು ಐದೇ ತಿಂಗಳು. ಜನವರಿ 1944ರಲ್ಲಿ ಅದು ಇದ್ದಕ್ಕಿದ್ದಂತೆ ಬಾಯಿಮುಚ್ಚಿತು. ಆದರೆ 'ತಾಕ್ವಿ' ಎಂಬ ಮತ್ತೊಂದು ಜ್ವಾಲಾಮುಖಿ ಇಲ್ಲಿ ಕಾಣಿಸಿಕೊಂಡು ಲಾವಾ ಹೊಳೆಯನ್ನು ಹರಿಸಿತು.

★

ಹೆಸರು 'ಐಸ್‌ಲ್ಯಾಂಡ್!' ಬೇಕಾದರೆ ಹಿಮ ಸಾಮ್ರಾಜ್ಯವೆನ್ನಿ. ಆದರೆ ಈ ಪ್ರದೇಶದ ಅಡಿಯಲ್ಲಿ ಅಗಾಧವಾದ ಅಗ್ನಿಕ್ಷಿಪ್ತಿಕೆಯೊಂದಿದೆ. ಅಂತೆಯೇ ಈ ಶತಮಾನದಲ್ಲಿದು ಬೆಂದಷ್ಟು ಬಹುಶಃ ಬೇರಾವ ದೇಶವೂ ಬೆಂದಿಲ್ಲ. 1900 ರಿಂದ, ಸರಾಸರಿ ಆರು ವರ್ಷಕ್ಕೊಂದರಂತೆ ಒಟ್ಟು ಹದಿನಾಲ್ಕು ಬಾರಿ ಇಲ್ಲಿ ಜ್ವಾಲಾಮುಖಿಗಳು ಧಾಂಧಲೆ ಹಾಕಿವೆ.

---

5 ಮಿಸ್ಸೈಲುಗಳಂತೆ ಸುಮಾರು ಮೈಲುಗಳಷ್ಟು ದೂರಕ್ಕೆ ಚಿಮ್ಮಲ್ಪಡುವ ಲಾವಾ ಉಂಡೆಗಳು.

ಮೊಲದ ಬಿಳಿ ಚರ್ಮ ಬಿರಿದು ರಕ್ತ ಕಾಣಿಸಿಕೊಂಡಂತೆ ಶುಭ್ರ ಹಿಮದ ಬಯಲಲ್ಲಿ ಬುದಿಂಗನೆ ಬೆಂಕಿ ಕಾಣಿಸಿಕೊಂಡ 1973ರ ಜನವರಿ 20ರ ಆ ರಾತ್ರಿ ... ಐಸ್‌ಲ್ಯಾಂಡಿನ ದಕ್ಷಿಣದ ಹೈಮೀ ದ್ವೀಪದ ವೆಸ್ಟ್-ಮನ್-ಐರ್ ಹಳ್ಳಿಯಲ್ಲಿ ಅಲ್ಲೋಲಕಲ್ಲೋಲ. ಮುತ್ತಜ್ಜನಂತಿರುವ ಹೆಲ್ಗಾಫೆಲ್ (ಇದು 5,000 ವರ್ಷಗಳಿಂದ ತಣ್ಣಗಿದೆ) ಜ್ವಾಲಾಮುಖಿಯ ಸಮೀಪವೇ ಅದರ ಮರಿಮಗನೋ ಗಿರಿಮಗನೊ ಆಗಿ ಅಂದು ಹುಟ್ಟಿಕೊಂಡಿತು 'ಕರ್ಕ್ಯೂರ್ಫೆಲ್.' ಅದರ ಕೆನ್ನಾಲಗೆಗಳು ಹತ್ತು ಮೈಲು ದೂರಕ್ಕೆ ಕಾಣುತ್ತಿದ್ದವಂತೆ!

ವೆಸ್ಟ್-ಮನ್-ಐರ್ ಆ ದೇಶದ ಮಹತ್ವದ ಮೀನುಗಾರಿಕೆ ಕೇಂದ್ರ. ದೇಶದ ಮೀನು ರಫ್ತಿನ ಆದಾಯದ ಬಹುಪಾಲು ದೊರೆಯುವುದು ಈ ಹಳ್ಳಿಯಿಂದಲೇ. ಕರ್ಕ್ಯೂರ್ಫೆಲ್‌ನ ಅನಾಹುತ ಈ ಆದಾಯಕ್ಕೇ ಬೆಂಕಿಯಿಕ್ಕಿತು. ಐದಾರು ಸಾವಿರ ವರ್ಷಗಳ ಹಿಂದೆ ಉಂಟಾದ ಜಲಾಂತರ್ಗತ ಲಾವಾ ಕಾರಂಜಿಯಿಂದ ಹುಟ್ಟಿಕೊಂಡ ಐಸ್‌ಲ್ಯಾಂಡಿನ ಸುತ್ತಲಿನ ಕಿರು ದ್ವೀಪ ಸಮೂಹಕ್ಕೆ ಇದೇ ರೀತಿ ತಲೆಯೆತ್ತಿದ ದ್ವೀಪ ಸರ್ಟ್‌ಸೀ ಸೇರಿಕೊಂಡದ್ದು ತೀರ ಇತ್ತೀಚೆಗೆ. ಇಲ್ಲಿ ಸತತ ಮೂರು ವರ್ಷಗಳವರೆಗೆ ಲಾವಾ ಉಗುಳುವಿಕೆ ಸಾಗಿಯೇ ಇತ್ತು.

ಕರ್ಕ್ಯೂರ್ಫೆಲ್ ದಿಗ್ಗನೆದ್ದು ನಿಂತು ಮುಮ್ಮೊಗವಾಗಿ ಒಮ್ಮೆಲೆ ಲಾವಾ ಉಗುಳಲಾರಂಭಿಸಿತು. ಕ್ಷಿತಿಜದಲ್ಲಿ ಉರಿಯ ತೆರೆ. ಎಲ್ಲೆಲ್ಲೂ ಗಟ್ಟಿ ಬೂದಿಯ ಮರಳುಗಾಡು. ಮೂರು ತಿಂಗಳಲ್ಲಿ ಒಟ್ಟಬಿದ್ದ ಲಾವಾದಿಂದ ಹೈಮೀ ದ್ವೀಪ ಪೂರ್ವ ಕರಾವಳಿಯಲ್ಲಿ ಅರ್ಧ ಚದರ ಮೈಲು ಬೆಳೆಯಿತು.

ಅದಾಗಲೇ ಮುನ್ನೂರು ಮನೆಗಳನ್ನು ಮುಚ್ಚಿ ಹಾಕಿದ್ದ ಈ ಜ್ವಾಲಾರಾಕ್ಷಸ 1973 ಫೆಬ್ರವರಿ 19ರಂದು ಉತ್ತರದೆಡೆ ಕಪ್ಪುರಿಸಿ ಬಿತ್ತು. ನೂರಡಿ ಎತ್ತರದ ಅಗ್ನಿಪರ್ವತ ಅಡ್ಡ ಬಿದ್ದರೆ ಲಾವಾ ಪ್ರವಾಹವುಂಟಾಗದಿದ್ದೀತೆ? 150 ಅಡಿ

ಹುತ್ತದಿಂದ ಧುತ್ತೆಂದು ಕತ್ತೆತ್ತಿ ನಿಂತು ವಿಷವುಗುಳುವ ಅಗ್ನಿ ಸರ್ಪಗಳು ಈ ಜ್ವಾಲಾಮುಖಿಗಳು.

ಎತ್ತರದ ಲಾವಾ ಗೋಡೆ ಅನ್ಯಗ್ರಹದಿಂದ ಬಂದ ದೆವ್ವದಂತೆ ರಸ್ತೆಯಲ್ಲಿ ಚಲಿಸತೊಡಗಿತು. ಅಲ್ಲಿಯ ಜನ ಧೈರ್ಯಸ್ಥರು. ನಿರಂತರ ನೀರೆರಚಿ ಲಾವಾವನ್ನು ಗಟ್ಟಿಗೊಳಿಸಿದರು. ತನ್ಮೂಲಕ ಅದರ ಪ್ರವಾಹವನ್ನು ತಡೆಗಟ್ಟಿದ ಇಂಥ ಪ್ರಯೋಗ ಬಹುಶಃ ಜಗತ್ತಿನಲ್ಲೇ ಮೊದಲನೆಯದು. ಈ ಕ್ರಮ ಹೆಚ್ಚಿನ ಅನಾಹುತವನ್ನು ತಪ್ಪಿಸಿತು.

ಆರು ತಿಂಗಳ ಕಾಲ ಕಾಡಿತು ಕರ್ಕ್ಯೂಫೆಲ್. 45 ಅಡಿ ದಪ್ಪ ಬಿದ್ದ ಕೆಂಡಗಲ್ಲುಗಳಿಂದಾಗಿ ರಾಶಿ ಬಿದ್ದ ನೊರೆಗಲ್ಲು ಎಷ್ಟು ಗೊತ್ತೆ? ಐವತ್ತು ಕೋಟಿ ಟನ್‌ಗಳು!

★

ಕಳೆದ ಆರು ತಿಂಗಳಲ್ಲಿ ಜಪಾನ್, ಫಿಲಿಪೈನ್ಸ್ ಮತ್ತು, ಈ ಶತಮಾನದಲ್ಲಿ ಮೊದಲ ಬಾರಿಗೆ ಭಾರತದಲ್ಲೂ ಜ್ವಾಲಾಮುಖಿಗಳು ಸುದ್ದಿ ಮಾಡಿವೆ.

ಜಪಾನಿನ ಉಂಝೆನ್ ಪರ್ವತ ಸಿಡಿದೆದ್ದು ಎಪ್ರಿಲ್‌ನಿಂದ ಹಾವಳಿ ಎಬ್ಬಿಸಿದೆ. ಪ್ರಾಣ ಹಾನಿ ನೂರರಷ್ಟಾದರೂ, ಅದು ಜಪಾನಿನ ಮೃತ್ಯುಪಾಲಯ ಪ್ರಾಕೃತಿಕ ವಿಕೋಪವಾಗಿ ಪರಿಣಮಿಸಿದೆ. 1926ರಲ್ಲಿ ತೊಕ್ಯಾಚಿ ಪರ್ವತವೂ ಇಲ್ಲಿ ಹೀಗೇ ಹಾರಾಡಿ ಎರಡು ಹಳ್ಳಿಗಳನ್ನು ಹುಗಿದು ಹಾಕಿತ್ತು.

ಫಿಲಿಪೈನ್ಸಿನ ಪಿನಾಟೊಬೊ ಜ್ವಾಲಾಮುಖಿಯೂ ಇದೇ ಹೊತ್ತಿನಲ್ಲಿ ಗಹಗಹಿಸಿ ನಗುತ್ತಿದೆಯಲ್ಲವೆ?

ಜಾಗತಿಕ ಜ್ವಾಲಾಮುಖಿಗಳ ನಕ್ಷೆಯಲ್ಲಿ ಸ್ಥಾನ ಪಡೆದಿರುವ ನಮ್ಮ ಅಂದಮಾನಿನ ಬ್ಯಾರನ್ ಅಗ್ನಿಪರ್ವತ ನೂರೆಂಬತ್ತೆಂಟು ವರ್ಷಗಳ ನಿದ್ದೆಯಿಂದೆದ್ದಿದೆ. ಪೋರ್ಟ್ ಬ್ಲೇರ್‌ನ ಈಶಾನ್ಯಕ್ಕೆ 140 ಕಿಲೋಮೀಟರ್ ದೂರದ ಹತ್ತು ಚದರ ಕಿಲೋಮೀಟರಿನ ನಿರ್ಜನ ದ್ವೀಪ ಬ್ಯಾರನ್. ಇಪ್ಪತ್ತು ಲಕ್ಷ ವರ್ಷಗಳ ಮೊದಲು ಸಾಗರ ಜ್ವಾಲಾಮುಖಿ ಸಿಡಿತದ ಪರಿಣಾಮವಾಗಿ ಇದು ಹುಟ್ಟಿಕೊಂಡಿತಂತೆ. 60,000 ವರ್ಷಗಳ ಹಿಂದೆ ಮೊದಲ ಸಲ ಇದು ಅಗ್ನಿಯನ್ನು ಚಿಮ್ಮಿತೆಂದು ಪರಿಣತರ ಅಭಿಪ್ರಾಯ. 1803ರಲ್ಲಿ ತೆರೆದ ಬಾಯನ್ನು ಹನ್ನೆರಡು ವರ್ಷಗಳವರೆಗೆ ಮುಚ್ಚಿರಲೇ ಇಲ್ಲ ಬ್ಯಾರನ್. ಇದೀಗ ಎಪ್ರಿಲಿನಿಂದ ಮತ್ತೆ ಧಗಧಗ ಉರಿಯುತ್ತಿದೆ. ಪ್ರಾಣಾಂತಕವಲ್ಲದ ಅನಿಲ, ಹೊಗೆಯನ್ನು ಆಗಸದಲ್ಲಿ 300-400 ಮೀಟರುಗಳೆತ್ತರ ಚೆಲ್ಲುತ್ತಿರುವ ಬ್ಯಾರನ್ನನ ಲಾವಾ ಹರಿದು ಸಮೀಪದ ಸಾಗರ ತಲವನ್ನು ಸೇರುತ್ತಿದೆ. ಹೀಗಾಗಿ ಸಮುದ್ರ ಉಷ್ಣೋದಕದ ಪಾತ್ರೆಯಂತಾಗುತ್ತಿದೆ. ಗಂಧಕದ ಅಂಶ ಈ ನೀರಲ್ಲಿ ಹೆಚ್ಚುತ್ತಿದೆ.

(1787ರಿಂದಲೂ ಇಲ್ಲಿ ಅನಿಲ ಮತ್ತು ಉಗಿ ಕಂಡು ಬರುತ್ತಿತ್ತೆಂದು ದಾಖಲೆಗಳು ಹೇಳುತ್ತವೆ. ಕಳೆದ ನಾಲ್ಕು ವರ್ಷಗಳಿಂದಲೂ ಇದೇ ಪುನರಾವರ್ತನೆಯಾದುದನ್ನು ಕಂಡಿದ್ದಾರೆ ಭೂಗರ್ಭ ವಿಜ್ಞಾನಿಗಳು.)

ಸದ್ಯ ಇಲ್ಲಿಯ ಸಾಗರ ಜೀವಿಗಳು ಸುರಕ್ಷಿತವೆನಿಸಿದೆಡೆ ಈಜಿ ಹೋಗಿವೆ. ಹೋಗಲೇಬೇಕಲ್ಲ. ಅಸ್ತಿತ್ವಕ್ಕಾಗಿ ಹೋರಾಟ ಎಲ್ಲ ಜೀವಿಗಳಿಗೂ ಅನಿವಾರ್ಯ. ಕಾಡು ಮೇಕೆಗಳು ಕೆಲವು ಸತ್ತಿವೆ, ಬಾವಲಿಗಳು ಕರಕಾಗಿ ಬಿದ್ದು ಹಾಸಿಗೆ ನಿರ್ಮಿಸಿವೆ; ಆದರೆ ಅಂಜುಬುರುಕ ಪ್ರಾಣಿಗಳಾದ ಏಡಿಗಳು ಮಾತ್ರ ಎಲ್ಲಾದರೂ ಎಂತಾದರೂ ಇರಲು 900 ಅಡಿ ಎತ್ತರದ ಬೆಟ್ಟವನ್ನೇರಿ ಹೊರಟಿರುವುದನ್ನು ಕಂಡವರೂ ಇದ್ದಾರೆ!

ಬ್ಯಾರನ್ನನ 100 ಕಿಲೋಮೀಟರ್ ಅಂತರದಲ್ಲಿ ನಾರ್ಕೊಂಡಮ್ ದ್ವೀಪದಲ್ಲೂ ಒಂದು ಜ್ವಾಲಾಮುಖಿ ಪರ್ವತವಿದೆ. ಅದರ ಆಯುಸ್ಸು ಮುಗಿದು ಶತಮಾನಗಳೇ ಕಳೆದಿವೆ.

ಸೃಷ್ಟಿಕರ್ತ ತನ್ನ ದೀವಳಿಗೆಗೆ ಹಾರಿಸುವ [illegible]ಗಳೇನು ಈ ಜ್ವಾಲಾಮುಖಿಗಳು?

★

ಜ್ವಾಲಾಮುಖಿಯೊಂದರ ರೌದ್ರಾವತಾರ ಸಾವಿನ, ಸಮಸ್ಯೆಗಳ ಸರಮಾಲೆಯನ್ನೇ ಸೃಷ್ಟಿಸುತ್ತದೆ ನಿಜ. ನಂತರದ ಹಲವಾರು ವರ್ಷಗಳವರೆಗೆ ಅಲ್ಲಿ ಎಲ್ಲವೂ ಹೊಸದಾಗಿ ಶುರುವಾಗಬೇಕಾಗುತ್ತದೆ. ನೋವು ಮಾಯವಾಗಿ ನಗೆ ಅರಳುವುದು ದೀರ್ಘಕಾಲದ ನಂತರ.


ಹೌದು. ಜ್ವಾಲಾಮುಖಿಗಳು ಸ್ಫೋಟಿಸಿದಾಗ ಅವು ಶಾಪ ಹೇಗೋ ಹಾಗೇ ಶತಮಾನಗಳ ನಂತರ ವರವಾಗಿ ಪರಿಣಮಿಸುತ್ತವೆ. ವೆಸುವಿಯಸ್‌ನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಆ ಮಹಾವಿಪತ್ತಿಗೆ ಮೊದಲು ರೋಮನ್ನರು ಆ ಭೂಮಿಯಲ್ಲಿ ತೆಗೆಯುತ್ತಿದ್ದದ್ದು ವರ್ಷಕ್ಕೆ ನಾಲ್ಕು ಬೆಳೆ. ಇದೀಗ ಅಲ್ಲಿ ನಮಗೆ ಕಾಣುವುದು ಹಸಿರು ಮುರಿಯುವ ಭೂಮಿ, ಸಮೃದ್ಧ ಫಸಲು. ಶತಮಾನಗಳಿಂದ ಭೂಕಂಪಗಳು ಅಲ್ಲಿ ಭೂಮಿಯನ್ನು ಅಲುಗಾಡಿಸಿ ಸಮತಟ್ಟಾಗಿಸಿದ್ದರೆ ಜ್ವಾಲಾಮುಖಿಗಳು ಅತ್ಯುತ್ತಮ ಗೊಬ್ಬರವನ್ನು ಒದಗಿಸಿವೆ.

ಭೂತಾಯಿ ಕ್ಷಮಾಶೀಲೆ, ಕರುಣಾಮಯಿ. ಆಗೀಗ ಆಕೆ ಸಿಟ್ಟಿಗೇಳುವುದುಂಟಾದರೂ ಅದು ಮಕ್ಕಳ ಒಳಿತಿಗೇ. ಮುಂದಿನ ಪೀಳಿಗೆಗೆ ಬೇಕಾದ ಸಮೃದ್ಧಿಯನ್ನು ತರಲೆಂದೇ. ತನ್ನ ಸಮತೋಲನವನ್ನು ಭೂಮಿ ಕಾಯ್ದುಕೊಳ್ಳುವ ಪ್ರಕ್ರಿಯೆಯಲ್ಲಿನ ಪರಿಸ್ಥಿತಿಗಳು ಈ 'ಪ್ರಕೃತಿ ವಿಕೋಪ'ಗಳು.

★

''ಕೊರಡು ಕೊನರುತ್ತದಯ್ಯಾ - ಬರಡು ಹಯನಾಗುತ್ತದೆ. ಕೂಡಿ ಬಿದ್ದ ಬೂದಿಯೇ ಬೆಳ್ಳಿ ಹುಡಿಯಾಗುತ್ತದೆ. ಕಲ್ಲರಳಿ ಹೂವಾಗುತ್ತಯ್ಯಾ - ಹಣ್ಣಾಗುತ್ತದೆ. ಕುರುಡನಿಗೆ ಕಣ್ಣಾಗುತ್ತದೆ ...'' ಸಾರುವ ಅಯ್ಯನವರ ಸೂಳ್ನುಡಿಯೂ ಹೌದಿದು, ಸೃಷ್ಟಿಯ ವಿಚಿತ್ರ ವಾಸ್ತವವೂ ಹೌದು. ●

(ನ್ಯಾಶನಲ್ ಜಿಯಾಗ್ರಫಿಕ್, ವರ್ಲ್ಡ್ ಡೈಜೆಸ್ಟ್, ದಿ ಯುನೆಸ್ಕೊ ಕೊರಿಯರ್, ಸಂಡೆ, ದಿ ವೀಕ್, ಪ್ಯಾಸಿಫಿಕ್ ಫ್ರೆಂಡ್, ಗಿನ್ನಿಸ್ ದಾಖಲೆ ಪುಸ್ತಕ ಮತ್ತು ಇತರ ಮೂಲಗಳಿಂದ ಪಡೆದ ಮಾಹಿತಿಯಿಂದ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.)



ಅಯ್ಯೋ ನಿಮಗೆ ಗೊತ್ತಾಗೋಲ್ಲ!



''ಅಯ್ಯೋ ... ನಿಮಗೆ ಗೊತ್ತಾಗೋಲ್ಲಾ .... ರೀ .... ಹಾಗಲ್ಲ, ಹೀಗೆ .... ಕುಕ್ಕರ್‌ಗೆ ಹತ್ತು ನಿಮಿಷ ಆದ ಮೇಲೆ ...... ಸ್ವಿಮ್ ಕಡೆ ಇಡ ಬೇಕ್ರೀ ... ಸ್ವಿಮ್'' ಎಂದಳು ಪ್ರೇಮ ಮೊನ್ನೆ ಗ್ಯಾಸ್ ಸ್ಟೌವ್ ನಾನು ಸರಿ ಮಾಡಲು ಹೋದಾಗ.

''ಸ್ವಿಮ್ (SWIM) ಅಲ್ಲವೇ .... ಸಿಮ್ (SIM) .... ಸಿಂ ... ಸ್ವಿಮ್ ಎಂದರೆ ಈಜೋದೂಂತ .... ತಿಳೀತೇನೇ''

''ನಿಮ್ಮ ಇಂಗ್ಲೀಷ್ ಯಾರಿಗೆ ಬೇಕ್ರೀ ..... ಸಿಮ್ಮೋ, ಸ್ವಿಮ್ಮೋ ..... ಕೆಲಸ ಮುಖ್ಯ .... ಹೀಗೆ ಶಾಖ ಕಡಿಮೆ ಮಾಡಬೇಕು .... ತಿಳೀತೇ'' ಎಂದು ನನಗೇ ತಿಳಿ ಹೇಳಿದ್ದಳು,

ಈಗ್ಗೆ ಕೆಲವು ದಿನಗಳ ಹಿಂದೆ ನಮ್ಮ ಮನೇಲಿ ಒಂದು ವಿದ್ಯುತ್ ಸ್ವಿಚ್ ಸರಿ ಇರಲಿಲ್ಲ. ನನ್ನ ತಮ್ಮ ರಮೇಶ ಎಲೆಕ್ಟ್ರಿಶಿಯನ್, ಅವನಿಗೇ ಫೋನ್ ಮಾಡಿ ಹೇಳಿದ್ದೆ. ''ರಿಪೇರಿ ಮಾಡಪ್ಪಾ. ಹೊರಗಿನವರಿಗೆ ಹೇಳಿದರೆ 'ಕನ್‌ಸಲ್ಟೇಶನ್ ಫೀಸು', ಮನೆ 'ವಿಸಿಟಿಂಗ್ ಛಾರ್ಜ್' ಎಂದು ಯದ್ವಾತದ್ವಾ ಬಿಲ್ಲಿಗೆ ಸೇರಿಸ್ತಾರೆ. ನೀನೇ ಬಂದು ಸ್ವಿಚ್ ರಿಪೇರಿ ಮಾಡು'' ಎಂದು ಹೇಳಿದ್ದೆ. ಅವನು ರಿಪೇರಿ ಮಾಡಿ ಹೋದ.

ನಾನು ಅದೇ ಸಂಜೆ ಮನೆಗೆ ಬಂದ ಮೇಲೆ ಆ ಸ್ವಿಚ್ ನೋಡಿದೆ. ''ಸ್ವಿಚ್ ಕೆಳಗೆ ಹಾಕಿದ್ರೆ 'ಆನ್' ಅಲ್ಲವೇನೇ ..... ನೋಡು ನಮ್ಮನೆಯ ಬೇರೆ ಸ್ವಿಚ್‌ಗಳು ಹಾಗೇ ಇವೆ'' ಎಂದು ಹೊಸ ಸ್ವಿಚ್ ಕೆಳಗೆ ಹಾಕಿದೆ.

''ನಿಮಗೆ ಒಂದು ಚೂರೂ ಗೊತ್ತಾಗೋಲ್ಲಾ ರೀ .... ನಿಮ್ಮ ತಮ್ಮ ಆ ಸ್ವಿಚ್‌ನ ತಲೆ ಕೆಳಗಾಗಿ ಹಾಕಿದಾರೆ. ಆ ತೊಲೆ ಸಂದೀಲಿ ಸ್ವಿಚ್ ಹಾಕಕ್ಕೆ ಕಷ್ಟ ಅಂತ ಹಾಗೆ ಹಾಕಿದಾರೆ. ಅದು ಬಾಕಿ ಎಲ್ಲಾ ಸ್ವಿಚ್ ಅಂತೆ ಇಲ್ಲ. ಕೆಳಗೆ ಹಾಕಿದರೆ 'ಆಫ್', ಮೇಲೆ ಅದುಮಿದರೆ 'ಆನ್'. ನನಗೇ ಹೇಳಿದಾರೆ ..... ನಿಮಗೆ ಗೊತ್ತಾಗೋಲ್ಲ'' ಎಂದು ನಿಜವನ್ನೇ ನುಡಿದಳು ನನ್ನಾಕೆ.

● ಹಾ.ಮೈ.ಸೂರಿ.

ಮೂರನೇ ದಿನ ಆಫೀಸಿನಲ್ಲಿ, ''ನಿಮಗೆ ಫೋನ್ ಬಂದಿದೆ, ಸಾರ್'' ಎಂದ ಆಫೀಸ್ ಜವಾನ.



ಕಸೂರಿ

''ಯಾರದ್ದೋ?'' ಎಂದೆ.

''ನಾಚಿಕೆ ಆಯ್ತದೇ''

''ಯಾಕೋ''

''ನಿಮ್ಮ ಹೆಂಗಸ್ರು''

''ಏನು?''

''ಕರೀತಾ ಅವ್ರೆ ಸ್ಸಾರ್ರ್''

''ಓಹೋ, ಅಷ್ಟೇ ತಾನೇ'' ಎನ್ನುತ್ತಾ ನಾನೇ ಫೋನ್ ರಿಸೀವರ್ ಕೈಗೆತ್ತಿಕೊಂಡೆ.

''ಹಲೋ, ಯಾರು?''

''ನಾನು. ಪ್ರೇಮ. ನಿಮಗೆ, ಏನೂ ಗೊತ್ತಾಗೋಲ್ಲ ರೀ ...''

''ಯಾಕೆ? ಏನಾಯ್ತು?''

''ಆಫೀಸಿನಿಂದ ಬರ್ತಾ ಇನ್‌ಷೂರನ್ಸ್ ಟೇಪ್ ತನ್ನೀ ..... ಆಮೇಲೆ ಎಲ್ಲಾ ಹೇಳ್ತೀನಿ''

''ಅದು ಯಾವ ಟೇಪೇ?''

''ಮರೀದೇ ತನ್ನಿ ..... ಸಂಜೆ ಹೇಳ್ತೀನಿ'' ಎಂದು ಫೋನ್ ಕುಕ್ಕಿಬಿಟ್ಟಳು.

ನನ್ನ ಗೆಳೆಯರನ್ನೆಲ್ಲಾ ಕೇಳಿದೆ. ಇನ್‌ಷೂರನ್ಸ್ ಟೇಪ್ ಯಾವುದು ಅಂತ.

ರೆಡ್ ಟೇಪ್ ಗೊತ್ತು, ಟೈಪ್‌ರೈಟಿಂಗ್ ರಿಬ್ಬನ್ ಗೊತ್ತು, ವಿಮಲಮ್ಮನ ಎರಡು ಜಡೆ ಟೇಪ್ ಗೊತ್ತು ..... ಇದು ಯಾವ ಹೊಸ ಟೇಪ್?

ಯಾರಿಗೂ ತಿಳೀಲಿಲ್ಲ.

ಸಂಜೆ ಬರೀ ಕೈಲಿ ಮನೆಗೆ ಬಂದೆ. 'ಅಯ್ಯೋ ನಿಮಗೆ ಗೊತ್ತಾಗೋಲ್ಲಾ ರೀ' ಎದುರಿಗೇ ಇದ್ದಳು.

''ತಂದಿರಾ?''

''ಏನೇ?''

''ಇನ್‌ಷೂರನ್ಸ್ ಟೇಪು''

''ಅದು ಯಾವ ಟೇಪೇ?''

''ಅಯ್ಯೋ ...... ನಿಮ್ಮ ತಮ್ಮ ಹಾಕಿದ್ದ ಆ ವಿದ್ಯುತ್ ವೈರನ್ನ ಇಲಿ ಕಡಿದು ಹಾಕಿದೆ. ಸ್ವಿಚ್ ಮೇಲೆ ನೋಡಿ ..... ಆ ವೈರ್ ಸೇರಿಸುಕ್ಕೆ .... ಆ ಎಲೆಕ್ಟ್ರಿಶಿಯನ್ ಹತ್ತಿರ ಇರತ್ತಲ್ರೀ ..... ಆ ಟೇಪು ..... ಅದೇ!'' ಎಂದಳು.

''ಹ ... ಹ ... ಹ್ಹಾ ... ಲೇ ... ಅದರ ಹೆಸರು ಇನ್‌ಸುಲೇಶನ್ ಟೇಪೇ ....'' ಎಂದು ನಾನೆಂದಾಗ ..... ''ಅಯ್ಯೋ ನಿಮಗೆ ಗೊತ್ತಾಗೋಲ್ಲ'' ಎಂದು ವಾಡಿಕೆಯಂತೆ ನನಗೇ ಪುನಃ ಹೇಳಿಬಿಡೋದೆ!

ಇನ್ನೊಮ್ಮೆ ನಮ್ಮ ಸಂಸ್ಥೆಯಲ್ಲಿ ಹೀಗಾಯ್ತು ನೋಡಿ.

ಹಲವು ಪೆದಾರ್ಥಗಳಿಗೆ (ಬಟ್ಟೆ, ಸೀರೆ, ಇತರ ಪಾಕೆಟ್‌ಗಳಿಗೂ) ಮಾರಲು ಮುಂಚೆ ಇಷ್ಟಿಷ್ಟು ದರ ಎಂದು ನಿಗದಿ ಮಾಡಿ, ಚೀಟಿ ಬರೆದು, ಸೀಲ್



ಹಾಕಿ, ಆಯಾ ಪದಾರ್ಥಗಳಿಗೆ ಲಗತ್ತಿಸಬೇಕು. ಒಂದು ವಸ್ತುವಿನ ಬೆಲೆ ಐದು ರೂಪಾಯಿ ಎಂದು ನಿಗದಿ ಮಾಡಿ, ಅದಕ್ಕೆ ದಾರ ಕಟ್ಟಿ ಚೀಟಿ ಲಗತ್ತಿಸುತ್ತಿದ್ದೆ. ಆಗಲೇ ನಮ್ಮ ಬಾಸ್ ನನ್ನ ಬಳಿ ಬಂದರು.

''ಏನ್ರೀ ಇದೂ'' ಎಂದರು.

''ಇದು ಐದು ರೂ. ಬೆಲೆ ಬಾಳುತ್ತೆ. ಅದಕ್ಕೇ ಈ ಚೀಟಿ ಹಾಕ್ತಿದೀನಿ.''

''ನಿಮ್ಮ ತಲೆ .... ಐವತ್ತು ರೂಪಾಯಿ ಬೆಲೆ ಹಾಕ್ರೀ.''

''ಸಾರ್ ..... ಅದರ ನಿಜ ಬೆಲೆ ಒಂದೇ

ರೂಪಾಯಿ. ಜನಕ್ಕೆ ಅನ್ಯಾಯ ಮಾಡಬಾರದೂ ಅಂತ .... ಡಬಲ್ ಲಾಭ ಸೇರಿಸಿ ಐದು ರೂಪಾಯಿ ಮಾಡಿದೀನಿ.... ನೀವು..... ಅದಕ್ಕೆ ಐವತ್ತು ರೂಪಾಯಿ ಅಂತ ಹೇಳ್ತೀರಲ್ಲ .... ಸಾರ್ ....'' ಎಂದೆ.

''ನಮ್ಮ ಜನಗಳಿಗೆ 'ಕಡಿತ' ಆದರೆ ತುಂಬಾ ಹಿತ ಕಣ್ರೀ ...... ಹೆಚ್ಚು ಹೆಚ್ಚು 'ಕಡಿತ' ಆದ್ರೆ ..... ಹೆಚ್ಚು ಹೆಚ್ಚು ಜನಕ್ಕೆ ಸುಖ ಸಿಗತ್ತೆ, ಮಾಲು ಬೇಗ, ಬೇಗ ಸೇಲ್ ಆಗತ್ತೆ ..... ಐವತ್ತು ರೂಪಾಯಿ ಬೆಲೆ ನಿಗದಿ ಮಾಡಿ ಶೇಕಡಾ ತೊಂಬತ್ತು ಕಡಿತ ಅಂತ ಬೋರ್ಡ್ ಹಾಕ್ರೀ ..... ಆಗ ನೀವು ಹೇಳಿದ ಐದು ರೂಪಾಯಿ ಬೆಲೇನೇ ಆಗಲಿಲ್ಲವೇ? ನಿಮಗೇನೂ ಗೊತ್ತಾ ಗೋಲ್ಲಾ ರೀ'' ಎಂದು ನನ್ನ ಹೆಂಡತಿ ನನಗೆ ಹೇಳುವಂತೆಯೇ ಹೇಳಿಬಿಟ್ಟರು!





ಆಗಲೇ ನನಗೆ ಈ 'ಕಡಿತ'ದ ಸುಖ ಚೆನ್ನಾಗಿ ಅರ್ಥವಾದುದು.

ಸಂಜೆ ಮನೆಗೆ ಬಂದ್ರೆ, ಪ್ರೇಮ ಹೊಸ ಸೀರೆ ತೋರಿದಳು. ''ಇದು ನೋಡ್ರೀ ದುಶ್ಶಾಸನ ಸ್ಯಾರೀ ಸೆಂಟರ್‌ನವರದ್ದು. ಹಬ್ಬಕ್ಕೆ ಅಮೋಘ ಕಡಿತ ಮಾರಾಟದಲ್ಲಿ ತಂದದ್ದು .... ಶೇಕಡಾ ತೊಂಬತ್ತು ರಿಬೇಟ್!'' ಎಂದಳು.

''ಅಲ್ಲವೇ ..... ಆ ಕಡಿತದ ಸೀರೆ ....'' ಎಂದು ನಾನು ಮಾತು ಮುಂದುವರಿಸುವುದರೊಳಗೇ, ''ಅಯ್ಯೋ ..... ನಿಮಗೆ ಇವೆಲ್ಲಾ ಗೊತ್ತಾಗೋಲ್ಲಾ ರೀ'' ಎಂದು ನನಗೇ ದಬಾಯಿಸಿದಳು.

ನಾನೇ ಅಂಟಿಸಿದ್ದ ಕಡಿತದ ರೇಟ್ ಲೇಬಲ್ ನನ್ನ ಹೆಂಡತಿಯ ಸೀರೆಯಲ್ಲಿತ್ತು! ●

* * * * *

ಐಶ್ವರ್ಯ ಮತ್ತೊಬ್ಬನನ್ನು ಆಶ್ರಯಿಸುತ್ತದೆ. ಭೂಮಿ ಒಬ್ಬನಿಂದ ಒಬ್ಬನನ್ನು ಸೇರುತ್ತದೆ. ಆದರೆ ಮನುಷ್ಯರಿಗೆ ಕೀರ್ತಿ ಎಂಬುದು ಒಂದೇ. ಅದು ಮತ್ತೊಬ್ಬರನ್ನು ಸೇರದ ಪತಿವ್ರತೆಯಂತೆ ನಿಷ್ಠೆ ಹೊಂದಿರುತ್ತದೆ.

– ಸುಭಾಷಿತ ರತ್ನ ಭಾಂಡಾಗಾರ

* * * *



ಈಗ
ನೀವು ಫೆರೆಕ್ಸ್ ಕೊಂಡಾಗ
ರೂ.4/-
ಉಳಿಸಬಲ್ಲಿರಿ.
ಹಾಲು ಯುಕ್ತ ಫೆರೆಕ್ಸ್ ಸೆರಿಯಲ್‌ನ ರೀಫಿಲ್ ಪ್ಯಾಕ್‌ನಿಂದ, ನೀವು 400 ಗ್ರಾ. ಪ್ಯಾಕ್ ಮೇಲೆ ರೂ. 4/-ಉಳಿಸಬಲ್ಲಿರಿ.
ನಿಮ್ಮ ಮಗುವಿಗೆ 4 ತಿಂಗಳು ತುಂಬುತ್ತಲೇ ಹಾಲು ಯುಕ್ತ ರುಚಿಕರ ಫೆರೆಕ್ಸ್ ಸೆರಿಯಲ್ ನೀಡಿ-ಮಗುವಿನ ಬೆಳವಣಿಗೆಯನ್ನು ಕಣ್ಣಾರೆ ಕಾಣಿರಿ.
ಟಿನ್ ಪ್ಯಾಕ್‌ಗಿಂತ ರೂ. 4/- ಕಡಿಮೆ.
Farex®
CEREAL WITH MILK
TASTIER, CREAMIER
Rs.4/- LESS than the tin pack
A tastier way to grow
ಫೆರೆಕ್ಸ್
ಬೆಳೆಯಲು ರುಚಿಕರ ಸಾಧನ.
ಈಗ ಆಯ್ದ ಮಾರುಕಟ್ಟೆಗಳಲ್ಲಿ ಲಭಿಸುತ್ತದೆ.
Gx 1299 Kn

ನೀತಿಕಥೆ

ಕಾಲದ ದಾಖಲೆಗೆ ಸೇರಿ
ಅಮರರಾಗಬಯಸುವುದು ಎಷ್ಟೊಂದು ನಿರರ್ಥಕ!

ಪಾಯವಿಲ್ಲದ ಗೋಪುರ

ಒಂದು ಟಾವೋ ತತ್ವ ಪ್ರಸಂಗ

ಬೆಟ್ಟಗಳ ಬಳಿ ವಾಸಿಸುವವನು ತಾನು ನಿಲ್ಲುವಾಗಲೂ ಕೂರುವಾಗಲೂ, ತಿನ್ನುವಾಗಲೂ ಕುಡಿಯುವಾಗಲೂ ಬೆಟ್ಟಗಳ ಜತೆ ಸಂವಾದದಲ್ಲಿರಬೇಕು.

ಚುಂಗ್‌ನಾನ್ ಬೆಟ್ಟ ಶ್ರೇಣಿಯಂಥ ಶ್ರೇಣಿ ಬೇರೊಂದಿಲ್ಲ. ಬೆಟ್ಟಗಳ ಬಳಿ ಎದ್ದ ಪಟ್ಟಣಗಳಲ್ಲೆಲ್ಲ ಫು ಫೆಂಗ್‌ನಂಥ ಪಟ್ಟಣ ಇನ್ನೊಂದಿಲ್ಲ. ಸಹಜವಾಗಿ ಅಲ್ಲಿನ ದೃಶ್ಯಾವಳಿಗೆ ಬೆಟ್ಟ ಶಿಖರಗಳು ಅವಿಭಾಜ್ಯ ಭಾಗವಾಗಿವೆ. ಆದರೂ ಅಲ್ಲಿನ ರಾಜ್ಯಪಾಲನ ನಿವಾಸಕ್ಕೆ ಒಂದು ಬೆಟ್ಟವೂ ಕಾಣುವುದಿಲ್ಲ. ಇದರಿಂದ ಒಳ್ಳೆಯ ಪರಿಣಾಮವಾಗಲಿ ಕೆಟ್ಟ ಪರಿಣಾಮವಾಗಲಿ ಏನಿಲ್ಲವಲ್ಲ. ಆದರೂ ಅದು ಸರಿಯಲ್ಲ ಅಂತ ಪಾಯವಿಲ್ಲದ ಗೋಪುರ ಕಟ್ಟಲ್ಪಟ್ಟಿತು.

ಈ ಗೋಪುರ ಕಟ್ಟುವ ಮೊದಲು ರಾಜ್ಯಪಾಲ ಆಗಾಗ ಕೈಯಲ್ಲಿ ಬೆತ್ತ ಹಿಡಿದು ಬೆಟ್ಟಗಳ ಬುಡದಲ್ಲಿ ಸುತ್ತಾಡುವವನು. ಅಲ್ಲಿಂದ ಬೆಟ್ಟ ಶಿಖರಗಳ ರೇಖೆ ಮರಗಿಡಗಳೆಡೆಯಿಂದ ಅವನಿಗೆ ಆಗೊಮ್ಮೆ ಈಗೊಮ್ಮೆ ಕಾಣುವುದು- ಗೋಡೆಯ ಆಚೆ ಬದಿಯಲ್ಲಿ ಹೋಗುವವರ ತಲೆ ತುದಿ ಕಂಡಂತೆ. ಇದರ ಪರಿಣಾಮವಾಗಿ ಆತ ಕೆಲಸದಾಳುಗಳನ್ನು ಕರೆದು, ತನ್ನ ಮನೆಯ ಮುಂದೆ ಒಂದು ಚೌಕಾಕಾರದ ಹೊಂಡ ತೋಡಿಸಿ, ಅದರ ಮಣ್ಣಿನಿಂದ ಒಂದು ಗೋಪುರ ಕಟ್ಟಿಸಿದ. ಅದು ಅವನ ಮನೆಯ ಛಾವಣಿಗಿಂತ ಸ್ವಲ್ಪ ಎತ್ತರವಿತ್ತು ಅಷ್ಟೆ. ಗೋಪುರ ಹತ್ತಿದವರಿಗೆ ಎತ್ತರಕ್ಕೇರಿದ ಭಾವನೆ ಬರುತ್ತಿರಲಿಲ್ಲ; ಮತ್ತು ಸುತ್ತಣ ದೃಶ್ಯಾವಳಿ ಅಲ್ಲಿಂದ ಎತ್ತರಕ್ಕೆ ...ತ್ತಿತ್ತು. ಹಾಗಾಗಿ ರಾಜ್ಯಪಾಲ ಈ ಗೋಪು... ...ಯವಿಲ್ಲದ ಗೋಪುರ' ಎಂದು ಹೆಸ... ...ು ಟುಂಗ್ ಫೋ ಎಂಬ ವಿದ್ವಾಂಸ... ...ಲು ಮಾಡಲು ಹೇಳಿದ.

ಫೋ ಹೇಳಿದ: ''ಪೂರ್ಣತ್ವ ಶೈಥಿಲ್ಯಗಳ ಸರದಿ ನಮ್ಮ ಜ್ಞಾನಕ್ಕೆ ಮೀರಿದ ಸಂಗತಿ. ವರ್ಷಗಳ ಕೆಳಗೆ ಈ ಸ್ಥಳ ಮಂಜು ಮಳೆ ಇಬ್ಬನಿಗಳಿಗೆ ಒಡ್ಡಿಕೊಂಡಿದ್ದಾಗ; ಉಡ, ನರಿಗಳ ವಾಸಸ್ಥಾನವಾಗಿದ್ದಾಗ ಇವತ್ತಿನ ಗೋಪುರವನ್ನು ಯಾರು ಮುಂಗಂಡಿದ್ದರು? ಹಾಗೆಯೇ ಮುಂದೆ ಕಾಲಚಕ್ರಕ್ಕೆ ಸಿಕ್ಕ ಗೋಪುರ ಮತ್ತೆ ಎಂದು ಬಟ್ಟಬಯಲಾಗುವುದೆಂದು ಕೂಡಾ ಯಾರೂ ಹೇಳಲಾರರು.''

ಇಬ್ಬರೂ ಗೋಪುರವನ್ನು ಹತ್ತಿದರು. ಫೋ ಸುತ್ತಲಿನ ಭೂದೃಶ್ಯವನ್ನು ದಿಟ್ಟಿಸುತ್ತಾ ರಾಜ್ಯಪಾಲನಿಗೆ ಹೇಳಿದ: ''ಹಿಂದಿನ ವಿಶಾಲವಾದ, ಭವ್ಯವಾದ, ಇದಕ್ಕಿಂತ ನೂರು ಪಾಲು ಗಟ್ಟಿಯಾಗಿದ್ದ ಅರಮನೆಗಳೆಲ್ಲ ಈಗೆಲ್ಲಿ? ಎಲ್ಲ ಮಣ್ಣಾಗಿವೆ. ಕುರುಹಿಗೆಂದು ಒಂದು ಇಟ್ಟಿಗೆ, ಒಂದು ಹಂಚು ಕೂಡ ಉಳಿದಿಲ್ಲ. ಈ ಗೋಪುರವೂ ಹಾಗೇ ಅಳಿದು ಹೋಗದೇ? ಗೋಪುರಗಳೇ ಚಿರಂತನವಾಗಿ ಉಳಿಯುವುದಿಲ್ಲವೆಂದಾದರ ಗಾಳಿಯಲ್ಲಿ ಕರಗಿ ಹೋಗುವ ಹೊಗಳಿಕೆ ಮಾತುಗಳ ಅಮರತ್ವವನ್ನು ನಾವು ಎಷ್ಟರಮಟ್ಟಿಗೆ ನಂಬಬಹುದು? ಈ ರೀತಿಯಾಗಿ ತಮ್ಮ ಕಾಲದ ದಾಖಲೆಗೆ ಸೇರಲು ಪ್ರಯತ್ನಿಸುವವರ ಬಗ್ಗೆ ಅಯ್ಯೋ ಅನಿಸುತ್ತದೆ.'' ನಂತರ ಫೋ ಮೇಲಿನ ಮಾತುಗಳನ್ನು ದಾಖಲು ಮಾಡಿದ. ●

ಬಿ.ಜನಾರ್ದನ ಭಟ್

ನೀರು ಬೆವರು ಮತ್ತು ನಾವು



● ರಾಜಶೇಖರ ಎನ್. ನಾಯ್ಕ

ದಿನದಲ್ಲಿ ಪ್ರತಿ 10 ನಿಮಿಷಗಳ ಅಂತರದಲ್ಲಿ ನಮ್ಮ ದೇಹದ ತೂಕ ಬದಲಾಗುತ್ತಲೇ ಇರುತ್ತದೆ. ಈ ತೂಕ ಬದಲಾವಣೆಗಳನ್ನು ಮುನ್ನೂರು ವರ್ಷಗಳ ಹಿಂದೆ ಇಟಲಿಯ 'ಪಾಡೋ' ಎಂಬಲ್ಲಿ ವಾಸಿಸಿದ್ದ ವೈದ್ಯಶಾಸ್ತ್ರದ ಪ್ರಾಧ್ಯಾಪಕ ಸಾಂಕ್ಟೋರಿಯಸ್ (1561-1636) ಎಂಬಾತ ಮೊದಲ ಬಾರಿ ಕಂಡು ಹಿಡಿದ. ಆತ ಗೆಲಿಲಿಯೋನ ಸಹೋದ್ಯೋಗಿ.

ದೊಡ್ಡ ತೂಕ ಮಾಪಕವೊಂದನ್ನು ರಚಿಸಿದ್ದ ಸಾಂಕ್ಟೋರಿಯಸ್ ತನ್ನ ದೇಹದ ತೂಕದ ಬದಲಾವಣೆಯಾಗುವ ರೀತಿಯನ್ನು ಕಂಡುಹಿಡಿಯಲು ಬಹುಕಾಲ ಪ್ರಯೋಗನಿರತನಾಗಿರುತ್ತಿದ್ದ. ಅದನ್ನು ನೋಡಲು ಅವನ ಪ್ರಯೋಗ ಶಾಲೆಯಲ್ಲಿ ಬಹು ಸಂಖ್ಯೆಯಲ್ಲಿ ಜನ ಕುತೂಹಲದಿಂದ ಕಾಯುತ್ತಿದ್ದರು. ಸಾಂಕ್ಟೋರಿಯಸ್ ಒಂದು ರಾತ್ರಿಯಲ್ಲಿ ಒಂದು ಕಿಲೋಗ್ರಾಮಿನಷ್ಟು ತೂಕವನ್ನು ಕಳೆದುಕೊಳ್ಳಬಲ್ಲವನಾಗಿದ್ದ.

ಬೇರೆ ಬೇರೆ ಕಾರಣಗಳಿಂದ ನಮ್ಮ ದೇಹದ ತೂಕವನ್ನು ಕಳೆದುಕೊಳ್ಳಬಹುದು. 24 ಗಂಟೆಗಳಲ್ಲಿ ದೇಹದಿಂದ ಹೊರ ಹೋಗುವ ಕಾರ್ಬನ್ ಡೈ ಆಕ್ಸೈಡ್ 75 ರಿಂದ 850 ಗ್ರಾಮಿನಷ್ಟು ತೂಕದ ಇಳಿಕೆಗೆ ಕಾರಣವಾಗುತ್ತದೆ. ಶ್ವಾಸಕೋಶದ ಮೂಲಕ ನಷ್ಟವಾಗುವ ನೀರಿನ ಪ್ರಮಾಣದ ಮುಂದೆ ಇದು ತೀರ ಅಲ್ಪ. ಅಲ್ಲಿ 150 ರಿಂದ 500 ಗ್ರಾಂ ನೀರು 24 ಗಂಟೆಗಳ ಅವಧಿಯಲ್ಲಿ ನಷ್ಟವಾಗುತ್ತದೆ. ಬೆವರಿನ ಮೂಲಕ ಕಳೆದು ಹೋಗುವ ಪ್ರಮಾಣ ಇನ್ನೂ ಹೆಚ್ಚು.

ದೊಡ್ಡ ದೊಡ್ಡ ಹನಿಗಳಾಗಿ ದೇಹದಿಂದ ಬೆವರು ಇಳಿದು ಬರದಿದ್ದರೂ ಮನುಷ್ಯನು ಸದಾ ಬೆವರುತ್ತಲೇ ಇರುತ್ತಾನೆ. ಬೆವರಿಕೆ ದೇಹವನ್ನು ತಂಪುಗೊಳಿಸುವುದಿಲ್ಲ. ಅದು ತುಂಬಾ ಹೆಚ್ಚಿನ ಶಾಖದ ವಿರುದ್ಧ ಮಾತ್ರ ರಕ್ಷಣೆ ಕೊಡುವುದು. ಪರಿಸರದ ಉಷ್ಣತೆ 40 ಅಥವಾ 50 ಸೆಂ. ನಷ್ಟು ಹೆಚ್ಚಿದ್ದರೂ ದೇಹದ ಸಹಜ ಉಷ್ಣತೆ ಸುಮಾರು 37 ಸೆಂ. (ಕಂಕುಳಲ್ಲಿ). ಆ ಉಷ್ಣತೆಯು ಶ್ವಾಸಕೋಶ ಮತ್ತು ಚರ್ಮದ ಮೂಲಕ ನೀರು ಆವಿಯಾಗುವುದರಿಂದ ಸ್ಥಿರವಾಗಿಸಲ್ಪಡುವುದು. ಬೆವರಿಕೆ ಸದಾ ಕಾಲಕ್ಕೂ ಉಪಯುಕ್ತವಲ್ಲ. ಬೆವರು ದೇಹದ ಮೇಲ್ಭಾಗದಲ್ಲಿ ದೊಡ್ಡ ದೊಡ್ಡ ಹನಿಗಳಂತೆ ಸಂಗ್ರಹಗೊಂಡು ಹರಿದರೂ ಯಾವ ಪರಿಹಾರವನ್ನೂ ಕೊಡುವುದಿಲ್ಲ. ಏಕೆಂದರೆ ಅದು ಆವಿಯಾಗದೇ ದೇಹವನ್ನು ತಂಪಾಗಿಸುವು

ದಿಲ್ಲ. ಇದರಿಂದಾಗಿ ಒಣ ಮರಳುಗಾಡಿನಲ್ಲಿ ಉಷ್ಣತೆಯನ್ನು ತಾಳುವುದು ತೇವದ ಉಷ್ಣವಲಯದ ಅರಣ್ಯಕ್ಕಿಂತ ಸುಲಭ. ಕಾರಣವೇನೇ ಇದ್ದರೂ ಮೂರರಿಂದ ಐದು ಲೀಟರ್ ನೀರು ನಷ್ಟವಾಗುವುದರಿಂದ ತಡೆಯಲಾರದಷ್ಟು ಬಾಯಾರಿಕೆ ಉಂಟಾಗುತ್ತದೆ. ಅದನ್ನು ಅದಷ್ಟು ಶೀಘ್ರ ಕಳೆದುಕೊಂಡರೆ ಮಾರಕವೇನಲ್ಲ.

ತಂಪು ಹವಾಮಾನದಲ್ಲಿ 250ರಿಂದ 1700 ಗ್ರಾಮಿನಷ್ಟು ನೀರು ಚರ್ಮದಿಂದ ಆವಿಯಾಗುತ್ತವೆ. ಸುಡು ಬಿಸಿಲಿನಲ್ಲಿ ಹೆಚ್ಚು ಶ್ರಮದಾಯಕ ಕೆಲಸದಲ್ಲಿ ನಿರತನಾದ ವ್ಯಕ್ತಿಯು 10-15 ಲೀಟರ್ ಬೆವರನ್ನು 24 ಗಂಟೆಗಳಲ್ಲಿ ಸುರಿಸಬಲ್ಲ. ಕೆಲವು ಬಾರಿ ಗಂಟೆಗೆ ನಾಲ್ಕು ಲೀಟರ್‌ನಷ್ಟು ನಷ್ಟವಾಗಬಲ್ಲದು. ಇಂಥ ಸನ್ನಿವೇಶದಲ್ಲೂ ಚರ್ಮವು ಒಣಗಿರಬಹುದು. ದಕ್ಷಿಣ ಪ್ರದೇಶಗಳಲ್ಲಿ ವಾಸಿಸುವ ಜನರು 70ರಿಂದ 150 ಟನ್ ಬೆವರನ್ನು ಎಪ್ಪತ್ತು ವರ್ಷದ ಜೀವಾವಧಿಯಲ್ಲಿ ಸುರಿಸುತ್ತಾರೆಂಬುದು ಒಂದು ಸಾಧಾರಣ ಅಂದಾಜು. ಈ ಪ್ರಮಾಣವು ಮೂರು ದೊಡ್ಡ ರೇಲ್ವೆ ಟ್ಯಾಂಕ್‌ಗಳನ್ನು ತುಂಬಲು ಸಾಕಾಗುತ್ತದೆ.

ಬೆವರಿನ ಗ್ರಂಥಿಗಳು ರಕ್ತದಿಂದ ನೀರನ್ನು ಪಡೆಯುತ್ತವೆ. ಬೆವರುವುದು ವಿಪರೀತವಾಗದೇ ರಕ್ತವು ಸಾಂದ್ರವಾಗುವುದಿಲ್ಲ. ಮತ್ತು ಬೆವರು ಪಿಕೆಯು ಪ್ರಮಾಣ ಕಡಿಮೆಯಾಗತೊಡಗಿದಂತೆ, ಅದೇ ಪ್ರಮಾಣದಲ್ಲಿ ನೀರು ಸಂಗ್ರಹ ಕೋಶಗಳಿಂದ ರಕ್ತನಾಳದೊಳಕ್ಕೆ ಹರಿದುಹೋಗುವುದು (ಚರ್ಮದಡಿಯ ಪ್ರದೇಶ, ಸ್ನಾಯುಗಳು ಮತ್ತಿತರ ಅಂಗಭಾಗಗಳು ನೀರಿನ ಮುಖ್ಯ ಸಂಗ್ರಹಗಳು). ತದ್ವಿರುದ್ಧ ಮನುಷ್ಯ ಕುಡಿದ ನೀರನ್ನು ಕರುಳಿನಿಂದ ರಕ್ತ ಹೀರಿದರೆ ಅದೇ ಪ್ರಮಾಣದ ನೀರು ಕೂಡಲೇ ಸಂಗ್ರಹ ಕೋಶಗಳಿಗೆ ಕೊಂಡೊಯ್ಯಲ್ಪಡುತ್ತದೆ. ಮನುಷ್ಯ ಆರೋಗ್ಯದಿಂದ ಇರಬೇಕಾದರೆ ಯಥೇಚ್ಛವಾಗಿ ನೀರು ಕುಡಿಯಬೇಕು. ●

[illegible]

ಅಮೆರಿಕೆಯ ಅರಿಝೋನಾದಲ್ಲಿರುವ ಕಿಟ್ ಪೀಕ್ ರಾಷ್ಟ್ರೀಯ ವೇದ ಶಾಲೆಯ ವಿಜ್ಞಾನಿಗಳು ಒಂದು ದೊಡ್ಡ ಹೊಚ್ಚ ಹೊಸ ನಕ್ಷತ್ರ ಮಂಡಲವನ್ನು ಶೋಧಿಸಿದ್ದಾರೆ. ಅದು ಇದುವರೆಗೆ, ಜಗತ್ತಿಗೆ ದೊಡ್ಡದೆಂದು ಗೊತ್ತಾಗಿರುವ ನಕ್ಷತ್ರ ಮಂಡಲಕ್ಕಿಂತ ನಾಲ್ಕೂವರೆ ಪಟ್ಟು ಹೆಚ್ಚು ದೊಡ್ಡದಾಗಿದೆಯಂತೆ.

ಈ ನಿಹಾರಿಕೆ, ಅಂದರೆ ಗೆಲಾಕ್ಸಿಯನ್ನು ನೋಡಲು ವಿಜ್ಞಾನಿಗಳು ತೊಂಬತ್ತು ಸೆಂಟಿಮೀಟರಿನ ದೂರದರ್ಶನವನ್ನು ಉಪಯೋಗಿಸಿದರೆಂದು ಸೈನ್ ನಿಯತಕಾಲಿಕ ವರದಿ ಮಾಡಿದೆ.

ಅದು ಭೂಮಿಯಿಂದ ಒಂದು ನೂರು ಕೋಟಿ ಪ್ರಕಾಶ ವರ್ಷಗಳಷ್ಟು ದೂರದಲ್ಲಿದೆಯೆಂದು ವಿಜ್ಞಾನಿಗಳು ಲೆಕ್ಕ ಹಾಕಿ ಹೇಳಿದ್ದಾರೆ.

ಪ್ರಕಾಶವು ಒಂದು ಸೆಕೆಂಡಿಗೆ ಮೂರು ಲಕ್ಷ ಕಿಲೋಮೀಟರ್ ವೇಗದಲ್ಲಿ ಚಲಿಸುವುದು.

ಈ ನಕ್ಷತ್ರ ಮಂಡಲವನ್ನು ''ಅಬೇಲಿ 2029'' ಎಂದು ಕರೆದಿದ್ದಾರೆ. ಈ ನಕ್ಷತ್ರ ಮಂಡಲವು ಒಂದು ತುದಿಯಿಂದ ಇನ್ನೊಂದು ತುದಿಗೆ ಅರವತ್ತು ಲಕ್ಷ ಪ್ರಕಾಶ ವರ್ಷಗಳಷ್ಟು ಉದ್ದವಾಗಿದೆ ಎಂದು ಲೆಕ್ಕ ಹಾಕಿದ್ದಾರೆ. ಅದು ಈ ಪೃಥ್ವಿ ಇರುವ ಮಿಲ್ಕೀ ವೇ ಕ್ಷೀರಪಥ ಗೆಲಾಕ್ಸಿಗಿಂತಲೂ ಅರವತ್ತು ಪಟ್ಟು ದೊಡ್ಡದಾಗಿದೆ ಎಂದು ಆ ವಿಜ್ಞಾನ ಪತ್ರಿಕೆಯು ತಿಳಿಸಿದೆ.

(ಸಂಗ್ರಹ) ಶಂಕರಗೌಡ ಪಾಟೀಲ

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಮೌಖಿಕ
   (ಅ) ಊರಿನ ಗೌಡ
   (ಆ) ಬಾಯಿ ಮಾತಿನ ಮೂಲಕ ಆಗುವ
   (ಇ) ಮುತ್ತು
   (ಈ) ಬಿಡುಗಡೆ
2. ಬಾಂದು ಕಲ್ಲು
   (ಅ) ಬಂಡೆಕಲ್ಲು
   (ಆ) ಕತ್ತಿ ಮಸೆಯುವ ಕಲ್ಲು
   (ಇ) ಗಡಿಕಲ್ಲು
   (ಈ) ಒಳೆಕಟ್ಟುವ ಕಲ್ಲು
3. ಗಾಳುಮೇಳು
   (ಅ) ಪಲಾಯನ
   (ಆ) ಬೊಬ್ಬೆ
   (ಇ) ಹಾಳಾಗುವಿಕೆ
   (ಈ) ಗಾಬರಿ
4. ಗಿಂಜು
   (ಅ) ಕಿಸಿ
   (ಆ) ಒದ್ದೆಮುದ್ದೆ ಮಾಡು
   (ಇ) ತೊಡಕಾಗು
   (ಈ) ಖಜಾನೆಯಿರುವ ಊರು
5. ಅನಧ್ಯಾಯ
   (ಅ) ಪರಿಶಿಷ್ಟ
   (ಆ) ಅಭ್ಯಾಸದಲ್ಲಿ ಸೋಮಾರಿ
   (ಇ) ಪಾಠವಿಲ್ಲದ ದಿನ
   (ಈ) ಪಂಡಿತನಲ್ಲದ
6. ಗಜಮು
   (ಅ) ತಲೆ ಕೆಳಗೆ
   (ಆ) ಮೊಳ ಹಾಕು
   (ಇ) ಗರ್ಜನೆ
   (ಈ) ಆನೆ ಕಾಲು ರೋಗ
7. ವಶಿತ್ವ
   (ಅ) ಮಾಂಸ ತುಂಬಿರುವಿಕೆ
   (ಆ) ಇನ್ನೊಬ್ಬನ ಕೈಲಿ ಸಿಕ್ಕಿಬೀಳುವುದು
   (ಇ) ಗುಣವಾಗುವಿಕೆ
   (ಈ) ಇಂದ್ರಿಯ ನಿಗ್ರಹ
8. ವರ್ಮ ಇಡು
   (ಅ) ಮರ್ಯಾದೆ ಇಟ್ಟುಕೊಳ್ಳು
   (ಆ) ಕವಚ ತೊಡು
   (ಇ) ದ್ವೇಷವಿಟ್ಟುಕೊಳ್ಳು
   (ಈ) ಶೌರ್ಯ ತೋರಿಸು
9. ವಲಸೆ
   (ಅ) ಬೇರೊಂದೂರಿಗೆ ಹೋಗಿ ನೆಲೆಸುವಿಕೆ
   (ಆ) ಇಳಿಜಾರಾದ ಛತ್ತು
   (ಇ) ಇಚ್ಛೆ ಇಲ್ಲದಿರುವಿಕೆ
   (ಈ) ಸುತ್ತು ದಾರಿ
10. ಹುರುಳು
    (ಅ) ನೆಲದ ಮೇಲೆ ಹೊರಳು
    (ಆ) ಹಿಂದಿರುಗುವಿಕೆ
    (ಇ) ತಿರುಳು
    (ಈ) ಜಗಳಕ್ಕೆ ನಿಲ್ಲು
11. ಪೈಪೋಟಿ
    (ಅ) ಜಿಪುಣತನ
    (ಆ) ಒಂದು ಭಕ್ಷ್ಯ
    (ಇ) ಪೋಲಾಟ
    (ಈ) ಕಾಲಿಗೆ ಬೀಳುವಿಕೆ
12. ತೇವ
    (ಅ) ಒಣ ನೆಲ
    (ಆ) ಪಸಿವು
    (ಇ) ಏದುಸಿರು
    (ಈ) ನೀರಿನ ಪಸೆ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಮೌಖಿಕ

(ಆ) ಬಾಯಿದರೆ, ಬರವಣಿಗೆಯಲ್ಲಿಲ್ಲದ್ದು. ಉದಾ: ಮೌಖಿಕ ಪರೀಕ್ಷೆ; ಮೌಖಿಕ ಸಂದೇಶ (ಸಂ. ಮುಖ- ದಿಂದ)

2. ಬಾಂದು ಕಲ್ಲು

(ಇ) ಗಡಿಯನ್ನು ಗುರುತಿಸುವ ಕಲ್ಲು, ಕಟ್ಟೆ ಕಲ್ಲು ಉದಾ: ಬಾಂದು ಕಲ್ಲನ್ನೇ ಕಿತ್ತುಹಾಕಿದರು (ಮರಾಠಿ- ಬಾಂದ- ಅಣೆಕಟ್ಟು)

3. ಗಾಳುಮೇಳು

(ಈ) ಗಾಬರಿ, ಆತುರ, ಗಲಿಬಿಲಿ. ಉದಾ. ಸುದ್ದಿ ಕೇಳಿ ಅವಳಿಗೆ ಒಮ್ಮೆಲೇ ಗಾಳುಮೇಳಾಯಿತು (ಹಿಂದಿ- ಮರಾಠಿ- ಘಾಲಮೇಲ)

4. ಗಿಂಜು

(ಅ) ಕಿಸಿ, ಅಗಲವಾಗಿ ತೆರೆ. ಉದಾ: ಹಲ್ಲು ಗಿಂಜುವುದು ಬೇಡ. (ತೆಲುಗು- ಗಿಂಜ)

5. ಅನಧ್ಯಾಯ

(ಇ) ಪಾಠವಿಲ್ಲದ ದಿನ, ಶಾಲೆಗೆ ರಜಾ ಇರುವಿಕೆ, ವ್ಯಾಸಂಗಕ್ಕೆ ನಿಷೇಧ. ಉದಾ: ಅನಧ್ಯಾಯದ ದಿನ ಊರಿಗೆ ಹೋಗಿ ಬಂದ. (ಸಂ. ಅನ್ = ಅಲ್ಲ + ಅಧ್ಯಾಯ= ಅಭ್ಯಾಸ)

6. ಗಜಮು

(ಅ) ತಲೆಕೆಳಗಾಗಿರುವುದು. ಉದಾ: ಗಜಮು ನಿಂತರೂ ಕೆಲಸವಾಗಲಿಲ್ಲ. (ಪಾರಸೀಕ- ಕಜ್- ಅಡ್ಡತಿಡ್ಡ- ವಿಪರೀತ)

7. ವಶಿತ್ವ

(ಈ) ಇಂದ್ರಿಯ ನಿಗ್ರಹ, ಹತೋಟಿ, ತನ್ನ ಮನಸ್ಸು ಇಚ್ಛೆಗಳನ್ನು ಅಂಕೆಯಲ್ಲಿಡುವ ಶಕ್ತಿ. ಉದಾ: ವಶಿತ್ವ ವಿದ್ದರೆ ಜಗತ್ತನ್ನು ಗೆಲ್ಲಬಹುದು (ಸಂ.)

8. ವರ್ಮವಿಡು

(ಇ) ದ್ವೇಷವಿಟ್ಟುಕೊಳ್ಳು, ಕುನಿಸು ಇಟ್ಟುಕೊಳ್ಳು. ಉದಾ: ಸಣ್ಣ ವಿಷಯಗಳಲ್ಲಿ ಕೂಡ ವರ್ಮವಿಟ್ಟುಕೊಳ್ಳುತ್ತಾರೆ. (ದೇಶ್ಯ- ತಮಿಳು- ವಣ್ಮಂ)

9. ವಲಸೆ

(ಅ) ಇದ್ದೂರಿಂದ ಬೇರೆಡೆ ಹೋಗಿ ನೆಲಸುವುದು, ಗುಳೇ ಹೋಗುವುದು. ಉದಾ: ವಲಸೆಗಾರರೇ ಸ್ಥಳೀಯರನ್ನು ಹೆದರಿಸುತ್ತಾರೆ (ದೇಶ್ಯ)

10. ಹುರುಳು

(ಇ) ತಿರುಳು, ಒಳಗಿನ ಗಟ್ಟಿಭಾಗ, ವಾಸ್ತವತೆ, ಒಳಸಾಮರ್ಥ್ಯ. ಉದಾ: ಹುರುಳಿಲ್ಲದ ಮಾತು (ದೇಶ್ಯ- ಪುರುಳ್)

11. ಪೈಪೋಟಿ

(ಇ) ಪೋಟಾಟ, ಸ್ಪರ್ಧೆ. ಉದಾ: ನೌಕರಿ ಪೈಪೋಟಿಯಲ್ಲಿ ಗೆಲ್ಲುವುದು ಕಷ್ಟ. (ದೇಶ್ಯ- ಪೈ= ಮೇಲು+ ಪೋಟಿ= ಸ್ಪರ್ಧೆ)

12. ತೇವ

(ಈ) ನೀರಿನ ಪಸೆ, ಒದ್ದೆ. ಉದಾ: ತೇವ ತುಂಬಿದ ಗಾಳಿ. (ಸಂ. ತೇವ- ಒದ್ದೆ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	"	... ಉತ್ತಮ
11-12	"	... ಅತ್ಯುತ್ತಮ

ಡಾ. ಕೃಷ್ಣಾನಂದ ಕಾಮತರ
ಆತಿಥ್ಯವೈಖರಿ

ಶ್ರೀಮತಿ ಜ್ಯೋತ್ಸ್ನಾ ಕಾಮತ

(ಅವರ 'ಸಂಸಾರದಲ್ಲಿ ಸ್ವಾರಸ್ಯ' ಎಂಬ ಪುಸ್ತಕದಿಂದ)

ಸಂಗ್ರಹ: **ದುಷ್ಯಂತ.ಪುಣೆ**

ಸದಾಕಾಲ ತಮ್ಮ ಕೆಲಸದಲ್ಲಿಯೇ ಮೈಮರೆಯುವ ಇವರು ತಮ್ಮ ಊರಾದ ಹೊನ್ನಾವರದಲ್ಲಿ ಕೆಲ ವಾರವಾದರೂ ಹಾಯಾಗಿ ಇರಬೇಕೆಂದು ಕನಸು ಕಾಣುತ್ತಲೇ ಇರುತ್ತಾರೆ. ಒಮ್ಮೆ ಅಲ್ಲಿಗೆ ಹೋಗಲು ಒಪ್ಪಿಕೊಂಡೆ.

ಇವರೋ ಹೆಣ್ಣುಮಕ್ಕಳು ತವರು ಮನೆಗೆ ಹೋಗುವ ಉತ್ಸಾಹ ತಾಳಿ ಪ್ರವಾಸದ ರೂಪುರೇಖೆಗಳನ್ನು ಹಾಕಿಕೊಳ್ಳಲಾರಂಭಿಸಿದರು. ಅಲ್ಲಿಯ ಬಾಲ್ಯದ ಸ್ನೇಹಿತರಿಗೆ, ವಿವಾಹಿತ ಸೋದರಿಯರಿಗೆ, ಪತ್ರಮುಖೇನ ತಮ್ಮ ಬರವನ್ನು ಜಾಹೀರುಪಡಿಸಿದರು. ಅತ್ತೆಗೊಂದು ಒಳ್ಳೆಯ ರೇಷ್ಮೆ ಸೀರೆ, ಚಿಕ್ಕ ನಾದಿನಿಗೆ ಸಲವಾರ ಕಮೀಜ್, ಮಕ್ಕಳಿಗೆ ಬಾಬಾ ಸೂಟ್ ಖರೀದಿಸಲು ನಾನು ಆಗ್ರಹ ಮಾಡಿದೆ. ''ಯಾರ್‍ಯಾರಿಗೆ ಏನೇನು ಒಯ್ಯಬೇಕು ಎನ್ನುವುದು ನನಗೆ ಚೆನ್ನಾಗಿ ಗೊತ್ತು,'' ಎಂದು ನನ್ನ ಬಾಯಿ ಮುಚ್ಚಿಸಿದರು. ಆದರೆ ಬ್ಯಾಂಕಿನಿಂದ ಒಂದು ಪೈಸೆ ಕೂಡಾ ತಾರದಿದ್ದರಿಂದ ಹಣ ಎಲ್ಲಿಂದ ಜೋಡಿಸುತ್ತಿದ್ದಿರಬಹುದೆಂಬ ಸಂದೇಹ ನನ್ನನ್ನು ಕಾಡುತ್ತಿತ್ತು.

ಒಂದು ದಿಬ್ಬಣಕ್ಕಾಗುವಷ್ಟು ಜನ ನಮ್ಮ ಆಗಮನಕ್ಕಾಗಿ ಹೊನ್ನಾವರ ಬಸ್ ನಿಲ್ದಾಣದಲ್ಲಿ ಎದುರು ನೋಡುತ್ತಿದ್ದರು. ಇವರು ತಂದಿದ್ದ ಒಂದೇ ಸೂಟ್‌ಕೇಸಿನ ಅಂದಚೆಂದಕ್ಕೆ ಮರುಳಾಗಿ ಮಕ್ಕಳು ಹೊರಲು ನಾನು-ತಾನೆಂದು ನುಗ್ಗಿದರು. ಹೆಚ್ಚು ಸಾಮಾನು ಇರಲಿಲ್ಲ. ಆದ್ದರಿಂದ ಬಂದವರು ಸುಮ್ಮನ್ನೇ ಹೊತ್ತು ಮನೆಗೆ ಒಯ್ದು ರೇನು ಗತಿ? ಎಂದು ದಿಗಿಲಾಯಿತು!

ಮನೆಯಲ್ಲಿ, ತಮ್ಮ ನಿಯಂತ್ರಣದಲ್ಲಿಯೇ ಇಟ್ಟುಕೊಂಡ ದೊಡ್ಡ ಕೈ ಚೀಲದಿಂದ ಇವರು ಒಂದೊಂದೇ ಸಾಮಾನು ಹೊರಗೆಳೆಯಲಾರಂಭಿಸಿದಾಗ, ಮನೆಯವರೆಲ್ಲ ಬಂದು ಮುತ್ತಿಕೊಂಡರು. ವಾರಕ್ಕೊಮ್ಮೆ ಹಜಾಮನಿಂದ ದಾಡಿ ಮಾಡಿಸಿಕೊಳ್ಳುತ್ತಿದ್ದ ಮಾವನವರಿಗೆ ರೇಝರ್-ಬ್ಲೇಡಿನ ಪುಟ್ಟ ಸೆಟ್ ಕೊಟ್ಟಾಗ ಖುಷಿಯಿಂದಲೋ, ತಮಾಷೆಯಿಂದಲೋ ನಕ್ಕರು. ಅತ್ತೆಯವರ ಕೈಗೆ ಅವರ ಪ್ರೀತಿಯ ಸೇಜಿನ ಪೊಟ್ಟಣ ಹೋದಾಗ ಅಪೂರ್ವ ನಿಧಿಯೆಂಬಂತೆ ಒಳಕೋಣೆಯಲ್ಲಿ ಸೇರಿಸಿದರು. ನಾದಿನಿಗೆ ಬಟ್ಟೆಯ ಮೇಲೆ ಡಿಸೈನ್ ಬಿಡಿಸಲು ಕ್ರಾಯಾನ್ ಬಣ್ಣ ಮತ್ತು ಕುಂಚವನ್ನು ಕೊಟ್ಟಾಗ, ತನ್ನ ಕನಸು ನನಸಾಯಿತೆಂದು ಉದ್ಗರಿಸಿದಳು. ಮನೆಯ ಗೋಡೆಗಳ ಮೇಲೆಲ್ಲ ಇದ್ದಲಿನಿಂದ ಗೀಚುತ್ತಿದ್ದ ಪುತ್ತುವಿಗೆ ಬಣ್ಣದ ಚಾಕ್ ಪೆಟ್ಟಿಗೆ ಮತ್ತು ಹಾಳೆ ಕೊಟ್ಟಾಗ ಅವನ ಕಲಾಕುಸುರಿಗೆ ಹೊಸ

ಆಯಾಮ ದೊರೆತು ಕುಣಿದಾಡಿದ. ಲತಾಳ ಪಾಲಿಗೆ ಲೋಲಕ್ಕು, ಕೃಪಾಳ ಪಾಲಿಗೆ ಹೂವಿನ ಕ್ಲಿಪ್ ಬಂದುವು. ಚೀಲದ ಅಡಿಯಲ್ಲಿದ್ದ ಪೇರಲ ಹಣ್ಣಿನ ರಾಶಿ, ಎಲ್ಲರ ಬಾಯಲ್ಲಿ ನೀರೂರಿಸಿತು. ತಮ್ಮವರನ್ನೆಲ್ಲ ಖುಷಿಗೊಳಿಸಲು ಇವರು ಮೂವತ್ತು ರೂಪಾಯಿ ಕೂಡಾ ಖರ್ಚು ಮಾಡಿರಲಿಲ್ಲ! ಸಂಬಂಧಿಕರು ಇಲ್ಲವೆ ಗುರುತಿನವರ ಮನೆಗೆ ಹೋದಾಗ ಏನಾದರೂ ಕೊಡಬೇಕಲ್ಲ ಎಂಬ ಮನೋಭಾವದಿಂದ ಅದು, ಇದನ್ನು ಒಯ್ಯುವುದಕ್ಕಿಂತ, ಅವರವರಿಗೆ ಯಾವುದು ಪ್ರೀತಿಯೋ ಅದನ್ನೇ ಒಯ್ಯಬೇಕೆನ್ನುವ ಇವರ ಲೆಕ್ಕಾಚಾರದಿಂದ ಮೋಜೆನಿಸಿತು.

ಆ ಒಂದು ತಿಂಗಳಿನ ರಜಾ ದಿನಗಳು ಹೇಗೆ ಕಳೆದುವೆಂದು ತಿಳಿಯಲೇ ಇಲ್ಲ. ಹೊರಟು ನಿಂತಾಗ ಆರು ಆಳು ಹೊರುವಷ್ಟು ಸಾಮಾನುಗಳು ನಮ್ಮೊಡನೆ ಹೊರಡಲು ಸಿದ್ಧವಾಗಿದ್ದವು. ''ಪ್ರತಿವರ್ಷವೂ ಹೀಗೇ ಬರುತ್ತಿರು. ಆತ್ಮೀಯತೆ ಹೆಚ್ಚುತ್ತದೆ,'' ಎಂದು ಎಲ್ಲರೂ ಒಕ್ಕೊರಲಿನಿಂದ ಸಾರಿದರು.

ಮುಂಬಯಿಯಲ್ಲಿ ....

ಮರುವರ್ಷ ಚೇಂಜ್ ಇರಲಿ ಎಂದು, ನನ್ನ ಸೋದರಮಾವನಲ್ಲಿ ಹೋಗೋಣ ಎಂದು ಪಟ್ಟು ಹಿಡಿದೆ. ಅವರು ಬಡ ಕುಟುಂಬದಲ್ಲಿ ಹುಟ್ಟಿ ತಮ್ಮ ಬುದ್ಧಿಮತ್ತೆ ಹಾಗೂ ದುಡಿತಗಳಿಂದಲೇ ಮುಂಬಯಿಯ ಮಹಾನಗರದ ಕಮೀಶನರ್ ಪದಕ್ಕೆ ಏರಿದ್ದರು. ಕೆಲ ದಿನಗಳ ಮಟ್ಟಿಗೆ ಅವರಲ್ಲಿ ಬರುವ ವಿಚಾರವಿದೆ, ಎಂದು ಬರೆದದ್ದಕ್ಕೆ ಟೈಪ್ ಆದ ಉತ್ತರ ಬಂದಿತು. ''ಸದ್ಯಕ್ಕೆ ನಮ್ಮ ಅಡಿಗೆಯವಳು ಕಾಯಿಲೆ ಬಿದ್ದಿದ್ದಾಳೆ. ಡ್ರೈವರನು ಊರಿಗೆ ಹೋಗಿದ್ದಾನೆ. ನಾವು ರಜೆಯಲ್ಲಿ ಕಾಶ್ಮೀರಕ್ಕೆ ಹೋಗಲಿದ್ದೇವೆ. ಮುಂದಿನ ತಿಂಗಳ ಮೊದಲ ವಾರದಲ್ಲಿ ಬನ್ನಿ. ಪ್ರಥಮ ವರ್ಗದಲ್ಲಿ ಪ್ರವಾಸ ಮಾಡಿದರೆ ಉತ್ತಮ. ಆಯಾಸವಾಗಲಾರದು. ಉತ್ತಮವಾದ ಬಟ್ಟೆ ಬರೆಗಳನ್ನು ತಪ್ಪದೇ ತನ್ನಿ. ಇಲ್ಲಿ ಅವುಗಳ ಅವಶ್ಯಕತೆ ಹೆಚ್ಚು'' ಎಂದು ವಿಶೇಷ ಸೂಚನೆ ಬರೆದಿದ್ದರು! ಇಂಥ ಆತಿಥ್ಯ ನಮಗೆ ಬೇಕೆ? ಎಂದು ಇವರು ವಕ್ರವಾಗಿ ನುಡಿದಾಗ, ''ನಮ್ಮ ಬಾಲ್ಯದಲ್ಲಿ ಅವರು ಹಲವು ಬಾರಿ ಸಹಾನುಭೂತಿ, ಕಳಕಳಿ ತೋರಿದ್ದಾರೆ. ಕೃತಜ್ಞತೆ ಸೂಚಿಸುವುದಕ್ಕಾದರೂ ಒಮ್ಮೆ ಹೋಗಿ ಬರಲೇಬೇಕು,'' ಎಂದೆ. ಬ್ಯಾಂಕಿನಲ್ಲಿಟ್ಟ ಹಣವನ್ನೆಲ್ಲ ಪಡೆದು ಮುಂಬೈಗೆ ಹೋಗುವ ತಯಾರಿಗೆ ಪ್ರಾರಂಭಿಸಿದೆವು.

ಇವರಿಗಾಗಿ ಸ್ಪೇಶಲ್ ಸೂಟ್ ಹೊಲಿಸಿದ್ದಾಯಿತು. ಮನೆಯ ಡ್ರೆಸ್ ಎಂದು ಪಾಜಾಮಾ, ಡ್ರೆಸಿಂಗ್ ಗೌನ್, ಮ್ಯಾಕ್ಸಿಗಳನ್ನು ಖರೀದಿಸಿದ್ದಾಯಿತು. ಕೊಂಡ ನಾಲ್ಕು ಬೆಂಗಳೂರು, ಮೈಸೂರು, ಕಾಂಜೀವರಂ ಸೀರೆಗಳಿಗೆಲ್ಲ ಒಪ್ಪುವ ರವಿಕೆ ಪೆಟಿಕೋಟ್ ಹೊಲಿಸಿದ್ದಾಯಿತು. ಸೋದರತ್ತೆ ಮತ್ತು ಮಗಳಿಗಾಗಿ ನಮ್ಮ ಆರ್ಥಿಕ ಸ್ಥಿತಿಗೆ ಮೀರಿ ಮೂರು ಸೀರೆಗಳನ್ನು ಕೊಂಡದ್ದಾಯಿತು. ಸಾಮಾನು ತುಂಬಲು ಅತ್ಯಾಧುನಿಕವೆನಿಸಿದ ಸೂಟ್‌ಕೇಸ್ ಕೊಂಡಾಯಿತು, ಹೊಸ ಬಟ್ಟೆ ಬರೆಗಳನ್ನು ಪ್ರವಾಸಾರಂಭದಲ್ಲೇ ಧರಿಸಬೇಕೆ? ಎಂಬುದರ ಬಗ್ಗೆ ಭಿನ್ನಾಭಿಪ್ರಾಯವಾಗಿ ಯಾವ ತೀರ್ಮಾನವನ್ನೂ ಕೈಗೊಳ್ಳಲಾಗಲಿಲ್ಲ. ಯಾವ ಹಳೇ ಬಟ್ಟೆಯನ್ನೂ ಜತೆಗೆ ಒಯ್ಯಬಾರದೆಂದು ಮಾತ್ರ, ಒಮ್ಮತದ ನಿರ್ಧಾರಕ್ಕೆ ಬಂದೆವು.

ರವಿವಾರವಾದ್ದರಿಂದ, ಸೋದರಮಾವನವರೇ ಕರೆಯಲು ಸ್ಟೇಶನ್ನಿಗೆ ಬರಬಹುದೆಂಬ ನಂಬಿಕೆ ಸುಳ್ಳಾಯಿತು. ನಾವೇ ಟ್ಯಾಕ್ಸಿ ಮಾಡಿಕೊಂಡು ಅವರಲ್ಲಿ ಹೋಗುವುದೆಂದು ಮೊದಲೇ ತಿಳಿದಿದ್ದರೆ, ಎರಡನೇ ವರ್ಗದಲ್ಲೆ ಪ್ರಯಾಣಿಸಿ ಎಷ್ಟೊಂದು ಹಣ ಉಳಿಸಬಹುದಾಗಿತ್ತು ಎಂದು ಇವರು ಗೊಣಗಿದರು. ಕಾರ್ಮೈಕೆಲ್ ರಸ್ತೆಯಲ್ಲಿ ಅಂತಸ್ತಿನ ಭವ್ಯ ಬಂಗಲೆಯೆದುರು ಟ್ಯಾಕ್ಸಿ ನಿಂತಾಗ ದ್ವಾರಪಾಲಕನು ಗೇಟು ತೆರೆಯಲು ಒಪ್ಪಲೇ ಇಲ್ಲ. ಸಾಹೇಬರ ಹತ್ತಿರ ಫೋನಿನಲ್ಲಿ ಮಾತನಾಡಿ, ಬಂದವರು ತಮ್ಮವರೇ ಎಂದು ಅವರಿಂದ ಖಾತ್ರಿಯಾದ ಮೇಲೆ ಧಾವಿಸಿ ಬಂದು



ನೋಡಿ, ನಾವು ಪೆಟ್ರೋಲ್ ಬೆಲೆ ಏರಿಸಿ-ರೋದು ಒಂದು ಒಳ್ಳೆಯ ಉದ್ದೇಶದ ಆಧಾರದ ಮೇಲೆ. ಇನ್ನು ಮೇಲೆ ಜನ Cycle for health ಅನ್ನೋದ್ರು ಕಡೆ ಗಮನ ಕೊಡಲಿ ಅಂತ

ಸಾಮಾನು ಕೆಳಗಿಳಿಸಿ, ಕೋಣೆಯಲ್ಲಿ ತಂದಿಟ್ಟ. ಅತಿಥಿಗೃಹದ ಕೋಣೆಯನ್ನು ತೋರಿಸಿದವನೇ ಅದೃಶ್ಯನಾಗಿಬಿಟ್ಟ, ''ಕೈಕಾಲು ತೊಳೆದುಕೊಳ್ಳಿ, ಸ್ನಾನ ಮಾಡಿ, ಬಾಯಾರಿಕೆಗೆ ಬೇಕೇ? ಚಹ ಕುಡಿಯಲು ಬನ್ನಿ'' ಎಂದು ಹೇಳುವವರು ಯಾರೂ ಇಲ್ಲದೇ ಮುಖ ಮುಖ ನೋಡಿಕೊಂಡು ಪೆಚ್ಚಾಗಿ ನಕ್ಕೆವು.

ಅರ್ಧ ಗಂಟೆಯ ನಂತರ, 'ಮೇಮ್ ಸಾಹೇಬರು ತಮ್ಮನ್ನು ನೋಡಲು ಬಯಸುತ್ತಾರೆ' ಎಂದು ಆಳೊಬ್ಬ ಅವರ ಕೋಣೆಗೆ ಕರೆದೊಯ್ದ; ಈ ಮುಂಜಾವಿನಲ್ಲಿ ಷೋಡಶಾಲಂಕಾರಗಳಿಂದ ಸಜ್ಜಾದ ಗೃಹಿಣಿಯನ್ನು ನೋಡಿ ಅವಾಕ್ಕಾದೆ. ಆಗಷ್ಟೇ ಮುಗಿಸಿ ಬಂದಿದ್ದ ಸ್ವಿಝರ್ಲಂಡ್ ಯಾತ್ರೆ ಬಗ್ಗೆ, ಒಂದು ತಾಸಿನ ತನಕ ಕೊರೆದರು. ನಡುವೆಯೇ ''ಕ್ಷಮಿಸಿ, ಸ್ವಲ್ಪ ಬಾತ್‌ರೂಮಿಗೆ ಹೋಗಬೇಕಾಗಿತ್ತು'' ಎಂದೆ. ''ಅರೇ! ನೀವು ಈಗ ತಾನೆ ಬಂದಂತೆ ಕಾಣುತ್ತದೆ. ನಮ್ಮಲ್ಲಿ ಬರುವ ಅತಿಥಿಗಳೆಲ್ಲ ಸಾಮಾನ್ಯವಾಗಿ ಹೊಟೇಲುಗಳಲ್ಲಿ ಸ್ನಾನ, ನಾಶ್ತಾ ಮುಗಿಸಿಯೇ ಬರುವು ದರಿಂದ ಆ ದಿಕ್ಕಿನಲ್ಲಿ ಯೋಚಿಸಲೇ ಇಲ್ಲ. ಏಕನಾಥ್!'' ಎಂದು ಆಳನ್ನು ಕೂಗಿ ಬಚ್ಚಲು ತೋರಿಸಲು ಹೇಳಿ, ಸ್ನಾನಕ್ಕೆ ನೀರು, ನಾಸ್ತಾ ಕೊಡಲು ಆಜ್ಞಾಪಿಸಿದರು. ಅಂತೂ ಮನೆಗೆ ಬಂದ ಎರಡು ಗಂಟೆಯ ನಂತರ, ಹೆಚ್ಚಿಗೆ ಸುಟ್ಟ ಟೋಸ್ಟ್ ಜಾಮ್, ಆರಿದ ಚಹಾಗಳು ದೊರೆತಾಗ, ಆತಿಥ್ಯ ಇನ್ನೂ ಉಳಿದುಕೊಂಡಿದೆ ಅನಿಸಿತು. ಮನೆಯ ಯಜಮಾನಿ ಊಟದ ಮನೆಯವರಿಗೂ ಆಗ ಮಿಸಿ, ''ಸಾವಕಾಶ ನಾಸ್ತಾ ಮಾಡಿ, ಅವಸರವಿಲ್ಲ .... ಮಧ್ಯಾಹ್ನ ನಮಗೆಲ್ಲ ಮದುವೆ ಊಟಕ್ಕೆ ಆಮಂತ್ರಣವಿದೆ. ನೀವು ಏನು ಮಾಡುತ್ತೀರಾ?'' ಎಂದು ರಾಗವೆಳೆದರು. ನಾನು ''ಏನೂ ಯೋಚಿಸಬೇಡಿ ಮಾಮಿ, ನಮ್ಮ ಊಟದ ಏರ್ಪಾಡು ನಾವೇ ಮಾಡಿಕೊಳ್ಳುತ್ತೇವೆ'' ಎಂದಾಗ ಖುಷಿಪಟ್ಟರು.

ಪರಿವಾರವೆಲ್ಲ ಕಾರಿನಲ್ಲಿ ಹೊರಟ ನಂತರ, ಅಡಿಗೆಯವನಿಗೆ ಏನೇನು ಸಾಮಗ್ರಿಯಿದೆ ಎಂದು ವಿಚಾರಿಸಿದಾಗ, ಮೇಮ್ ಸಾಹೇಬರು, ನಾಲ್ಕು ಆಲೂಗಡ್ಡೆ, ಎರಡು ಈರುಳ್ಳಿ, ಆರು ಚಪಾತಿಯ ಹಿಟ್ಟನ್ನು ಹೊರಗೆ ಇಡಿಸಿ ಉಗ್ರಾಣಕ್ಕೆ ಬೀಗ ಜಡಿದಿದ್ದಾರೆ ಎಂದ. ಕೊಟ್ಟ ಸಾಮಾನುಗಳಿಂದ ಆಲೂಗಡ್ಡೆ ಪಲ್ಯ, ಚಪಾತಿ ಮಾಡಿ ಊಟ ಮುಗಿಸಲು ಅವನಿಗೆ ಹೇಳಿ, ನಾವು ಹತ್ತಿರದ ಹೊಟೇಲಿಗೆ ಹೋಗಿ, ತಂದೂರಿ ಚಿಕನ್, ಪರಾಠ, ಸಾಮೋಸಗಳ ಭರ್ಜರಿ ಊಟ ಮುಗಿಸಿ ಹಿಂದಿರುಗಿದೆವು. ಕಾಲು ನಡಿಗೆಯಲ್ಲಿ ಹೋಗಿ ದರವಾನ, ವಾಚಮನ್‌ಗಳಿಗೆ ಮೀಸಲಾದ ಇರಾನಿ ಹೋಟ್ಲಿನಲ್ಲಿ ಅತಿಥಿಗಳು ಊಟ ಮಾಡಿದರೆಂದು ಸಾಹೇಬರಿಗೆ ಗೊತ್ತಾದರೇನು ಗತಿ? ಎಂದು ಆಳು, ಅಡಿಗೆಯವರು ನಡುಗುತ್ತ ಆಕ್ಷೇಪಿಸಿದರು. ಒಳ್ಳೆ ಪೇಚಿಗೆ ಸಿಕ್ಕಿಕೊಂಡೆವಲ್ಲ? ಇಲ್ಲಿಂದ ಪಲಾಯನವೊಂದೇ ಮಾರ್ಗ, ಇವರ ಆಪ್ತರಲ್ಲಿ ಹೋಗೋಣವೆಂದು, ಮಾಮಿ ಪರಿವಾರ ವಾಪಸ್ಸಾದ ಮೇಲೆ ಸೂಚಿಸಿದೆ. ''ಎಲ್ಲಾದರೂ ಉಂಟೆ? ಇಂದು ಸಂಜೆ ನಮ್ಮಲ್ಲಿ ದೊಡ್ಡ ಭೋಜನ ಕೂಟವಿದೆ. ಅನಾಯಾಸವಾಗಿ ಬಂದಿದ್ದೀರಿ. ಅದನ್ನು ನೋಡಿ

ಕೊಂಡೇ ನಾಳೆ ಬೆಳಿಗ್ಗೆ ಹೋಗಬಹುದಂತೆ'' ಎಂದು ಔದಾರ್ಯ ತೋರಿದರು. ತಿಂಗಳ ವಾಸ್ತವ್ಯ ಹೂಡಲು ಮುಂದಾಗಿ ತಿಳಿಸಿ ಬಂದವರಿಗೆ, ಒಂದೇ ದಿನದಲ್ಲಿ ಜಾರಿ ಹೋಗುವಂತೆ ಮಾಡಿದ ಗೃಹಿಣಿಯ ಚಾತುರ್ಯಕ್ಕೆ ತಲೆದೂಗಿದೆ.

ಅವರಿಗಾಗಿ ತಂದ ಸೀರೆ ಕೊಟ್ಟಾಗ ಅಸಮಾಧಾನದ ಗೆರೆ ಮುಖದಲ್ಲಿ ಮೂಡಿ ಮಾಯವಾಯಿತು. ''ಇದು ಕಾಂಜೀವರಂ ಅಲ್ಲ. ಬೆಂಗಳೂರಿನದು ತಾನೆ? ನೇಯ್ಗೆ ಜಾಳಾಗಿ, ನೋಟಕ್ಕೆ ಅಗ್ಗವಾಗಿ ತೋರುತ್ತಿದೆ!'' ಎಂದಾಗ ಪಾತಾಳಕ್ಕೆ ಇಳಿದು ಹೋದೆ. ದೊಡ್ಡವರ ಸಹವಾಸ ಸಲ್ಲ ಎಂದು ಮುಂಚಿತವಾಗಿ ಇವರು ನೀಡಿದ ಸೂಚನೆ ಮನ್ನಿಸಬೇಕಾಗಿತ್ತು ಎಂದೆನಿಸಿತು. ಜೊತೆಗೆ ತಂದ ನನ್ನ ನಾಲ್ಕು ಸೀರೆ ಸೇರಿಸಿದೆ. ''ಮಗಳು ಆಯ್ದುಕೊಳ್ಳಲಿ'' ಎಂದು ಆಳಿನ ಕೈಯಲ್ಲಿ ಮಗಳ ರೂಮಿಗೆ ನಾಲ್ಕೂ ಸೀರೆಗಳನ್ನು ಕಳಿಸಿ, ತಿರುಗಿ ಬರುತ್ತ ಆಲ್ಬಮ್ ತರಲು ಹೇಳಿದರು. ಒಂದೊಂದಾಗಿ ಫೋಟೋ ತೋರಿಸುತ್ತ, ಇದು ಶ್ರೀನಗರದಲ್ಲಿ, ಆಗ್ರಾದಲ್ಲಿ, ಸಿಮ್ಲಾದಲ್ಲಿ, ಲಂಡನ್‌ನಲ್ಲಿ ಎಂದು; ನಂತರ ಪ್ರಧಾನಿಯೊಂದಿಗೆ, ರಾಷ್ಟ್ರಪತಿಯವರೊಂದಿಗೆ, ರಾಜೇಶ್‌ಖನ್ನಾ, ದಿಲೀಪ್ ಕುಮಾರರೊಂದಿಗೆ ಎಂದು ಸಮಾಜದಲ್ಲಿ ತಮಗಿರುವ ಅಂತಸ್ತು, ಸ್ಥಾನಮಾನಗಳನ್ನು ಪರಿಚಯಿಸಲಾರಂಭಿಸಿದರು. ''ನಾವು ಯಾವ ಚಲಚ್ಚಿತ್ರ ಮಂದಿರದಲ್ಲೂ ತಿಕೇಟು ಕೊಳ್ಳಬೇಕಾಗಿಲ್ಲ. ವಿ.ಐ.ಪಿ. ಸಮಾರಂಭ ಯಾವುದಿದ್ದರೂ ಆಮಂತ್ರಣವಿರದೇ ಇರುವುದಿಲ್ಲ. ಅಂತಾರಾಷ್ಟ್ರೀಯ ಮಟ್ಟದ ಡಿನ್ನರ್‌ಗಳು ತಿಂಗಳಿಗೆ ನಾಲ್ಕಾರಾದರೂ ಇರುತ್ತವೆ!'' ಎಂದರು.

ಆರು ಗಂಟೆಗೆ ಬ್ಯೂಟಿ ಪಾರ್ಲರ್‌ನಿಂದ ಹಿಂದಿರುಗಿದ ತಾಯಿ ಮಗಳು ಪರಿಚಯ ಹತ್ತದಷ್ಟು ಅಲಂಕೃತವಾಗಿದ್ದರು! ಮುಡಿ ಹಾಕಿದ್ದಕ್ಕೆ ಐವತ್ತು ರೂಪಾಯಿ, ಹುಬ್ಬು ತೀಡಿದ್ದಕ್ಕೆ ಹತ್ತು ರೂಪಾಯಿ, ಮುಖಕ್ಕೆ ಮಸಾಜ್ ಮಾಡಿ ಬಣ್ಣ ಲೇಪಿಸಿದ್ದಕ್ಕೆ ನೂರು ರೂಪಾಯಿ ಎಂದು ಲೆಕ್ಕಾಚಾರ ಹೇಳಿದರು. ''ಆದರೆ ಸಾಹೇಬರೇ ಈ ಪಾರ್ಲರಿನ ಉದ್ಘಾಟನೆ ನೆರವೇರಿಸಿದ್ದರಿಂದ ನಮ್ಮಿಂದ ಒಂದು ಕಾಸೂ ಸ್ವೀಕರಿಸುವುದಿಲ್ಲ'' ಎಂದು ಹೆಮ್ಮೆಯಿಂದ ಸಾರಿದರು. ನನ್ನ ಎರಡು ಜಡೆ ನೋಡಿ, ''ಹಿಂದೊಮ್ಮೆ ಕೇಶರಾಶಿ, ಸೌಂದರ್ಯದ ಕುರುಹಾಗಿತ್ತು. ಆದರೆ ಕಾಲ ಬದಲಾಗಿದೆ. ಈಗ ಕೂದಲು ಕತ್ತರಿಸುವುದೇ ಪ್ರಚಲಿತ ಫ್ಯಾಷನ್. ಬಾಯ್‌ಕಟ್, ತೀರ ಚಿಕ್ಕ ಕೂದಲು ಲೇಟೆಸ್ಟ್ ಕ್ರೇಝ್ ಎಂದು ಪಿಂಕಿ ಹೇಳುತ್ತಾಳೆ. ಈ ಸಂಜೆ ಬರಲಿರುವ ಹೆಂಗಳೆಯರನ್ನು ನೋಡಿದರೆ ನಿನಗೇ ಗೊತ್ತಾಗುತ್ತದೆ-ಟ್ರೆಂಡ್. ಬೆಂಗಳೂರಿಗೆ ಹೋದ ನಂತರ ನಿನ್ನ ಹಂದಿ ಬಾಲಗಳಿಗೆ ಮೋಕ್ಷ ಕಾಣಿಸು,'' ಎಂದು, ಅರ್ಧ-ಹಾಸ್ಯ, ಅರ್ಧ ಗಂಭೀರ ಧ್ವನಿಯಲ್ಲಿ ಮಾಮಿ ನುಡಿದರು. ಮಾಂಗಲ್ಯದ ಬಗ್ಗೆ ಏನೇನೋ ನಂಬಿಕೆ ಇಟ್ಟುಕೊಂಡವಳಿಗೆ ಇದರಿಂದ ಆಘಾತವಾಗಿ, ಬಚ್ಚಲಿಗೆ ಓಡಿ ಕಣ್ಣೀರು ಹಾಕಿ ಮನಸ್ಸನ್ನು ಹಗುರವಾಗಿಸಬೇಕಾಯಿತು.

ಆಫೀಸ್ ಕಾರಿನಲ್ಲಿ ಬಂದಿಳಿದ ಸೋದರಮಾವನವರು ''ಹೇಗಿದ್ದೀಯಾ? ಗಂಡ ಹೇಗಿದ್ದಾನೆ? ಪ್ರವಾಸ ಹೇಗಾಯಿತು? ಯಾವುದಕ್ಕೂ ಸಂಕೋಚ ಬೇಡ. ಆರಾಮಾಗಿ ನಾಲ್ಕು ದಿನ ಇದ್ದು ಹೋಗಿ'' ಎಂದು ಉಪಚರಿಸಿದರು. ಅಷ್ಟರಲ್ಲಿ ಗಣ್ಯರೊಬ್ಬರ ಫೋನ್ ಬಂದಿತೆಂದು ಅತ್ತ ಗಮನ ಹರಿಸಿದರು. ಇವರು ಎಲ್ಲಿಯೂ ಕಾಣದ್ದರಿಂದ ಹಿಂಬದಿಯ ಗಾರ್ಡನ್ನಿಗೆ ಹೋದೆ. ಅಲ್ಲಿ ಕಾಗೆ ಸಂಸಾರವನ್ನು ಏಕಚಿತ್ತದಿಂದ ನೋಡುತ್ತ ಇವಾವುದರ ಸಂಬಂಧವಿಲ್ಲವೆಂಬಂತಿದ್ದರು. ''ಈ ಕಾಗೆಯನ್ನು ನೋಡು. ಕಮೀಷನರ್ ಅಲ್ಲದಿದ್ದರೂ, ಕಾರು, ಬಂಗಲೆ, ಅಡಿಗೆಯವ, ಆಳು-ಕಾಳು ಇಲ್ಲದಿದ್ದರೂ, ಸುಖ-ಸಂತೋಷಕ್ಕೆ ಆತ್ಮಾಭಿಮಾನಕ್ಕೆ ಏನೇನೂ ಕೊರತೆಯಿಲ್ಲ'' ಎಂದು ಮಾರ್ಮಿಕವಾಗಿ ಹೇಳಿದರು. ''ದಾಡಿ ಮಾಡಿಕೊಂಡು ಸೂಟ್ ಧರಿಸಿ ಪಾರ್ಟಿಗೆ ಸಿದ್ಧರಾಗಿ,'' ಎಂದು ಹೇಳಬಂದವಳು, ಹೆಣ್ಣು ಕಾಗೆ, ಗಂಡು ಕಾಗೆಯ ಹೇನು ಹೆಕ್ಕುವುದನ್ನು



ನೋಡುತ್ತ ನಿಂತೆ. ಅಷ್ಟರಲ್ಲಿ ಜವಾನನು ಓಡುತ್ತ ಬಂದು ''ಮೇಮ್ ಸಾಬ್‌ರು ನಿಮ್ಮನ್ನು ಕೂಗುತ್ತಾರೆ'' ಎಂದು ಕರೆದುಕೊಂಡೇ ಹೋದ. ತಾವು ಗಣ್ಯ ಅತಿಥಿಗಳನ್ನು ಸ್ವಾಗತಿಸುವಾಗ ಅಡಿಗೆ ಮನೆ ಮೇಲ್ವಿಚಾರಣೆ ಮಾಡಲು ಅವರಿಗೆ ನನ್ನ ಸಹಾಯ ಬೇಕಿತ್ತು, ಅಲ್ಲಿಯೂ ಜೋಡಿಸಿದ್ದ ಪ್ಲೇಟುಗಳು, ಗ್ಲಾಸುಗಳು, ಪಾತ್ರೆಗಳು ಆಕರ್ಷಕವಾಗಿದ್ದವೇ ಹೊರತು ಅಡಿಗೆಯಲ್ಲ.

ದೊಡ್ಡ ಹಾಲಿನಲ್ಲಿ ಟೇಬಲ್ಲುಗಳನ್ನು ವ್ಯವಸ್ಥಿತವಾಗಿ ಮಂಡಿಸಿ, ಮೇಲ್ಹಾಸು ಹಾಕಿ, ಅಡಿಗೆಯ ಮತ್ತಿತರ ಪರಿಕರಣಗಳನ್ನು ಹೊಂದಿಸಿ ಇಟ್ಟರು, ಒಂದರಲ್ಲಿ ಗೋಲಾಕಾರವಾಗಿ ಕತ್ತರಿಸಿದ ಸೌತೆಕಾಯಿ, ಇನ್ನೊಂದರಲ್ಲಿ ಟೊಮ್ಯಾಟೊ, ಮತ್ತೊಂದರಲ್ಲಿ ಈರುಳ್ಳಿ ಹೋಳುಗಳು. ಬಿಳಿ ಅನ್ನ, ಹಳದಿ ಅನ್ನ, ಹಸಿರು ಅನ್ನ, ಕೆಂಪು ಅನ್ನದ ಪ್ರಕಾರಗಳು. ಬೇಳೆ, ಪಲ್ಯ, ಏನೋ ಸಿಹಿ ಬಾಳೆ ಹಣ್ಣುಗಳು, ಉಪ್ಪಿನಕಾಯಿ ಇದ್ದವು. ಅಡಿಗೆ ಮನೆಯಲ್ಲಿದ್ದ ಆಹಾರ ಮೂವತ್ತು ಜನರಿಗೆ ಸಾಲುವಷ್ಟು ಇತ್ತು. ಆದರೆ ಬಂದವರು ನೂರಾರು ಜನ. ಇದು ಭೋಜನ ಕೂಟವೇ ಫ್ಯಾಶನ್ ಪರೇಡೇ ಹೇಳುವುದು ಕಷ್ಟದ್ದಾಯಿತು. ಸರ್ಜನ್ನರ ಪತ್ನಿ, ಮೇಯರರ ಪತ್ನಿ, ನ್ಯಾಯಾಧೀಶರ ಪತ್ನಿಯರೆಲ್ಲ ಮಾತಿನಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿರುವರೆಂಬುದು ಸ್ಪಷ್ಟವಾಯಿತು. ಸೋದರಮಾವನ ಮಗಳು ಪಿಂಕಿ, ''ನನ್ನ ಮಮ್ಮಿ ಬೆಂಗಳೂರ ಆಂಟಿಯಿಂದ ನನಗಾಗಿ ನಾಲ್ಕು ಅತ್ಯಂತ ಸುಂದರ ಸೀರೆ ತರಿಸಿದ್ದಾರೆ'' ಎಂದು ತೋರಿಸಲು ಸ್ನೇಹಿತೆಯರನ್ನು ರೂಮಿಗೆ ಕರೆದೊಯ್ದಳು. ನಾನು ಸಿಡಿಲೆರಗಿದಂತೆ ಆಗಿ ನಿಂತಿದ್ದೆ. ಹತ್ತಿ ತೂಗುವಲ್ಲಿ ನೊಣಕ್ಕೆ ಉಪವಾಸ - ಎಂಬಂತೆ ಇತ್ತು ನನ್ನ ಸ್ಥಿತಿ. ಮಿತಭಾಷಿಯಾದ ಇವರು ಜನರೊಟ್ಟಿಗೆ ಬೆರೆಯಲಿ ಎಂದು ಒತ್ತಾಯದಿಂದ ಮುಂಬೈಗೆ ಹೊರಡಿಸಿಕೊಂಡು ಬಂದು ತಪ್ಪು ಮಾಡಿದೆನೆಂದು ಮರುಗಿದೆ. ಅಧಿಕಾರ, ಸಿರಿವಂತಿಕೆಯ ಟೊಳ್ಳುತನಗಳನ್ನು ಹತ್ತಿರದಿಂದ ಕಾಣುವಂತೆ ಆಯಿತು.

ಪಾತ್ರೆಗಳೆಲ್ಲ ಬರಿದಾಗಿದ್ದರೂ ಯಜಮಾನತಿ, ಯಾರೂ ಏನೂ ತಿನ್ನುತ್ತಿಲ್ಲವಲ್ಲ? ಎಂದು ಉಪಚರಿಸುತ್ತಲೇ ಇದ್ದರು. ಹಿತ್ತಿಲ ಬಾಗಿಲಿನಿಂದ ತರಿಸಿದ ನಾಲ್ಕಾರು ಬ್ರೆಡ್, ಮೊಟ್ಟೆಯ ಪಲ್ಯಗಳು ಟೇಬಲ್ಲಿಗೆ ಬಂದವು, ಎನ್ನುವದರೊಳಗೆ ಮಾಯವಾದವು.

ಬಂದ ಅತಿಥಿಗಳೆಲ್ಲ ಬೀಳ್ಕೊಳ್ಳುವಾಗ, 'ಅಡಿಗೆ ಎಷ್ಟೊಂದು ಸ್ವಾದಿಷ್ಟದಾಗಿತ್ತು! ನಿಮ್ಮ ಕೈ ಅಡಿಗೆಯ ಖ್ಯಾತಿ ಕೇಳಿಯೇ ಉಣ್ಣಲೆಂದು ಬಂದೆವು. ನಿಮ್ಮದು ನಳಪಾಕ,' ಎಂದು ಹೇಳಿದಾಗ ಅತಿಥಿಗಳ ಟೊಳ್ಳುತನದ್ದೂ ಪರಿಚಯವಾಯಿತು. ''ಅಡಿಗೆ ಬಹಳ ರುಚಿಕಟ್ಟಾಗಿರಬೇಕು. ಅಂತೆಯೇ ಏನೂ ಮಿಕ್ಕಲಿಲ್ಲ!'' ಎಂದು ಗೊಣಗುತ್ತ ಅಡಿಗೆ ಮನೆಗೆ ಬಂದ ಗೃಹಿಣಿ, ಅರ್ಥಗರ್ಭಿತವಾಗಿ ನಮ್ಮತ್ತ ನೋಡಿದರು. ''ಮಧ್ಯಾಹ್ನ ತಡವಾಗಿ ತಂದೂರಿ ಚಿಕನ್ ತಿಂದಿದ್ದೆವು. ಇನ್ನೂ ಜೀರ್ಣವಾಗಿಲ್ಲ. ಏನೂ ಹಸಿವೆಯಿಲ್ಲ, ಯೋಚಿಸಬೇಡಿ'' ಎಂದಾಗ ಅವರ ಮುಖದಲ್ಲಿ ಗೆಲುವು ಕಾಣಿಸಿತು. ಅಡಿಗೆಯವರು ತಮ್ಮ ಪಾಲನ್ನು ಮೊದಲೇ ತೊಡೆದಿರುತ್ತಾರೆ! ಎಂದು ಉಳಿದ ಚೂರುಪಾರು ತಾವು ಮುಗಿಸಿ

ಮಲಗಲು ತೆರಳಿದರು.

ಹಸಿದ ಹೊಟ್ಟೆಯಲ್ಲೂ ಸುಖನಿದ್ರೆಯಲ್ಲಿದ್ದ ಇವರನ್ನು ನೋಡಿದಾಗ ಎಂಥ ಸಾಧುಪ್ರಾಣಿ! ಅನಿಸಿತು. ಬೆಳಿಗ್ಗೆ ನಾಲ್ಕು ಗಂಟೆಗೆ ಎಚ್ಚರವಾದರೂ ಒಂದು ಲೋಟ ಕಾಫಿ ಮಾಡಿ ಕುಡಿಯುವ ಸ್ವಾತಂತ್ರ್ಯ ಆ ಮನೆಯಲ್ಲಿ ಇರಲಿಲ್ಲ. ಅಡಿಗೆಯವನನ್ನು ಎಬ್ಬಿಸೋಣವೆಂದರೆ ಅಡಿಗೆ ಮನೆಗೇ ದೊಡ್ಡ ಬೀಗ ಜಡಿದಿದ್ದರು. ಮುಂದೇನು ಮಾಡುವುದೆಂದು ತಲೆಯ ಮೇಲೆ ಕೈ ಹೊತ್ತು ಕುಳಿತಾಗ, ಇವರು ಮೊದಲು ಈ ಸುವರ್ಣ ಪಂಜರದಿಂದ ಹೊರಗೆ ಹೋಗೋಣ. ನಂತರ ಮುಂದಿನದನ್ನು ನಿರ್ಧರಿಸೋಣ ಎಂದು ಸೂಚಿಸಿದರು. ಸೋದರಮಾವ ಮತ್ತು ಮಾಮಿಗೆ ಒಂದು ಕಿರುಪತ್ರ ಬರೆದೆ. ''ಮುಂದಿನ ಕಾರ್ಯಕ್ರಮ ತಲೆ ಕೆಳಗಾಗುವುದರಿಂದ ನಸುಕಿನಲ್ಲೇ ಹೊರಟಿದ್ದೇವೆ. ನಿಮ್ಮ ಸಕ್ಕರೆ ನಿದ್ರೆ ಕೆಡಿಸುವ ಮನಸ್ಸಿಲ್ಲವಾದ್ದರಿಂದ ಈ ಕಿರುಪತ್ರ ಬರೆಯುವ ಸಾಹಸ ಮಾಡಿದೆ. ನಿಮ್ಮ ಆದರ, ಆತಿಥ್ಯ, ಪ್ರೀತಿಗಳಿಗೆ ನಾವು ಚಿರಋಣಿಗಳು.'' ಚೀಟಿಯನ್ನು ಹೊರಗಿನ ಟೇಬಲ್ ಮೇಲೆ ಇಟ್ಟೆ. ಆದರೆ ದ್ವಾರಪಾಲಕನು ಸಾಹೇಬರ ಅಪ್ಪಣೆಯಿಲ್ಲದೇ ಹೊರಗಿನವರಿಗೆ ಒಳಗೂ, ಒಳಗಿನವರನ್ನು ಹೊರಗೂ ಬಿಡಲು ನಿರಾಕರಿಸಿದ. ಹತ್ತು ರೂಪಾಯಿಯ ನೋಟು ಕೈಯಲ್ಲಿಟ್ಟಾಗ, ಸಾಹೇಬರ ಸಾಮಾನು ಯಾವುದೂ ಹೊರಗೆ ಹೋಗುತ್ತಿಲ್ಲವೆಂದು ಖಚಿತಪಡಿಸಿಕೊಂಡು ಹೋಗಗೊಟ್ಟ.

ಮರು ಆತಿಥ್ಯ! (ಬೆಂಗಳೂರಲ್ಲಿ)

''ದಸರಾ ಹೊತ್ತಿಗೆ ಮೈಸೂರು-ಬೆಂಗಳೂರು ನೋಡಿ ಹೋಗಲು ಬರಲಿದ್ದೇವೆ. ನಿಮ್ಮಲ್ಲಿಯೇ ಉಳಿದುಕೊಳ್ಳಲಿದ್ದೇವೆ'' ಎಂದು ಮಾಮಿಯವರಿಂದ ಪತ್ರ ಬಂದಾಗ ನನ್ನ ಜಂಘಾಬಲವೇ ಉಡುಗಿಹೋಯಿತು. ರೇಷ್ಮೆ ಸೀರೆ ಕಳೆದುಕೊಂಡ ಸನ್ನಿವೇಶದ ನೆನಪು ಹಸಿರಾಗಿಯೇ ಇತ್ತು. ಇವರು ಮಾತ್ರ ಇಷ್ಟೂ ವಿಚಲಿತರಾಗದೇ 'ಅವರ ಆತಿಥ್ಯದ ಜವಾಬ್ದಾರಿಯನ್ನು ನನಗೇ ಬಿಡು' ಎಂದದ್ದರಿಂದ ನೆಮ್ಮದಿಯಾಯ್ತು. ಮರುಪ್ರಯಾಣಕ್ಕೆ ತಿಕೀಟು ಕಾದಿರಿಸಲು ಹೇಳಿದ್ದರು. ಆದರೆ ಬಸ್, ಟ್ರೇನುಗಳ ಸೌಲಭ್ಯ ಸಾಕಷ್ಟಿದೆ. ಸ್ಥಳ ಕಾದಿರಿಸುವ ಅವಶ್ಯಕತೆ ಇಲ್ಲವೆಂದು ಅವರಿಗೆ ತಿಳಿಸಿದ್ದಾಯಿತು. 'ರೈಲ್ವೇ ಸ್ಟೇಷನ್ ಹತ್ತಿರವೇ ಮನೆಯಿದೆ. ಟ್ಯಾಕ್ಸಿಯವರಿಗೆ ತೊಂದರೆಯಾಗಲಾರದು' ಎಂಬ ಮಾತನ್ನು ಸೇರಿಸಿದರು. ಟ್ಯಾಕ್ಸಿಯಿಂದ ಇಳಿಯುತ್ತಿದ್ದವರಿಗೆ, 'ಪ್ರಥಮ ವರ್ಗದ ಪ್ರವಾಸ ಸುಖಕರವಾಯ್ತೆ? ಏರ್ ಕಂಡಿಶನ್ಡ ಡಬ್ಬಿಯಲ್ಲಿ ಬಂದಿರಾ?' ಎಂದು ವಿಚಾರಿಸಿದಾಗ, ''ನಾವೀಗ ನಿವೃತ್ತರಾಗಿದ್ದೇವೆ. ಸ್ವಂತ ಖರ್ಚಿನ ಪ್ರವಾಸವಲ್ಲವೇ? ಎರಡನೆ ದರ್ಜೆಯಲ್ಲೇ ಬಂದೆವು,'' ಎಂದರು ಮಾಮಾ. ಮಾಮಿಯ ಮುಖ ತಟ್ಟನೆ ಕಳೆಗುಂದಿತು. ನಿಂಬೆಹಣ್ಣಿನ ಪಾನಕ ಸವಿಯುತ್ತ 'ಇದು ಯಾವ ಕಂಪನಿಯ ಜ್ಯೂಸ್? ತುಂಬ ಚೆನ್ನಾಗಿದೆ,' ಎಂದರು. 'ನಮ್ಮದೇ ಕಂಪನಿಯದು,' ಎಂದು ಚುಟುಕಾಗಿ ಉತ್ತರಿಸಿದರು ಯಜಮಾನರು. ಅವರು ರೋಕ್ ಖರೀದಿಯೊಳಗೆ ರೂಪಾಯಿಗೆ ಹತ್ತರಂತೆ ತಂದ ನಿಂಬೆಹಣ್ಣಿನ ರಸ ಹಿಂಡಿ ಸಕ್ಕರೆ ಪಾಕಿಗೆ ಸೇರಿಸಿ ಸಾಯ್‌ರಪ್ ಮಾಡಿಟ್ಟಿದ್ದರು. ಮಡಕೆಯ ತಣ್ಣೀರು ಹಾಕಿ, ನೊರೆ ಬರಲು ಸ್ವಲ್ಪ ಅಡಿಗೆ ಸೋಡಾ ಬೆರಸಿದ್ದರು.

ಗರಿಗರಿಯಾದ ದೋಸೆಗಳನ್ನು ಒಂದರ ಹಿಂದೊಂದು ಹೊಟ್ಟೆಗಿಳಿಸುತ್ತ, ''ಈ ದೋಸೆಯ ಮಿಕ್ಸ ಯಾವುದು? ಇಲ್ಲಿಯ ಪ್ರಸಿದ್ಧ ಎಮ್.ಟಿ.ಆರ್.ದ್ದೇ?'' ಎಂದು ಮಾಮಿ ವಿಚಾರಿಸಿದರು. ''ಅಲ್ಲ, ಹೊಸದಾಗಿ ಕೆ.ಟಿ.ಆರ್. ಪ್ರಾರಂಭವಾಗಿದೆ; ಅದರದ್ದು'' ಎಂದರು. ನನಗೆ ನಗು ತಡೆದುಕೊಳ್ಳುವುದು ಕಷ್ಟದ್ದಾಯಿತು. ಕಾಫಿ ತರಲು ಒಳಗೆ ಓಡಿದೆ. ಗಮಗಮಿಸುತ್ತಿದ್ದ ಕಾಫಿ, ''ಇದು ಕೊಥಾಸ್ ಫಿಲ್ಟರ್ ಕಾಫಿಯೇ?'' ಎಂದು ಪಿಂಕಿ ಕೇಳಿದಳು. ಇದು 'ಕೆ.ಕಾಫಿ' ಹೊಸ ಶೋಧವೆಂದರು. ಬಂದ ಅತಿಥಿಗಳು ಸ್ನಾನ ಮುಗಿಸಿ ಬೆಂಗಳೂರಿನ ಸುತ್ತಾಟಕ್ಕೆ ಹೊರಟ ನಂತರ, ಯಶಸ್ವಿ ದೋಸೆಗಳ ಬಗ್ಗೆ ವಿಚಾರಿಸಿದೆ. ''ನೀನು ಹಳತಾಗಿದೆ, ಎಂದು



ಆ ದೀಕ್ಷಿತ್ನ್ ಕಾಲ ಸಂಡಿಗೆ ಮುಸೀಕಿ. ಪೋಲೀಸರು ಅವನಿಗಾಗಿ ಎಷ್ಟು ಹುಡುಕಿದರೂ ಸಿಕ್ಕಿಲ್ಲ,.... ನೀವೂ ಇದೀರ.

ಮೂಲೆಗೆ ಸರಿಸಿದ ಮೈದಾ ಇತ್ತಲ್ಲವೇ? ಅದಕ್ಕೆ ಸ್ವಲ್ಪ ಅಕ್ಕಿ ಹಿಟ್ಟು, ಈರುಳ್ಳಿ, ಕೋತಂಬರಿ ಸೊಪ್ಪು, ಸಣ್ಣ ರವೆ ಸೇರಿಸಿದೆ. ದೋಸೆಯ ಮೇಲ್ಭಾಗಕ್ಕೆ ಪುಡಿಚಟ್ನಿ ಸವರಿದ್ದೆ. ಆಲೂಗಡ್ಡೆ ಪಲ್ಯವನ್ನಂತೂ ನೀನು ಮುಂಜಾಗ್ರತೆಯಿಂದ ರಾತ್ರಿಯೇ ಮಾಡಿ ಇಟ್ಟಿದ್ದಿ'' ಎಂದು ಕೊಂಕು ನುಡಿದರು. ಊಟ ಮಾಡಿ ಮಿಕ್ಕ ಅಡಿಗೆಗೆ ಇವರ ಹೆಸರು ಮುಂಜಾಗ್ರತಾ ಕ್ರಮವೆಂದು! ಹೊಸ ದಾಗಿ ಪ್ರಾರಂಭವಾದದ್ದು ಕಾಮತ್ ಟಿಫಿನ್ ರೂಂ ಅಲ್ಲವೆ? ಎಂದಾಗ ಇಬ್ಬರೂ ನಕ್ಕೆವು. 'ಈ ಸ್ಪೇಶಲ್ ಕೆ.ಕಾಫಿ ಯಾವುದು?' ಎಂದಾಗ, 'ಸ್ವಲ್ಪ ಹೆಚ್ಚು ಬ್ರೂ ಪುಡಿ ಹಾಕಿ, ಏಲಕ್ಕಿ, ಜಾಜಿ ಕಾಯಿ ಪುಡಿ ಸೇರಿಸಿದ್ದೇನೆ. ಚಹ ಕುಡಿಯುವವರಿಗೆ ಒಳ್ಳೆಯ ಕಾಫಿಯೆಲ್ಲ ಫಿಲ್ಟರ್ ಕಾಫಿಯೇ!' ಎಂದು ತಮ್ಮ ಹೊಸ ಶೋಧದ ಬಗ್ಗೆ ವಿವರ ನೀಡಿದರು.

ಅತಿಥಿಗಳು ಹಿಂದಿರುಗಿ ಬರುವ ತನಕ ಊಟ ಮಾಡುವ ಮನಸ್ಸು ಇರಲಿಲ್ಲ. ಅತಿಥಿಗಳೆಲ್ಲ ಆ ವೇಳೆಗೆ ಹಿಂದಿರುಗುವುದೇ ಹೆಚ್ಚು. ನಾವು ನಮ್ಮ ವೇಳೆಗೆ ಊಟ ಮುಗಿಸಿದರೆ ಚೆನ್ನಾಗಿರುತ್ತದೆ ಎಂದು ವಾದಿಸಿದರು. ಅವರೆಲ್ಲ ವಾಪಸ್ಸಾದದ್ದು ಮಧ್ಯಾಹ್ನ ಮೂರು ಗಂಟೆಗೆ! ಎಳನೀರು ಕುಡಿದು, ಆಯ್ಸಕ್ರೀಂ ತಿಂದು, ಎಲ್ಲಿಯೋ ವಡಾ-ಕಾಫಿ ಸೇವಿಸಿ, ಹಸಿವು ಇಲ್ಲವೆಂದು ಯಾರೂ ಊಟ ಮಾಡಲಿಲ್ಲ. ಉಳಿದ ಅಡಿಗೆಯೇ ರಾತ್ರಿಗೆ ತಾಜಾ ರೂಪ ತಾಳಿತು. ತೊವ್ವೆಗೆ ಟೊಮ್ಯಾಟೊ, ಸಾರಿನ ಪುಡಿ ಸೇರಿಸಿ, ರಸಂ ಸಾರೆಂದು ನಾಮಕರಣ ಮಾಡಿ ಅದಕ್ಕೆ ಪರಮಾರಿ ಇಂಗಿನ ಒಗ್ಗರಣೆ ಕೊಟ್ಟಾಯಿತು. ಅರ್ಧ ಅನ್ನಕ್ಕೆ ಒಗ್ಗರಣೆ ಕೊಟ್ಟು ''ಫೋಡಣಿ'' ಭಾತ್ ಮಾಡಿದರು. ಮರುದಿನವೂ ಅಡಿಗೆ ಮಿಕ್ಕಿತು. ಆದರೆ ಮಧ್ಯಾಹ್ನದ್ದೇ ಅಡಿಗೆ ರೂಪಾಂತರ ಹೊಂದಿತು. ಸಾರಿಗೆ ಈರುಳ್ಳಿ ಬೀನ್ಸ್ ಬೇಯಿಸಿ ಸೇರಿಸಿ ಸಾಂಬಾರ್ ಎಂದರು. ಬೆಳ್ಳುಳ್ಳಿ ಹಸಿ ಶುಂಠಿ, ಈರುಳ್ಳಿಗಳನ್ನು ಚೆನ್ನಾಗಿ ಹುರಿದು ಅನ್ನಕ್ಕೆ ಸೇರಿಸಿ ಪಲಾವ್ ಎಂದರು. ಇನ್ನೊಂದು ದಿನ ಉಳಿದ ಗಟ್ಟಿ ಬೇಳೆಗೆ ತರಕಾರಿ ಸೇರಿಸಿ ಕೂಟು! ಎಂದು ಕರೆದಾಗ ನನಗೆ ನಗೆ. ಮಿಕ್ಕಿ ಉಳಿದ ವ್ಯಂಜನಗಳ ಬಣ್ಣ ಬದಲಿಸುವುದು ಮತ್ತು ಭಾರಿ ಒಗ್ಗರಣೆ ಕೊಡುವುದು, ಮನೆ ತುಂಬ ಘಮ್ ಅನ್ನಿಸುವುದೇ ಇವರ ಅಡಿಗೆಯ ಕೈ ಚಳಕವಾಗಿತ್ತು. ಮಿಕ್ಕಿದ ಅನ್ನವನ್ನೇ ಎರಡು ಬಾರಿ ಲಿಂಬೂ ಭಾತ್, ಚಿತ್ರಾನ್ನ ಎಂದು ಕರೆದು ಬೆಳಗಿನ ನಾಶ್ತಾಕ್ಕೆ ತಿನ್ನಿಸಿದ. ಅಡಿಗೆಯವನ ರುಚಿ, ವಾಸನೆಯಿಲ್ಲದ ಸಾತ್ವಿಕವನ್ನೇ ಊಟ ಮಾಡುತ್ತಿದ್ದ ಪಿಂಕಿಗೆ ಈ ಆಧುನಿಕ ಅಡಿಗೆ ತುಂಬ ಇಷ್ಟವಾಯಿತು. ಅವನ್ನು ಸಿದ್ಧಪಡಿಸುವ ವಿಧಾನಗಳನ್ನು ಬರೆದುಕೊಳ್ಳಲು ಬಂದಾಗ, ಕಕ್ಕಾಬಿಕ್ಕಿಯಾದ ನನ್ನ ನೆರವಿಗೆ ಇವರು ಬಂದರು. 'ಅವಳದು ಹಳೇಕಾಲದ ಅಡಿಗೆ, ಮಾಪು, ಅಳತೆ, ಒಂದೂ ಇಲ್ಲ. ಕಣ್ಣಿನ ಅಂದಾಜಿನ ಮೇಲೆಯೇ ಎಲ್ಲ ಸೇರಿಸಿಬಿಡುತ್ತಾಳೆ. ನಾನು ಪ್ರತಿ ಐಟಮ್ಮಿನ ಅಳತೆ, ತೂಕ, ಸೂತ್ರಗಳನ್ನು ಬರೆದು ಕಳಿಸುತ್ತೇನೆ' ಎಂದು ಆಶ್ವಾಸನೆಯಿತ್ತರು!

ಮೈಸೂರು ನೋಡಿ ಹಿಂದಿರುಗಿದ ಮರುದಿನ ಸೋದರಮಾವನ ಸಂಸಾರ ಮುಂಬಯಿಗೆ ಹೊರಟು ನಿಂತಿತು. ಅವರನ್ನು ಟ್ರೈನು ಹತ್ತಿಸಿ ಹಿಂದಿರುಗಿ ಇವರು ಆಲ್‌ಮೇರಾದಿಂದ ದೊಡ್ಡ ಪೊಟ್ಟಣವೊಂದನ್ನು ಹೊರಗೆಳೆದು ನನ್ನ ಕೈಗಿತ್ತರು. ತೆರೆದು ನೋಡುತ್ತೇನೆ. ಐದು ರೇಷ್ಮೆ ಸೀರೆಗಳು! ಕಣ್ಣುಗಳನ್ನೇ ನಂಬಲಾಗಲಿಲ್ಲ. ಇವೆಲ್ಲ ಹೇಗೆ ಬಂದವು? ಚೇತರಿಸಿಕೊಂಡು ಕೇಳಿದೆ. 'ಅಂದು ಮಾಮಾ, ಯಾರನ್ನೋ ನೋಡಬೇಕೆಂದು ನನ್ನನ್ನು ಕರೆದುಕೊಂಡು ಹೊರಗೆ ಹೋಗಿರಲಿಲ್ಲವೇ? ತಮ್ಮ ಮಗಳಿಗಾಗಿ ನಾಲ್ಕು ರೇಷ್ಮೆ ಸೀರೆ ಕೊಂಡ ಅಂಗಡಿ ಯಾವುದು? ಎಂದು ವಿಚಾರಿಸಿದರು. ಅವನ್ನು ಮಾಮಿಯವರು ಕುಹಕದಿಂದ ಎತ್ತಿ ಹಾಕಿದ್ದು ನೆನಪಿಗೆ ಬಂದು, ''ನೀವಾಗಿ ಇದನ್ನು ನೆನಪು ಮಾಡಿದ್ದು ಒಳ್ಳೆಯದೇ ಆಯಿತು. ಅಂದಿನ ಭಾರೀ ಭೋಜನಕೂಟದಲ್ಲಿ ಗಲಾಟೆಯಲ್ಲಿ ಸೀರೆಗಳ ಹಣ ಕೊಡುವುದನ್ನು ಮಾಮಿಯವರು ಮರೆತೇ ಬಿಟ್ಟರೆಂದು ಕಾಣುತ್ತದೆ'' ಎಂದು ಸಾವಕಾಶವಾಗಿ ಹೇಳಿದೆ. ಕೂಡಲೇ ಮಾಮ ಹಣ ಹಿಂದಿರುಗಿಸಿದರು. ಅದರಿಂದ ನಾನು ನಾಲ್ಕು ಸೀರೆ ಕೊಂಡೆ. ಈ ಐದನೆಯದನ್ನೂ ತಮ್ಮ ಪ್ರೀತಿಯ ಸೋದರ ಸೊಸೆಗೆ ಕೊಡಮಾಡಿದ್ದಾರೆ,'' ಎಂದು ನಗುತ್ತ ಹೇಳಿದರು. ಈ ಘಟನೆ ಅರಗಿಸಿಕೊಳ್ಳಲು ಕೊಂಚ ಸಮಯ ಹಿಡಿಯಿತು!


ಮರು ಟಪಾಲಿಗೇ ಸೋದರಮಾವನವರ ಪತ್ರ ಬಂದಿದ್ದರಿಂದ ಅಡಿಗೆ ವಿಧಾನ ತರಿಸಿ ಕೊಡಲು ಪಿಂಕಿ ಹೇಳಿರಬೇಕು ಎಂದುಕೊಂಡೆ. ಆದರೆ ಅದರಲ್ಲಿ ಮಾಮಾ ಅವರು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದರು.

''ಬೆಂಗಳೂರಿಗೆ ಬಂದಾಗ ನೀವಿಬ್ಬರೂ ಅನ್ಯೋನ್ಯವಾಗಿರುವ ರೀತಿ ನೋಡಿ ತುಂಬ ಸಂತೋಷವಾಯಿತು. ಪರಮಾತ್ಮ ನಿಮ್ಮನ್ನು ಹೀಗೆಯೇ ಇಟ್ಟಿರಲಿ. ಜನರ ದೃಷ್ಟಿಯಲ್ಲಿ ನಾನೊಬ್ಬ ಅತ್ಯಂತ ಯಶಸ್ವಿ ವ್ಯಕ್ತಿ. ಆದರೆ ನನ್ನ ಬವಣೆ ಏನೆಂದು ಹೇಳಲಿ? ತನ್ನ ಜಾತಕ ಬಲದಿಂದಲೇ ನಾನು ಈ ಪದವಿಗೆ ಏರಿದೆ ಎಂದು ನಿನ್ನ ಸೋದರತ್ತೆ ನಂಬಿದ್ದಾಳೆ. ಪ್ರತಿಯೊಂದರಲ್ಲೂ ಈಕೆಯ ಅಧಿಕ ಪ್ರಸಂಗ ... ನೀವು ಒಂದು ತಿಂಗಳ ಸಲುವಾಗಿ ನಮ್ಮಲ್ಲಿ ಬಂದವರು, ಒಂದು ಊಟ ಕೂಡ ಮಾಡದೇ ಕೂಡಲೇ ಹಿಂದಿರುಗುವಂತೆ ಆದ ಸಂದರ್ಭ ಅಡಿಗೆಯವನಿಂದ ಗೊತ್ತಾದಾಗ ಅಪಾರ ನೋವಾಯಿತು. ನಿಮ್ಮ ತೀರ ಸಾದಾ, ಸರಳ ಜೀವನಕ್ಕೆ ಮಾರು ಹೋಗಿದ್ದೇನೆ. ಮುಂದಿನ ವರ್ಷ ನಾನೊಬ್ಬನೇ ನಿಮ್ಮಲ್ಲಿ ಬಂದು ಹೋಗುವೆ. ಬೇಡ ಎನ್ನಬೇಡಿ'' ಎಂದೆಲ್ಲ ಕಳಕಳಿಯಿಂದ ಬರೆದಿದ್ದರು. ಆದರೆ ಆ ವರ್ಷ ಮುಗಿಯುವುದರೊಳಗೆ ಮಾಮಾ ಹೃದಯಾಘಾತದಿಂದ ಇಹಲೋಕ ಯಾತ್ರೆಯನ್ನು ಮುಗಿಸಿದರು. ಅವರಿಗೆ ಆತ್ಮೀಯ ಆತಿಥ್ಯ ಒದಗಿಸುವ ಅವಕಾಶವನ್ನು ಸದಾ ಕಾಲ ಕಳೆದುಕೊಂಡು ಬಿಟ್ಟೆವು. ●

ಯಮನ ಉತ್ತರ :

ಒಮ್ಮೆ ವಾಹನಾಪಘಾತವೊಂದರಲ್ಲಿ ಡ್ರೈವರ್ ಹಾಗೂ ಧರ್ಮಗುರು ಇಬ್ಬರೂ ಸತ್ತರು. ಯಮ ದೂತರು ಡ್ರೈವರನನ್ನು ಸ್ವರ್ಗಕ್ಕೂ ಧರ್ಮಬೋಧಕನನ್ನು ನರಕಕ್ಕೂ ಕರೆದೊಯ್ದರು. ಇದೇಕೆ ಹೀಗೆ ಎಂದು ಧರ್ಮಗುರು ಕೇಳಿದಾಗ ಯಮಧರ್ಮನು 'ನೀನು ಬೋಧನೆಯ ಕಾರ್ಯದಲ್ಲಿ ತೊಡಗಿದ್ದಾಗ ಎಲ್ಲರೂ ನಿದ್ರಿಸುತ್ತಿದ್ದರು. ಆದರೆ ಈ ಡ್ರೈವರು ವಾಹನವನ್ನು ಓಡಿಸುತ್ತಿದ್ದಾಗ ಎಲ್ಲರೂ ಪ್ರಾರ್ಥಿಸುತ್ತಿದ್ದರು. ಅವರವರು ಮಾಡಿದ ಕಾರ್ಯಕ್ಕನುಗುಣವಾಗಿ ಫಲ. ಈಗಲಾದರೂ ತಿಳಿಯಿತೇ' ಎಂದ.

● ಕೆ.ವೆಂಕಣ್ಣಾಚಾರ್



ಡಾ.ಸಿದ್ಧನಾಥರಿಗೆ
ಎಂಬತ್ನಾಲ್ಕು ವರ್ಷಗಳವರೆಗೂ
ಕನ್ನಡವೇ ಉಸಿರಾಯಿತು.

ಸೊಲ್ಲಾಪುರ ಕನ್ನಡಿಗರ ಸ್ಫೂರ್ತಿಯ ಮೂರ್ತಿ

‘‘ಮಹಾರಾಷ್ಟ್ರ ಸರಕಾರಕ್ಕೆ ನಾವು ಕನ್ನಡಿಗರು ಎಂಬ ದೃಷ್ಟಿಯಿಂದ ಮಲಮಕ್ಕಳು! ನಮ್ಮ ಸರಕಾರಕ್ಕೆ ನಾವು ಹೊರನಾಡ ಕನ್ನಡಿಗರು! ಇತ್ತ ಮನೆಗೂ ಅಲ್ಲ, ಅತ್ತ ಕೆರೆಗೂ ಇಲ್ಲ ಎಂಬ ಪರಿಸ್ಥಿತಿ ನಮಗಿಂದು ಒದಗಿದೆ. ಒಳಗೆ ಬರಬೇಕೆಂದು ತಡಪಡಿಸಿದರೂ ನಮ್ಮನ್ನು ಕೈ ಮಾಡಿ ಕರೆಯುವ ದಿಟ್ಟ ನಿಲುವಿನ ಕೆಚ್ಚೆದೆ ಧುರೀಣರು ಇನ್ನೂ ಬರಬೇಕಾಗಿದೆ ...’’

● ಮಂಜುಳಾ ಪಡೆಸೂರ

‘‘ಕರ್ನಾಟಕ ಸರಕಾರವು, ಕರ್ನಾಟಕ ರಾಜ್ಯವು ಮೂಡಿ ಬಂದಂದಿನಿಂದ, ನಮ್ಮನ್ನು ಮರೆತಿದೆಯೇನೋ ಎಂಬ ಭಾವನೆ ಗಡಿ ಕನ್ನಡಿಗರಲ್ಲಿ ಬಲವಾಗಿ ಮೂಡಿದೆ.’’

- ಅವರು ಹಾಗೇ ಇಂಥ ಅನೇಕ ವಾಸ್ತವ ಸಂಗತಿಗಳನ್ನು ಹೇಳುತ್ತಲಿದ್ದರು. ಸುಮಾರು ಅರ್ಧ ಗಂಟೆಯವರೆಗೆ ಸಾಗಿದ ಅವರ ಭಾಷಣ ಎಲ್ಲಿಯೂ ಭಾವಾವೇಶಕ್ಕೆಡೆಗೊಡಲಿಲ್ಲ. ರಾಜಕೀಯ ಪುಢಾರಿಯ ಒಣ ಮಾತೂ ಅದಾಗಲಿಲ್ಲ. ಕಳಕಳಿ ಮತ್ತು ಸವಾಲುಗಳಿಂದ ಕೂಡಿತ್ತು ಅವರ ಮಾತು. ಕರ್ನಾಟಕ ಇತಿಹಾಸವೆಂಬ ಕನ್ನಡಿಗೆ ಮೆತ್ತಿದ ರಾಜಕೀಯದ ದೂಳನ್ನು ಕೊಡಹುವ, ನಿರಾಸಕ್ತಿಯ ಜಿಡ್ಡನ್ನು ತೊಳೆಯುವ ಪ್ರಯತ್ನವದಾಗಿತ್ತು. ಗಡಿನಾಡ ಕನ್ನಡಿಗರಾದ ತಮ್ಮೆಲ್ಲರ ಬಗ್ಗೆ ಕರ್ನಾಟಕ ‘ಎಲ್ಲಾದರೂ ಇರು, ಎಂತಾದರೂ ಇರು, ನಮಗೇನು?’ ಎಂಬ ಉದಾಸೀನ ಭಾವ ತಾಳಿದುದರ ಬಗೆಗಿನ ನೋವು ಮಾತ್ರ ಎದ್ದು ಕಾಣುತ್ತಿತ್ತು.

ಹನ್ನೊಂದು ವರ್ಷಗಳ ಹಿಂದಿನ ಸಂಗತಿ ಇದು. (1980, ಫೆಬ್ರವರಿ 20). ಬೆಳಗಾವಿಯ ಲಿಂಗರಾಜ ಕಾಲೇಜಿನ ಮೈದಾನ. ಐವತ್ತೆರಡನೆ ಕನ್ನಡ ಸಾಹಿತ್ಯ ಸಮ್ಮೇಳನ. ಗಡಿ-ಹೊರನಾಡ ಕನ್ನಡಿಗರ ಗೋಷ್ಠಿಯಲ್ಲಿ ಆ ಹಿರಿಯ ‘‘ಭಾವನಾತ್ಮಕವಾಗಿ ಆಡಳಿತಾತ್ಮಕವಾಗಿ ಎಲ್ಲಿಯವರೆಗೂ ನಾವು ಹೀಗೆ ಮನೆಯ ಹೊರಗಿರೋಣ ಹೇಳಿ’’ ಎಂದು ಕೇಳುತ್ತಿದ್ದಾಗ ಅಲ್ಲಿದ್ದ ರಾಜಕೀಯ ಪುಢಾರಿಗಳು ಆಕಳಿಸುತ್ತಿದ್ದರು.

ಹೌದು. ಈ ಆಲಸ್ಯ-ಆಕಳಿಕೆಗಳ ಪರಿಣಾಮವಾಗಿಯೇ ಕನ್ನಡ ಡಿಂಡಿಮದ ಧ್ವನಿ ಕುಗ್ಗುತ್ತಲಿದೆ. (ಅಥವಾ ನವೆಂಬರ್ ಒಂದರಂದು ಮಾತ್ರ

ಕೇಳುತ್ತವೆ ಎನ್ನಿ). ಕರ್ನಾಟಕ ಏಕೀಕರಣದ ಹೋರಾಟ ಆರಂಭವಾದಾಗಿನಿಂದಲೂ ಡಿಂಡಿಮದ ಧ್ವನಿಯನ್ನು ಕೇಳದಂತೆ ಮಾಡುವ ಪ್ರಯತ್ನ ನೆರೆರಾಜ್ಯಗಳವರಿಂದ ನಡೆದೇ ಇದೆ. ಕನ್ನಡ ಭಾಷೆ ಮತ್ತು ಸಂಸ್ಕೃತಿ ಮೇಲೆ ನಿರಂತರ ಕೊಡಲಿ ಪೆಟ್ಟು ಬೀಳುತ್ತಲೇ ಇದೆ.

''ನಾವು ಎಲ್ಲಿದ್ದರೂ ಕನ್ನಡಿಗರಾಗಿಯೇ ಬದುಕಬೇಕೆಂಬುದು ನಮ್ಮ ಛಲ, ನಿಮ್ಮ ಬೆಂಬಲ ನಮಗೆ ಬಲ. ಕನ್ನಡದ ನೆಲ ಕುಲದಿಂದ ಕನ್ನಡದ ಧರ್ಮದಿಂದ ನಮ್ಮನ್ನು ಬಿಂಗಡಿಸಲು ಯಾರಿಂದಲೂ ಸಾಧ್ಯವಿಲ್ಲ'' ಆ ಹಿರಿಯ (ಡಾ. ಸಿದ್ಧನಾಥ ಬಳ್ಳಾರಿ) ಹೇಳಿದಾಗ ಗಡಚಿಕ್ಕುವ ಚಪ್ಪಾಳೆ. ನಮ್ಮಲ್ಲಿ ಚಪ್ಪಾಳೆ ಶೂರರಿಗೇನು ಕಡಿಮೆ?

ಚಪ್ಪಾಳೆ ಶೂರರಾದ್ದರಿಂದಲೇ ನಾವು, ಕನ್ನಡಿಗರು, ಕೈ ಬಿಟ್ಟು ಹೋದ ಕನ್ನಡ ಪ್ರದೇಶಗಳನ್ನು ಮರಳಿ ಪಡೆಯುವ ಯತ್ನವನ್ನು ಕೈ ಬಿಟ್ಟು ಕೂತಿದ್ದೇವೆ. 'ರಾಜಕೀಯ ಕಾರಣಗಳಿಂದಾಗಿ' ಮಹಾಜನ ವರದಿಯನ್ನು ಜಾರಿಗೆ ತರಲು ಒತ್ತಾಯ ಮಾಡದೇ ನಮ್ಮ ಧುರೀಣರು ತೆಪ್ಪಗಿದ್ದಾರೆ. 'ನ್ಯಾಯಸಮ್ಮತ ಇತ್ಯರ್ಥ' ಯಾವ ಸರಕಾರಕ್ಕೂ ಬೇಕಾಗಿಲ್ಲ. ಆದರೆ ತಮ್ಮ ನೆಲದಲ್ಲೇ ಪರಕೀಯ ಪ್ರಜ್ಞೆಯಿಂದ ನರಳುತ್ತಿರುವ ಗಡಿನಾಡ ಕನ್ನಡಿಗರ ಧ್ವನಿಯಾಗಿ ನಿಂತ ಡಾ. ಸಿದ್ಧನಾಥ ಬಳ್ಳಾರಿಯವರು ಮಾತ್ರ ತಮ್ಮ ಕೊನೆಯುಸಿರಿನವರೆಗೂ (ನಿಧನ: 7-4-91) ಕನ್ನಡತನವನ್ನೂ, ಕನ್ನಡಿಗರ ಹಿರಿಯ ಗುಣವಾದ ಸಹೃದಯತೆಯನ್ನೂ ಮೆರೆದರು.

ಸಿದ್ಧರಾಮೇಶ್ವರನ ತಾಣ ಸೊನ್ನಲಾಪುರ ಅಥವಾ ಸೊಲ್ಲಾಪುರವೆಂದರೆ ಡಾ. ಬಳ್ಳಾರಿಯವರಿಗೆ ಪಂಚಪ್ರಾಣ. ಆ ನಗರದ ಸರ್ವತೋಮುಖಿ ಬೆಳವಣಿಗೆಗೆ ಅವರು ಅಖಂಡ ಪರಿಶ್ರಮ ಪಟ್ಟರು. ಅಲ್ಲಿಯ ಕನ್ನಡಿಗರಂತೂ ಸರಿಯೆ, ಮರಾಠಿ ಭಾಷಿಕರು ಕೂಡ ಅವರನ್ನು 'ಡಾಕ್ಟರ್ ಸಾಹೇಬ್' ಎಂದು ಗೌರವದಿಂದಲೇ ಕಾಣುತ್ತಿದ್ದರು. ಮರಾಠಿ ಪತ್ರಿಕೆಗಳಂತೂ ಸಿದ್ಧನಾಥರನ್ನು ''ಸೋಲಾಪೂರ ಸಾಠಿ ತಳಮಳಣಾರೆ ಡಾಕ್ಟರ್'' (ಸೊಲ್ಲಾಪುರಕ್ಕಾಗಿ ತಳಮಳಿಸುವ ಡಾಕ್ಟರ್) ಎಂದೇ ಕರೆಯುತ್ತಿದ್ದವು. ಡಾ. ಬಳ್ಳಾರಿಯವರ ನಿಧನದ ಮರುದಿನ ಮರಾಠಿ ಪತ್ರಿಕೆಗಳು ಅವರ ಕುರಿತು ಅಗ್ರಲೇಖನಗಳನ್ನೂ, ಸುದೀರ್ಘ ಲೇಖನಗಳನ್ನೂ ಪ್ರಕಟಿಸಿದುವೆಂದರೆ ಅವರು ಅಲ್ಲಿಯ ಜನಜೀವನದೊಂದಿಗೆ ಅದೆಷ್ಟು ಹಾಸುಹೊಕ್ಕಾಗಿದ್ದರೆಂಬುದರ ಅರಿವಾಗುತ್ತದೆ.

ಡಾ. ಸಿದ್ಧನಾಥ ಬಳ್ಳಾರಿ ಒಂದು ದೃಷ್ಟಿಯಿಂದ ಭಾಷಾಬಾಂಧವ್ಯದ ಹರಿಕಾರನಾಗಿ ನಿಂತರು. ''ಗಡಿ ವಿಷಯದ ವೈಷಮ್ಯವನ್ನು ರಾಜಕಾರಣಿಗಳು ಬೆಳೆಸುತ್ತಾರೇನೋ ನಿಜ. ಆದರೆ ಅದಕ್ಕಾಗಿ ಭಾಷಾವಿವಾದವನ್ನೇಕೆ ಹೆಚ್ಚು ಬೆಳೆಸಬೇಕು? ರಾಷ್ಟ್ರದ ಐಕಮತ್ಯದ ದೃಷ್ಟಿಯಿಂದ ಈ ವಿವಾದಕ್ಕೆ ನೀರೆರೆಯುವುದೆಂದರೆ ಅದು ಸ್ವನಾಶದ ದಾರಿ'' ಎಂದು ನಂಬಿದ್ದ ಬಳ್ಳಾರಿಯವರು ಕನ್ನಡ-ಮರಾಠಿ ಭಾಷಿಕರ ಪಾಲಿನ ಆಧಾರಸ್ತಂಭವಾಗಿ ನಿಂತರು. ಅಂತೇ ಮರಾಠಿ ದಿನ ಪತ್ರಿಕೆ 'ಸಂಚಾರ' ತನ್ನ ಅಗ್ರಲೇಖನದಲ್ಲಿ ''ಜಾಜಿ ಮಲ್ಲಿಗೆಯಂತೆ ಅವರು ಸದಾ ಆನಂದವನ್ನೀಯುತ್ತಿದ್ದರು'' ಎಂದು ವರ್ಣಿಸಿದೆ.

''ಸಹಜೀವನ-ಸಹಬಾಳ್ವೆ ಇಂದು ನಮ್ಮ ರಾಷ್ಟ್ರದ ನೆಮ್ಮದಿಗೆ ಅತ್ಯವಶ್ಯ ಸೂತ್ರ, ಎಂಬುದನ್ನು ಯಾರಾದರೂ ಅರಿತುಕೊಂಡಿದ್ದರೆ ಅವರು ಗಡಿಕನ್ನಡಿಗರು ಮಾತ್ರ. ಯಾಕೆಂದರೆ, ದ್ವೇಷ-ಕಟುತ್ವ ಭಾವಗಳು ಪ್ರಗತಿಪಥವೆಡೆ ನಮ್ಮನ್ನೆಂದೂ ಕರೆದೊಯ್ಯಲಾರವು. ಐಕಮತ್ಯದ ವಿಸ್ತಾರವನ್ನು ಎಷ್ಟು ಹೆಚ್ಚು ಸಾಧ್ಯವೋ ಅಷ್ಟು ಮಾಡುತ್ತಲೇ ಇದ್ದರೆ ಬಾಳಿಗೊಂದು ನೆಮ್ಮದಿ'' ಎಂದು ದೃಢವಾಗಿ ನಂಬಿದ್ದವರು ಡಾ. ಬಳ್ಳಾರಿ.

ಹಗರಿಬೊಮ್ಮನಹಳ್ಳಿಯವರಾದ (ಬಳ್ಳಾರಿ ಜಿಲ್ಲೆ) ಡಾ. ಸಿದ್ಧನಾಥ ವಿದ್ಯಾರ್ಥಿ ದೆಸೆಯಲ್ಲೇ ಗಾಂಧೀಜಿಯ ಪ್ರಭಾವಕ್ಕೊಳಗಾಗಿ ಹೋರಾಟದ ಬದುಕಿನಲ್ಲಿ ಅಡಿಯಿಟ್ಟವರು. ತಮ್ಮ ತಾರುಣ್ಯದಲ್ಲಿ ಅವರು ಮನೆಗಿಂತ ಸೆರೆಮನೆಯಲ್ಲಿದ್ದುದೇ ಹೆಚ್ಚು. ಸ್ವಾತಂತ್ರ್ಯ ಹೋರಾಟ-ಶಿಕ್ಷಣ

ಪೂರೈಕೆಗಳನ್ನು ಒಟ್ಟೊಟ್ಟಿಗೆ ನಡೆಯುವುದು ಸಾಧ್ಯವೇ? ಪಂ.ತಾರಾನಾಥರ ವಿದ್ಯಾಪೀಠದಲ್ಲಿ ಓದಿ ಮುಂಪೆ ಆಯುರ್ವೇದ ವೈದ್ಯಕೀಯ ಶಿಕ್ಷಣಕ್ಕಾಗಿ ಅವರು ನಡೆದದ್ದು ಹರಿದ್ವಾರ-ಕಲಕತ್ತೆಯೆಡೆಗೆ.

ಹರಿದ್ವಾರದಲ್ಲಿ ಮೂವರು ಸದಸ್ಯರನ್ನೊಳಗೊಂಡ 'ಕರ್ನಾಟಕ ಸಂಘ'ವನ್ನು ಕಟ್ಟಿದ ಸಿದ್ಧನಾಥರು, ಅಲ್ಲಿಗೆ ಬರುವ ಕರ್ನಾಟಕದ ಯಾತ್ರಿಕರಿಗ ಅನುಕೂಲವಾಗುವಂತೆ ಧರ್ಮಛತ್ರವೊಂದನ್ನು ಸ್ಥಾಪಿಸಿದರು. (ಅದರ ಸುಧಾರಣೆಗಾಗಿ ಅವರು ಮೈಸೂರು ಮಹಾರಾಜರಿಗೆ ಲಿಖಿತ ನಿವೇದನೆಯೊಂದನ್ನು ಮಾಡಿಕೊಂಡುದರ ಫಲವಾಗಿ ಇಂದಿಗೂ ಆ ಧರ್ಮಶಾಲೆ ಸಕಲಸೌಕರ್ಯಗಳಿಂದ ಕಾರ್ಯಗೈಯುತ್ತಿದೆ.) ನಂತರ ಕಲಕತ್ತೆಯಲ್ಲಿ ಶಿಕ್ಷಣ ಮುಂದುವರೆಸಿ ಪದವೀಧರರಾಗಿ ಮರಳಿ ಕೊಟ್ಟೂರಿಗೆ ಬಂದರು.

ಕೊಟ್ಟೂರಿನಲ್ಲಿ 1932ರ ಸುಮಾರಿಗೆ ದಲಿತ ಸೇವೆ, ಅಸ್ಪೃಶ್ಯತಾ ನಿವಾರಣೆ, ಸಾಕ್ಷರತಾ ಪ್ರಚಾರ, ರಾಷ್ಟ್ರೀಯ ಭಾವನೆಯ ಜಾಗೃತಿಗಳಿಗಾಗಿ 'ದೀನ ಸೇವಾಶ್ರಮ' ಸ್ಥಾಪಿಸಿ ಮಹಾತ್ಮಾಜಿಯಿಂದ ಅದಕ್ಕೆ ಅಡಿಗಲ್ಲು ಹಾಕಿಸಿದ್ದ ಸಿದ್ಧನಾಥರು ಹತ್ತು ವರ್ಷಗಳ ನಂತರ ಅಲ್ಲಿಗೆ ಬಂದಾಗ 'ಕ್ವಿಟ್ ಇಂಡಿಯಾ ಚಳುವಳಿ' ಆರಂಭವಾಗಿತ್ತು. ಮತ್ತೆ ಸ್ವಾತಂತ್ರ್ಯ ಹೋರಾಟ-ಸೆರೆಮನೆವಾಸ. (ಆಗ ಅವರೊಂದಿಗೆ ಜೇಲಿನಲ್ಲಿದ್ದವರು ಎಸ್. ನಿಜಲಿಂಗಪ್ಪ). ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಬಳ್ಳಾರಿಯನ್ನು ಕೆಲಕಾಲ ಪ್ರತಿನಿಧಿಸಿದ್ದರು ಸಿದ್ಧನಾಥ.

ಕುಟುಂಬದಲ್ಲಿ ನಡೆದ ದುರ್ಘಟನೆಯೊಂದರಿಂದಾಗಿ ಕೊಟ್ಟೂರನ್ನು ಬಿಡಬೇಕಾಗಿ ಬಂದಾಗ ಡಾ.ಸಿದ್ಧನಾಥ ಹಿಡಿದದ್ದು ಸೊಲ್ಲಾಪುರದ ಹಾದಿಯನ್ನು. ಅಲ್ಲಿಯ ನಗರ ಮಹಾಪಾಲಿಕೆಯ ವೈದ್ಯಾಧಿಕಾರಿಯಾಗಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ ಸಿದ್ಧನಾಥರು ಅದನ್ನು ನಮ್ಮಲ್ಲಿಯ 'ಮುನಸಿಪಲ್ ದವಾಖಾನೆ'ಗಳಂತಿಡದೆ ನಿಜವಾದ ಆರೋಗ್ಯ ಮಂದಿರವನ್ನಾಗಿಸಿದರು.

ಹಾದಿ

ನಾನು ಮುಂದೆ ಮುಂದೆ ಹೋದಂತೆ ನಾನು ನಡೆದ ಹಾದಿ
ಹಿಂದೆ ಹಿಂದೆ ಬರುತ್ತಿದೆ ನಾನು ನಿಂತಲ್ಲಿಗೆ ನಿಂತು
ನಾನು ಕುಳಿತಲ್ಲಿಗೆ ಕುಳಿತು ನಾನು ಮಲಗಿದಲ್ಲಿಗೆ
ಮಲಗಿ ನಾನು ಹೋದಲ್ಲಿಗೆ ಹೋಗುತ್ತಿರುತ್ತದೆ.

ಚೆನ್ನಣ್ಣ ವಾಲೀಕಾರ

ಜತೆ ಜತೆಗೆ ಸೊಲ್ಲಾಪುರ ನಿವಾಸಿಗಳ ಸಾಂಸ್ಕೃತಿಕ ಶೈಕ್ಷಣಿಕ ಆರೋಗ್ಯವೂ ಸುಧಾರಿಸುವಂತೆ ಶ್ರಮಿಸಿದರು.

ಎಲ್ಲರನ್ನೂ ಹಚ್ಚಿಕೊಂಡು-ಮೆಚ್ಚಿಕೊಂಡು ಬಾಳಿದ ಡಾ.ಸಿದ್ಧನಾಥರು ಸೊಲ್ಲಾಪುರದ ಜನಮಾನಸದಲ್ಲಿ ನೆಲೆ ನಿಂತರು. ''ಎಲ್ಲರೊಂದಿಗೆ ತಮ್ಮ ಅನ್ನ-ಅನುಭವಗಳನ್ನು ಹಂಚಿಕೊಂಡ ಮಹಾನುಭಾವ'' ಎಂದು ಅವರನ್ನು ಸೊಲ್ಲಾಪುರದವರೆಲ್ಲ ನೆನೆಯುತ್ತಾರೆ.

ನಿಜಲಿಂಗಪ್ಪನವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಸಂದರ್ಭ. ಡಾ.ಸಿದ್ಧನಾಥರು ಸೊಲ್ಲಾಪುರದಿಂದ ಅವರಿಗೊಂದು ಒತ್ತಾಯಪೂರ್ವಕ ವಿನಂತಿಪತ್ರ ಬರೆದರು - 'ಕರ್ನಾಟಕದ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಸೊಲ್ಲಾಪುರದ ವಿದ್ಯಾರ್ಥಿಗಳಿಗಾಗಿ ಹತ್ತು ಜಾಗಗಳನ್ನು ಮೀಸಲಿಡಬೇಕು' ಎಂದು. ನಿಜಲಿಂಗಪ್ಪನವರೊಂದಿಗೆ ಈ ಕುರಿತು ಅನೇಕ ದಿನಗಳ ಪತ್ರವ್ಯವಹಾರ, ಮಾತುಕತೆ ನಡೆಯಿತು. ಕೊನೆಗೂ ಅವರ ಮಾತಿಗೇ ಮೇಲುಗೈ. ಇದರಿಂದಾಗಿ ಸೊಲ್ಲಾಪುರದ ಕನ್ನಡಿಗ ವಿದ್ಯಾರ್ಥಿಗಳಷ್ಟೇ ಅಲ್ಲ, ಮರಾಠಿ ಭಾಷಿಕರಿಗೂ-ಅಲ್ಪಸಂಖ್ಯಾತ ವರ್ಗದವರಿಗೂ ಪ್ರವೇಶಾವಕಾಶ ದೊರೆಯಿತು. ಅದೂ ಕ್ಯಾಪಿಟೇಶನ್ ಫೀ ಇಲ್ಲದೆಯೆ!

''ಗಡಿ ಪ್ರಶ್ನೆ ಬಗೆ ಹರಿಯಲಿ, ಬಿಡಲಿ - ಆದರೆ ಗಡಿಯಲ್ಲಿರುವ ಕನ್ನಡ-ಮರಾಠಿ ವಿದ್ಯಾರ್ಥಿಗಳಿಗೆ ಅದರ ಬಿಸಿ ತಾಗದಿರಲಿ'' ಎಂದು ಬಯಸುತ್ತಿದ್ದ ಡಾ.ಸಿದ್ಧನಾಥರದು ಎಂಥ ಉದಾತ್ತ ಮನಸ್ಸಲ್ಲವೆ? ಕನ್ನಡ-ಮರಾಠಿ,

ಹಿಂದಿ, ತೆಲುಗು, ಬಂಗಾಳಿ ಭಾಷೆಗಳನ್ನು ಸರಾಗವಾಗಿ ಮಾತಾಡಬಲ್ಲವರಾಗಿದ್ದ ಅವರು ಆ ಕಾರಣದಿಂದಲೇ ಎಲ್ಲರನ್ನೂ ಹತ್ತಿರವಾಗಿಸಿಕೊಂಡಿರಲು ಸಾಕು. ಆ ಆತ್ಮೀಯತೆ, ನಗುಮುಖ, ಮೃದುನುಡಿಗಳು ಎಂಥ ಜಾಡ್ಯವನ್ನೂ - ಎಂಥ ದ್ವೇಷವನ್ನೂ ದೂರ ಮಾಡಿಬಿಡುವಂಥವು. ಸಾರ್ವಜನಿಕ ಜೀವನದಲ್ಲಿ ಒಬ್ಬ ವ್ಯಕ್ತಿ ಜನಾನುರಾಗಿಯಾಗುವುದರ ಗುಟ್ಟಲ್ಲವೆ ಈ ಆತ್ಮೀಯತೆ.

ಕನ್ನಡವನ್ನು 'ಕಾನಡಿ' ಎಂದೂ ಗಡಿಗೆಯೊಳಗೆ ಕಲ್ಲು ಹಾಕಿ ಕುಲುಕಾಡಿದಂತೆ ಕೇಳುತ್ತದೆಂದೂ ಚೇಷ್ಟೆ ಮಾಡುತ್ತಿದ್ದ ಮರಾಠಿ ಭಾಷಿಕರಿಗೆ ಕನ್ನಡವನ್ನು 'ಕನ್ನಡ'ವೆಂದೇ ಉಚ್ಚರಿಸಲು ಹೇಳಿಕೊಟ್ಟರು ಸಿದ್ಧನಾಥ. ಅಷ್ಟೇ ಅಲ್ಲ, ಕನ್ನಡದ ಸಂಸ್ಕೃತಿ-ಸಾಹಿತ್ಯಗಳ ಪರಿಚಯವನ್ನೂ ಮಾಡಿಕೊಟ್ಟರು. ನಮ್ಮ ರಂಗವೈಭವದ ಪರಿಚಯ ಮರಾಠಿಗರಿಗೆ ಆಗಲೆಂಬ ಉದ್ದೇಶದಿಂದ ಸುಳ್ಳದ ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘದ 'ಕಿತ್ತೂರು ಚೆನ್ನಮ್ಮ' ನಾಟಕವನ್ನು ಸೊಲ್ಲಾಪುರದಲ್ಲಿ ವ್ಯವಸ್ಥೆಗೊಳಿಸಿದರು. ತಿರುಗುವ ರಂಗಮಂಚ, ಜೀವಂತ ಆನೆ, ಕುದುರೆಗಳ ಪ್ರವೇಶ, ನುರಿತ ನಟನಟಿಯರ ಅಭಿಯನ ಚಾತುರ್ಯಗಳಿಂದಾಗಿ ನಾಟಕವನ್ನು ಬಾಯ್ತೆರೆದು ನೋಡಿಯೇ ನೋಡಿದರು ಮರಾಠಿ ಭಾಷಿಕರು. ಒಂದು ವರ್ಷದವರೆಗೆ ಕನ್ನಡ ರಾಣಿ ಅಲ್ಲಿ ಕತ್ತಿ ಝಳಪಿಸಿದಳು.

ಕರ್ನಾಟಕದ ರಾಜಧಾನಿಯೊಂದಿಗೆ ಸಂಪರ್ಕ ಸುಲಭವಾಗಲೆಂಬ ಹಿರಿಯಾಸೆಯಿಂದ ಸೊಲ್ಲಾಪುರದಿಂದ ಬೆಂಗಳೂರಿಗೆ ರೈಲು ಓಡಬೇಕೆಂದು ವಾದಿಸಿ ಯಶಸ್ವಿಯಾದವರು ಡಾ. ಸಿದ್ಧನಾಥ. ಆ ಕಾರಣದಿಂದಲೇ ಇಂದು ಸೊಲ್ಲಾಪುರದ ವ್ಯಾಪಾರಸ್ಥರು 'ಗೋಲಗುಮ್ಮಟ ಎಕ್ಸ್‌ಪ್ರೆಸ್' ಮೂಲಕ ಬೆಂಗಳೂರಿಗೆ ಹೋಗಿ ಬರುವುದು ಸಾಧ್ಯವಾಗಿದೆ. ಹಾಗೆಯೇ ಸೊಲ್ಲಾಪುರ-ಮೈಸೂರುಗಳ ನಡುವೆ ಬಸ್ ವ್ಯವಸ್ಥೆಯೂ ಆಗಿದೆ.

ಅನೇಕ ಕನ್ನಡ ಪತ್ರಿಕೆಗಳ 'ಸೊಲ್ಲಾಪುರ ವರದಿಗಾರ'ರಾಗಿ ಕೆಲಸ ಮಾಡಿದ ಡಾ. ಬಳ್ಳಾರಿಯವರು ಸೊಲ್ಲಾಪುರದಲ್ಲಿ ನಡೆದಾಡುವ ಲೈಬ್ರರಿ ಎನಿಸಿದರು. ನಿತ್ಯ ಹತ್ತಾರು ಪತ್ರಿಕೆಗಳನ್ನು ಕೊಂಡು ಓದಿ ಉಳಿದವರಿಗೂ ಓದಲು ಹಚ್ಚದಿದ್ದರೆ ಅವರಿಗೆ ನಿದ್ದೆಯೇ ಬರುತ್ತಿರಲಿಲ್ಲ. ಕರ್ನಾಟಕ ಏಕೀಕರಣ ಇತಿಹಾಸದ ಅಭ್ಯಾಸ ಮಾಡಬೇಕಾದರೆ ಡಾ. ಬಳ್ಳಾರಿಯವರು ಸಂಗ್ರಹಿಸಿಟ್ಟ 'ಪೇಪರ್ ಕಟಿಂಗ್ಸ್ ಫೈಲ್' ನೋಡಬೇಕು.

ದ. ರಾ. ಬೇಂದ್ರೆಯವರೊಂದಿಗೆ ಡಾ. ಬಳ್ಳಾರಿಯವರು ನಡೆಸುತ್ತಿದ್ದ ಸಾಹಿತ್ಯಕ-ಚರ್ಚೆಗಳನ್ನು ಬರೆದು ಪ್ರಕಟಿಸಿದರೆ ಅದೊಂದು ಅಮೌಲ್ಯ ಕೃತಿಯಾದೀತು. ಶ್ರೀಮತಿ ಜಯದೇವಿತಾಯಿ ಲಿಗಾಡೆಯವರಿಂತೂ ಕನ್ನಡದ ಕೆಲಸಕ್ಕೆ ಬಳ್ಳಾರಿಯವರನ್ನೇ ನಂಬಿದ್ದರು. ಮಹಾರಾಷ್ಟ್ರ ಸರಕಾರದೊಂದಿಗೆ ಪಟ್ಟು ಹಿಡಿದು ಕನ್ನಡ ಪಠ್ಯಪುಸ್ತಕಗಳು ಪ್ರಕಟವಾಗುವಂತೆ ನೋಡಿಕೊಂಡರು. ಆ ಪ್ರದೇಶಗಳಲ್ಲಿ ಕನ್ನಡ ಉಳಿಯಲು ಬೆಳೆಯಲು ನೂರಾರು ಕನ್ನಡ ಶಾಲೆಗಳು ಬೇಕೆಂಬುದನ್ನು ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಮನದಟ್ಟಾಗಿಸಿ ಯಶಸ್ವಿಯಾದರು. ಮಹಾಜನ ಆಯೋಗದೆದುರು ಗಡಿಭಾಗದ ಕನ್ನಡಿಗರ ಅಹವಾಲನ್ನು ಪರಿಣಾಮಕಾರಿಯಾಗಿ ಮಂಡಿಸಿದರು. ಭಾಷಾವಾರು ಚಳವಳಿಯ ಅಂಗವಾಗಿ ಇಂದಿರಾ ಗಾಂಧಿಯವರೆದುರು ತಮ್ಮ ವಾದ ಮನವಿಯನ್ನು ಇರಿಸಿ, ''ಕರ್ನಾಟಕ ಕಾವೇರಿಯಿಂದ ಗೋದಾವರಿಯವರೆಗಿದೆ. ಕೊನೆ ಪಕ್ಷ ಸಾಂಗ್ಲಿ, ಜತ್ತ, ಅಕ್ಕಲಕೋಟೆ, ಸೊಲ್ಲಾಪುರ, ಮಂತ್ರಾಲಯ, ಮಂಜೇಶ್ವರಗಳಾದರೂ ಕನ್ನಡ ನಾಡಿಗೆ ಸೇರಬೇಕು'' ಎಂದು ಒತ್ತಾಯಿಸಿದ್ದರು.

ಕಾಯಾ-ವಾಚಾ-ಮನಸಾ ಅಖಂಡ ಕರ್ನಾಟಕವನ್ನು ಬಯಸಿದ್ದ ಡಾ. ಬಳ್ಳಾರಿ ಕಣ್ಮರೆಯಾದರು ನಿಜ. ಆದರೆ ಅವರ ಆದರ್ಶಗಳು, ಆಶಯಗಳು ಈಡೇರುವಂತೆ ನೋಡಿಕೊಳ್ಳಬೇಕಾದ್ದು ಕನ್ನಡಿಗರೆಂದೆನಿಸಿಕೊಳ್ಳುವವರ ಕರ್ತವ್ಯ. ●

ಇದುವೆ ಜೀವ ಇದು ಜೀವನ

ನಮ್ಮ ಮನೆಯ ಕೆಲಸದವಳು ತುಂಬ ಚುರುಕು. ದಕ್ಷ ಹಾಗೂ ಸಮಯ ಪ್ರಜ್ಞೆಯ ವಳು. ಅದೊಂದು ದಿವಸ ಅವಳು ಕೆಲಸಕ್ಕೆ ಬರುವಾಗ ತುಂಬ ತಡ. ಅವಳ ಮಾಸಿದ ಸೀರೆ, ಹರಿದ ಕುಪ್ಪುಸ ಹಾಗೂ ಕೆದರಿದ ಕೂದಲು ಅವಳಿಗೆ ಏನೋ ಆಗಬಾರದ್ದು ಆದಂತೆ ಕಾಣುತ್ತಿತ್ತು.

ನಾನು ನೇರವಾಗಿ ಕೇಳಲು ಸ್ವಲ್ಪ ಸಂಕೋಚಪಟ್ಟರೂ, ನನ್ನವಳು ಕುತೂಹಲ ಹತ್ತಿಕ್ಕಬೇಕಲ್ಲ ''ಇದೇನೆ ನಿನ್ನ ಅವಾಂತರ?'' ನನ್ನವಳು ಕೇಳುತ್ತಾಳೆ. ನನ್ನ ಆಶ್ಚರ್ಯ, ಆತಂಕ ಹಾಗೂ ನೆಮ್ಮದಿಗೆ ಅಂತಹದೇನು ಆಗಿರಲಿಲ್ಲ. ಸುಮಾರಾಗಿ ಚೆನ್ನಾಗಿರುವ ಅವಳ ಮೇಲೆ ಯಾರೂ ಕೈ ಮಾಡಿರಲಿಲ್ಲ. ನಗರ ಸೌಂದರ್ಯಕ್ಕಾಗಿ ಯಾವ ಸರಕಾರವೂ ಅವಳ ಪುಟ್ಟ ಗುಡಿಸಲಿಗೆ ಬುಲ್‌ಡೋಜರ್ ಓಡಿಸಿರಲಿಲ್ಲ! ಅವಳ ಮಾತಿನಲ್ಲೇ ಹೇಳುವುದಾದರೆ,

ಸಾಲಮೇಳದ ಕಾರ್ಯಕ್ರಮದ ಅಡಿಯಲ್ಲಿ ಸಾಲಕ್ಕೆ ಅರ್ಜಿ ಹಾಕಲು ರಾಷ್ಟ್ರೀಕೃತ ಬ್ಯಾಂಕಿಗೆ ಹೋಗಿದ್ದಳು. ಒಳ್ಳೆಯ ಡ್ರೆಸ್ ಮಾಡಿಕೊಂಡರೆ ಇವಳಿಗೆ ಸಾಲದ ಅವಶ್ಯಕತೆ ಇಲ್ಲವೆಂದು ಸಾಲ ಕೊಡುವುದಿಲ್ಲವಂತೆ - ಸಿಗುವ 5000/- ಸಾಲದಲ್ಲಿ 3000/- ರೂ. ಬ್ಯಾಂಕಿನವರಿಗೆ ಪೊಲೀಸರಿಗೆ ಲಂಚದಂತೆ - ಉಳಿದ 2000/-ರೂ ಕೈಗೆ ಸಿಗುವುದಂತೆ ....! ಅದನ್ನೂ ಕೂಡ ಹಿಂತಿರುಗಿಸುವ ಅವಶ್ಯಕತೆಯಿಲ್ಲವಂತೆ ....! ಹೀಗಂತ ಅವಳ ಗಲ್ಲಿಯ ಲೀಡರ್ ಹೇಳಿರುವನಂತೆ - ಸ್ವತಃ ಬ್ಯಾಂಕ ಉದ್ಯೋಗಿಯಾದ ನನ್ನ ಹೃದಯ ಬಡಿತ ತೀವ್ರವಾಗುತ್ತದೆ.

● *ರಮಾನಂದ ಶರ್ಮಾ*

ಎಂಟು ಹತ್ತು ವರ್ಷಗಳ ಹಿಂದಿನ ಒಂದು ಘಟನೆ. (ಉದ್ದೇಶ ಪೂರ್ವಕ ಅನೇಕ ವರ್ಷಗಳ ನಂತರ ಘಟನೆಯ ಕುರಿತು ಬರೆಯುತ್ತಿದ್ದೇನೆ.) ಅಂದು ಜಿಲ್ಲೆಯ ಓರ್ವ ವಿದ್ವಾಂಸರ ಭಾಷಣ. ಎಂದಿನಂತೆ ಕಿಕ್ಕಿರಿದ ಜನ. ನಾವು ನಾಲ್ಕು ಜನ ಮಿತ್ರರು. ಒಬ್ಬರು ಯಕ್ಷಗಾನ ಕಲಾವಿದರು, ಇಬ್ಬರು ಕಾಲೇಜು ಉಪನ್ಯಾಸಕರು ಮುಂದಿನ ಪಂಕ್ತಿಯಲ್ಲಿ ಆಸೀನರಾಗಿದ್ದೆವು. ಅಂದಿನ ಭಾಷಣಕಾರರು ಉದಯೋನ್ಮುಖ ಕಲಾವಿದರು, ಕವಿಗಳು, ವಿಮರ್ಶಕರು, ವಾಗ್ಮಿಗಳು ಎಲ್ಲವೂ ಆಗಿದ್ದರು! ಪ್ರತಿದಿನವೆಂಬಂತೆ ಪತ್ರಿಕೆಗಳ ಮೂಲಕ ಅವರ ಕೀರ್ತಿಯ ಪರಿಮಳ ಹರಡುತ್ತಲೇ ಇತ್ತು. ಆಗಾಗ ಜಿಲ್ಲೆಯ ಪ್ರಸಿದ್ಧ ಪತ್ರಿಕೆಗಳಲ್ಲಿ ಅವರ ಲೇಖನಗಳೂ ಕಾಣಸಿಕೊಳ್ಳುತ್ತಿದ್ದುವು. ಹೀಗಾಗಿ ಈ ಯುವ ವಿದ್ವಾಂಸರ ಭಾಷಣವನ್ನು ಕೇಳುವುದರಲ್ಲಿ ನಾವೂ ತೀವ್ರ ಆಸಕ್ತರಾಗಿದ್ದೆವು.

ಭಾಷಣ ಪ್ರಾರಂಭವಾಯಿತು, ಒಂದು ಘಂಟೆಯ ಕಾಲ ನಿರರ್ಗಳವಾಗಿ ವಾಕ್ಪ್ರವಾಹ ಹರಿಯಿತು! ಸಮಯಕ್ಕೆ ಸರಿಯಾಗಿ ಮುಕ್ತಾಯವೂ ಆಯಿತು.

ಈ ಕಾರ್ಯಕ್ರಮದ ತರುವಾಯ ಬೇರೊಂದು ಮನೋರಂಜನಾ ಕಾರ್ಯಕ್ರಮ ಇತ್ತು. ಹಾಗಾಗಿ ಸಭೆ ಚದುರಿದರೂ ನಾವು ನಾಲ್ವರು ಅಲ್ಲೇ ಕುಳಿತಿದ್ದೆವು.

ಆದರೆ ಆ ದಿನದ ಭಾಷಣದ ಕುರಿತು ಸಭ್ಯರಲ್ಲಿ ಯಾರೊಬ್ಬರೂ ಚಕಾರವೆತ್ತಲಿಲ್ಲ. ಸುಮಾರು ಹತ್ತು ನಿಮಿಷಗಳ ತರುವಾಯ ಮೌನವಾಗಿರುವುದಕ್ಕೆ ಮನಸ್ಸೊಪ್ಪದೆ ನಮ್ಮ ಯಕ್ಷಗಾನದ ಕಲಾವಿದರು, "ಬಹಳ ಚೆನ್ನಾಗಿ ಮಾತನಾಡಿದರು, ಅಲ್ಲವೆ?" ಎಂದು ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. ಕೂಡಲೇ ಒತ್ತಿಟ್ಟ ಸ್ಪ್ರಿಂಗನ್ನು ಸಡಿಲ ಬಿಟ್ಟಂತಾಯಿತು. ಉಪನ್ಯಾಸಕ ಮಿತ್ರರೊಬ್ಬರು ತಡೆಯದೆ, "ಇಂದಿನ ಭಾಷಣದ ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು ನನ್ನನ್ನು ಕೇಳಬೇಕೆ? ನಾನೆಂದೆ, "ಸ್ವಾಮಿ, ಅವರು ಆರಿಸಿದ ವಿಷಯವೇನು? ಕೊಟ್ಟ ವಿವರಣೆ ಏನು? ಒಂದಕ್ಕೊಂದು ಸಂಬಂಧ ನನಗೇನೂ ಕಾಣಿಸಲಿಲ್ಲ. ಅಂತೂ ಎಲ್ಲಿಂದ ಎಲ್ಲಿಗೋ ಹಾರಿ ಏನೇನೋ ದೃಷ್ಟಾಂತಗಳನ್ನು ಹೇಳಿ, ಬೇರೆ ಬೇರೆ ಗ್ರಂಥೋಕ್ತಿಗಳನ್ನು ಧಾರಾಳವಾಗಿ ಚೆಲ್ಲಿದರು. ಅದ್ಭುತವೆಂದರೆ, ಒಂದು ಘಂಟೆಯ ಕಾಲ ಏನೇ ಇರಲಿ ನಿರರ್ಗಳವಾಗಿ ಮಾತನಾಡಿದರು! ಆದರೆ ಜಾತ್ರೆಗೆ ಹೋದ ಮಕ್ಕಳು ಮನೆಯವರು ಖರ್ಚಿಗೆಂದು ಕೊಟ್ಟ ಹಣವನ್ನು ವ್ಯರ್ಥ ಖರ್ಚು ಮಾಡಿದ ಹಾಗಾಯಿತು. ಆರಿಸಿಕೊಂಡ ವಿಷಯಕ್ಕೂ ಕೊಟ್ಟ ವಿವರಣೆಗೂ ಯದ್ವಾತದ್ವಾ ಸಂಬಂಧ.

ಇಷ್ಟೆಂದದ್ದೇ ಮತ್ತೊಬ್ಬರ ಬಾಯಿಂದ ಸ್ಪಷ್ಟ ವಿಮರ್ಶೆ ಹೊರಟಿತು. "ಬರೀ ಪ್ರಲಾಪ!"

ಯಕ್ಷಗಾನ ಕಲಾವಿದರಿಗೆ ಭಾಷಣ ನಿಜವಾಗಿ ಅರ್ಥವಾಗಿರಲಿಲ್ಲ. ಹಾಗೆಂದು ಹೇಳಿದರೆ ತಾನು ಸಣ್ಣವನೆನಿಸುತ್ತೇನೆ ಎಂಬ ಭಯದವರಾಗಿ, "ಚೆನ್ನಾಗಿ ಮಾತನಾಡಿದರು ಎಂದು ತಾನೇನೂ ಕಡಿಮೆಯವನಲ್ಲವೆಂದೂ ಪ್ರದರ್ಶಿಸುವುದಕ್ಕೆ ಮುಂದಾದರು. ಉಳಿದವರ ಅಭಿಪ್ರಾಯ ಕೇಳಿದ ಮೇಲೆ ಬೆಪ್ಪಾದರು. ಇಂದು ಹೆಚ್ಚಿನ ವಿಮರ್ಶೆಗಳು, ಭಾಷಣಗಳು ಹೀಗಿವೆಯೇ?! ಸತ್ಯ ಹೇಳುವುದಕ್ಕೆ ಭಯಪಟ್ಟು ಸುಮ್ಮನೆ ತೂಗಿ ತುಳಿತುಕೊಳ್ಳುತ್ತಾರೆಯೇ?

● ಪಿ. ವಾಮನಪ್ರಭು

1983ರಲ್ಲಿ ಮಾರ್ಚ್ ತಿಂಗಳಿನ ಒಂದು ದಿನ. ಪಿ. ಯು. ಸಿ. ಶಿಕ್ಷಣಕ್ಕಾಗಿ ನಾನಾಗ ಮೈಸೂರಿನಲ್ಲಿದ್ದೆ. ಸರಕಾರಿ ಅಂಧ ಮಕ್ಕಳ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ನನ್ನ ದೊಡ್ಡಪ್ಪ(ಅವರೂ ಅಂಧರು)ನವರನ್ನು ಮನೆಗೆ ಕರೆದುಕೊಂಡು ಬರಲು ಅವರ ಶಾಲೆಗೆ ಹೋಗಿದ್ದೆ. ನಾನು ಹೋದಾಗ ಅವರು ಪಾಠ ಮಾಡುತ್ತಿದ್ದ 'ಪಿರಿಯಡ್' ಇನ್ನೂ ಮುಗಿದಿರಲಿಲ್ಲ. ಹಾಗಾಗಿ, ಮಹಡಿಯ ಮೇಲಿನಿಂದ ಸುತ್ತಲಿನ ಪ್ರಕೃತಿಯನ್ನು ತನ್ಮಯತೆಯಿಂದ ಗಮನಿಸುತ್ತಿದ್ದೆ. ವಿಶಾಲವಾದ ಕಟ್ಟಡ. ಸುತ್ತಲೂ ವಿಶಾಲವಾದ ಬಯಲು. ರಸ್ತೆಯ ಇನ್ನೊಂದು ಬದಿಯಲ್ಲಿದ್ದ ಕಟ್ಟಡದಿಂದ ತಮ್ಮ 'ಪಿರಿಯಡ್' ಮುಗಿಸಿಕೊಂಡು, ರಸ್ತೆ ದಾಟಿ, ವಿಶಾಲವಾದ ಮೈದಾನದೊಳಕ್ಕೆ ಇಬ್ಬರು ವಿದ್ಯಾರ್ಥಿನಿಯರು ಪ್ರವೇಶಿಸಿದರು. ಇಬ್ಬರೂ ಅಕ್ಕ-ತಂಗಿಯರು, ಪೂರ್ಣ ದೃಷ್ಟಿಹೀನರು. ಆತ್ಮೀಯವಾಗಿ ಹರಟುತ್ತಾ, ನಿಧಾನವಾಗಿ ಬರುತ್ತಿದ್ದರು. ಆಗ, ಯಾವ ಮಾಯದಲ್ಲೋ ಮೈದಾನದೊಳಕ್ಕೆ ಪ್ರವೇಶಿಸಿದ್ದ ಹೋರಿಯೊಂದು ಬಲವಾಗಿ 'ಹೂಂ'ಕರಿಸುತ್ತಾ ಇವರೆಡೆಗೆ ನುಗ್ಗಿತು. ಎತ್ತ ಹೋಗಬೇಕು, ಏನು ಮಾಡಬೇಕೆಂಬುದನ್ನರಿಯದೇ ಭಯದಿಂದ ಕಿರುಚುತ್ತಾ ಓಡಿ, ಬಾಲಿಕೆಯರಿಬ್ಬರೂ ಒಂದೆಡೆ ಬಿದ್ದರು. ಇಷ್ಟರಲ್ಲೇ ಶಾಂತವಾದ 'ಹೋರಿ' ತನ್ನ ಪಾಡಿಗೆ ತಾನು ಹೊರಟು ಹೋಯಿತು. ಮಹಡಿಯ ಮೇಲಿನಿಂದ ಇದನ್ನು ನೋಡುತ್ತಿದ್ದ ನಾನು ದಿಙ್ಮೂಢನಾಗಿ ನಿಂತಿದ್ದೆ. ಕ್ಷಣಗಳಲ್ಲೇ ಸಾವರಿಸಿಕೊಂಡು ಮೇಲೆದ್ದ ಅವರಿಬ್ಬರೂ, ಒಬ್ಬರನ್ನೊಬ್ಬರು ಗಟ್ಟಿಯಾಗಿ ತಬ್ಬಿಕೊಂಡು ಅಳುತ್ತಾ ಮುಂದೆ ನಡೆದರು.

ಈ ಘಟನೆ ನಡೆದು ವರ್ಷಗಳೇ ಕಳೆದಿವೆ. ಆದರೆ, ನೆನಪಿನ್ನೂ ಹಚ್ಚಹಸುರಾಗಿದೆ. ದೃಷ್ಟಿಹೀನತೆಯ ಭೀಕರತೆ ಹಾಗೂ ಅಂಧರ ಅಸಹಾಕತೆಯನ್ನು ಇಷ್ಟೊಂದು ಪರಿಣಾಮಕಾರಿಯಾಗಿ ನನಗೆ ತಿಳಿಸಿಕೊಟ್ಟ ಘಟನೆ ಬೇರೊಂದಿಲ್ಲ.

● ನಾ. ಗಣೇಶರಾವ್

ವೈಜ್ಞಾನಿಕ ಪರಿಭಾಷೆಯಲ್ಲಿ — ದೇವರು ಇದ್ದಾನೆಯೇ?

ಹಾಲ್ಮತ್ತೂರು ಶ್ರೀಪತಿರಾವ್

'ದೇವರು ಇದ್ದಾನೆ' ಅಥವಾ 'ದೇವರು ಇಲ್ಲ' ಈ ವಿಚಾರದಲ್ಲಿ ಬೇಕಾದಷ್ಟು ತರ್ಕ ವಿತರ್ಕಗಳು ನಡೆದಿವೆ. ನಡೆಯುತ್ತಲೂ ಇವೆ. ಕೆಲವರಿಗೆ ಸಮರ್ಥನೀಯವಾಗಿ ಕಾಣುವ ತರ್ಕ. ಇನ್ನೂ ಕೆಲವರಿಗೆ ಅಸಂಬದ್ಧವಾಗಿ ಕಾಣುವುದಿದೆ. ಇಂತಹ ವಿಚಾರಗಳನ್ನು ಒಮ್ಮತ ಸಾಧ್ಯವಿಲ್ಲದಿದ್ದರೂ ವಿವಿಧ ದೃಷ್ಟಿ ಕೋಣಗಳುಳ್ಳ ಚರ್ಚೆ ನಡೆದರೆ ತಪ್ಪೇನಿಲ್ಲ.

ನಾವು ವಾಸಿಸುತ್ತಿರುವ ಇಂದಿನ ಯುಗದಲ್ಲಿ, ವಿಜ್ಞಾನ ಮತ್ತು ವೈಜ್ಞಾನಿಕ ದೃಷ್ಟಿಯಿಂದ ದೂರ ಸರಿದು ತೆಗೆದುಕೊಳ್ಳುವ ಯಾವ ನಿರ್ಣಯಗಳೂ ಉತ್ತಮ ನಿರ್ಣಯಗಳಾಗಲು ಸಾಧ್ಯವಿಲ್ಲ. ಏಕೆಂದರೆ ವಿಜ್ಞಾನ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿದ್ದು, ವೈಜ್ಞಾನಿಕ ಅಳತೆಗೋಲಿನಿಂದ ಸಮರ್ಥಿಸಲಾಗದುದೆಲ್ಲಾ 'ಕಲ್ಪನೆ' ಹಾಗೂ 'ಅಸತ್ಯ' ಎನಿಸಿದರೆ ಆಶ್ಚರ್ಯವಿಲ್ಲ.

'ಧರ್ಮ' 'ದೇವರು' ಇಂತಹ ಗಹನ ವಿಚಾರಗಳಲ್ಲಿ ವಿಜ್ಞಾನ ಏನು ಹೇಳುತ್ತದೆ? ವಿಜ್ಞಾನ ಏನೂ ಹೇಳದಿದ್ದಾಗ ಅದು ವಿಜ್ಞಾನದ ಅಸಾಮರ್ಥ್ಯವನ್ನು ಸೂಚಿಸುವುದೇ? ಅಥವಾ ಅದು ತನ್ನ ತೀರ್ಮಾನನ್ನು ಕೊಡಲು ಸಾಧ್ಯವಾಗದ ಕಾರಣ ನಾವು 'ಧರ್ಮ' 'ದೇವರು' ಇಂತಹ ವಿಚಾರಗಳನ್ನು ನಮ್ಮ ತಲೆಯಿಂದ ತೆಗೆದು ಹಾಕಬೇಕೆಂದು ಅರ್ಥವೇ?

ಪ್ರಯೋಗದ ಮೂಲಕ ಸಿದ್ಧವಾದಾಗ ಮಾತ್ರ, ಅದು ಸ್ವೀಕಾರಯೋಗ್ಯ ಎನ್ನುವುದಾದರೆ, ದೇವರನ್ನು ಪ್ರಯೋಗ ಮೂಲಕ ಸಿದ್ಧ ಮಾಡಿ ತೋರಿಸಲು ಈವರೆಗೆ ಸಾಧ್ಯವಾಗಿಲ್ಲ; ಹಾಗೂ ಮುಂದೂ ಸಾಧ್ಯವಾಗುವ ಸಂಭವವಿಲ್ಲ ಎನ್ನಬೇಕು. ಏಕೆಂದರೆ ಪ್ರಯೋಗಗಳೆಲ್ಲವೂ ಕಾಲ ಮತ್ತು ಸ್ಥಳ (Time and Space)ದ ಮಿತಿಯಲ್ಲಿ ನಡೆಯುವುದು. ಒಮ್ಮೆ ಕಾಲ ಮತ್ತು ಸ್ಥಳದ ಪರಿಮಿತಿಯಲ್ಲಿ ವೈಜ್ಞಾನಿಕ ಪ್ರಯೋಗ ಮುಖಾಂತರ ದೇವರನ್ನು ಗುರುತಿಸುವುದು ಸಾಧ್ಯವಾಯಿತೆಂದುಕೊಳ್ಳೋಣ. ಆಗ ಆ ದೇವರು ದೇವರಾಗಿ ಉಳಿಯುವುದಿಲ್ಲ; ಏಕೆಂದರೆ ಅಂತಹ ದೇವರು ಇದ್ದಾನೆಂದು ನಮಗೆ ಗೊತ್ತಾದ ಮೇಲೆ ಅವನನ್ನು (ಅಥವಾ ಅದನ್ನು) ನಾವು ಯಾವ ಯಾವ ಪ್ರಯೋಜನಕ್ಕೆ ಬಳಸಿಕೊಳ್ಳಬಹುದು? ಅವನನ್ನು ಉಪಯೋಗಿಸಿಕೊಳ್ಳುವುದು (Harnessing) ಹೇಗೆ? ಈ ರೀತಿಯಾಗಿ ನಾವು ವೈಜ್ಞಾನಿಕವಾಗಿ ಚಿಂತಿಸಬೇಕಲ್ಲವೇ? ವಿಜ್ಞಾನದ (Science) ಜತೆಯಲ್ಲಿ ತಂತ್ರಜ್ಞಾನ (Technology)ವನ್ನೂ ಕಾರ್ಯಗತ ಮಾಡಬೇಕಲ್ಲವೇ? ಇಲ್ಲದಿದ್ದರೆ ವಿಜ್ಞಾನದ ಆವಿಷ್ಕಾರದಿಂದ ಏನು ಪ್ರಯೋಜನವಾದೀತು! ಅಂದಮೇಲೆ ಆಗ ಅವನು ದೇವರಾಗಿ ಉಳಿಯಲು ಸಾಧ್ಯವಿಲ್ಲ. ಏಕೆಂದರೆ ದೇವರು ಸರ್ವನಿಯಂತ್ರಕ. ಅವನನ್ನು ನಾವೇ ನಿಯಂತ್ರಿಸಲು ಪ್ರಾರಂಭಿಸಿದ್ದೇವಲ್ಲವೇ? ಆದ್ದರಿಂದ ಅವನು ದೇವರಿರಲಾರ. ಅಥವಾ ಅವನೇ ದೇವರಾಗಿದ್ದರೆ

ಅವನನ್ನು ಉಂಟು ಮಾಡಿದ ಇನ್ನೊಬ್ಬ ದೇವರಿರಲೇಬೇಕು! ಆ ದೇವರನ್ನು ನಾವು ಪ್ರಯೋಗಶಾಲೆಯಲ್ಲಿ ಪುನಃ ಹುಡುಕಬೇಕಾದೀತು!

ವಿಜ್ಞಾನದ ಅಸಾಮರ್ಥ್ಯವನ್ನು ವಿವರಿಸಲು ನಾನು ಪ್ರಯತ್ನಿಸಿಲ್ಲ. ಎಲ್ಲವೂ ಪ್ರಯೋಗಶಾಲೆಯಲ್ಲಿಯೇ ಸಮರ್ಥಿಸಲ್ಪಡಬೇಕೆಂದು ವಿಜ್ಞಾನ ಎಲ್ಲಿಯೂ ಹೇಳಿಯೂ ಇಲ್ಲ. ಯಾವ ವಿಚಾರಗಳಲ್ಲಿ ಪ್ರಯೋಗ, ಲ್ಯಾಬೊರೇಟರಿಗಳು ಪ್ರವೇಶಿಸುವುದು ಸಾಧ್ಯವಿಲ್ಲವೋ, ಅಲ್ಲಿ ನಮಗೆ ವೈಜ್ಞಾನಿಕ ಚಿಂತನೆಗಳು ಅವಶ್ಯ. ವೈಜ್ಞಾನಿಕ ಚಿಂತನೆ ಮೂಢವಾಗಿ ಏನನ್ನೂ ಒಪ್ಪುವುದಿಲ್ಲ. ವೈಜ್ಞಾನಿಕ ಚಿಂತನೆಗೆ ಇನ್ನೊಂದು ಹೆಸರು ವೈಚಾರಿಕತೆ. ಈ ವೈಚಾರಿಕತೆ ಭಾರತೀಯರಾದ ನಮಗೆ ಹೊಸತಲ್ಲ. ಇಲ್ಲೊಂದು ಮಾತು, ವೈಚಾರಿಕತೆಯ ಲಾಂಛನದ ಅಡಿಯಲ್ಲಿ, ವೈಜ್ಞಾನಿಕ ಆರಾಧಕ (Votaries)ರೆಂದು ತೋರಿಸಿಕೊಳ್ಳುವ ಆತುರದಲ್ಲಿ, ನಾವು ಒಮ್ಮೊಮ್ಮೆ ಎಷ್ಟೋ ವಿಷಯಗಳನ್ನು ಪರಿಶೀಲಿಸದೆಯೇ ತಿರಸ್ಕರಿಸುವುದು ಎಲ್ಲೆಲ್ಲೂ ಕಂಡುಬರುತ್ತಿದೆ. ಇದೊಂದು ದುಃಖದ ಸಂಗತಿ. ನಿಜವಾದ ವೈಜ್ಞಾನಿಕತೆಗೂ ಪೂರ್ವ ಗ್ರಹ(Prejudice)ಕ್ಕೂ ಅತಿ ದೂರ. ವೈಜ್ಞಾನಿಕ ಅಳತೆಗೋಲಿನಿಂದ ಇನ್ನೂ ತೀರ್ಮಾನವಾಗಬೇಕಿರುವ ವಿಷಯಗಳಲ್ಲಿ ವಿಚಾರವಂತರು ಪರ-ವಿರೋಧ ನಿಲುವನ್ನು ತಾಳುವುದು ಸರಿಯಲ್ಲ. ಸದಾ ತೆರೆದ ಮನಸ್ಸು ಮಾತ್ರ ಸತ್ಯವನ್ನೇ ಅರಸೀತು.

ಪ್ರಯೋಗಶಾಲೆ (Labouratory) ಮತ್ತು ತಂತ್ರಜ್ಞಾನ (Technology)ಗಳ ಇತಿಮಿತಿಯನ್ನು ಮೀರಿದ, ಆದರೆ ಮಾನವನನ್ನು ಸದಾ ಕಾಡುವ, ಅನೇಕ ಪ್ರಶ್ನೆಗಳಲ್ಲಿ 'ದೇವರಿದ್ದಾನೆಯೇ' ಎಂಬುದೂ ಒಂದು. ಈ ಪ್ರಶ್ನೆಯು ಇತರ ಅನೇಕ ಪ್ರಶ್ನೆಗಳನ್ನು ಒಳಗೊಂಡಿದೆ. ಈ ಎಲ್ಲಾ ಪ್ರಶ್ನೆಗಳನ್ನೂ ಒತ್ತಟ್ಟಿಗೆ ಚರ್ಚಿಸುವುದು ಈ ಲೇಖನದ ವ್ಯಾಪ್ತಿಯನ್ನು ಮೀರಿಸಿದೆ. ಆದರೆ ಕೆಲವೊಂದು ಪ್ರಶ್ನೆಗಳನ್ನು ಪಟ್ಟಿ ಮಾಡಿದಾಗ ಮಾತ್ರ ವಿಷಯ ಎಷ್ಟೊಂದು ಗಹನವಿದೆ ಎಂಬುದು ನಮಗೆ ಗೊತ್ತಾಗುವುದು.

1) ದೇವನೊಬ್ಬನಿದ್ದರೆ ಈ ವಿಶ್ವವನ್ನು ಸೃಜಿಸಿ ಇದನ್ನು ಅವಿರತವಾಗಿ ನಡೆಸುವ ಅವನ (ಅವಳ/ಅದರ) ಉದ್ದೇಶವೇನಿರಬಹುದು? ಇದರಿಂದ ಪ್ರಯೋಜನವೇನು? ಇದಕ್ಕೆ ಕೊನೆ ಎಲ್ಲಿ?

2) ಆದಿ ಮತ್ತು ಅಂತ್ಯ ಕಾಣದ ಈ ಅದ್ಭುತ ವಿಶ್ವದಲ್ಲಿ ನಮ್ಮ ಸೌರವ್ಯೂಹವನ್ನು ಹೋಲುವ ಲೆಖ್ಖವಿಲ್ಲದಷ್ಟು ಸೌರವ್ಯೂಹಗಳು ಒಂದೊಂದು 'ಗೆಲಾಕ್ಸಿ'(ಕ್ಷೀರಪಥ)[1] ಯಲ್ಲಿವೆ. ಇಂತಹ ಗೆಲಾಕ್ಸಿಗಳ ಒಂದೊಂದು ಸಮೂಹ (Cluster)ಗಳೂ ಲೆಖ್ಖವಿಲ್ಲದಷ್ಟು, ಕೊನೆಯೇ ಕಾಣದಷ್ಟು ಇರುವ ವಿಶ್ವ ಇದು. ಇಂತಹ ವಿಶ್ವಕ್ಕೆ ದೇವನೊಬ್ಬನಿದ್ದಾನೆ ಎಂಬುದು ಬರಿ ಕಲ್ಪನೆ ಅಥವಾ ಕಟ್ಟುಕತೆಯಾಗಿ ಕಾಣುವುದೇ?

3) ಈ ಅಗಾಧ ವಿಶ್ವವು ವಿವಿಧ ಶಕ್ತಿಗಳ ಸಂಘರ್ಷದಿಂದ ಉಂಟಾಯಿತು, ಎನ್ನೋಣವೇ? ಹಾಗೆಂದೇ ಒಪ್ಪುವುದಾದರೂ ಆ ಸಂಘರ್ಷದಲ್ಲೂ ಒಂದು ಸಂಘಟನೆ, ಕ್ರಮಬದ್ಧತೆ, ಗುರಿ ಇರುವುದಾದರೆ,[2] ಎಲ್ಲವೂ ಒಂದು ನಿಯಂತ್ರಣಕ್ಕೊಳಪಟ್ಟಿದೆ ಎಂದು ಅರ್ಥವೇ? ಆ ನಿಯಂತ್ರಣವನ್ನೇ ನಾವು ದೇವರೆಂತ ಕರೆಯಬಹುದೇ?

4) ನಾವು 'ಸೃಷ್ಟಿವಾದ' (Theory of creation)ವನ್ನು ಒಪ್ಪುವವರಾಗಿರಲಿ, ಅಥವಾ 'ವಿಕಾಸವಾದ' (Theory of evduction)ವನ್ನು ಒಪ್ಪುವವರಾಗಿರಲಿ, ಈ ವಿಶ್ವದಲ್ಲಿ ಅತ್ಯಂತ ಆಶ್ಚರ್ಯಮಯ ಮತ್ತು ಪ್ರಕೃತಿಯ 'ಅದ್ಭುತ' ಎನ್ನಬಹುದಾದುದು ಮಾನವನ ಚಿಂತನಶಕ್ತಿ (Inteligence)ಯು ಎಂಬುದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಇಂತಹ ಅದ್ಭುತವನ್ನು ವಿಶ್ವದಲ್ಲಿ ಇರಿಸಿದುದು ಮತ್ತು ಸದಾ ಕಾರ್ಯೋನ್ಮುಖವಾಗಿ ಮಾಡಿರುವುದು, ಯಾವ ಶಕ್ತಿಯೇ ಆಗಿರಲಿ ಅದು 'ಜಡ'

ವಂತೂ ಆಗಿರಲಾರದು, ಅಲ್ಲವೇ? 'ಜಡ 'ದಿಂದ 'ಚೇತನ' ಉಗಮಿಸಲಾರದು ಎಂಬ ಸಂಗತಿಯನ್ನು ನಾವು ಒಪ್ಪುವುದಾದರೆ, ಇದೆಲ್ಲದರ ಹಿಂದೆ ನಾವು ಒಂದು 'ವಿಶ್ವ ಚೇತನ'ವನ್ನು ಗುರುತಿಸಬೇಕಾಗುವುದೇನೋ![3] ಅದನ್ನೇ 'ದೇವರು ಎಂದು ಗುರುತಿಸಬಹುದೇ?

5) ಈ ವಿಶ್ವದಲ್ಲಿ ಎಲ್ಲವೂ ಸೂಕ್ಷ್ಮಸ್ಥಿತಿಯಿಂದ ಸ್ಥೂಲತೆ (manifestation)ಯನ್ನು ಪಡೆಯುವುದು. ಒಂದು ಚಿಂತನೆಯ ಪ್ರಕಾರ ಸ್ಥೂಲ ಎಂಬುದು ಸೂಕ್ಷ್ಮ (unmanifest)ದ ಬಾಹ್ಯ ಸ್ವರೂಪ. 'ಸೂಕ್ಷ್ಮ'ವು ಅವ್ಯಕ್ತ, ಅಮೂರ್ತ, ಮತ್ತು ಅವರ್ಣನೀಯ. ವ್ಯಕ್ತ ಹಾಗೂ ಮೂರ್ತಗೊಂಡ ಮಾನವ ಈ 'ಅವ್ಯಕ್ತ' ಮತ್ತು 'ಅಮೂರ್ತ'ವನ್ನು ತನ್ನ ಪರಿಕರಗಳ ನೆರವಿನಿಂದ ತಿಳಿಯಲಾರ; ಬೌದ್ಧಿಕವಾಗಿ ಒಪ್ಪಬಹುದಷ್ಟೆ. ಆದರೆ ತನ್ನಲ್ಲಿ ತಾನು ಧ್ಯಾನಸ್ಥನಾದಾಗ ಅರಿಯಲು ಸಾಧ್ಯ. ಇದು ವಿಚಾರ ಯೋಗ್ಯವೇ?

6) ಈ ಭೌತಿಕ ವಿಶ್ವ ಅನೇಕ ನಿಯಮ (Physical, Chemical, Biological, Mathematical laws)ಗಳಿಂದ ಕೂಡಿದೆ. ಒಂದು ವೇಳೆ ನಿಯಮಗಳಿಲ್ಲದಿದ್ದರೆ, ಅಥವಾ ನಿಯಮಗಳಲ್ಲಿ ನಿಖರತೆ ಇಲ್ಲದಿದ್ದರೆ 'ವಿಜ್ಞಾನ' 'ತಂತ್ರಜ್ಞಾನ' ಎಂಬುದೇ ಇರುತ್ತಿರಲಿಲ್ಲ! ಏಕೆಂದರೆ ನಿಯಮಗಳಿಲ್ಲದ ವಿಶ್ವ ಒಂದು ಅವ್ಯವಸ್ಥಿತ ಸ್ಥಿತಿ (chaos) ಆಗುತ್ತಿತ್ತು. ವಿಶ್ವ ಅಸಂಖ್ಯ ನಿಯಮಗಳ ಸಂಗಮ ಎನ್ನುವುದಾದರೆ ಅಂತಹ ಅಸಂಖ್ಯ ನಿಯಮಗಳನ್ನು ಅಸ್ತಿತ್ವ(exist)ಗೊಳಿಸಿದ, ಇರುವಿಕೆಗೆ ಕಾರಣವಾದ, ಹಾಗೂ ಆ ಎಲ್ಲಾ ನಿಯಮಗಳಿಗೂ ಆಧಾರ(underlying)ವಾದ ಒಂದು ನಿಯಮವಿರಬೇಕು. ಅದನ್ನು 'ಜಗನ್ನಿಯಾಮಕ' ಎನ್ನೋಣವೇ? ದೇವರು ಎಂತಲೂ ಕರೆಯಬಹುದೇ?

7) ''ಮಾನವನ ಮಟ್ಟಿಗೆ ಹೇಳುವುದಾದರೆ 'ಹುಟ್ಟು' ಮತ್ತು 'ಸಾವು' ಇವುಗಳ ನಡುವೆ ಕೆಲಕಾಲ ನಲಿಯುವ, ನೋಯುವ ಬಾಳು ಅವನದು. 'ಜಗನ್ನಿಯಾಮಕ', 'ದೇವರು' ಇರಲಿ ಬಿಡಲಿ; ಅದನ್ನು ವಿಚಾರ ಮಾಡುವುದರಿಂದ ಅವನಿಗೇನು ಪ್ರಯೋಜನ? ಸಾವು ಸಂಭವಿಸುವುದರೊಳಗೆ ಇರುವ ಬಾಳಿನಿಂದ ಆದಷ್ಟು ಸುಖ ಸಂತೋಷ ಹೊಂದಲು ಪ್ರಯತ್ನಿಸುವುದು ಒಳಿತಲ್ಲವೇ? ಏಕೆಂದರೆ ಸಾವೇ 'ಕೊನೆ'. ಸಾವಿನ ನಂತರ ಏನೂ ಇಲ್ಲ'' ಈ ರೀತಿ 'ವಿವೇಕ'ದ ಮಾತನಾಡುವವರನ್ನು ನಾವೆಲ್ಲರೂ ಕೇಳಿದ್ದೇವೆ. ಆದರೆ ಇಂತಹ 'ವಿವೇಕ'ದ ಮಾತನಾಡುವವರೂ ಒಮ್ಮೊಮ್ಮೆ ಸಮಸ್ಯೆಗಳ ಸುಳಿಯಲ್ಲಿ, ಸಂದೇಹದ ಬಿರುಗಾಳಿಯಲ್ಲಿ, ಪ್ರಶ್ನೆಗಳ ರಾಶಿಯಲ್ಲಿ, ಸಿಕ್ಕಿ ಒದ್ದಾಡುತ್ತಿದ್ದುದನ್ನು ನಾವೆಲ್ಲರೂ ಕಂಡಿದ್ದೇವಲ್ಲವೇ? ಆದ್ದರಿಂದ ವಿಜ್ಞಾನ ಸತತ ಪರಿಶೀಲಿಸುತ್ತಿರುವ ಹಾಗೂ ದೇವರಿರುವನೇ ಇಲ್ಲವೋ ಎಂಬ ಪ್ರಶ್ನೆಯೊಂದಿಗೇ ಬೆಸೆದುಕೊಂಡಿರುವ ಇನ್ನೊಂದು ಪ್ರಶ್ನೆ 'ಸಾವು ಜೀವನದ ಕೊನೆಯೇ? ಸಾವಿನಾಚೆಗೆ ನಮ್ಮ ಇಂದ್ರಿಯಗಳಿಗೆ ಅಗೋಚರವಾದ, ಆದರೆ ಸಾವನ್ನು ಪಡೆದವರಿಗೆ ತುಂಬ 'ನಿಜ'ವಾದ ಸೂಕ್ಷ್ಮ, (refined), ಆದರೆ ಅನುಭವಗಮ್ಯ, ಚತುರ್ಪರಿಮಾಣ (four dimensional), ಗುಣ ಹೊಂದಿದೆ ಎಂದು ಹೇಳಲಾದ, ವಿಶ್ವವೊಂದು ಇದೆಯೇ? ಜಗತ್ತಿನ ಹಲವು ಧರ್ಮಗಳಲ್ಲಿ ಸ್ಪಷ್ಟವಾಗಿಯೂ, ಇನ್ನು ಕೆಲವು ಧರ್ಮಗಳಲ್ಲಿ ಅಸ್ಪಷ್ಟವಾಗಿಯೂ, ಕೆಲವೆಡೆ ಉತ್ಪ್ರೇಕ್ಷೆಯಿಂದಲೂ ಪ್ರತಿಪಾದಿತವಾಗಿರುವ ಪರಲೋಕ (ಪರ= ಮೀರಿದ, Beyond), ಪುನರ್ಜನ್ಮಗಳ ವೈಜ್ಞಾನಿಕ ಪರಿಶೀಲನೆ ನಡೆದಿದೆಯೇ?[4] ಜೀವನದ (ಜೀವಿಗಳ) ಅಂತಿಮ ಲಕ್ಷ್ಯದ ಬಗ್ಗೆ ವೈಜ್ಞಾನಿಕ ಚಿಂತನೆ ನಡೆಸದೇ, ದೇವರಿದ್ದಾನೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆ

ಯನ್ನು ಪ್ರತ್ಯೇಕಗೊಳಿಸಿ ಚರ್ಚಿಸುವುದು, ತರ್ಕಿಸುವುದು, ಪ್ರಶ್ನೆಯನ್ನು ಜಟಿಲಗೊಳಿಸಿದಂತಾಗುವುದಿಲ್ಲವೇ?

ಈ ಮೇಲಿನ ಪ್ರಶ್ನೆಗಳು ನಮ್ಮನ್ನು ವೈಜ್ಞಾನಿಕವಾಗಿ ಚಿಂತಿಸುವಂತೆ ಮಾಡಲು, ಸಹಾಯವಾಗಬಹುದೆಂದು ಭಾವಿಸಲಾಗಿದೆ. ಅವುಗಳಿಗೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ, ಎಂಬುದು ನಾವು ಬೆಳೆಸಿಕೊಂಡ ವೈಜ್ಞಾನಿಕ ದೃಷ್ಟಿಯನ್ನು ಅವಲಂಬಿಸಿದೆ. ರೂಢ ಮೂಲ ನಂಬಿಕೆಗಳ ಮೊರೆ ಹೊಕ್ಕರೆ (ರೂಢ ಮೂಲ ನಂಬಿಕೆಗಳೆಲ್ಲಾ ಅವೈಜ್ಞಾನಿಕ ಮತ್ತು ಮೂಢ ನಂಬಿಕೆಗಳು ಎಂದು ಇದರ ಅರ್ಥವಲ್ಲ), ಸತ್ಯದಿಂದ ದೂರ ಸರಿಯುವ ಅಪಾಯವಿದೆ.

ಜಗತ್ಪ್ರಸಿದ್ಧ ವಿಜ್ಞಾನಿ ಆಲ್‌ಬರ್ಟ್ ಐನ್‌ಸ್ಟೀನ್ (Albert Einstein)ರವರು ದೇವರ ಬಗ್ಗೆ, ಧರ್ಮದ ಬಗ್ಗೆ ಹೀಗೆ ಹೇಳಿದ್ದಾರೆ:

My religion Consists of a humble admiration of the Superior spirit, who reveals himself in the slight details we are able to perceive, with our frail and feeble minds. that deeply emotional conviction of the presence of a superior reasoning power, which is revealed in the in comprehensible universe forms my idea of God.[5]

ದೇವರ ವಿಚಾರದಲ್ಲಿ ಐನ್‌ಸ್ಟೈನ್‌ರವರ ಉದಾತ್ತ ಚಿಂತನೆಯ 'ಮುಂದುವರಿಕೆ'ಯನ್ನು ನಾವು ನಮ್ಮ ಉಪನಿಷತ್ತುಗಳಲ್ಲಿ ಕಾಣಬಹುದೇ?

ಸೂಕ್ಷ್ಮಾತಿ ಸೂಕ್ಷ್ಮಂ ಕಲಿಲಸ್ಯಮಧ್ಯೇ
ವಿಶ್ವಸ್ಯ ಸೃಷ್ಟಾರ ಮನೇಕ ರೂಪಮ್।
ವಿಶ್ವಸ್ಯೈಕಂ ಪರಿವೇಷ್ಟಿ ತಾರಂ
ಜ್ಞಾತ್ವಾ ಶಿವಂ ಶಾಂತಿ ಮತ್ಯಂತ ಮೇರಿ।
ತಮೀಶ್ವರಾರಾಂ ಪರಮಂ ಮಹೇಶ್ವರಂ
ತಂದೇವಾನಾಂ ಪರಮಂ ಚ ದೈವತಂ।
ಪತಿಂ ಪತೀ ನಾಂ ಪರಮಂ ಪರಸ್ತಾ
ದ್ವಿದಾಮ ದೇವಂ ಭುವನೇಶಮೀಡ್ಯಂ।

1 ಒಂದು ಸೆಕೆಂಡಿಗೆ ಬೆಳಕು 186,000 ಮೈಲಿ ವೇಗದಲ್ಲಿ ಹಾಯುತ್ತದೆ. ಎಂದರೆ ಒಂದು ವರ್ಷದಲ್ಲಿ



ಬೆಳಕು ಎಷ್ಟು ದೂರ ಹಾಯುತ್ತದೆ ಎಂಬುದನ್ನು ನೀವೇ ಲೆಖ್ಖ ಹಾಕಿ ನೋಡಿ! ಇದಕ್ಕೆ ಬೆಳಕಿನ ವರ್ಷ ವೆಂತ ಹೇಳಲಾಗುತ್ತದೆ. ನಮ್ಮ ಗೆಲಾಕ್ಸಿಯಿಂದ ನಮಗೆ ಹತ್ತಿರವಿರುವ ಗೆಲಾಕ್ಸಿಯೊಂದಕ್ಕೆ ಬೆಳಕಿನ ವೇಗದಲ್ಲಿ ಪ್ರಯಾಣ ಮಾಡಲು ಸಾಧ್ಯವಾಗುವುದಾದರೆ ಅಲ್ಲಿಗೆ ತಲುಪಲು 2,00000 ವರ್ಷಗಳು ಬೇಕಾಗುತ್ತದೆ! Carl Sagan ಎಂಬ Space ವಿಜ್ಞಾನಿಯು 'COSMES' ಎಂಬ ಕನ್ನಡ ಗ್ರಂಥದ 165ನೇ ಪೇಜಿನಲ್ಲಿ ಹೀಗೆ ಹೇಳಿದ್ದಾನೆ: The Two Voyager space craft, the fastest madines ever launched from earth, are now travelling at one ten thousand the speed of light. They would need 40,000 years to go the distance to the nearest star! Do we have any hope of leaving earth and traversing immense distances? [2]ಕಾಸ್ಮೋಲ ಜಿಸ್ಟ್ Paul Davisನು Superforce ಎಂಬ ತನ್ನ ಗ್ರಂಥದ 243ನೇ ಪೇಜಿನಲ್ಲಿ ಹೀಗೆ ಹೇಳಿದ್ದಾನೆ: If Physics is the product of design, the universe must have a purpose and the evidence of modern Physics requests strongly that purpose includes 'us'.

[3] John Hopkins University oberhini collegeನಲ್ಲಿ Professor of Zoology ಮತ್ತು research Associate ಆಗಿದ್ದ ವಿಜ್ಞಾನಿ Maynard. M. Matcalf A.B., Ph.D., Sc.D.ರವರು The Great Design ಎಂಬ ಗ್ರಂಥದ 217-219 ಪೇಜುಗಳಲ್ಲಿ ಈ ರೀತಿ ಹೇಳಿದ್ದಾರೆ:

Is the force, which is all there is itself intelligent and purposeful; or is it controlled by some thing other than itself, which is intelligent and purposeful in its exercise of control; or is it all blind, mechanical with nothing of intelligence or purpose?

I can find no evidence in favour of conceiving of two district entities, a force which is the universe and something besides the universe which controls the universal force; though such conception world not affect our search for intelligent purpose in it all, I have no quarell with the man who prefers the dualistic conception. The indication of intelligent purose are same in either case.

Our question "Is nature personal?" which is essentially the same as "Is there intelligence and purpose in nature?" Suggests that we look in the matter and see if we find intelligence and purpose. As we have said the wonderful and well-migh infinitery diversified adaplations seen in nature might well suggest this. Man is part of nature and man possesses intelligence. If sender a bit of nature (Man as) built up by nature in her growth has the inexpressibly great and valueble qualities interent in personality, can if be other wise with nature herself? Can the part be infinitely greater qualitatively than the whole? To me the very asking of question is its answer .... With the ever present urge to ward unifying underlying relations, I cannot but feel that the physical and spiritual are essentially one and that the spiritual aspect is primary, the physical its out working; in other words all is directed by INTELLIGENCE and is purposeful ....

[4] ಸಾವಿನಾಚೆಗಿನ ಸ್ಥಿತಿ, ಪುನರ್ಜನ್ಮ ಈ ವಿಚಾರಗಳಲ್ಲಿ ನಡೆದಿರುವ ವೈಜ್ಞಾನಿಕ ಅನ್ವೇಷಣೆಗಳ ಬಗ್ಗೆ ಈ ಲೇಖಕನಿಂದ ಮುಂದೆ ಬರಲಿರುವ ಲೇಖನ ಮಾಲೆಯನ್ನು ತಪ್ಪದೇ ಓದಿ.

[5] ಇದರ ಕನ್ನಡ ಭಾಷಾಂತರದ ಅವಶ್ಯಕತೆ ಇಲ್ಲವೆಂದು ಭಾವಿಸಿದ್ದೇನೆ. ಐನ್‌ಸ್ಟೀನ್ ಲೇಖನಿಯಿಂದ ಹರಿದು ಬಂದ ಇಂತಹ ಗಹನ ವಿಚಾರಧಾರೆಯೊಂದನ್ನು ಮೂಲಕ್ಕೆ ಅಪಚಾರವಾಗದಂತೆ ಭಾಷಾಂತರಿಸಲು ಪ್ರಯತ್ನಿಸುವುದು ಒಂದು ಸಾಹಸವಾಗುವುದೇನೋ.



ಪೆಲಿ ಪರ್ವತ ಬೆಂಕಿ ಕಾರಿದಾಗ



ಕೆ.ಐ.ಭಟ್

ಸ್ವರ್ಗ ಸಮಾನವಾಗಿದ್ದ ಆ ದ್ವೀಪನಗರ ಕೆಲ ನಿಮಿಷಗಳಲ್ಲೇ ರುದ್ರಭೂಮಿಯಾಯಿತು. ಮೂರೇ ಮೂರು ನಿಮಿಷಗಳಲ್ಲಿ 40 ಸಾವಿರ ಜನರು ಪ್ರಾಣ ಬಿಟ್ಟರು. ಈ ಶತಮಾನದ ಪ್ರಾರಂಭ ಕಾಲದಲ್ಲಿ ಸಂಭವಿಸಿದ ಅತಿ ಭೀಕರ ಜ್ವಾಲಾಮುಖಿಯ ಕಥೆ ಇದು.

ಮಾರ್ಟಿನಿಕ್ (ವೆಸ್ಟ್ ಇಂಡೀಸ್) ಎಂದು ಆ ದ್ವೀಪದ ಹೆಸರು. ಮೌಂಟ್ ಪೆಲಿ ಈ ದ್ವೀಪದಲ್ಲಿ ತಲೆ ಎತ್ತಿ ನಿಂತ ಒಂದು ಪರ್ವತ. ಪೆಲಿ ಮೌಂಟ್ ಎಂದರೆ 'ನಗ್ನ ಪರ್ವತ' ಎಂದು ಅರ್ಥ. ಯಾಕೆ ನಗ್ನ? ಜ್ವಾಲಾಮುಖಿಗೆ ಹೆಸರಾದ ಈ ಪರ್ವತ ದಲ್ಲಿ ಹಿಂದೆ ಆಗಾಗ್ಗೆ ಜ್ವಾಲಾಮುಖಿಗಳೇಳುತ್ತಿ

ದ್ದುದರಿಂದ ಅದರ ಮೇಲೆ ಹಸುರು ಹೊದಿಕೆ ಬೆಳೆಯುತ್ತಿರಲಿಲ್ಲ. ಅದಕ್ಕೇ ಈ ಹೆಸರು ಬಂದಿರಬೇಕು.

1902. ಮೌಂಟ್ ಪೆಲಿಯಲ್ಲಿ ಜ್ವಾಲಾಮುಖಿ ಸಿಡಿಯದೆ 51 ವರ್ಷಗಳು ಕಳೆದಿದ್ದವು. ಅದು ಈಗ ಸಸ್ಯಶ್ಯಾಮಲವಾಗಿತ್ತು. ಜನ ಸಂತಸದಿಂದ ಜೀವಿಸುತ್ತಿದ್ದರು.

ಹಿಂದೆ ಜ್ವಾಲಾಮುಖಿ ಕಾರಿದ್ದರೂ ಈಗ ಶಾಂತವಾದ ಮೌಂಟ್ ಪೆಲಿಯ ಬಗ್ಗೆ ಎಲ್ಲರೂ ನಿಶ್ಚಿಂತರಾಗಿದ್ದರು.

ವಸಂತ ಕಾಲ ಬಂತು. ಇದ್ದಕ್ಕಿದ್ದಂತೆ ಮಾರ್ಟಿನಿಕ್ ಪರ್ವತದ ಶಿಖರದಲ್ಲಿ ಹಬೆಯ ಮುಸುಕು ತೋರತೊಡಗಿತು. ಆಂ! ಪೆಲಿ ಸತ್ತಿಲ್ಲ, ಜೀವಂತವಾಗಿದೆ ಎಂದುಕೊಂಡರು ಭಯಗ್ರಸ್ತ ಮಾರ್ಟಿನಿಕ್‌ನ ಜನ. ಪೆಲಿಯ ಇಳಿಜಾರಿನಲ್ಲಿ ನೂರಾರು ಎಕರೆ ಕಬ್ಬಿನ ಬೆಳೆ ಬೆಳೆಸಿ ಕೋಟ್ಯಧಿಪತಿಯಾಗಿದ್ದ ಫೆರ್ನಾಂಡ್ ಕ್ಲರ್ಕ್‌ನೂ ಇದರಿಂದ ಕಳವಳಗೊಂಡ. ಮೇ 2ರಂದು ಪೆಲಿಯ ಶಿಖರ ಗರ್ಜಿಸಿ ಕಪ್ಪು ಹೊಗೆಯಾಡಿಸಿತು. ಅಗ್ನಿ ಜ್ವಾಲೆ ಎದ್ದಿತು. ಬೆಂಕಿ ಕಿಡಿಗಳು ಸಿಡಿದವು. ರಾತ್ರಿಯ ಕತ್ತಲೆಯಲ್ಲಂತೂ ಪೆಲಿಯ ಶಿಖರ ಮೃತ್ಯು ಬಾಯ್ದೆರದಂತೆ ತೋರುತ್ತಿತ್ತು.

ಮೇ ಐದರಂದು ಶಿಖರದ ಜ್ವಾಲಾಮುಖಿಯಿಂದ ಉದ್ಭವಿಸಿದ ಮೇಘವೊಂದು ಪೆಲಿಯ ತಪ್ಪಲಿನಿಂದ ಉರುಳಿ ಬಂದು ಒಂದು ಸಕ್ಕರೆ ಕಾರ್ಖಾನೆಯನ್ನು ಮುಸುಕಿ ಅದರ ಸಾಹುಕಾರ,

ಕಸ್ತೂರಿ ನಡೆದು ಬಂದ ದಾರಿ

1967ರ ಡಿಸೆಂಬರ್ ಸಂಚಿಕೆಯಿಂದ

ನಲವತ್ತು ಸಾವಿರ ಜನರನ್ನು ಕೆಲ ನಿಮಿಷಗಳಲ್ಲಿ ಅದು ಕೊಂದಿತು

ಅವನ ಹೆಂಡತಿ, ಒಬ್ಬ ತಾಂತ್ರಿಕ ಮತ್ತು 25 ಜನ ಕಾರ್ಮಿಕರನ್ನು ಸ್ವಾಹಾ ಮಾಡಿತು.

ಈ ಘೋರ ಸಂಗತಿಯಿಂದ ತಲ್ಲಣಿಸಿದ ಫೆರ್ನಾಂಡ್ ಕ್ಲರ್ಕ್ ಮತ್ತು ಪೆಲಿಯ ತಪ್ಪಲುಗಳಲ್ಲಿ ವಾಸಿಸುತ್ತಿದ್ದ ಇತರರು ಸಪರಿವಾರವಾಗಿ ಹತ್ತಿರದ ನಗರವಾದ ಸೆಂಟ್ ಪಿಯೆರಿಗೆ ಬಂದರು. 25 ಸಾವಿರ ಜನರಿದ್ದ ಆ ನಗರದ ಜನಸಂಖ್ಯೆ 40 ಸಾವಿರವಾಯಿತು. ನಗರದಲ್ಲಿ ಎಲ್ಲಿ ನೋಡಿದರಲ್ಲಿ ಜನಸಂದಣಿ, ಗದ್ದಲ. ಆದರೆ ಯಾರೂ ಅತಿಯಾಗಿ ಗಾಬರಿಗೊಳ್ಳಲಿಲ್ಲ. ಮೌಂಟ್ ಪೆಲಿಯ ಜ್ವಾಲಾಮುಖಿಯಿಂದ ಇಡೀ ಸೆಂಟ್‌ಪಿಯರಿಗೇ ಅಪಾಯ ಸನ್ನಿಹಿತವಾಗಿದೆ ಎಂದು ಕ್ಲರ್ಕ್ ತನ್ನ ಗೆಳೆಯರಿಗೆ ಹೇಳಿದರೂ ಅವರು, ''ಛೆ, ಛೆ, ನಗರಕ್ಕೆ ಎಲ್ಲಿಯ ಅಪಾಯ? ಅಪಾಯವೆಲ್ಲಾದರೂ ಇದ್ದರೆ ಅಲ್ಲಿ, ಪೆಲಿಯ ತಪ್ಪಲು ಪ್ರದೇಶದಲ್ಲಿ ಮಾತ್ರ'' ಎಂದು ತಿರಸ್ಕಾರ ಮಾಡಿಬಿಟ್ಟರು.

ಮೇ ಏಳರ ರಾತ್ರಿ, ಮೌಂಟ್ ಪೆಲಿಯು ಮತ್ತೊಮ್ಮೆ ಭಯಜನಕ ರೂಪದಿಂದ ಅಗ್ನಿ ಜ್ವಾಲೆ ಕಾರಿತು. ಸೆಂಟ್ ಪಿಯರಿಯ ಜನರೆಲ್ಲ - ನೀಗ್ರೋಗಳೂ ಬಿಳಿಯರೂ - ಇದನ್ನು ಬಿಡುಗಣ್ಣುಗಳಿಂದ ನೋಡಿದರು. ಹೆಚ್ಚಿನವರಿಗೆ ಇದೊಂದು ಮೋಜಿನ ದೃಶ್ಯವಾಗಿತ್ತು. ನಿಜವಾಗಿ ಭಯಗೊಂಡವರು ಕೆಲವೇ ಜನ.

ಫೆರ್ನಾಂಡ್ ಕ್ಲರ್ಕ್ ಸಂಸಾರಸಮೇತನಾಗಿ ಪಿಯರಿ ನಗರದ ಒಂದು ಮನೆಯಲ್ಲಿ ಅತಿಥಿಯಾಗಿ ವಾಸಿಸುತ್ತಿದ್ದ. ಮೇ ಏಳರ ರಾತ್ರಿ ಕ್ಲರ್ಕ್‌ಗೆ ನಿದ್ದೆಯೇ ಬರಲಿಲ್ಲ. ಬೆಳಿಗ್ಗೆ ಬೇಗನೇ ಎದ್ದು ಅವನು ಉಪಾಹಾರವನ್ನು ಮುಗಿಸಿದ. ಮನೆಯಲ್ಲಿ ನೆರೆದಿದ್ದ ತನ್ನ ಬಂಧುಗಳು ಮತ್ತು ಸ್ನೇಹಿತರಿಗೆ ಜ್ವಾಲಾಮುಖಿಯಿಂದ ಅಪಾಯ ಖಂಡಿತವೆಂಬ ತನ್ನ ಕಳವಳವನ್ನು ಕ್ಲರ್ಕ್ ವ್ಯಕ್ತಪ

ಡಿಸಿದಾಗ ನೆರೆದಿದ್ದವರು ಅವನ ಮಾತುಗಳನ್ನು ನಂಬಲಿಲ್ಲ. ಕ್ಲರ್ಕ್ ವಾಕ್ಯವನ್ನು ಮಧ್ಯದಲ್ಲೇ ನಿಲ್ಲಿಸಿ ವಾಯುಭಾರ ಮಾಪಕವನ್ನು ನೋಡಿದ. ಅದರ ಮುಳ್ಳು ಜೋರಾಗಿ ಕಂಪಿಸುತ್ತಿತ್ತು!

ಕ್ಲರ್ಕ್ ತಕ್ಷಣ ತನ್ನ ಗಾಡಿಯನ್ನು ಸಿದ್ಧಗೊಳಿಸಲು ಆಜ್ಞಾಪಿಸಿದ. ಆತ ಹೆಂಡತಿ ಮತ್ತು ತನ್ನ ನಾಲ್ವರು ಮಕ್ಕಳೆಡೆಗೆ ಒಂದು ಅರ್ಥಪೂರ್ಣ ದೃಷ್ಟಿ ಬೀರಿದ್ದೇ ತಡ, ಅವರು ತಯಾರಾದರು. ಕ್ಲರ್ಕ್ ಮತ್ತು ಅವನ ಸಂಸಾರವನ್ನು ಹೊತ್ತ ಗಾಡಿ ಪೆಲಿ ಪರ್ವತದಿಂದ ದೂರ ದಿಕ್ಕಿಗೆ ಸಾಗತೊಡಗಿತು.

ಸೆಂಟ್ ಪಿಯರಿಯ ಹೆಚ್ಚಿನ ಜನರೂ ಈಗ ಗಾಬರಿಗೊಳ್ಳಹತ್ತಿದ್ದರು. ದ್ವೀಪವನ್ನೇ ಬಿಟ್ಟು ಹೋಗಲು ಹಲವರು ಸಿದ್ಧತೆ ನಡೆಸತೊಡಗಿದರು. ಹೀಗೆ ತಮ್ಮ ವಸಾಹತಿನಿಂದ ಜನ ಸಾಮೂಹಿಕವಾಗಿ ಹೋಗತೊಡಗಿದರೆ ದ್ವೀಪವೇ ಖಾಲಿಯಾಗಬಹುದೆಂದು ಕಳವಳಗೊಂಡ ಗವರ್ನರ್ ಮೌಟೆಟ್ ತಾನೇ ಸ್ವತಃ ಪತ್ನಿಯೊಂದಿಗೆ ಸೆಂಟ್ ಪಿಯರಿಗೆ ಬಂದು ವಸತಿ ಹೂಡಿ, ವಿಹ್ವಲಗೊಂಡ ಜನರನ್ನು ಸಾಂತ್ವನಗೊಳಿಸುವ ಕಾರ್ಯಕ್ರಮಗಳನ್ನು ಕೈಗೊಂಡಿದ್ದ. ಆದರೂ ಸೆಂಟ್ ಪಿಯರಿಯ ಬಂದರದಿಂದ ಮೇ ಎಂಟರಂದು ಹೊರಡಲಿದ್ದ ರೋರೈಮಾ ಹಡಗದಿಂದ ಊರು ಬಿಡಲು ಅನೇಕರು ನಿರ್ಧರಿಸಿದ್ದರು.

ರೋರೈಮಾ ಹಡಗ ಸಂಸ್ಥೆಯ ಮುಖ್ಯಾಧಿಕಾರಿಯಾಗಿದ್ದ ಎಲೆರಿ ಸ್ಕಾಟ್ ಮತ್ತು ಕ್ಯಾಪ್ಟನ್ ಮುಗ್ಗಾರು ಮೇ ಎಂಟರ ಬೆಳಿಗ್ಗೆ ಆರು ಗಂಟೆಗೆ ಮೌಂಟ್ ಪೆಲಿಯ 4,500 ಅಡಿ ಉನ್ನತ ಶಿಖರವನ್ನು ನೋಡಿದಾಗ ಜ್ವಾಲಾಮುಖಿಯ ಅಟ್ಟಹಾಸ ಹೆಚ್ಚುತ್ತಲೇ ಇತ್ತು. ರೋರೈಮಾವನ್ನು ಏರಲು ಅನೇಕರು ಸಿದ್ಧರಾಗಿ ಓಡಾಡುತ್ತಿದ್ದರು.

1902ರ, ಮೇ ಎಂಟರಂದು ಸೆಂಟ್ ಪಿಯರಿಯ ಗಡಿಯಾರಗಳು ಎಂಟು ಗಂಟೆಗೆ ಹತ್ತು ನಿಮಿಷಗಳಿದ್ದಾಗ ನಿಂತವು. ಪೆಲಿ ಪರ್ವತದಾಚೆಯ ಸೂರ್ಯನ ಪ್ರಖರ ಕಿರಣಗಳ ಹಿನ್ನೆಲೆಯಲ್ಲಿ ಪೆಲಿಯ ಶಿಖರದಿಂದ ಬೃಹದಾಕಾರ ಆವಿಯ ಬುಗ್ಗೆಯೊಂದು ಮೇಲೆದ್ದಿತು. ಹಲವು ಬಂದೂಕುಗಳು ಒಮ್ಮೆಗೇ ಸಿಡಿದಂತೆ ಅಗ್ನಿ ಕಣಗಳು ಸಿಡಿದವು.

ಪೆಲಿಯ ಗರ್ಭದಲ್ಲಿ ಲಾವಾರಸ ಕುದಿದು ಪ್ರಳಯ ಭಯಂಕರ ಸ್ಫೋಟವಾಗಿ ಪೆಲಿಯ ನೆತ್ತಿ ಸಿಡಿದು ಹಾರಿತು. ಒಮ್ಮೆಲೇ ಜನ ತತ್ತರಿಸಿದರು. ಪರ್ವತದ ಮೇಲಿದ್ದ ಕಪ್ಪು ಹೊಗೆ ಆಕಾರದಲ್ಲಿ ಸಾವಿರಾರು ಅಡಿಗಳ ವಿಸ್ತೀರ್ಣಕ್ಕೆ ಪಸರಿಸಿತು. ಬೆಂಕಿಯ ಜ್ವಾಲೆಯೆದ್ದು ರಾಶಿ ರಾಶಿ ಬೂದಿ ತಪ್ಪಲಿನ ಭೂಭಾಗ ಮತ್ತು ಸಾಗರದ ಮೇಲೆ ಚೆಲ್ಲಿತು.

ಅಷ್ಟರಲ್ಲಿ ಸೆಂಟ್ ಪಿಯರಿ ನಗರದ ದಿಕ್ಕಿಗಿದ್ದ ಪೆಲಿಯ ಭಾಗ ಬಿರುಕು ಬಿಟ್ಟಿತು. ಅದರಿಂದ ಹೊರಹೊಮ್ಮಿದ ಅದ್ಭುತ ಮೋಡವೊಂದು ಅತಿ ರಭಸದಿಂದ ಮುನ್ನುಗ್ಗುತ್ತ ಬಂದು ಸೆಂಟ್ ಪಿಯರಿ ನಗರವನ್ನೂ ಕಾರ್ಬೆಟ್ ಮತ್ತು ಲೇಪ್ರಚ್ಯೂರ್ ಎಂಬೆರಡು ಹಳ್ಳಿಗಳನ್ನೂ ಪೂರ್ತಿಯಾಗಿ ವಿನಾಶಗೊಳಿಸಿತು. 40,000 ಜನ ನಿರ್ನಾಮವಾದರು. ಈ ಘೋರ ವಿನಾಶಕ್ಕೆ ತಗಲಿದ ಸಮಯ ಮೂರೇ ಮೂರು ನಿಮಿಷಗಳು.

ಫೆರ್ನಾಂಡ್ ಕ್ಲರ್ಕ್ ತನ್ನ ಮಕ್ಕಳು ಮತ್ತು ಪತ್ನಿಯನ್ನು ತಬ್ಬಿಕೊಂಡು ಬಹುದೂರದಿಂದ ಈ ರೌದ್ರ ದೃಶ್ಯವನ್ನು ನೋಡಿದ. ತಮ್ಮನ್ನು ರಕ್ಷಿಸಿದ ದೇವರನ್ನಾತ ಮನಸಾ ನೆನೆದ, ಆದರೆ ತನ್ನ ಅನೇಕಾನೇಕ ಬಂಧುಗಳು, ಮಿತ್ರರನ್ನು ಅವನು ಮತ್ತೆ ಕಾಣುವಂತಿರಲಿಲ್ಲ.

ಧಗಧಗ ಜ್ವಲಿಸುತ್ತಿದ್ದ ನಗರವನ್ನು ಹಾಗೇ ಬಿಟ್ಟು ಜ್ವಾಲಾಮುಖಿಯ ಆ ಮಾರಕ ಮೋಡ ಸಾಗರದತ್ತ ಸಾಗಿ ಮೃತ್ಯುತಾಂಡವವಾಡಿತು. ರೋರೈಮಾಕ್ಕೂ ಬೆಂಕಿ ಹತ್ತಿತು. ಸ್ಕಾಟ್, ಮೂರು ಜನ ಸುದೃಢ ದೇಹಿಗಳು ಮತ್ತು ಬೆಂಕಿಯಿಂದ ಸಾಕಷ್ಟು ಗಾಯಗೊಂಡ ಕೆಲವರು ರೋರೈಮಾವನ್ನು ಸುರಕ್ಷಿತವಾಗಿಸಲು ಹೋರಾಡಿದರು.

ಇನ್ನೊಂದು ಫ್ರೆಂಚ್ ನಾವೆ 'ಸುಚೇ' ಅವಸರವಸರವಾಗಿ ಬಂದರದಿಂದ ಹೊರಟಿತಾದರೂ ಅದರಲ್ಲಿನ ಹೆಚ್ಚಿನವರು ಸತ್ತರು. ಪ್ರಯಾಣಿಕ

ರಲ್ಲಿ ಉಳಿದಿದ್ದವರೆಂದರೆ ಒಬ್ಬ ಚಿಕ್ಕ ಹುಡುಗಿ ಮತ್ತು ಅವಳ ದಾದಿ ಮಾತ್ರ. ಅದರ 47 ಚಾಲಕ ಸಿಬ್ಬಂದಿಯಲ್ಲಿ ಉಳಿದವರು 28 ಜನರು ಮಾತ್ರ.

ಇಷ್ಟೆಲ್ಲ ಅನರ್ಥಗಳನ್ನು ಮಾಡಿಯೂ ಜ್ವಾಲಾಮುಖಿ ವಿರಮಿಸಲಿಲ್ಲ. ಅದರ ಆಕ್ರೋಶ ಇಳಿಮುಖವಾಗಿ ಪೂರ್ತಿ ನಿಂತಿದ್ದು ಮೇ ಎಂಟ ರಂದು ಸಂಜೆ. ಆಮೇಲೆ ಹತ್ತಿರದ ಫೋರ್ಟ್-ದ-ಫ್ರಾನ್ಸ್ ರಕ್ಷಕದಳದವರು ಪರಿಹಾರ ಕಾರ್ಯಕ್ಕಾಗಿ ಬಂದರು. ಆದರೆ ಅಲ್ಲಿ ರಕ್ಷಿಸಲು ಯಾರೂ ಜೀವಂತ ಉಳಿದಿರಲಿಲ್ಲ. ಒಂದು ಕೋಣೆಯಲ್ಲಿ ಇನ್ನೂ ಉಸಿರಾಡುತ್ತಿದ್ದ ಒಬ್ಬಳು ಮುದುಕಿ ಯನ್ನು ಹೊರತರುವಷ್ಟರಲ್ಲಿ ಅವಳು ಅಸುನೀಗಿ ದಳು.

ಭಗ್ನವಾಗಿದ್ದ ಆ ನಿರ್ಜನ ನಗರ ನೋಡಿದ ವರಲ್ಲಿ ಕಣ್ಣೀರು ತರುವಂತಿತ್ತು.

ಜ್ವಾಲಾಮುಖಿಯಿಂದ ಹುಟ್ಟಿದ ಆ ಮೋಡ ಎರಡು ರೀತಿಗಳಿಂದ ವಿನಾಶವನ್ನು ತಂದಿತ್ತು. ಅದರ ಬಲಾಢ್ಯ ಬಿರುಸಿನ ವೇಗಕ್ಕೆ ಸಿಕ್ಕಿದ ಪ್ರತಿಯೊಂದು ವಸ್ತುವೂ ಮಗುಚಿ ಬೀಳುತ್ತಿತ್ತು. ಗೋಡೆಗಳು ಮಗುಚಿ ಬಿದ್ದಾಗ ಅದರಡಿಗೆ ಸಿಕ್ಕಿ ನಜ್ಜುಗುಜ್ಜಾಗಿ ಸತ್ತವರು ಕೆಲವರು. ನಗರದ ನೋತ್ರದೇಮ್-ದ-ಲಾ ಗ್ರೇಡ್-ರಕ್ಷಕ ದೇವಿಯ ಹದಿನಾಲ್ಕು ಅಡಿ ಎತ್ತರದ ಲೋಹದ ಮೂರ್ತಿಗೆ ಜನರನ್ನು ಕಾಯುವುದಿರಲಿ, ತನ್ನನ್ನೇ ಉಳಿಸಿಕೊಳ್ಳಲಾಗಲಿಲ್ಲ. ಜ್ವಾಲಾಮುಖಿಯ ಮೋಡದ ರಭಸಕ್ಕೆ ಮೂರ್ತಿ ಉರುಳಿತ್ತು.

ಆದರೆ ಹೆಚ್ಚಿನ ಮೃತ್ಯುಗಳಿಗೆ ಕಾರಣವಾದದ್ದು ಜ್ವಾಲಾಮುಖಿ ಮೋಡದಲ್ಲಿದ್ದ ಸುಡುವ ಆವಿ ಮತ್ತು ಧೂಳು. ಆ ವಾಯುರೂಪಿ ಮೋಡ ಎಷ್ಟು ವೇಗವಾಗಿ ಸಾಗಿತ್ತೆಂದರೆ ಅದಕ್ಕೆ ಜನರ ಎಲ್ಲ ಬಟ್ಟೆಗಳನ್ನು ಸುಡುವುದು ಸಾಧ್ಯವಾಗ ಲಿಲ್ಲ. ಆದರೆ ಈ ಸುಡುವ ಆವಿಯನ್ನು ಸೇವಿಸಿದ ವರೆಲ್ಲ ಸತ್ತರು.

ಕೆಲವರು ಮಡಿದ ಸ್ಥಿತಿಗಳು ಮನ ಕರಗಿಸುವಂಥವು. ಮೃತ್ಯುಪೂರ್ವದ ಅಂತಿಮಯಾತನೆಯಲ್ಲಿ ವಿಕೃತಗೊಂಡ ಶವಗಳೇ ಹೆಚ್ಚಾಗಿದ್ದವು. ಗೋಡೆ ಉರುಳಿ ಸತ್ತವರು ಮರಣಪೂರ್ವದಲ್ಲಿ ವಿಶೇಷ ವೇದನೆಯನ್ನನುಭವಿಸಿರಲಿಕ್ಕಿಲ್ಲ. ಆದರೆ ಸುಡುವ ಆವಿಯನ್ನು ಹೀರಿದವರು ಸಾಯುವ ಮೊದಲು ತುಂಬಾ ವೇದನೆಪಟ್ಟಿರಬೇಕು.

ಸಂರಕ್ಷಕ ದಳದವರು ಜೀವಂತವಾಗಿ ಉಳಿದವರು ಯಾರಾದರೂ ಇರಬಹುದೇ ಎಂದು ತುಂಬಾ ಹುಡುಕಾಡಿದರು. ಆದರೆ ಜೀವಂತವಾಗಿ ಯಾರೂ ಸಿಗಲಿಲ್ಲ.

ನಾಲ್ಕು ದಿನಗಳ ನಂತರ ಸುರಕ್ಷಾದಳದ ಇಬ್ಬರು ನೀಗ್ರೋಗಳು ಭಗ್ನಾವಶೇಷಗಳ ಒಂದೆಡೆ ನಡೆಯುತ್ತಿದ್ದಾಗ ಕೆಳಗಿನಿಂದ ಯಾರೋ ಸಹಾಯಕ್ಕಾಗಿ ಕೂಗಿದ ಕ್ಷೀಣ ಸ್ವರ ಕೇಳಿಸಿತು.

ವಿಸ್ಮಯಗೊಂಡ ಆ ನೀಗ್ರೋಗಳು, ''ಯಾರದು?'' ಎಂದು ಕೇಳಿದರು.

ಮತ್ತೆ ಅದೇ ಕ್ಷೀಣ ಧ್ವನಿ.

''ಎಲ್ಲಿರುವೆ ನೀನು?'' ಎಂದು ಇನ್ನೂ ಗಟ್ಟಿಯಾಗಿ ಕೂಗಿದರು.

ಆಗ, ''ಅಯ್ಯೋ, ನಾನು ಇಲ್ಲಿದ್ದೇನೆ. ಕೆಳಗೆ, ಜೈಲಿನ ನೆಲಮನೆಯ ಕೋಣೆಯೊಳಗೆ. ಅಯ್ಯಾ, ಸಹಾಯ ಮಾಡಿ. ಹೊರಗೆಳೆಯಿರಿ'' ಎಂದು ಕೆಳಗಿನಿಂದ ಮಾತು ಕೇಳಿಸಿತು.

ಆ ಇಬ್ಬರು ನೀಗ್ರೋಗಳು ಭಗ್ನಾವಶೇಷಗಳನ್ನೆಲ್ಲ ಎಳೆದಾಡಿ, ಅಗೆದು ನೆಲಮನೆಯ ಕೋಣೆಯ ಬಾಗಿಲನ್ನು ಮುರಿದಾಗ ಒಬ್ಬ ನಿತ್ರಾಣ ವ್ಯಕ್ತಿ ಹೊರಗೆ ಬಂದ.

ಅವನ ಹೆಸರು ಆಗಸ್ಟ ಸಿಪಾರಿಸ್. ಅವನು ಮಾಡಿದ ಯಾವುದೋ ಅಪರಾಧಕ್ಕಾಗಿ ಅವನನ್ನು ನೆಲಮನೆಯಲ್ಲಿ ಬಂಧಿಸಿದ್ದರು.

ಸಿಪಾರಿಸ್‌ಗೂ ತುಂಬಾ ಬೆಂಕಿಯ ಗಾಯಗಳಾಗಿದ್ದವು. ಈ ಜ್ವಾಲಾಮುಖಿಯ ಅನಾಹುತವನ್ನು ವರದಿ ಮಾಡಲು ಬಂದ ಇಬ್ಬರು ಅಮೆರಿಕನ್ ಪತ್ರಿಕೋದ್ಯಮಿಗಳು ಸಿಪಾರಿಸ್‌ಗೆ ವೈದ್ಯಕೀಯ ಶುಶ್ರೂಷೆಯನ್ನೊದಗಿಸಿ ಅವನ ಗಾಯಗಳನ್ನೆಲ್ಲ ಗುಣಪಡಿಸಿ ಅವನಿಂದ ಅವನು ಬದುಕಿದ ಕಥೆ

ಯನ್ನು ತಿಳಿದರು. ಸೆಂಟ್ ಪಿಯರಿಯಲ್ಲಿ ಜ್ವಾಲಾಮುಖಿಯಿಂದ ಬದುಕಿ ಉಳಿದವನೆಂದರೆ ಅವನೊಬ್ಬನೇ.

ಸಿಪಾರಿಸ್ ಹೇಗೆ ಬದುಕಿದ?

ಸಿಪಾರಿಸ್ ಬಂಧಿಸಲ್ಪಟ್ಟ ನೆಲಮನೆಗೆ ಕಿಟಕಿಗಳಿರಲಿಲ್ಲ. ಗೋಡೆಯಲ್ಲಿದ್ದ ಒಂದು ಸಣ್ಣ ತೂತಿನಿಂದ ಅವನಿಗೆ ಹಗಲು ರಾತ್ರಿ ತಿಳಿಯುತ್ತಿತ್ತಷ್ಟೆ. ಜ್ವಾಲಾಮುಖಿಯು ರೌದ್ರಾಕಾರ ತಾಳಿದ ದಿನ ಬೆಳಗ್ಗೆ ಎಂದಿನಂತೆ ತೂತಿನಿಂದ ಸೂರ್ಯ ಪ್ರಕಾಶ ಕಾಣಿಸಿದರೂ ಕೆಲವೇ ನಿಮಿಷಗಳಲ್ಲಿ ಅದು ಮಬ್ಬಾಗಿ ಮತ್ತೆ ರಾತ್ರಿಯಾದಂತೆ ಅವನಿಗೆ ಭಾಸವಾಯಿತಂತೆ. ಸುಡುವ ಗಾಳಿ ಒಂದೇ ಸಮನೆ ಅವನ ಕೋಣೆಯೊಳಗೂ ಬರುತ್ತಿತ್ತು. ಅವನ ಪೂರ್ತಿ ಮೈಯೇ ಉರಿಯಿತು. ಅವನು ವೇದನೆಯಿಂದ ಕೂಗಿದ, ನರಳಿದ. ಕೆಲ ನಿಮಿಷಗಳಲ್ಲಿ ಗಾಳಿಯ ಸುಡುವಿಕೆ ಕಡಿಮೆಯಾದಾಗ ಅವನು ಆದಷ್ಟು ಕಡಿಮೆ ಪ್ರಮಾಣದಲ್ಲಿ ಉಸಿರಾಡಿದ. ಅಂತೂ ಕೆಲವೇ ಗಂಟೆಗಳಲ್ಲಿ ಗಾಳಿಯ ಉರಿ ಕಡಿಮೆಯಾಯಿತು. ಆದರೆ ಕುಡಿಯಲು ನೀರಿಲ್ಲ. ಉಣ್ಣಲು ಆಹಾರವಿಲ್ಲ. ವೇದನೆಯಿಂದಲೇ ಆತ ನಾಲ್ಕು ದಿನಗಳನ್ನು ಕಳೆದಿದ್ದ. ಅದೃಷ್ಟವಶಾತ್ ಅವನ ಕೂಗು ರಕ್ಷಕ ದಳದವರಿಗೆ ಕೇಳಿಸಿದುದರಿಂದ ಅವನು ಬದುಕಿದ.

ದೈವಲೀಲೆ ಎನ್ನಬೇಕು. ಪಿರಿಯ 40 ಸಾವಿರ ನಿವಾಸಿಗಳಲ್ಲಿ ಉಳಿದವನು ಅವನೊಬ್ಬನೇ. ●

ಪಕ್ಷಪಾತವೆಂಬುದು ಕಾಲಕ್ಕೆ ಇಲ್ಲ. ಕಾಲವನ್ನು ತಡೆಯಲು ಯಾವ ಉಪಾಯವೂ ಇಲ್ಲ. ಅದರ ವಿಷಯದಲ್ಲಿ ಪರಾಕ್ರಮವು ನಡೆಯದು. ಮಿತ್ರರ ಅಥವಾ ಬಂಧು-ಬಳಗಗಳ ಸಹಾಯವು ಕಾಲವನ್ನದರಿಸಲು ನೆರವಾಗದು. ಅದು ನಮಗೆ ವಶವಾಗತಕ್ಕದ್ದಲ್ಲ.

- ರಾಮಾಯಣ

ಬದುಕನ್ನೇ ಬದಲಿಸಿದ ಪುಟ್ಟ ಘಟನೆ

ಅವನು ತನ್ನ ಶಾಲೆಯ ಮೇಧಾವಿ ವಿದ್ಯಾರ್ಥಿ ಎನಿಸಿಕೊಂಡಿದ್ದ. ಶಾಲೆಯ ಎಲ್ಲ ಸ್ಪರ್ಧೆಗಳಲ್ಲಿ ಅವನು ಮೇಲುಗೈ ಸಾಧಿಸುತ್ತಿದ್ದ. ಒಮ್ಮೆ ಅವನ ಶಾಲೆಯಲ್ಲಿ ಕಥಾ ಸ್ಪರ್ಧೆಯೊಂದನ್ನು ಏರ್ಪಡಿಸಿ ಒಂದು ತಿಂಗಳಿನ ಸಮಯವನ್ನು ನೀಡಲಾಗಿತ್ತು. ಆದರೆ ಒಂದು ಚಿಕ್ಕ ಕಥೆ ಬರೆಯಲು ಒಂದು ತಿಂಗಳು ಸಮಯದ ಅಗತ್ಯವೇ ಇಲ್ಲವೆಂದು ಭಾವಿಸಿದ ಮೇಧಾವಿ ವಿದ್ಯಾರ್ಥಿ ಗಡುವು ತೀರಲು ಕೇವಲ ಮೂರು ದಿನಗಳಿರುವಾಗ ಅವಸರದಲ್ಲಿ ಕಥೆಯೊಂದನ್ನು ಸಿದ್ಧಪಡಿಸಿ ಅಪಾರ ಆತ್ಮವಿಶ್ವಾಸದಿಂದ ಸ್ಪರ್ಧೆಗೆ ನೀಡಿದ. ಆದರೆ ಫಲಿತಾಂಶದ ದಿನ ಆತನಿಗೆ ನಿರಾಶೆ ಕಾದು ಕುಳಿತಿತ್ತು; ಬಹುಮಾನ ಬೇರೊಬ್ಬನ ಪಾಲಾಗಿತ್ತು. ಮುಖಭಂಗಿತ ವಿದ್ಯಾರ್ಥಿ ಅಳುತ್ತ ಕುಳಿತ. ಆತನ ಅಕ್ಕ ಸಮಾಧಾನಪಡಿಸುತ್ತ ಹೇಳಿದಳು: ''ಯಾವುದೇ ಕೆಲಸದ ಬಗ್ಗೆ ಪೂರ್ವಸಿದ್ಧತೆ ಇಲ್ಲದೆ ಕೊನೇ ಘಳಿಗೆಯಲ್ಲಿ ಅವಸರಿಸುವ ನಿನ್ನ ದುರಭ್ಯಾಸವೇ ಇದಕ್ಕೆ ಕಾರಣ. ನಿಜಕ್ಕೂ ನಿನಗೆ ಸೋಲಿನ ಬಗ್ಗೆ ದುಃಖವಾಗಿದ್ದರೆ ಈ ಸೋಲನ್ನೇ ನಿನ್ನ ಯಶಸ್ಸಿನ ಪ್ರಥಮ ಸೋಪಾನವೆಂದು ಭಾವಿಸಿ ಮುಂದುವರಿ ....'' ಅವಳ ಈ ಮಾತುಗಳು ಆ ವಿದ್ಯಾರ್ಥಿಯ ಮೇಲೆ ಆಳವಾದ ಪರಿಣಾಮವನ್ನುಂಟು ಮಾಡಿದವು. ಮುಂದೆ ತನ್ನ ಕ್ರಮಬದ್ಧವಾದ ಬರವಣಿಗೆಯಿಂದ ಆತ ವಿಶ್ವವಿಖ್ಯಾತ ಸಾಹಿತಿಯಾದ. 1954ರಲ್ಲಿ ಆತ ಬರೆದ 'ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ' ಗ್ರಂಥಕ್ಕೆ ನೊಬೆಲ್ ಪುರಸ್ಕಾರ ದೊರಕಿತು. ಆ ಬಾಲಕನೇ ಅಮೆರಿಕೆಯ ಸುಪ್ರಸಿದ್ಧ ಸಾಹಿತಿ ಅರ್ನೆಸ್ಟ್ ಹೆಮಿಂಗ್ವೇ.

● ಮುರಲೀಧರ ಕುಲಕರ್ಣಿ



ಸ್ನಾನದ ತೊಟ್ಟಿಯಲ್ಲಿ ಹೆಣ

- ಡಾ। ಡಿ.ಎಸ್.ಶಿವಪ್ಪ

1957ರ ಮೇ ಮೂರರ ನಡುರಾತ್ರಿ, ಮುಂಚೆ ಬ್ರಾಡ್‌ಫರ್ಡ್ ಪೊಲೀಸ್ ಠಾಣೆಗೆ ಒಂದು ದೂರವಾಣಿ ಕರೆಬಂತು. ಮಾತಾಡಿದಾತ ಒಬ್ಬ ಸಾಮಾನ್ಯ ವೈದ್ಯ. ''ರಾತ್ರಿ 11.30ರ ಸುಮಾರಿನಲ್ಲಿ ತಮ್ಮ ನೆರೆಹೊರೆಯ ಎಲಿಜಬೆತ್ ಬಾರ್ಲೊ ಸ್ನಾನ ಮಾಡುತ್ತಿದ್ದಾಗ ಸುಸ್ತಾಗಿ ಬಿದ್ದಿರುವಳೆಂದೂ, ಕೂಡಲೇ ಅವರ ಮನೆಗೆ ಹೋಗಬೇಕೆಂದೂ ಸ್ಕಿನ್ನರ್ ದಂಪತಿಗಳಿಂದ ಕರೆ ಬಂದು, ಹೋಗಿ ನೋಡಿದರೆ ಸ್ನಾನದ ತೊಟ್ಟಿಯಲ್ಲಿ ಹೆಂಗಸು ಸತ್ತು ಬಿದ್ದಿದ್ದಳು,'' ಎಂದು ಆ ವೈದ್ಯ ಪೊಲೀಸಿಗೆ ತಿಳಿಸಿದ.

ಕೂಡಲೇ ಪತ್ತೇದಾರ ಸಾರ್ಜೆಂಟ್ ನೇಲರ್ ಸಾಲು ಮನೆಗಳಲ್ಲಿ ಒಂದಾಗಿದ್ದ ಆ ಮನೆಗೆ ಹೋದ. ತೊಟ್ಟಿ ಅಡುಗೆ ಕೋಣೆ ಕೆಳಗಿದ್ದವು. ಮಲಗುವ ಮನೆ, ಸ್ನಾನದ ಮನೆ ಮಹಡಿ ಮೇಲಿದ್ದವು. ಮಹಡಿ ಮೆಟ್ಟಿಲ ಮೇಲುಗಡೆ, ಫೋನ್ ಮಾಡಿದ್ದ ಆ ವೈದ್ಯ ಕಾದಿದ್ದ. ಅವನೊಂದಿಗೆ 38 ವರುಷದ ಇನ್ನೊಬ್ಬನಿದ್ದ. ತಾನು ಹತ್ತಿರದ ಸೆಂಟ್ ಲೂಕನ ಆಸ್ಪತ್ರೆಯಲ್ಲಿ ಮೇಲ್ ನರ್ಸ್ ಆಗಿರುವ ಕೆನೆತ್ ಬಾರ್ಲೊ ಎಂದೂ ಸತ್ತಿರುವವಳ ಗಂಡನೆಂದೂ ಶಾಂತಚಿತ್ತನಾಗಿ ಆತ ಪರಿಚಯ ಹೇಳಿಕೊಂಡ. ಪತ್ತೇದಾರನನ್ನು ಸ್ನಾನದ ಮನೆಗೆ ವೈದ್ಯ ಕರೆದೊಯ್ಯುವಾಗ ಬಾರ್ಲೊ ಸುಮ್ಮನೆ ನೋಡುತ್ತ ನಿಂತಿದ್ದ. ಸ್ನಾನದ ತೊಟ್ಟಿಯಲ್ಲಿ ನೀರಿರಲಿಲ್ಲ. ಸುಮಾರು 30 ವರುಷಗಳ ವಯಸ್ಸಿನ ಎಲಿಜಬೆತ್ ಬಾರ್ಲೊ ಸ್ನಾನದ ತೊಟ್ಟಿಯಲ್ಲಿ ಬಲ ಪಕ್ಕಕ್ಕೆ ತಿರುಗಿ ಬಿದ್ದಿದ್ದಳು. ನಿದ್ದೆ ಮಾಡುವವಳಂತೆ ಅವಳ ತೋಳುಗಳು ಮಡಿಸಿದ್ದವು. ಸ್ನಾನದ ತೊಟ್ಟಿಯಲ್ಲಿ ಮಲಗಿದ್ದಾಗಲೋ ಕುಳಿತಿದ್ದಾಗಲೋ ಸುಸ್ತಾಗಿ ವಾಂತಿ ಮಾಡಿಕೊಂಡು ನೀರೊಳಗೆ ತಲೆ ಮುಳುಗಿ ಸತ್ತಿರಬಹುದು. ಅವಳ ಮೈಮೇಲೆ ಎಲ್ಲೂ ಗಾಯ, ಪೆಟ್ಟುಗಳು ಕಂಡುಬರಲಿಲ್ಲ. ವೈದ್ಯ ಬಾಯಿ ಬಿಡುವ ಮೊದಲೇ ಸಾರ್ಜೆಂಟ್ ನೇಲರ್ ಹೆಣದ ಕಣ್ಣಿನ ಪಾಪೆಗಳು ಅಗಲವಾಗಿದ್ದುದನ್ನು ಗಮನಿಸಿದ. ''ಅವಳು ಯಾವುದೋ ಮದ್ದಿನ ಪ್ರಭಾವಕ್ಕೆ ಈಡಾಗಿರಬೇಕು. ಇದು ಕೇವಲ ನನ್ನ ಊಹೆ. ಏನಾಯಿತೆಂದು ಬಾರ್ಲೊ ಹೇಳುತ್ತಾನೆ. ನನ್ನ ವಿಳಾಸ ಇದು. ನನಗೆ ಕೊಂಚ ಕೆಲಸವಿದೆ, ಬರುತ್ತೇನೆ'' ಎಂದು ಹೇಳಿ ಆ ವೈದ್ಯ ಹೊರಟುಬಿಟ್ಟ.

ಯಾವ ಅಳುಕೂ ಇಲ್ಲದೆ, ತಡವರಿಸದೆ ಬಾರ್ಲೊ ತನ್ನ ಕತೆಯನ್ನು ನೇಲರಿಗೆ ಹೇಳಿದ. ಅವನ ಹೆಂಡತಿ ಲಾಂಡ್ರಿಯಲ್ಲಿ ಕೆಲಸದಲ್ಲಿದ್ದಳು. ಆ ದಿನ ಇಬ್ಬರಿಗೂ ರಜ. ಚಹ ಕುಡಿದ ಮೇಲೆ ಎಲಿಜಬೆತ್ ತನ್ನ ಮೈಗೆ ಸರಿಯಿಲ್ಲವೆಂದೂ, ರಾತ್ರಿ ಏಳೂವರೆಗೆ ಒಂದು ದೂರದರ್ಶನದ ಕಾರ್ಯಕ್ರಮವನ್ನು ತಾನು ನೋಡಬೇಕಾದ್ದ

ರಿಂದ ಆಗ ಎಬ್ಬಿಸಲು ಗಂಡನಿಗೆ ಹೇಳಿದಳಂತೆ. ಆದರೆ ಅಷ್ಟು ಹೊತ್ತಿಗೆ ತಾನು ಎಚ್ಚರಿಸಿದಾಗ ಇನ್ನಷ್ಟು ಹೊತ್ತು ಮಲಗಿರಬೇಕೆನಿಸುತ್ತೆ ಎಂದ ಳಂತೆ. ರಾತ್ರಿ ಒಂಬತ್ತೂವರೆಗೆ ವಾಂತಿ ಆಯಿ ತೆಂದು ಗಂಡನನ್ನು ಕರೆದಳಂತೆ. ಅವಳ ಹಾಸಿಗೆ ಬಟ್ಟೆಗಳನ್ನು ಬದಲಾಯಿಸಿ ಮಲಗಿದ ಬಾರ್ಲೊ. ಕೊಂಚ ಹೊತ್ತಿಗೆ ಬಹಳ ಸೆಖೆಯಾದ್ದ ರಿಂದ ಸ್ನಾನ ಮಾಡುವೆ ಎಂದಳಂತೆ. ಬಾರ್ಲೊ ಹಾಗೇ ತೂಕಡಿಸುತ್ತಿದ್ದ. ಹನ್ನೊಂದು ಹೊಡೆ ದಾಗ, ಎಚ್ಚರವಾಗಿ ನೋಡಿದರೆ ಅವಳ ಹಾಸಿಗೆ ಖಾಲಿ ಇತ್ತು. ಸ್ನಾನದ ಮನೆಯಲ್ಲಿ ದೀಪ ಉರಿ ಯುತ್ತಲೇ ಇತ್ತು. ಕೂಡಲೇ ಹೋಗಿ ನೋಡಿ ದಾಗ, ಅವಳು ಸ್ನಾನದ ತೊಟ್ಟಿಯಲ್ಲಿ ಮುಳುಗಿ ದ್ದನ್ನು ಕಂಡನಂತೆ ಬಾರ್ಲೊ. ಅವಳನ್ನು ಈಚೆಗೆ ಳೆಯಲು ಎಷ್ಟು ಯತ್ನಿಸಿದರೂ ಭಾರವಾಗಿದ್ದುದ ರಿಂದ ಸಾಧ್ಯವಾಗಲಿಲ್ಲ. ತೊಟ್ಟಿಯ ನೀರನ್ನೆಲ್ಲ ಖಾಲಿ ಮಾಡಿ, ಅವಳು ಚೇತರಿಸಿಕೊಳ್ಳುವಂತೆ ಕೃತಕ ಉಸಿರಾಟ ಕ್ರಮವನ್ನು ಮಾಡಿ ನೋಡಿದ. ಏನೂ ಕೈಗೂಡಲಿಲ್ಲ.

ಮಲಗುವ ಕೋಣೆಯ ಸುತ್ತಲೂ ನೇಲರ್ ಕಣ್ಣು ಹಾಯಿಸಿದ. ಉಳಿದುದೆಲ್ಲ ಬಾರ್ಲೊ ಕತೆಯನ್ನೇ ಅನುಮೋದಿಸುತ್ತಿತ್ತು. ಆದರೆ ನೀರಿನ ತೊಟ್ಟಿಯಿಂದ ತನ್ನ ಹೆಂಡತಿಯನ್ನು ಎತ್ತುವಾಗಲೂ ಬಾರ್ಲೋನ ಪಾಯಿಜಾಮ ನೆನ ಯದಿರಲು ಹೇಗೆ ಸಾಧ್ಯ?

ಸಾರ್ಜೆಂಟ್ ನೇಲರ್ ಹ್ಯಾರೋಗೇಟಿನ ಪೊಲೀಸ್ ಪ್ರಯೋಗಾಲಯದವರನ್ನು ಕೂಡಲೇ ಕಳುಹಿಸಿಕೊಡಲು ಮೇಲಧಿಕಾರಿಗೆ ಕರ ಕಳುಹಿಸಿದ. ಹತ್ತು ನಿಮಿಷಗಳಲ್ಲಿ ಬಂದ ಮೇಲ ಧಿಕಾರಿ ಅಲ್ಲಿ ಕೆಲವು ಅಸಂಬದ್ಧತೆಗಳನ್ನು ಕಂಡ. ಸ್ನಾನದ ಕೋಣೆಯ ಗೋಡೆಯ ಮೇಲಾಗಲಿ ನೆಲದ ಮೇಲಾಗಲಿ ನೀರು ಚಿಮ್ಮಿದ್ದೇ ಕಾಣ ಲಿಲ್ಲ. ಹಾಗೇ ನೀರು ಚಿಮ್ಮದೆಯೇ ತನ್ನ ಹೆಂಡತಿ ಯನ್ನು ಬಾರ್ಲೊ ಹೊರದೆಗೆಯಲು ಯತ್ನಿಸಿರ ಲಾರ. ತಡ ಮಾಡದೆ ಪ್ರಯೋಗಾಲಯಕ್ಕೆ ಕರೆ ಹೋಯಿತು. ರಾತ್ರಿ ಸರದಿಯಲ್ಲಿದ್ದ ಅಲ್ಲಿನ ಮುಖ್ಯ ತನಿಖಾಧಿಕಾರಿ ಕಾಫೆಯೊಂದಿಗೆ ಡಾ. ಡೇವಿಡ್ ಪ್ರೈಸ್ ಕೂಡ ಆ ಕಗ್ಗತ್ತಲ ರಾತ್ರಿಯಲ್ಲೇ ಸುಮಾರು ಮೂರೂವರೆಗೆ ಬಂದರು.

ಸತ್ತ ಹೆಂಗಸಿನ ಮೊಣಕೈಗೆ ನೀರು ಸೋಂಕಿ ದ್ದುದನ್ನು ಡಾ. ಪ್ರೈಸ್ ಗಮನಿಸಿದ. ಹೆಂಡತಿ ಚೇತ ರಿಸಿಕೊಳ್ಳುವಂತೆ ಕೃತಕ ಉಸಿರಾಟ ಕ್ರಮವನ್ನು ಮಾಡಿದೆನೆಂಬ ಬಾರ್ಲೋನ ಹೇಳಿಕೆಗೆ ಇದು ವಿರೋಧವಾಗಿತ್ತು. ಅಡುಗೆ ಕೋಣೆಯಲ್ಲಿ ಎರಡು ಸಿರೀಂಜ್‌ಗಳು ಇದ್ದುದನ್ನು ಕಾಫೆ ಮುಖ್ಯ ತನಿಖಾಧಿಕಾರಿ ಕಂಡ. ಅದರಲ್ಲೊಂದು ಇನ್ನೂ ತೇವಗೊಂಡಿತ್ತು. ಕೂಡಲೇ ಬಾರ್ಲೊ ತಾನು ಮೇಲ್ ನರ್ಸ್. ಆದ್ದರಿಂದ ತನ್ನಲ್ಲಿ ಸಿರೀಂಜ್ ಗಳಿವೆ. ಕುರು ಎದ್ದಿದ್ದರಿಂದ ತನಗೆ ತಾನೇ ಪೆನಿಸಿ ಲಿನ್ ಚುಚ್ಚಿಕೊಂಡಿದ್ದೆ ಎಂದ. ತನ್ನ ಹೆಂಡತಿ ಗಂತೂ ತಾನು ಯಾವ ಮದ್ದನ್ನೂ ಚುಚ್ಚಿಲ್ಲ ವೆಂದೂ ಹೇಳಿದ. ಕಣ್ಣು ಪಾಪೆ ಅಗಲವಾಗಿದ್ದು ದರಿಂದ ಸತ್ತವಳು ಏನೋ ಮದ್ದು ಸೇವಿಸಿರಬ ಹುದೆಂದು ಡಾ. ಪ್ರೈಸ್ ಶಂಕಿಸಿದ. ಅದೇ ರಾತ್ರಿ ಹೆಣವನ್ನು ಮುಂದಿನ ಪರೀಕ್ಷೆ, ತನಿಖೆಗಳಿಗಾಗಿ ಹ್ಯಾರೊಗೇಟಿಗೆ ಸಾಗಿಸಿದರು.

ಬೆಳಗಿನ ಜಾವ 5.40 ಗಂಟೆಗೇ ಡಾ. ಪ್ರೈಸ್ ಶವ ಪರೀಕ್ಷೆಯನ್ನು ಆರಂಭಿಸಿದ. ಸ್ನಾನದ ತೊಟ್ಟಿ ಯಲ್ಲಿ ಸರಕ್ಕನೆ ಸುಸ್ತು ಮಾಡುವಂತಹ ಕಾರಣ ಗಳೇನೂ ಹೆಣದಲ್ಲಿ ಅವನಿಗೆ ತೋರಲಿಲ್ಲ. ಗುಂಡಿಗೆಯಂತೂ ಉಳಿದೆಲ್ಲ ಅಂಗಗಳ ಹಾಗೆ ಆರೋಗ್ಯವಾಗೇ ಇತ್ತು. ಗ್ರಂಥಿಗಳನ್ನು ಹುಷಾ ರಾಗಿ ಪರೀಕ್ಷಿಸಿದರೂ ಏನೂ ಕೆಟ್ಟದ್ದು ಕಾಣ ಲಿಲ್ಲ. ಕರುಳುಗಳಲ್ಲೂ ತೊರಳೆಯಲ್ಲೂ **(spleen)** ಯಾವ ಸೋಂಕೂ ಇರಲಿಲ್ಲ. ಚರ್ಮದ ಮೇಲೆ ಎಲ್ಲೂ ಚುಚ್ಚಿದ ಗುರುತುಗಳೇ ಕಾಣಿಸಲಿಲ್ಲ. ಸತ್ತವಳು ಸುಮಾರು ಎರಡು ತಿಂಗಳ ಬಸುರಿ. ಆದರೂ ತಲೆ ಸುತ್ತಿ, ಸುಸ್ತಾಗಿ ನೀರಿನಲ್ಲಿ ಮುಳುಗುವಂತಹ ಬೇನೆ ಏನೂ ಅವಳ ಲ್ಲಿರಲಿಲ್ಲ.

ಮಾರನೆಯ ದಿನ, ಹೆಣದಲ್ಲಿ ಇರಬಹುದಾದ ಮದ್ದು, ವಿಷ ಮುಂತಾದವನ್ನು ಪತ್ತೆ ಮಾಡಲು

ನ್ಯಾಯ ವೈದ್ಯ ಪ್ರಯೋಗಾಲಯದ ವೈದ್ಯರು ಬಲು ಶ್ರಮವಹಿಸಿದರು. ಇಡೀ ಜೀರ್ಣನಾಳವನ್ನೇ ದಿನಗಟ್ಟಳೆ ಪರೀಕ್ಷಿಸಿದರು. ವಾಂತಿ, ಮೂತ್ರ, ರಕ್ತ, ಈಲಿ, ತೊರಳೆ, ಪುಪ್ಪುಸ, ಮಿದುಳು ಇವನ್ನೆಲ್ಲಾ ಜಾಲಾಡಿ ಪರೀಕ್ಷಿಸಿದ್ದಾಯಿತು. ನೂರಾರು ರೋಗ, ಮದ್ದು, ವಿಷಗಳಿಗಾಗಿ ಸಾವಿರಾರು ಪರೀಕ್ಷೆಗಳನ್ನು ಮಾಡಿ ನೋಡಿದರು. ಯಾವುದೂ ಹಿಡಿಯಲಿಲ್ಲ. ಸುಸ್ತಾಗಿ, ಅರಿವು ತಪ್ಪಿ ಬೀಳಿಸುವ ಗೊತ್ತಾದ ಯಾವ ಕಾರಣಗಳೂ ಕಂಡುಬರಲಿಲ್ಲ. ಸಿರೀಂಜ್‌ಗಳನ್ನೂ ಅವುಗಳ ಸೂಜಿಗಳನ್ನೂ ಪರೀಕ್ಷಿಸಿದಾಗ ಪೆನಿಸಿಲಿನ್ ಕೊಂಚ ಅಂಟಿದ್ದರಿಂದ ಬಾರ್ಲೊನ ಹೇಳಿಕೆ ಇಲ್ಲಿ ಮಾತ್ರ ನಿಜವೆನಿಸಿತ್ತು.

ಮೇ ಎಂಟರಂದು ಸೂಜಿಮದ್ದು ಚುಚ್ಚಿರಬಹುದಾದ ಗುರುತುಗಳನ್ನು ಹುಡುಕಲು ಭೂತಗನ್ನಡಿಯನ್ನೇ ಹಿಡಿದು ಸತ್ತವಳ ಇಡೀ ಮೈ ಚರ್ಮವನ್ನೆಲ್ಲ ಡಾ. ಪ್ರೈಸ್ ಬೆದಕಾಡಿದ. ಎರಡು ತಾಸುಗಳ ಶ್ರಮದಿಂದ ಎಡ ಪಿರ್ರೆಯ ಮೇಲೆ ಎರಡು ಪುಟಾಣಿ ಗುರುತುಗಳು ಪಕ್ಕಪಕ್ಕದಲ್ಲಿದ್ದುದು ಕಂಡಿತು. ಇಂತಹವೇ ಇನ್ನೆರಡು ಗುರುತುಗಳು ಬಲ ಪಿರ್ರೆಯ ಚರ್ಮದ ಮಡಿಕೆಯಲ್ಲಿ ಕಂಡವು. ಸತ್ತವಳ ಮೈ ತುಂಬ ನರೂಲಿ, ಮೊಡವೆ, ಸುಕ್ಕುಗಳು ಇದ್ದುದರಿಂದ ಮುಂಚೆ ಇವು ಕಣ್ಣಿಗೆ ಬಿದ್ದಿರಲಿಲ್ಲ. ಶಂಕಿತವಾದ ಈ ಚರ್ಮವನ್ನೂ ಅದರಡಿಯ ಕೊಬ್ಬು ಮಾಂಸಖಂಡಗಳೊಂದಿಗೆ ಡಾ. ಪ್ರೈಸ್ ಕೊಯ್ದು ತೆಗೆದುಕೊಂಡ. ಹೊಸದಾಗಿ ಚುಚ್ಚಿದ ಉರಿಯೂತದ ಗುರುತುಗಳನ್ನೂ ಅಲ್ಲಿ ಕಂಡ. ಎಡ ಪಿರ್ರೆಯ ಮೇಲಿ ಚುಚ್ಚು ಗುರುತುಗಳು ಅವಳು ಸಾಯುವ ಕೆಲವು ತಾಸುಗಳ ಮುಂಚೆಯಾದರೂ ಆಗಿರಬೇಕು. ಅಂತೂ ಬಾರ್ಲೊ ಇಲ್ಲಿ ಒಂದು ಸುಳ್ಳು ಹೇಳಿದ್ದ. ಅವಳ ಸಾವಿಗೆ ಸಂಬಂಧಿಸಬಹುದಾದ ಏನನ್ನೋ ಅವಳಿಗೆ ಚುಚ್ಚಿರುವ ಸ್ಪಷ್ಟ ಪುರಾವೆ ಇಲ್ಲಿದೆ. ಏನು ಚುಚ್ಚಿರಬಹುದು? ಈ ವಿಚಾರವಾಗಿ ಬಾರ್ಲೊನನ್ನೇ ಕೇಳಿದರೆ ಪ್ರಯೋಜನವಿಲ್ಲ. ಅವಳಿಗೆ ನಿರಪಾಯಕರವಾದ ಯಾವುದೋ ಜೀವಸತ್ವವನ್ನು ಕೊಟ್ಟೆ ಎನ್ನಬಹುದು. ಯಾವುದೋ ನಿರ್ದಿಷ್ಟ ವಿಷವನ್ನು ಚುಚ್ಚಿರುವುದು ನಿರ್ಧಾರವಾಗುವ ತನಕ, ಪೊಲೀಸಿನವರಿಗೆ ಅವನು ಯಾವ ಸುಳಿವನ್ನೂ ನೀಡಲಾರ. ಅವನ ಮೇಲೆ ವಿಶೇಷ ನಿಗಾ ಇರಿಸಿ ಆಸ್ಪತ್ರೆಯಲ್ಲಿ ಅವನ ವಶದಲ್ಲಿದ್ದ ಮದ್ದುಗಳಲ್ಲಿ ಯಾವುದಾದರೂ ನಾಪತ್ತೆ ಆಗಿದೆಯೇ ಎಂದು ವಿಚಾರಿಸಿದರು.

ಏನಾದರೂ ಚುಚ್ಚಿದ್ದುದು ಮೈಯಲ್ಲಿ ಇನ್ನಾವ ಅಂಗಗಳಲ್ಲೂ ಕಂಡುಬರದಿದ್ದರೆ, ಚುಚ್ಚಿದ ಜಾಗದಲ್ಲಾದರೂ ಸೂಕ್ಷ್ಮ ಪ್ರಮಾಣಗಳಲ್ಲಿ ಇರಬಹುದೆಂಬ ಆಸೆಯಿಂದ, ಡಾ. ಪ್ರೈಸ್ ಕೊಯ್ದು ತೆಗೆದಿದ್ದ ಹೆಣದ ಚರ್ಮ ಮುಂತಾದವನ್ನು ಸದ್ಯಕ್ಕೆ ಶೀತಕದಲ್ಲಿ ಜೋಪಾನಿಸಿದ್ದರು. ಚುಚ್ಚಿದ ಜಾಗ ತೀರ ಸಣ್ಣದಾಗಿದ್ದುದರಿಂದ ಅಲ್ಲಿನ ಒಂದೊಂದು ತಂತೂ, ಎಳೆಯೂ ಮುಖ್ಯವೆನಿಸಿತ್ತು. ಯಾವ ಮದ್ದಿನ ಇಲ್ಲವೇ ವಿಷದ ಪರೀಕ್ಷೆ ಬಹಳ ಮುಖ್ಯ ಎಂಬುದನ್ನು ಮೊದಲು ನಿರ್ಧರಿಸಬೇಕಾಗಿತ್ತು. ಇದಕ್ಕಾಗಿ ಲಂಡನ್ನಿನ ವಿಶೇಷ ತಜ್ಞರನ್ನೆಲ್ಲ ಕಂಡು ಚರ್ಚಿಸಿ ಸಲಹೆ ಪಡೆದರು. ಕೊನೆಗೆ ಒಂದು ಪ್ರಶ್ನೆ ಉಳಿಯಿತು. ಸುಸ್ತು, ವಾಂತಿ, ಬೆವರಿಕೆ, ದಿಢೀರ್ ದುರ್ಬಲತೆ, ಅರಿವು ತಪ್ಪಿಕೆ ಪಾಪೆಗಳ ಅಗಲಿಸಿಕೆ ಆಗಿ ಬಸಿರಿ ಎಲಿಜಬೆತ್‌ಳ ಸಾವಿಗೆ ಕಾರಣವಾದ ಮದ್ದು ಇಲ್ಲವೇ ವಿಷ ಯಾವುದಿರಬಹುದು? ಯಾಕೆಂದರೆ ಈ ಲಕ್ಷಣಗಳೆಲ್ಲ ರಕ್ತ ಸಕ್ಕರೆಯ ಮಟ್ಟ ಕುಸಿದುದರ ಸೂಚನೆಗಳಾಗಿದ್ದವು. ಸಿಹಿಮೂತ್ರ ರೋಗಿ ಹಾಯಾಗಿ ತೆಗೆದುಕೊಳ್ಳುವಷ್ಟು ಇನ್ಸುಲಿನ್ನನ್ನು ಆರೋಗ್ಯವಂತನಿಗೆ ಚುಚ್ಚಿದರೆ ಆತ ರಕ್ತ ಸಕ್ಕರೆ ಕುಗ್ಗಿ ಸುಸ್ತಾಗಿ ಸಾಯುವನೆಂದು, ಪ್ರಾಣಿಗಳ ಮೇಲಿನ ಪ್ರಯೋಗದಿಂದಲೂ ಅನುಭವದಿಂದಲೂ ವೈದ್ಯರಿಗೆ ಗೊತ್ತಿದೆ. ಹೆಣದ ಮೂತ್ರ ಪರೀಕ್ಷೆಯಿಂದ ಎಲಿಜಬೆತ್ ಬಾರ್ಲೊ ಸಿಹಿಮೂತ್ರ ರೋಗಿ ಆಗಿರಲಿಲ್ಲವೆಂದು ಖಚಿತವಾಯಿತು. ಇಷ್ಟರಲ್ಲಿ ಮತ್ತೊಂದು ಪುರಾವೆ ದೊರೆಯಿತು. ಗುಂಡಿಗೆಯ ಎರಡೂ ಕಡೆಯ

ಗೂಡುಗಳಿದ್ದ ಮಿಶ್ರ ರಕ್ತದಲ್ಲಿನ ಸಕ್ಕರೆಯ ಮಟ್ಟ ಶೇಕಡ 210 ಮಿಲಿಗ್ರಾಂಗಳಿಗೇರಿತ್ತು. ಆದ್ದರಿಂದ ಅವಳ ಸಾವಿಗೆ ರಕ್ತ ಸಕ್ಕರೆಯ ಇಳಿತ ಕಾರಣವಾಗಿ ತೋರಲಿಲ್ಲ. ಅಲ್ಲಿಗೂ, ಏನೇ ಆದರೂ ತನಿಖೆ ಮಾಡುವವರಲ್ಲಿ ಯಾರೂ ರಕ್ತ ಸಕ್ಕರೆ ಇಳಿತದ ಲಕ್ಷಣಗಳನ್ನು ಸುಲಭವಾಗಿ ಮರೆಯಲಿಲ್ಲ. ಮತ್ತೆ ಮತ್ತೆ ಅದನ್ನೇ ಚಿಂತಿಸುತ್ತಿದ್ದರು. ತಮಗಾರಿಗೂ ಗೊತ್ತಿಲ್ಲದ ಇನ್ನೇನೋ ಹೊಸ ವಿಧಾನ, ಉಪಾಯವನ್ನು ಹೂಡಿರಬಹುದೇ? ಇನ್ಸೂಲಿನ್ನಿನ ಪ್ರಭಾವವನ್ನು ಚೆನ್ನಾಗಿ ತಿಳಿದಿದ್ದ ಬಾರ್ಲೊ ತನ್ನ ಆರೋಗ್ಯವಂತ ಹೆಂಡತಿಗೆ ಅವಳು ಸ್ನಾನಕ್ಕೆ ಹೋಗುವ ಹೊತ್ತಿಗೆ ಸರಿಯಾಗಿ ಮಯಕ ಬಂದು ಮುಳುಗಿ ಸಾಯುವಂತೆ ಮುಂಚೆಯೇ ಇನ್ಸೂಲಿನ್ನನ್ನು ಚುಚ್ಚಿರಬಹುದೇ? ಮೊದಮೊದಲು ಈ ಪ್ರಶ್ನೆಗಳು ಕೇವಲ ಊಹಾಪೋಹಗಳಾಗಿದ್ದವು. ಆದರೆ ಮೇ 23ರಂದು ಹ್ಯಾರೋಗೇಟಿನ ಮುಖ್ಯಾಧಿಕಾರಿ ತಂದ ಇನ್ನಷ್ಟು ವಿವರಗಳು ಎಲ್ಲರ ಕಣ್ಣೂ ತೆರೆಸಿ ಅವರ ದೃಷ್ಟಿಕೋನವೇ ಬದಲಾಯಿತು.

ಈ ಬಾರ್ಲೊ ಒಬ್ಬ ವಿಚಿತ್ರ ಆಸಾಮಿ. ಸತ್ತವಳು ಅವನ ಎರಡನೆಯ ಹೆಂಡತಿಯಂತೆ. ಮೊದಲನೇ ಹೆಂಡತಿ 1956ರಲ್ಲಿ, 33ನೇ ವಯಸ್ಸಿನಲ್ಲಿ ಸತ್ತಳಂತೆ. ಸಹೋದ್ಯೋಗಿಯೊಬ್ಬಳು ಸೆಂಟ್ ಲೂಕನ ಆಸ್ಪತ್ರೆಯಲ್ಲಿ ಕೆಲವು ವೇಳೆ ಇನ್ಸೂಲಿನ್ನನ್ನು ಚುಚ್ಚಲು ಬಾರ್ಲೋನನ್ನು ನೇಮಿಸುತ್ತಿದ್ದರೆಂದು ಹೇಳಿದ್ದಳು ಬೇರೆ.

ಈ ಸುದ್ದಿಯನ್ನು ಕೇಳುತ್ತಿದ್ದಂತೆ ಪ್ರಯೋಗಾಲಯದ ವಿಷಶಾಸ್ತ್ರಜ್ಞರ ಉದ್ವೇಗ ಇನ್ನೂ ಹೆಚ್ಚಿತು. ಬಾರ್ಲೊ ಇದಕ್ಕೆ ಹಿಂದೆ ನಾರ್ತ್ ಫೀಲ್ಡ್ ಕ್ಷಯಾಸ್ಪತ್ರೆಯಲ್ಲಿ ಕೆಲಸದಲ್ಲಿದ್ದಾಗ, ಒಬ್ಬ ರೋಗಿಯೊಂದಿಗೆ ಹರಟುತ್ತಾ ''ಯಾರಿಗಾದರೂ ಸಾಕಷ್ಟು ಇನ್ಸೂಲಿನ್ನನ್ನು ಚುಚ್ಚಿಬಿಟ್ಟರೆ ಅವರ ಕತೆ ಅಲ್ಲಿಗೆ ಮುಗಿಯಿತು'' ಎಂದಿದ್ದನಂತೆ. ಅಲ್ಲದೆ 1955ರ ಕ್ರಿಸ್ಮಸ್ ಕಾಲದಲ್ಲಿ ಗೆಳೆಯ ಸಹೋದ್ಯೋಗಿಯೊಂದಿಗೆ ''ಇನ್ಸೂಲಿನ್ನಿನಿಂದ ಯಾರಿಗೂ ಗೊತ್ತಾಗದಂತೆ ಕೊಲೆ ಮಾಡಬಹುದು. ರಕ್ತದಲ್ಲಿ ಇನ್ಸೂಲಿನ್ ಕರಗಿ ಹೋಗಿಬಿಡುವುದರಿಂದ ಇದು ಎಂದಿಗೂ ಪತ್ತೆ ಆಗುವಂತಿಲ್ಲ'' ಎಂದಿದ್ದನಂತೆ.

ಅದೇ ದಿನ ಶೀತಕದಲ್ಲಿರಿಸಿದ್ದ ಹೆಣದ ಜಿರ್ರಯ ಚರ್ಮ ಮುಂತಾದವನ್ನು ಹೊರತೆಗೆದರು. ಇನ್ಸೂಲಿನ್ನನ್ನು ಕಂಡುಹಿಡಿಯುವುದು ಹೇಗೆ? ತಜ್ಞರೆಲ್ಲರೂ ಸೇರಿ ಪ್ರಕಟವಾಗಿರುವ ಬಗೆ ಬಗೆಯ ಪತ್ರಿಕೆ, ಪ್ರಬಂಧಗಳು, ವರದಿ, ಪುಸ್ತಕಗಳು ಎಲ್ಲವನ್ನೂ ತಿರುವಿ ಹಾಕಿದರು. ಇನ್ಸೂಲಿನ್ನಿಂದ ಕೊಲೆಯಾದ ವರದಿಗಳು ಎಲ್ಲೂ ಸಿಗಲಿಲ್ಲ. ರೋಗಿಯ ಚರ್ಮದಲ್ಲಿ ಇನ್ಸೂಲಿನ್ನನ್ನು ಕಂಡುಹಿಡಿವ ವಿಧಾನವನ್ನು ಯಾರೂ ಹೇಳಿರಲಿಲ್ಲ.

ಕೊನೆಗೆ, 1940ರ ಒಂದು ವರದಿ ದೊರೆಯಿತು. ಆರೋಗ್ಯವಂತರಾಗಿದ್ದು, ಉಸಿರು ಕಟ್ಟಿಯೋ ಮುಳುಗಿಯೋ ಸತ್ತವರ 38 ಹೆಣಗಳ ರಕ್ತದ ಮಟ್ಟದ ಪರೀಕ್ಷೆ ಮಾಡಿದ ಆ ವರದಿಯಲ್ಲಿ ಗುಂಡಿಗೆಯಲ್ಲಿನ ಮಿಶ್ರರಕ್ತದ ಸಕ್ಕರೆಯ ಮಟ್ಟಕ್ಕೂ ಮೈಯಲ್ಲಿನ ಬೇರೆ ರಕ್ತದಲ್ಲಿರುವುದಕ್ಕೂ ಸಂಬಂಧವೇ ಇರಲಿಲ್ಲ, ಎಂದಿದ್ದರು. ಗುಂಡಿಗೆಯಲ್ಲಿ ಸಕ್ಕರೆಯ ಮಟ್ಟ ಬಹಳ ಹೆಚ್ಚಿತ್ತು. ಇದಕ್ಕೆ ಮುಖ್ಯ ಕಾರಣ ಸಾವಿಗೆ ಮುಂಚೆ ಹೆಚ್ಚಿನ ಸಕ್ಕರೆಯನ್ನು ಈಲಿ ಒದಗಿಸಿತ್ತು. ಆದ್ದರಿಂದ ತನ್ನ ಹೆಂಡತಿಯನ್ನು ಬಾರ್ಲೊ ಇನ್ಸೂಲಿನ್ ಚುಚ್ಚಿ ಸಾಯಿಸಿರಬಹುದೇ?

ಇನ್ಸೂಲಿನ್ನಿಂದಲೇ ಕೊಲೆಯಾಗಿದೆಯೆಂದು ಸಾಧಿಸುವುದು ಮುಂದಿನ ಕೆಲಸವಾಯಿತು. ಕೇವಲ ಊಹೆ ಅನುಮಾನ ಸಾಲವು. ಎಲ್ಲವೂ ವೈಜ್ಞಾನಿಕವಾಗಿ ರುಜುವಾತಾಗಬೇಕಿತ್ತು. ಆದರೆ, ಏನೂ ಗೊತ್ತಿಲ್ಲದ ಕಡೆ ಸಾಧಿಸುವುದೇನು? ಇನ್ಸೂಲಿನ್ ಒಂದು ಪ್ರೋಟೀನು. 1955ರಿಂದಲೂ ಅದರ ರಾಸಾಯನಿಕ ರಚನೆ ಗೊತ್ತಿದ್ದರೂ ಅದನ್ನು ಗುರುತಿಸಲು ಯಾವ ಪರೀಕ್ಷೆಗಳೂ ಇರಲಿಲ್ಲ. ಕೊನೆಗೆ, ಪ್ರಾಣಿಗಳಲ್ಲಿ ಇನ್ಸೂಲಿನ್ನಿನ ಪ್ರಭಾವದ ಪರೀಕ್ಷೆಯ ಹೊರತಾಗಿ

ಬೇರೇನೂ ದಾರಿ ಉಳಿಯಲಿಲ್ಲ. ಚುಚ್ಚಿದ ಗುರುತುಗಳಿದ್ದ ಚರ್ಮ ಮುಂತಾದವುಗಳಿಂದ ಸಾರವನ್ನು ತೆಗೆದರು. ಒಂದು ಗುಂಪಿನ ಚಿಟ್ಟಿಗಳಿಗೆ ಬೇರೆ ಬೇರೆ ಪ್ರಮಾಣಗಳಲ್ಲಿ ಇನ್ಸೂಲಿನ್ ಚುಚ್ಚಿ ನೋಡಿದರು. ಇನ್ಸೂಲಿನ್ನಿನ ಪ್ರಮಾಣಕ್ಕೆ ತಕ್ಕಂತೆ ಚಿಟ್ಟಿಗಳು ನಡುಕ, ತುಯಿತ, ಚಡಪಡಿಕೆ, ದುರ್ಬಲತೆಯಿಂದ ಮಯಕವಾಗಿ ಬಿದ್ದವು.

ಹೆಣದ ಪಿರ್‍ರೆಯಿಂದ ತೆಗೆದ ಸಾರವನ್ನು ಇನ್ನೊಂದು ಗುಂಪಿನ ಚಿಟ್ಟಿಗಳಿಗೆ ಚುಚ್ಚಿದಾಗ, ಎಲ್ಲರೂ ಕುತೂಹಲದಿಂದ ಉಸಿರು ಹಿಡಿದು ನಿಂತು ನೋಡಿದರು. ಇನ್ಸೂಲಿನ್ ಚುಚ್ಚಿದಾಗ ಆದ ಹಾಗೆಯೇ ಇಲ್ಲೂ ಅವೇ ಲಕ್ಷಣಗಳು ಕಂಡುಬಂದವು. ಇವು ಮಯಕವಾಗಿ ಬಿದ್ದು ಸತ್ತವು. ಅಲ್ಲದೆ, ಈ ಸಾರವಂತೂ ಇನ್ನೂ ಪ್ರಬಲವಾಗಿತ್ತು. ಸಾಯುವ ಕೆಲವೇ ಗಂಟೆಗಳ ಮುಂಚೆ ಚುಚ್ಚಿದಂತೆ ಕಂಡ ಎಡ ಪಿರ್‍ರೆಯ ಮೇಲೆ ಚುಚ್ಚಿದ ಗುರುತುಗಳಿಂದ ತೆಗೆದ ಸಾರ ಬಲ ಪಿರ್‍ರೆಯದಕ್ಕಿಂತ ಬಲವಾಗಿತ್ತು. ಎಡ ಪಿರ್‍ರೆಗೆ ಕೊನೆಗೆ ಚುಚ್ಚಿರಬೇಕು. ಅದರಿಂದಲೇ ಬಹುಪಾಲು ರಕ್ತಗತವಾಗದೆ ಉಳಿದಿತ್ತು.

ಗೊತ್ತಿರುವುದರೊಂದಿಗೆ ಗೊತ್ತಿಲ್ಲದ್ದರ ಪ್ರಮಾಣವನ್ನು ಹೋಲಿಸಿದಾಗ ಅದರಲ್ಲಿ 84 ಏಕಮಾನ ಇನ್ಸೂಲಿನ್ ಇರುವುದು ನಿರ್ಧಾರವಾಯಿತು. ಚುಚ್ಚಿದ್ದರಲ್ಲಿ ಎಲ್ಲೋ ಕೊಂಚ ರಕ್ತಗತವಾಗದೆ ಉಳಿದಿದ್ದುದರಿಂದ ಅವಸು ಸುಮಾರು 200-300 ಏಕಮಾನಗಳನ್ನು ಚುಚ್ಚಿರಬೇಕೆಂದು ಅಂದಾಜಾಯಿತು.

ಇದನ್ನು ಇನ್ನೂ ಖಚಿತಗೊಳಿಸಲು ಈ ಹೋಲಿಕೆಯ ಪ್ರಯೋಗಗಳನ್ನು ಗಿನಿಯಿಲಿಗಳ ಮೇಲೂ ನಡೆಸಿದರು. ಅಲ್ಲೂ ಇದೇ ಫಲಿತಾಂಶ ಹೊರಬಿತ್ತು. ಜುಲೈ 1957ರ ಹೊತ್ತಿಗೆ ಇಲಿಯ ಜಿಡಿಯಾದ ವಪೆಯ ಮೇಲಿನ ಪರೀಕ್ಷೆಗಳಲ್ಲೂ ಸತ್ತ ಹೆಂಗಸಿನಿಂದ ತೆಗೆದ ಸಾರವೂ ಇನ್ಸೂಲಿನ್ನಿನಂತೆಯೇ ಸಕ್ಕರೆಯನ್ನು ಒಡೆಯುತ್ತಿದ್ದುದು ಗೊತ್ತಾಯಿತು. ನ್ಯಾಯ ಶಾಸ್ತ್ರತಜ್ಞರು ಇಷ್ಟಕ್ಕೇ ತೃಪ್ತರಾಗಲಿಲ್ಲ. ಇನ್ಸೂಲಿನ್ನನ್ನು ಖಚಿತವಾಗಿ ಗುರುತಿಸಲು ಯಾವ ಭೌತ ಇಲ್ಲವೇ ರಾಸಾಯನಿಕ ಪರೀಕ್ಷೆಗಳೂ ಇಲ್ಲವಾದ್ದರಿಂದ ಎಲಿಜಬೆತ್ ಬಾರ್ಲೋಳಿಂದ ತೆಗೆದ ಸಾರ ಎಲ್ಲ ರೀತಿಗಳಲ್ಲೂ ಇನ್ಸೂಲಿನ್ನಿನ ಹಾಗೆಯೇ ವರ್ತಿಸುತ್ತದೆಂದು ಎಳ್ಳಷ್ಟೂ ಅನುಮಾನವಿಲ್ಲದೆ ರುಜುವಾತು ಆಗಬೇಕೆಂದರು.

ಇನ್ಸೂಲಿನ್ನನ್ನು ನಾಶಪಡಿಸಬಲ್ಲ ವಸ್ತುಗಳು ಮೈಯಲ್ಲೇ ಕೆಲವಿವೆ. ಅಮೈನೊ ಆಮ್ಲವಾದ ಸಿಸ್ಟಿಯೀನ್, ಎಲ್ಲ ಆರೋಗ್ಯವಂತರ ಜೀರ್ಣರಸದಲ್ಲಿರುವ ಕಿಣ್ವವಾದ ಪೆಪ್ಸಿನ್ ಅಂತಹವೇ. ಆದ್ದರಿಂದ ಹೆಣದಿಂದ ತೆಗೆದ ಸಾರಕ್ಕೆ ಇವನ್ನು ಹಾಕಿ ನೋಡಿದಾಗ, ನಿರೀಕ್ಷಿಸಿದಂತೆ ಚಿಟ್ಟಿಲಿ, ಗಿನಿಯಿಲಿ, ಇಲಿಗಳ ಮೇಲೆ ಇನ್ಸೂಲಿನ್ ಪ್ರಭಾವ ನಾಶವಾಗಿತ್ತು.

ಬಾರ್ಲೋ ತನ್ನ ಹೆಂಡತಿಗೆ ವಿಷ ಪ್ರಮಾಣಗಳಲ್ಲಿ ಇನ್ಸೂಲಿನ್ ಚುಚ್ಚಿದ ಎನ್ನುವುದರಲ್ಲಿ ಇನ್ನೂ ಅನುಮಾನ ಇರಬಹುದೆ? ಬಾರ್ಲೋ ಇದಕ್ಕೆ ಏನು ಸಬೂಬು ಹೇಳಬಹುದು? ಇನ್ಸೂಲಿನ್ ಅಲ್ಲದೆ ಬೇರಾವುದಾದರೂ ವಸ್ತುವಿನಿಂದ ಈ ಪ್ರಭಾವಗಳನ್ನು ಕಾಣಬಹುದೆ? ಇದಕ್ಕಾಗಿ ಇನ್ನಷ್ಟು ವಿಶೇಷ ಪರೀಕ್ಷೆಗಳನ್ನು ನಡೆಸಿದರು. ಸಿಹಿಮೂತ್ರ ರೋಗಿಗಳು ನುಂಗುವ ಮಾತ್ರೆಗಳಿಂದಲೂ ರಕ್ತಸಕ್ಕರೆಯ ಮಟ್ಟ ತಗ್ಗುವುದಾದರೂ, ಇಷ್ಟು ಪ್ರಬಲ ಲಕ್ಷಣಗಳನ್ನು ತೋರಲಿಲ್ಲ.

ಕೊನೆಯದಾಗಿ, ಎಷ್ಟೇ ಅಸಂಭವವೆನಿಸಿದರೂ ಇನ್ನೂ ಒಂದು ಸಾಧ್ಯತೆ ಉಳಿದಿತ್ತು. ಮೈಯಲ್ಲಿ ಇನ್ಸೂಲಿನ್ ತಯಾರಿಸುವ ಮೇದೋಜೀರಕ ಗ್ರಂಥಿಯಲ್ಲಿ ಗಡ್ಡೆ ಎದ್ದಿದ್ದರೂ ರಕ್ತ ಸಕ್ಕರೆ ಪ್ರಮಾಣ ಹೀಗೇ ಅಪಾಯಕರವಾಗಿ ಇಳಿದಿರುತ್ತದೆ. ಆದರೆ ಎಲಿಜಬೆತ್ ಬಾರ್ಲೋಳ ಮೈಯಲ್ಲಿ ಅಂತಹ ಗಡ್ಡೆ ಎದ್ದಿರಲಿಲ್ಲ. ಅಲ್ಲದೆ, ಅಂತಹ ಇನ್ಸೂಲಿನ್ ಮೈಯಲ್ಲಿ ಎಲ್ಲೆಲ್ಲೂ ಒಂದೇ ಸಮಪ್ರಮಾಣದಲ್ಲಿ ಇರುತ್ತಿತ್ತೇ ಹೊರತು, ಪಿರ್‍ರೆ ಚರ್ಮದಲ್ಲಿ ಮಾತ್ರ ಹೆಚ್ಚಾಗಿರುತ್ತಿರಲಿಲ್ಲ. ಒಂದು ಪಿರ್‍ರೆಯಲ್ಲಿ ಇನ್ನೂ ಹೆಚ್ಚಾಗಿತ್ತು.

ಇಷ್ಟೆಲ್ಲ ಆದ ಮೇಲೆ ಅರಿವು ತಪ್ಪಿರುವಾಗ ಅವಳನ್ನು ಮುಳುಗಿಸಲೆಂದೋ ಸ್ನಾನದ ತೊಟ್ಟಿಯಲ್ಲೇ ಮಯಕವಾಗಿ ಮುಳುಗುವುದನ್ನು ನೋಡಲೆಂದೋ ತನ್ನ ಹೆಂಡತಿಗೆ ಬಾರ್ಲೋ ಇನ್ಸೂಲಿನ್ನನ್ನು ಕೊಟ್ಟಿರಲೇಬೇಕೆಂದು ಪತ್ತೇದಾರರು ನಿರ್ಧರಿಸಿದರು. ಸುಮಾರು ಎರಡು ತಿಂಗಳು ಕಷ್ಟಪಟ್ಟ ಮೇಲೆ ಇನ್ನೊಂದು ಶಂಕೆ ಎದ್ದಿತು. ಚುಚ್ಚಿದ ಇನ್ಸೂಲಿನ್ ರಕ್ತಗತವಾಗಿ ಬಿಡುವುದರಿಂದ ಅದರಿಂದ ಕೊಲೆ ಮಾಡಿದರೆ ಇನ್ಸೂಲಿನ್ ಪತ್ತೆಯಾಗದೆಂಬ ಅಭಿಪ್ರಾಯವಿತ್ತು. ಆದರೆ, ಇದರ ವಿರೋಧವಾಗಿ, ಈ ಹೆಣದಲ್ಲಿ ಇನ್ಸೂಲಿನ್ ದೊರೆಯಲು ಕಾರಣ ವೇನು? ಮೈಯಲ್ಲಿ ಆಮ್ಲೀಯ ಊತಕಗಳಲ್ಲಿ ಇನ್ಸೂಲಿನ್ ಹಾಳಾಗದೆ ಉಳಿಯುತ್ತದೆ. ಹೆಣದಲ್ಲಿ ಅದರಲ್ಲೂ ಒಳಾಂಗಗಳಲ್ಲಿ ಕಿಣ್ವಗಳ ನೆರವಿನಿಂದ ಕ್ಷಾರೀಯವಾಗುವುದಾದರೂ, ಸ್ನಾಯುಗಳಲ್ಲಿ ಹಾಲಿನಾಮ್ಲ ಉತ್ಪತ್ತಿಯಾಗುವುದರಿಂದ ಇನ್ಸೂಲಿನ್ ಕೆಡದೆ ಉಳಿದಿತ್ತು.

ತನಿಖೆಯೆಲ್ಲ ಮುಗಿದ ಮಾರನೆಯ ದಿನ 1957ನೇ ಜುಲೈ 29ರಂದು ಬಾರ್ಲೋನನ್ನು ದಸ್ತಗಿರಿ ಮಾಡಿ, ಇನ್ಸೂಲಿನ್ನಿನಿಂದ ಆತ ತನ್ನ ಹೆಂಡತಿಯನ್ನು ಕೊಂದನೆಂದು ಆಪಾದಿಸಿದಾಗ, ತಡಬಡಿಸಿ ಸುಸ್ತಾದರೂ ಬೇಗನೆ ಚೇತರಿಸಿಕೊಂಡ. ಮೊದಮೊದಲು ತನ್ನ ಹೆಂಡತಿಗೆ ಯಾವ ಚುಚ್ಚುಮದ್ದನ್ನೂ ಕೊಡಲಿಲ್ಲವೆಂದೇ ಸಾಧಿಸುತ್ತಿದ್ದ ಅವನು ಇದ್ದಕ್ಕಿದ್ದ ಹಾಗೆ ಏನೋ ಚುಚ್ಚಿದ್ದೆನೆಂದು ಒಪ್ಪಿಕೊಂಡ. ಚುಚ್ಚುಮದ್ದು ಇನ್ಸೂಲಿನ್ ಅಲ್ಲ, ಅವಳ ಮೈ ಇಳಿಸಲೆಂದು ಎರ್ಗೊನೋವಿನ್ ಕೊಟ್ಟೆನೆಂದ. ಆದರಿಂದ ಮೈಯಿಳಿವುದೆಂದು ಗೊತ್ತಿದ್ದರಿಂದ, ಕೆಲವು ಚುಚ್ಚುಮದ್ದುಗಳನ್ನು ಆಸ್ಪತ್ರೆಯಿಂದ ಕದ್ದು ತಂದು ಅವಳು ಸಾಯುವ ದಿನ ಕೊಟ್ಟಿದ್ದೆನೆಂದೂ ಹೇಳಿದ.

ಈ 'ತಪ್ಪೊಪ್ಪಿಗೆ'ಯಿಂದ ನ್ಯಾಯ ವೈದ್ಯಶಾಸ್ತ್ರ ಪ್ರಯೋಗಾಲಯದ ತಜ್ಞರು ಗಾಬರಿಯಾಗಲಿಲ್ಲ. ಎರ್ಗೊನೋವಿನ್ ಸಾಮಾನ್ಯ ಬಳಕೆಯ ವಿಷವಾದ್ದರಿಂದ ಇದಕ್ಕಾಗಿ ಪರೀಕ್ಷೆಯನ್ನು ಮೊದಲೇ ನಡೆಸಿದ್ದರು. ಅದನ್ನು ಅವಳಿಗೆ ಕೊಟ್ಟಿದ್ದಿದ್ದರೆ ಮೂತ್ರದಲ್ಲಿ ಇರಬೇಕಿತ್ತು. ಆದರೆ ಇರಲಿಲ್ಲ. ಎರ್ಗೊನೋವಿನ್ನನ್ನು ಒಂದು ಹೆಣದ ಪಿತ್ತಗೆ ಚುಚ್ಚಿ ಅದರ ಸಾರದೊಂದಿಗೆ ಮತ್ತೆ ಎಲ್ಲ ಪರೀಕ್ಷೆಗಳನ್ನೂ ಮಾಡಿದಾಗ ಯಾವ ಪ್ರಾಣಿಗಳಲ್ಲೂ ಇನ್ಸೂಲಿನ್‌ನ ಪ್ರಭಾವ ಒಂದೂ ಕಾಣಲಿಲ್ಲ.

ಡಿಸೆಂಬರ್ 1987ರಲ್ಲಿ ನ್ಯಾಯಾಧೀಶ ಹ್ಯಾರಿ ಹಿಲ್ಬನ್ ಫಾಸ್ಟರ್, '' 'ಇನ್ಸೂಲಿನ್ ಚುಚ್ಚಿ' ತನ್ನ ಹೆಂಡತಿ ಎಲಿಜಬೆತ್‌ಗಳನ್ನು ಕೆನೆತ್ ಬಾರ್ಲೋ ಕೊಲೆ ಮಾಡಿದ''ನೆಂದು ಆಪಾದಿಸಿದನು. ಸರಕಾರದ ಪರವಾಗಿ ವೈಜ್ಞಾನಿಕ ಪುರಾವೆಗಳನ್ನು ಒಂದೊಂದಾಗಿ ವಿವರಿಸಲಾಯಿತು. ಆದರೂ, ವಿಜ್ಞಾನದ ಮುನ್ನಡೆಯ ಹೊಸ ಶೋಧನೆಗಳು ಇಂತಹ ವಿಚಾರಗಳಲ್ಲಿ ವಹಿಸುವ ಮಹತ್ತರ ಪಾತ್ರದಲ್ಲಿ ಈ ಮೊಕದ್ದಮೆ ಜನರ ವಿಶೇಷ ಆಸಕ್ತಿ, ಕುತೂಹಲಗಳನ್ನು ಕೆರಳಿಸಿತು. ಜ್ಯೂರಿಗಳು ತಮ್ಮ ತೀರ್ಪನ್ನು ಹೇಳಲು ಕೆಲವೇ ನಿಮಿಷಗಳು ಸಾಕಾದವು. ಕೆನೆತ್ ತಪ್ಪಿತಸ್ಥನೆಂದು ಒಮ್ಮತದಲ್ಲಿ ಸಾರಿದರು. ಆತನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು. ●

(ಆಧಾರಿತ)

ನಿಮಗೆ ಗೊತ್ತೆ?

ನಾವು ಕೊಳ್ಳುವ ಪ್ರತಿಯೊಂದು ಅಂಚೆ ಕಾರ್ಡಿನ ಮೇಲೂ 44 ಪೈಸೆಗಳ ರಿಯಾಯಿತಿ ಪಡೆಯುತ್ತೇವೆ. ಏಕೆಂದರೆ ಪ್ರತಿಯೊಂದು ಕಾರ್ಡಿನ ಮುದ್ರಣ, ಸಾಗಣೆ ಮುಂತಾದವುಗಳಿಗಾಗಿ ಅಂಚೆ ಇಲಾಖೆ 59 ಪೈಸೆ ಖರ್ಚು ಮಾಡಬೇಕಾಗುತ್ತದೆ. ಆದರೆ ನಾವು ಒಂದು ಅಂಚೆ ಕಾರ್ಡಿಗೆ ಕೊಡುವ ಹಣ 15 ಪೈಸೆಗಳು ಮಾತ್ರ!

● ಹಾಲಸ್ವಾಮಿ. ಮ. ಮಲ್ಲನಗೌಡರ

42

ಜೀವನದರ್ಶನ

ಕೆ.ಟಿ. ಪಾಂಡುರಂಗಿ

ಹಿಂಸೆ-ಅಹಿಂಸೆ

ಮನುಷ್ಯನು ಅನುಸರಿಸಬೇಕಾದ ಒಳ್ಳೆಯ ಗುಣಗಳಲ್ಲಿ ಅಹಿಂಸೆಯೂ ಒಂದು ಎಂದು ನಮ್ಮ ಹಿರಿಯರು ಹೇಳುತ್ತಲೇ ಬಂದಿದ್ದಾರೆ. ಅಹಿಂಸೆ ಎಂಬ ಶಬ್ದಕ್ಕೆ ಬೇರೆಯವರ ಶರೀರಕ್ಕೆ ಧಕ್ಕೆಯಾಗುವಂಥ ಯಾವದೇ ಕಾರ್ಯವನ್ನು ಮಾಡಬಾರದು ಎಂಬುದು ಸ್ಥೂಲವಾದ ಅರ್ಥ. ಕೊಲ್ಲುವುದು, ಗಾಯಗೊಳಿಸುವುದು, ಪೆಟ್ಟು ಹಾಕುವುದು ಹೀಗೆ ಯಾವ ರೀತಿಯಿಂದಲೂ ಇನ್ನಿತರ ಮನುಷ್ಯರು ಅಥವಾ ಪ್ರಾಣಿಗಳಿಗೆ ಹಾಗೂ ಗಿಡಬಳ್ಳಿಗಳಿಗೂ ಕೂಡ ಕಷ್ಟ ಕೊಡದಿರುವುದು ಅಹಿಂಸೆ ಎಂಬುದನ್ನು ಎಲ್ಲರೂ ತಿಳಿದುಕೊಂಡಿದ್ದಾರೆ.

ಆದರೆ ಅಹಿಂಸೆಯ ಆಳ ಇನ್ನೂ ಹೆಚ್ಚಾಗಿದೆ. ಬೇರೆಯವರಿಗೆ ಮನಸ್ಸು ನೋಯುವಂಥ ಬಿರುಸು ಮಾತುಗಳನ್ನು ಆಡದಿರುವುದೂ ಅಹಿಂಸೆ. ಬಿರುಸು ಮಾತನಾಡದಿದ್ದರೂ ಮೌನದಿಂದಲೂ ಕೋಪದ ಮುಖಚರ್ಯೆ, ಅವಹೇಳನದ ಮುಖಚರ್ಯೆ, ಇನ್ನಿತರ ರೀತಿಯಿಂದ ತಿರಸ್ಕಾರ ಕೋಪ ಸೂಚಿಸುವದು ಇವುಗಳನ್ನು ಮಾಡದಿರುವುದೂ ಅಹಿಂಸೆ.

ಹಿಂಸೆ ಕೇವಲ ಕೃತಿಯಿಂದ ಮಾತ್ರ ಆಗುವುದಿಲ್ಲ. ನಿಷ್ಠುರ ಮತ್ತು ದುಷ್ಟ ಮನೋಭಾವವನ್ನು ಪ್ರದರ್ಶಿಸುವುದರಿಂದಲೂ ಆಗುತ್ತದೆ. ಇಂಥ ಮನೋಭಾವವು ದ್ವೇಷ ಅಸೂಯೆ ಕೋಪಗಳಿಂದ ಉಂಟಾಗುತ್ತವೆ. ಈ ದ್ವೇಷ ಅಸೂಯೆ ಕೋಪಗಳು ಸ್ವಾರ್ಥ ಲೋಭಗಳಿಂದ ಆಗುತ್ತವೆ. ಕೆಲವು ಸಂದರ್ಭಗಳಲ್ಲಿ ತಪ್ಪು ತಿಳುವಳಿಕೆಯಿಂದಲೂ ಭಾವನಾಪರವಶತೆಯಿಂದಲೂ ಉಂಟಾಗುತ್ತವೆ.

ಹಿಂಸೆಯನ್ನು ಬಿಟ್ಟು ಅಹಿಂಸಾ ಧರ್ಮವನ್ನು ಅನುಸರಿಸಬೇಕಾದರೆ ಈ ಸ್ವಾರ್ಥ ಲೋಭಗಳನ್ನು ಬಿಡಬೇಕಾಗುತ್ತದೆ. ದ್ವೇಷ ಅಸೂಯೆಗಳನ್ನು ಬಿಡಬೇಕಾಗುತ್ತದೆ. ಹೀಗೆ ಅಹಿಂಸಾ ಧರ್ಮವನ್ನು ಅನುಸರಿಸುವುದೆಂದರೆ ಈ ದುಷ್ಟ ಭಾವನೆಗಳನ್ನು ಕಳೆದುಕೊಂಡು ಹೆಚ್ಚು ಹೆಚ್ಚು ಸುಸಂಸ್ಕೃತನಾಗುವುದು. ಅಹಿಂಸೆ ಸುಸಂಸ್ಕೃತತನದ ಆವಿರ್ಭಾವ. ಹಿಂಸೆ ಅಸಂಸ್ಕೃತತೆಯ ಪರಿಣಾಮ. ಅಹಿಂಸೆಯು ಕೇವಲ ಸಾಮಾಜಿಕ ಜೀವನದಲ್ಲಿ ಮಾತ್ರವಲ್ಲ ಆದರೆ ಕುಟುಂಬ ಜೀವನ ಪರಸ್ಪರ ಮಾನವೀಯ ಸಂಬಂಧ ಮನುಷ್ಯ ಮತ್ತು ಪ್ರಾಣಿಗಳ ಸಂಬಂಧ ಮತ್ತು ಮನುಷ್ಯ ಮತ್ತು ನಿಸರ್ಗದ ಸಂಬಂಧ ಹೀಗೆ ಎಲ್ಲದರಲ್ಲಿಯೂ ಹಾಸುಹೊಕ್ಕಾಗಿ ಬೆಳೆದು ಬರಬೇಕು. ಅಹಿಂಸಾ ಧರ್ಮವು ಒಂದು ವಿಧವಾದ ಸ್ಥಿತಪ್ರಜ್ಞೆಯೇ ಆಗಿದೆ. ಇದನ್ನು ಕೈಗೂಡಿಸಿ ಕೊಂಡವರಿಗೆ ಜೀವನದಲ್ಲಿ ಮನೋಧೈರ್ಯ, ಶಾಂತಿ ಮತ್ತು ಆನಂದಗಳು ವಿಫುಲವಾಗಿ ದೊರೆಯುವವು. ಆದ್ದರಿಂದ ಪರಾಕಾಷ್ಠೆಯ ಅಹಿಂಸಾಧರ್ಮ ಎಲ್ಲರಿಗೂ ಸಾಧ್ಯವಾಗದಿದ್ದರೂ ಯಥಾ ಶಕ್ತಿ ಕಾಯಾ ವಾಚಾ ಮನಸಾ ಅಹಿಂಸಾ ಧರ್ಮವನ್ನು ಅನುಸರಿಸುವುದು ಸುಸಂಸ್ಕೃತತೆಯ ಲಕ್ಷಣ. ●

ಸ್ಟಾಲಿನ್‌ರ ಅಂತಿಮ ಕ್ಷಣಗಳು

ಅರುಣ

1953 ಮಾರ್ಚ್ ಒಂದರಂದು ರಶಿಯಾದ ಸರ್ವಾಧಿಕಾರಿ ಜೋಸೆಫ್ ಸ್ಟಾಲಿನ್ ತಮ್ಮ ಕ್ರೆಮ್ಲಿನ್ ನಿವಾಸದಲ್ಲಿ ನಿಗೂಢವಾಗಿ ತೀರಿಕೊಂಡರು. ಸ್ಟಾಲಿನ್‌ರ ಏಕಮಾತ್ರ ಪುತ್ರಿ ಸ್ವೆತ್ಲಾನಾ ಅಲ್ಲಿಲುಯೆವಾ 1988ರಲ್ಲಿ ಸೋವಿಯತ್ ರಶಿಯಾವನ್ನು ತ್ಯಜಿಸಿದ ಬಳಿಕ 'ನನ್ನ ಮೊಮ್ಮಗಳಿಗಾಗಿ ಒಂದು ಪುಸ್ತಕ' ಎಂಬ ಕೃತಿ ರಚಿಸಿದಳು. ತಂದೆ ಸ್ಟಾಲಿನ್ನರ ಸಾವಿನ ಹಿನ್ನೆಲೆ ಮತ್ತು ತಮ್ಮ ವಾಸಿಲಿಯ ಸಾವಿನ ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ. ಸ್ಟಾಲಿನ್ ತೀರಿಕೊಂಡು ಮೂವತ್ತೈದು ವರ್ಷ ಕಳೆದಿದೆ. ಸ್ವೆತ್ಲಾನಾ ಬರೆದಿರುವ ಕೃತಿ ಭವಿಷ್ಯದ ದಿನಗಳಲ್ಲಿ ಸಂಶೋಧಕರಿಗೆ ವಿಪುಲ ಮಾಹಿತಿ ಒದಗಿಸುವ ಗ್ರಂಥವೆನಿಸಲಿದೆ.

1952-53ರ ಚಳಿಗಾಲದಲ್ಲಿ ಅಂದರೆ ನನ್ನ ತಂದೆಯ ಮರಣಕ್ಕಿಂತ ಮೊದಲು ಹಾಗೂ ನಂತರ ನಡೆದ ಎರಡು ಘಟನೆಗಳನ್ನು ಮರೆಯಲು ಸಾಧ್ಯವಿಲ್ಲ. ಇವೆರಡು ಘಟನೆಗಳನ್ನು ನನ್ನ ಹಿಂದಿನ ಕೃತಿಗಳಲ್ಲಿ ಪ್ರಸ್ತಾಪಿಸಿಲ್ಲ. ಆದರೆ ಕಾಲ ಸರಿಯುತ್ತಿದ್ದಂತೆ ಅವುಗಳ ಮಹತ್ವ ಹೆಚ್ಚುತ್ತಿದೆ. ಅವೆರಡು ಘಟನೆಗಳಿಗೂ ನಿಕಟ ಸಂಬಂಧವಿದೆ ಎಂದು ಅನಿಸುತ್ತದೆ. ಎರಡು ಘಟನೆಗಳಲ್ಲಿಯೂ ಒಬ್ಬನೇ ನಿಗೂಢ ವ್ಯಕ್ತಿ ಕಾಣಿಸಿಕೊಂಡಿದ್ದಾನೆ.

1953 ಜನವರಿ ಅಥವಾ ಫೆಬ್ರವರಿಯಲ್ಲಿ ತಂದೆಯೊಂದಿಗೆ ಕೊನೆಯ ಸಂಭಾಷಣೆ ನಡೆಯಿತು. ಆ ದಿನ ಅವರು ಅನಿರೀಕ್ಷಿತವಾಗಿ ನನ್ನೊಂದಿಗೆ ಫೋನಿನಲ್ಲಿ ಮಾತನಾಡಿದರು. ಅನಿರೀಕ್ಷಿತವಾಗಿ ಫೋನ್ ಮಾಡುವುದು ಅವರ ಸ್ವಭಾವ. 'ನಾದಿರಾಶ್ವಿಲಿ ಮೂಲಕ ಪತ್ರವೊಂದನ್ನು ಕಳುಹಿಸಿರುವುದು ನೀನೇ ಏನು? ಯಾರು ಈ ನಾದಿರಾಶ್ವಿಲಿ? ಅವನು ನಿನಗೆ ಗೊತ್ತೇ?' ಎಂದು ತಂದೆ ಕೇಳಿದರು. ವಾಸ್ತವವಾಗಿ ಯಾವ ಪತ್ರವನ್ನೂ ನಾನು ಕಳುಹಿಸಿರಲಿಲ್ಲ. ತಂದೆಯವರಿಗೆ ನಾನು ಯಾವ ಪತ್ರವನ್ನೂ ರವಾನಿಸಬಾರದು, ಅಂಚೆ ಪೆಟ್ಟಿಗೆಯಾಗಿ ಕೆಲಸ ಮಾಡಬಾರದು ಎಂಬ ಕಟ್ಟುನಿಟ್ಟಾದ ನಿಯಮಗಳಿದ್ದುವು. ಸ್ಟಾಲಿನ್‌ರಿಗೆ ಬಹಳ ಮಹತ್ವದ ಪತ್ರವೇನೋ ತಲುಪಿರಬೇಕು. ಅದನ್ನು ತಂದ ವ್ಯಕ್ತಿ ಯಾರು ಎಂಬುದನ್ನು ಅವರು ತಿಳಿದುಕೊಳ್ಳಲು ಬಯಸಿದ್ದರು. 'ಡ್ಯಾಡಿ ನನಗವನ ಪರಿಚಯವಿಲ್ಲ' ಎಂದೆ. 'ಸರಿ ಹಾಗಾದರೆ' ಎಂದು ಅವರು ಫೋನ್ ಕೆಳಗಿಟ್ಟರು.

ತಂದೆಯೊಂದಿಗೆ ಇದೇ ಅಂತಿಮ ಸಂಭಾಷಣೆ

ಯಾದ ಕಾರಣ ಆ ವ್ಯಕ್ತಿಯ ಹೆಸರು (ನಾದಿರಾ ಶ್ವಿಲಿ) ಚೆನ್ನಾಗಿ ಜ್ಞಾಪಕವಿದೆ. ಮಾರ್ಚ್ ಒಂದರಂದು (1953) ಮಧ್ಯಾಹ್ನ ತಂದೆಯವರನ್ನು ಭೇಟಿಯಾಗಲು ನನಗೆ ಕರೆ ಬಂದಿತು. ಅವರು ಮಾಸ್ಕೋ ಸಮೀಪ ಕುಂತ್ಸೆವೊ ನಿವಾಸದಲ್ಲಿದ್ದರು. ನಾನು ಅಲ್ಲಿಗೆ ತಲುಪಿದಾಗಲೇ ಅವರು ಸಂಪೂರ್ಣ ಪ್ರಜ್ಞಾಶೂನ್ಯರಾಗಿದ್ದರು. ಅವರ ಶರೀರದ ಬಲಭಾಗಕ್ಕೆ ಲಕ್ವ ಹೊಡೆದಿತ್ತು. ಸ್ಟಾಲಿನ್‌ರ ನಿಕಟವರ್ತಿಗಳು, ಸೇವಕರು, ಅಂಗರಕ್ಷಕ ದಳದವರು ಡಾಕ್ಟರನ್ನು ಕರೆಯಿಸಲು ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ, ಸ್ಟಾಲಿನ್‌ರ ಖಾಸಗಿ ವೈದ್ಯ ವಿನೊಗ್ರದೊವ್ ಸಮೀಪದಲ್ಲಿಯೇ ಇನ್ನೊಂದು ಕೊಠಡಿಯಲ್ಲಿದ್ದರು. ಅವರಿಗೆ ಕರೆ ಕಳುಹಿಸಿದ್ದರೆ ತಕ್ಷಣ ಅಲ್ಲಿಗೆ ಬರುತ್ತಿದ್ದರು. ಅದರ ಬದಲು ಕಿರಿಯ ಅಧಿಕಾರಿಗಳು ಮೇಲಾಧಿಕಾರಿಗಳ ಅನುಮತಿಗೆ ಕಾಯುತ್ತಿದ್ದರು. ಸ್ಟಾಲಿನ್ ಪ್ರಜ್ಞೆ ಇಲ್ಲದೆ ಸುಮಾರು ಹನ್ನೆರಡರಿಂದ ಹದಿನಾಲ್ಕು ತಾಸು ಯಾವುದೇ ಚಿಕಿತ್ಸೆ ಇಲ್ಲದೆ ಹಾಗೆಯೇ ಬಿದ್ದಿದ್ದರು. ಸೋವಿಯತ್ ಸರಕಾರದ ಸಿಬ್ಬಂದಿಯೆಲ್ಲಾ ಅಲ್ಲಿ ನೆರೆದಿತ್ತು. ಸ್ಟಾಲಿನ್‌ರ ನೆಚ್ಚಿನ ಬಂಟ ಅವರ ಬಲಗೈ ಎನಿಸಿದ್ದ ಬೆರಿಯಾ ಮಾತ್ರ ನಿಶ್ಚಿಂತನಾಗಿದ್ದ. 'ಯಾರೂ ಕಳವಳಪಡಬೇಡಿ, ಭೀತಿಗೆ ಕಾರಣವಿಲ್ಲ. ಸ್ಟಾಲಿನ್ ನಿದ್ದೆ ಮಾಡುತ್ತಿದ್ದಾರೆ, ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲವೂ ಸರಿ ಹೋಗಬಹುದು' ಎಂದು ಅವನು ಭರವಸೆ ನುಡಿದ. ನಿವಾಸದಲ್ಲಿದ್ದ ಎಲ್ಲ ಸೇವಕರು, ಅಂಗರಕ್ಷಕರು, ಸರಕಾರದ ದಿವ್ಯ ನಿರ್ಲಕ್ಷ್ಯದ ಬಗ್ಗೆ ಬೇಸತ್ತು ಹೋಗಿದ್ದರು. ಕೊನೆಗೆ ಅಲ್ಲಿದ್ದವರೊಬ್ಬರು ಸ್ಟಾಲಿನ್‌ರನ್ನು ಪಕ್ಕದ ಕೊಠಡಿಗೆ ಸಾಗಿಸಲು ಸಲಹೆ ಮಾಡಿದರು. ಇದು ತೀರಾ ಅತಿರೇಕದ ಕ್ರಮ. ಮಿದುಳಿನ ರಕ್ತಸ್ರಾವಕ್ಕೊಳಗಾಗಿ ಲಕ್ವ ಹೊಡೆದವರನ್ನು ತಕ್ಷಣ ಬೇರೆಡೆಗೆ ಸ್ಥಳಾಂತರಿಸಬಾರದು. ಮರುದಿನ ಬೆಳಗ್ಗೆ ವೈದ್ಯಕೀಯ ವಿಜ್ಞಾನಗಳ ಅಕಾಡೆಮಿಯ ವೈದ್ಯರ ದೊಡ್ಡ ತಂಡವೇ ಸ್ಟಾಲಿನ್ನರ ಆರೋಗ್ಯ ತಪಾಸಣೆಗೆ ಅವರ ನಿವಾಸಕ್ಕೆ ಆಗಮಿಸಿತು. ಖಾಸಗಿ ವೈದ್ಯ ವಿನೊಗ್ರದೊವ್ ಸ್ಟಾಲಿನ್‌ರ ಆರೋಗ್ಯಕ್ಕೆ ಸಂಬಂಧಿಸಿದಂತೆ ಬರೆದಿರಿಸಿದ 'ಕೇಸ್ ಹಿಸ್ಟರಿ' ಎಲ್ಲಿ ಹುಡುಕಿದರೂ ಸಿಗಲಿಲ್ಲ. ಆ ಸಂದರ್ಭ



ದಲ್ಲಿ ತೀರಾ ಅತ್ಯವಶ್ಯಕವೆನಿಸಿದ್ದ ಅದು ಕ್ರೆಮ್ಲಿನ್‌ನ ಕ್ಲಿನಿಕ್‌ನಲ್ಲಿ ವೈದ್ಯಕೀಯ ದಾಖಲೆ ಪತ್ರಗಳ ಕಡತದಲ್ಲಿ ಎಲ್ಲಿಯೋ ಹೂತು ಹೋಗಿರಬಹುದು.

ಸ್ಟಾಲಿನ್ ಮಾರ್ಚ ಐದರಂದು ಮಧ್ಯಾಹ್ನ ಕೊನೆಯುಸಿರೆಳೆದರು. ಅವರ ಪಾರ್ಥಿವ ಶರೀರವನ್ನು ಮರಣೋತ್ತರ ಶವ ಪರೀಕ್ಷೆಗೆ ಒಪ್ಪಿಸಲಾಯಿತು. ಕುಂತ್ಸೆವೊ ನಿವಾಸದಲ್ಲಿದ್ದ ಸ್ಟಾಲಿನ್‌ರ ಸಿಬ್ಬಂದಿ ವರ್ಗದವರನ್ನೆಲ್ಲಾ ಹೊರ ಹಾಕಲು ಬೆರಿಯಾನ ಆಜ್ಞೆಯಾಯಿತು. ನಿವಾಸದ ಪ್ರಧಾನ ಬಾಗಿಲನ್ನು ಮುಚ್ಚಿ ಬೀಗ ಜಡಿಯಲಾಯಿತು. ''ಕ್ರೆಮ್ಲಿನ್‌ಸಲ್ಲಿರುವ ಫ್ಲಾಟ್‌ನಲ್ಲಿ ಸ್ಟಾಲಿನ್ ತೀರಿಕೊಂಡರು'' ಎಂದು ಸರಕಾರ ಅಧಿಕೃತ ಸುದ್ದಿ ಪ್ರಕಟಿಸಿತು. ಇದು ಅಪ್ಪಟ ಸುಳ್ಳು ಸುದ್ದಿ. ಸ್ಟಾಲಿನ್‌ರ ಆಪ್ತ ಸೇವಕರು, ಅಂಗರಕ್ಷಕರು ಏನೂ ಮಾಡುವಂತಿರಲಿಲ್ಲ. ಅವರೆಲ್ಲ ಮೌನವಾಗಿದ್ದರು. ಸ್ಟಾಲಿನ್ ತೀರಿಕೊಂಡು ಹತ್ತು ವರ್ಷಗಳ ತರುವಾಯ ಓರ್ವ ಮಹಿಳೆ- ಈಕೆ ಕುಂತ್ಸೆವೊ ನಿವಾಸದಲ್ಲಿ ಸುಮಾರು 30 ವರ್ಷ ಸೇವೆ ಸಲ್ಲಿಸಿದ್ದಳು- ಮೇಲಿನ ಎಲ್ಲ ವಿವರಗಳನ್ನು ನನಗೆ ತಿಳಿಸಿದಳು.

ಅಪರಿಚಿತ

ತಂದೆಯ ಪಾರ್ಥಿವ ಶರೀರವನ್ನು ಅಂತಿಮ ಶ್ರದ್ಧಾಂಜಲಿ ಸಲ್ಲಿಸಲು 'ಹಾಲ್ ಆಫ್ ಕಾಲಮ್ಸ್'ನಲ್ಲಿ ಇರಿಸಿದ್ದರು. ಶ್ರದ್ಧಾಂಜಲಿ ಸಲ್ಲಿಸಲು ಬಂದವರು ಸಾಲಾಗಿ ಶವಪೆಟ್ಟಿಗೆಗೆ ಪ್ರದಕ್ಷಿಣೆ ಬಂದು ಸಂತಾಪ ವ್ಯಕ್ತಪಡಿಸುತ್ತಿದ್ದರು. ಆ ಸಂದರ್ಭದಲ್ಲಿ ಜಾರ್ಜಿಯಾದಿಂದ ಅಲ್ಲಿಗೆ ಬಂದಿದ್ದ ನಿಯೋಗದಲ್ಲಿ ಎತ್ತರದ ನಿಲುವಿನ ದಢೂತಿ ವ್ಯಕ್ತಿಯೊಬ್ಬ ನನ್ನ ಗಮನ ಸೆಳೆದ. ಆತ ಕಾರ್ಮಿಕರಂತೆ ಉಡುಪು ಧರಿಸಿದ್ದ. ಆತ ಸ್ವಲ್ಪ ಹೊತ್ತು ಶವಪೆಟ್ಟಿಗೆಯ ಸಮೀಪ ನಿಂತು ಮೌನವಾಗಿ ಅತ್ತ.

ಒಂದೆರಡು ದಿನಗಳ ಬಳಿಕ ಮನೆಯ ಬಾಗಿಲಿನ ಕರೆಗಂಟೆ ಬಾರಿಸಿತು. ಬಾಗಿಲು ತೆರೆದು ನೋಡಿದರೆ ಅದೇ ದಢೂತಿ, ಎತ್ತರದ ನಿಲುವಿನ ಬಲಿಷ್ಠ ವ್ಯಕ್ತಿ. ''ಹಲೋ ಹೇಗಿದ್ದೀರಿ, ನಾನು ಜಾರ್ಜಿಯಾದ ನಾದಿರಾಶ್ವಿಲಿ'' ಎಂದು ತನ್ನ ಪರಿಚಯ ಹೇಳಿಕೊಂಡ. 'ಒಳಗೆ ಬನ್ನಿ' ಎಂದು ಆಹ್ವಾನಿಸಿದೆ. ಕೆಲವೇ ದಿನಗಳ ಹಿಂದೆ ತಂದೆ ಫೋನಿನಲ್ಲಿ ಮಾತನಾಡಿದಾಗ ಪ್ರಸ್ತಾಪಿಸಿದ ನಾದಿರಾಶ್ವಿಲಿ ಈತನೇ ಇರಬೇಕು ಅನಿಸಿತು. ಅವನ ಕೈಯಲ್ಲಿ ಹಲವು ಕಾಗದ ಪತ್ರಗಳ ಕಂತೆಯಿದ್ದ ಫೈಲೊಂದು ಇತ್ತು. ಆತ ನನ್ನ ಭೋಜನ ಕೊಠಡಿಯನ್ನು ಪ್ರವೇಶಿಸಿ ಪಕ್ಕದ ಕುರ್ಚಿಯಲ್ಲಿ ಕುಳಿತು ಎರಡೂ ಕೈಗಳನ್ನು ಮೇಜಿನ ಮೇಲೆ ಊರಿ ರೋದಿಸತೊಡಗಿದ. ''ತೀರಾ ತಡವಾಯಿತು, ತೀರಾ ತಡವಾಯಿತು'' ಎಂದು ಉದ್ಗರಿಸತೊಡಗಿದ. ಫೈಲಿನತ್ತ ದೃಷ್ಟಿ ಹರಿಯಿಸಿ ಕಳೆದ ಹಲವು ವರ್ಷಗಳಿಂದ ನಾನು ಇವೆಲ್ಲವನ್ನೂ ಸಂಗ್ರಹಿಸುತ್ತಿದ್ದೇನೆ. ನನ್ನನ್ನು ಕೊಲ್ಲಲು ಬೆರಿಯಾ ಒಳಸಂಚು ನಡೆಸಿದ್ದಾನೆ. ಆತ ನನ್ನನ್ನು ಜೈಲಿಗೆ ಅಟ್ಟಿದ, ನನ್ನನ್ನು ಹುಚ್ಚನೆಂದು ಘೋಷಿಸಿದ. ಈ ಎಲ್ಲ ಹಿಂಸೆ, ಕಿರುಕುಳಗಳಿಂದ ತಪ್ಪಿಸಿಕೊಂಡಿದ್ದೇನೆ. ಆತ ನನ್ನನ್ನು ಹಿಡಿಯಲಾರ, ಎಂದಿಗೂ ಹಿಡಿಯಲಾರ'' ಎಂದು ಒಂದೇ ಉಸಿರಲ್ಲಿ ಉದ್ವೇಗದಿಂದ ಹೇಳಿದ. ಸ್ವಲ್ಪ ಹೊತ್ತು ಮೌನವಾಗಿದ್ದು ಆಮೇಲೆ ಮಾರ್ಶಲ್ ಝುಕೋವ್ (ಎರಡನೇ ಮಹಾಯುದ್ಧದಲ್ಲಿ ರಶಿಯಾ ದೇಶಕ್ಕೆ ಜಯ ದೊರಕಿಸಿ ಕೊಟ್ಟ ಮಹಾ ಸೇನಾನಿ) ಎಲ್ಲಿ ನೆಲೆಸಿದ್ದಾರೆಂದು ನಿಮಗೆ ಗೊತ್ತೇ? ಎಂದು ಕೇಳಿದ. ನಾನು ಯೋಚಿಸಿದೆ. ಈ ನಾದಿರಾಶ್ವಿಲಿ ಬೆರಿಯಾನ ಬಗ್ಗೆಯೇ ತಂದೆಗೆ ಪತ್ರ ಬರೆದಿರಬೇಕು. ಯಾರೋ ಆ ಪತ್ರವನ್ನು ತಂದೆಗೆ ತಲುಪಿಸಿರಬೇಕು. ತಂದೆ ಆ ಪತ್ರವನ್ನು ಓದಿದ್ದಾರೆಯೇ? ಈತ 'ತೀರಾ ತಡವಾಯಿತು' ಎಂದು ಉದ್ಗರಿಸಿದ್ದರ ಅರ್ಥವೇನು? ಈಗ ಝುಕೋವ್‌ರನ್ನು ಭೇಟಿಯಾಗಲು ಏಕೆ ಬಯಸುತ್ತಾನೆ. ಅವರನ್ನು ಸುಲಭವಾಗಿ ಭೇಟಿಯಾಗಲು ಯಾರಿಂದಲೂ ಸಾಧ್ಯವಿಲ್ಲ ..... ಹೀಗೆ ನನ್ನ ಯೋಚನಾ ಸರಣಿ ಮುಂದುವರಿಯಿತು. ''ನಾನು ಮಾರ್ಶಲ್ ಝುಕೋವ್‌ರನ್ನು ಭೇಟಿ



ಸ್ವೆತ್ಲಾನಾ

ಯಾಗಲೇಬೇಕು. ಇವೆಲ್ಲ ದಾಖಲೆ ಪತ್ರಗಳನ್ನು ಅವರಿಗೊಪ್ಪಿಸಬೇಕು. ಆ ವ್ಯಕ್ತಿಯ ಬಗ್ಗೆ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿದ್ದೇನೆ. ಆತ ಇನ್ನೆಂದಿಗೂ ನನ್ನ ಹಿಡಿಯಲಾರ'' ಎಂದು ಕಿರುಚಿ ಹೇಳಿದ ನಾದಿರಾಶ್ವಿಲಿ. '' ಝುಕೋವ್ ಗ್ರಾನೊವ್‌ಸ್ಕಿ ರಸ್ತೆಯ ಅಪಾರ್ಟ್‌ಮೆಂಟ್ ಒಂದರಲ್ಲಿ ನೆಲೆಸಿದ್ದಾರೆ. ಯಾವ ಅಪಾರ್ಟ್‌ಮೆಂಟ್ ನನಗೆ ಗೊತ್ತಿಲ್ಲ'' ಅಂದೆ. ಆತ ತೀವ್ರವಾಗಿ ಉದ್ವೇಗಗೊಂಡಿದ್ದ. ಆಗಾಗ ಬಿಕ್ಕಳಿಸುತ್ತಾ ಚಿಕ್ಕ ಮಕ್ಕಳಂತೆ ಅಳುತ್ತಿದ್ದ. ಒಟ್ಟಿನಲ್ಲಿ ವಿಚಿತ್ರ ಘಟನೆಗಳ ಬಲೆಯಲ್ಲಿ ನಾನು ಸಿಕ್ಕು ಹಾಕಿಕೊಂಡಿದ್ದೇನೆ ಅನಿಸಿತು. ಆತನ ಬೇಡಿಕೆಯನ್ನು ತಿರಸ್ಕರಿಸಲಾಗಲಿಲ್ಲ. ಸ್ವಲ್ಪ ಹೊತ್ತಿನ ನಂತರ ಆತ ಹೊರಟು ಹೋದ.

ಮರುದಿನವೋ ಅಥವಾ ಅದೇ ದಿನವೋ ಮನೆಯ ಫೋನ್ ರಿಂಗ್ ಆಯಿತು. ಆ ಕಡೆಯಿಂದ ಮಾತನಾಡುತ್ತಿದ್ದವನು ಸ್ವತಃ ಬೆರಿಯಾ ಆಗಿದ್ದ. ಆತನೂ ಆತನ ಕುಟುಂಬದವರೂ ಹಲವು ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಯವಿದ್ದರೂ ಹಿಂದೆಂದೂ ಆತ ನನ್ನೊಂದಿಗೆ ಫೋನಿನಲ್ಲಿ ಮಾತನಾಡಿರಲಿಲ್ಲ. ''ಸರಕಾರ ನಿಮಗೆ ಪಿಂಚಣಿ ನೀಡಲು ಉದ್ದೇಶಿಸಿದೆ. ಬೇರೇನಾದರೂ ಸಹಾಯ ಬೇಕಿದ್ದರೆ ಕೇಳಬಹುದು. ನನ್ನನ್ನೂ ನಿನ್ನ ಹಿರಿಯ ಸಹೋದರ ಎಂದು ತಿಳಿದುಕೋ. ಯಾವ ಸಂಕೋಚವೂ ಇಲ್ಲದೆ ಬೇಕಿರುವ ನೆರವು ಕೇಳು'' ಎಂದ. ನನ್ನ ಕಿವಿಗಳನ್ನೇ ನನಗೆ ನಂಬಲಾಗಲಿಲ್ಲ. ಅನಂತರ ಕೆಲವು ಕ್ಷಣಗಳ ಬಳಿಕ ''ಈ ವ್ಯಕ್ತಿ ನಿನ್ನನ್ನು ಭೇಟಿಯಾದ ನಾದಿರಾಶ್ವಿಲಿ ಎಲ್ಲಿ ಉಳಕೊಂಡಿದ್ದಾನೆ ನಿನಗೆ ಗೊತ್ತೇ'' ಎಂದು ವಿಚಾರಿಸಿದ ಬೆರಿಯಾ.

ದೂರವಾಣಿ ಸಂಭಾಷಣೆಗಳನ್ನು ಕದ್ದು ಕೇಳುವ ಪರಿಪಾಠ ಸೋವಿಯತ್ ರಶಿಯದಲ್ಲಿ ತೀರಾ ಸಾಮಾನ್ಯ. ನನ್ನನ್ನು ಭೇಟಿಯಾಗುವ ಎಲ್ಲ ವ್ಯಕ್ತಿಗಳ ಬಗ್ಗೆ ವಿವರಗಳು ತಕ್ಷಣ ಬೆರಿಯಾನಿಗೆ ತಲುಪುತ್ತವೆ. ನಾದಿರಾಶ್ವಿಲಿ ಎಲ್ಲಿ ಉಳಕೊಂಡಿದ್ದಾನೆ ಎಂಬುದು ನಿಜವಾಗಿಯೂ ನನಗೆ ಗೊತ್ತಿಲ್ಲ ಎಂದೆ ಪ್ರಾಮಾಣಿಕವಾಗಿ. ಅಲ್ಲಿಗೆ ಸಂಭಾಷಣೆ ನಿಂತಿತು. ಬೆರಿಯಾನೊಂದಿಗೆ ಅದೇ ನನ್ನ ಕೊನೆಯ ಸಂಭಾಷಣೆ. ಎರಡೂ ಸಂಭಾಷಣೆಗಳಲ್ಲಿ ಒಬ್ಬನೇ ವ್ಯಕ್ತಿ (ನಾದಿರಾಶ್ವಿಲಿ) ಕಾಣಿಸಿಕೊಂಡಿರುವುದು ವಿಲಕ್ಷಣ ವಿಪರ್ಯಾಸವೆನಿಸುತ್ತದೆ.

ಕಿರುಕುಳ

ಅಂದಿನ ದಿನಗಳಲ್ಲಿ (1951-59) ನಾನು ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿ ಕೇಂದ್ರ ಸಮಿತಿಯ ಅಧೀನದಲ್ಲಿರುವ ಸಮಾಜ ವಿಜ್ಞಾನಗಳ ಅಕಾಡೆಮಿಯಲ್ಲಿ ರಶಿಯನ್ ಸಾಹಿತ್ಯದ ಬಗ್ಗೆ ಸಂಶೋಧನೆ ಮಾಡುತ್ತಿದ್ದೆ. ಒಂದು ದಿನ ಪಾರ್ಟಿಯ ನಿಯಂತ್ರಣ ಅಧಿಕಾರಿ ಶ್ಕಿರಿಯತೊವ್‌ನನ್ನು ಭೇಟಿಯಾಗಲು ಮೇಲಾಧಿಕಾರಿಗಳಿಂದ ಆದೇಶವಾಯಿತು. ಹಿಂದೆ ಒಂದು ಬಾರಿ ಮಾತ್ರ ಶ್ಕಿರಿಯತೊವ್‌ನನ್ನು ತಂದೆಯವರೊಂದಿಗೆ ಕಂಡಿದ್ದೆ. ಶ್ಕಿರಿಯತೊವ್ ನನ್ನನ್ನು ಪ್ರೀತಿಯಿಂದ ಮಾತನಾಡಿಸಿ ಕ್ಷೇಮ ಸಮಾಚಾರ ವಿಚಾರಿಸಿದ. ಆತ ಯಾರನ್ನೇ ಆಗಲಿ ಪ್ರೀತಿಯಿಂದ ಮಾತನಾಡಿಸಿದನೆಂದರೆ ಮುಗಿಯಿತು. ಭಾರೀ ಆಪತ್ತಿನಲ್ಲಿ ಸಿಕ್ಕು ಹಾಕಿಕೊಂಡಿದ್ದಾನೆಂದೇ ಅರ್ಥ.

''ನಾದಿರಾಶ್ವಿಲಿ ನಿನಗೆ ಹೇಗೆ ಪರಿಚಯ? ಆತ ನಿನ್ನನ್ನು ಏಕೆ ಭೇಟಿಯಾದ? ಆತನಿಗೆ

ಸಹಾಯ ಮಾಡುವುದು ತೀರಾ ಕೆಟ್ಟದ್ದು. ನೀನು ಪಾರ್ಟಿಯಲ್ಲಿದ್ದು ದೀರ್ಘಕಾಲವಾಗಿಲ್ಲ. ನಿನಗೆ ಸಾಕಷ್ಟು ಅನುಭವವೂ ಇಲ್ಲ. ಇದೆಲ್ಲವನ್ನೂ ನಾವು ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ. ನಿಜವಾಗಿಯೂ ನಡೆದಿರುವುದೇನು ಎಂದು ಸತ್ಯ ಹೇಳಿಬಿಡು. ಎಲ್ಲವನ್ನೂ ಬರಹ ರೂಪದಲ್ಲಿ ತಿಳಿಸಿಬಿಡು ಎಂದ ಕ್ರಿರಿಯತೂವ್.

''ನಾದಿರಾಶ್ವಿಲಿ ಯಾರೆಂಬುದು ಖಂಡಿತವಾಗಿಯೂ ನನಗೆ ಗೊತ್ತಿಲ್ಲ. ಆ ದಿನ ತಂದೆಯ ಪಾರ್ಥಿವ ಶರೀರಕ್ಕೆ ಶ್ರದ್ಧಾಂಜಲಿ ಸಲ್ಲಿಸಲು 'ಹಾಲ್ ಆಫ್ ಕಾಲಮ್ಸ್'ಗೆ ಬಂದವರ ಗುಂಪಿನಲ್ಲಿ ಆತನೂ ಇದ್ದ. ಮರುದಿನ ಆತ ನಮ್ಮ ಮನೆಗೆ ಬಂದ. ಮನೆಯೊಳಗೆ ಪ್ರವೇಶ ನೀಡಲು ನಿರಾಕರಿಸುತ್ತಿದ್ದರೆ ನನ್ನ ಪತಿಯಿಂದ ಅತಿ ಒರಟು ವರ್ತನೆ ಎನಿಸುತ್ತಿತ್ತು. ಆದರೆ ಹಾಗೆ ಮಾಡಲಿಲ್ಲ. ಬೇರೆ ಯಾವ ರೀತಿಯಿಂದಲೂ ನಾನು ಅವನಿಗೆ ಸಹಾಯ ಮಾಡಿಲ್ಲ'' ಎಂದೆ.

''ಆತ ತೀರಾ ಕೆಟ್ಟವ. ಸರಕಾರವನ್ನು ನಿಂದಿಸುತ್ತಾ ವದಂತಿಗಳನ್ನು ಹರಡುವುದೇ ಅವನ ಕೆಲಸ. ನಿನ್ನ ಅಭಿಪ್ರಾಯವನ್ನು ಬರೆದು ತಿಳಿಸು. ಇದು ಇಲ್ಲಿನ ನಿಯಮ'' ಎಂದ ಕ್ರಿರಿಯತೂವ್.

ಇಂತಹ ಪ್ರಹಸನ ನಾಲ್ಕೈದು ಬಾರಿ ನಡೆಯಿತು. ಅನಂತರ ಛೀಮಾರಿ ಹಾಕಿದ ಆದೇಶ ನೀಡಿದರು. ಮರುದಿನ ಅಕಾಡೆಮಿಯ ಕಾರ್ಯದರ್ಶಿಯವರು ನನ್ನನ್ನು ಸಂತೈಸಿ ಚಿಂತಿಸಬೇಡ ಎಲ್ಲವೂ ಸರಿಹೋಗುತ್ತದೆ. ಈ ರೀತಿ ಪಾರ್ಟಿ ವಲಯವು ಛೀಮಾರಿ ಹಾಕಿದ ಆದೇಶಗಳನ್ನು ಉದ್ಯೋಗಿಗಳಿಗೆ ನೀಡುವುದು ಅವರಿಂದ ಹಿಂತೆಗೆದುಕೊಳ್ಳುವುದು ಇಲ್ಲಿಯ ಮಾಮೂಲು ವಿದ್ಯಮಾನ ಎಂದು ಸಾಂತ್ವನ ಹೇಳಿದರು.

ಈ ಮಧ್ಯೆ ಸಂಶೋಧನಾ ಪ್ರಬಂಧ ರಚನೆ ಮುಕ್ತಾಯ ಘಟ್ಟಕ್ಕೆ ತಲುಪಿತ್ತು. ಕ್ರೆಮ್ಲಿನ್ ನಿವಾಸವನ್ನು (ತಂದೆ ಅಧಿಕಾರಾವಧಿಯಲ್ಲಿ ಬಳಸುತ್ತಿದ್ದ ನಿವಾಸ) ಪ್ರವೇಶಿಸಲು ನನ್ನ ಬಳಿ ಇದ್ದ ಪಾಸ್ ಅನ್ನು ಅಧಿಕಾರಿಗಳು ರದ್ದುಗೊಳಿಸಿದರು. ನಿವಾಸದಲ್ಲಿದ್ದ ನಮ್ಮ ಸ್ವತ್ತುಗಳ ಮೇಲೆ ನಾನು ಹಕ್ಕು ಸ್ಥಾಪಿಸಿರಲಿಲ್ಲ. ಪಾಸ್ ಹಿಂತಿರುಗಿಸಲು ಕ್ರೆಮ್ಲಿನ್ ಕಚೇರಿಗೆ ಹೋದಾಗ ಅಧಿಕಾರಿಯೊಬ್ಬ ನನ್ನತ್ತ ಅನುಕಂಪದ ನೋಟ ಬೀರಿದ. ತಂದೆ ತೀರಿಕೊಂಡ ಕೆಲವೇ ಕೆಲವು ದಿನಗಳೊಳಗೆ ಪಾಸ್ ಹಿಂತಿರುಗಿಸಬೇಕಾಗಿ ಬಂದ ಪರಿಸ್ಥಿತಿಗೆ ವಿಷಾದ ವ್ಯಕ್ತಪಡಿಸಿದ. ನನ್ನ ನಿಷ್ಪ್ರಯೋಜಕ ಪಾಸನ್ನು ಸ್ವೀಕರಿಸಿದ.


ಸೋದರನ ಬಂಧನ

ಕೆಲವು ದಿನಗಳ ತರುವಾಯ ನನ್ನ ಸಹೋದರ ವಾಸಿಲಿಯನ್ನು ಬಂಧಿಸಿದ ಸುದ್ದಿ ಕೇಳಿದೆ. ವಾಸಿಲಿ ವಾಯುಪಡೆಯಲ್ಲಿ ಕರ್ನಲ್ ಜನರಲ್ ಆಗಿದ್ದ. ಅವನ ಮೂರನೇ ಪತ್ನಿಯೂ ಪತಿಯನ್ನು ಬಂಧಿಸಿದ ಸುದ್ದಿಯನ್ನು ದೃಢಪಡಿಸಿದಳು. ಸರಕಾರ ಮತ್ತು ಸೇವೆಯ ಉನ್ನತ ವಲಯಗಳಿಗೆ ಆತನಿಗೆ ಮುಕ್ತ ಪ್ರವೇಶವಿದ್ದಿತು. ಅವನ ಸ್ಥಾನಮಾನವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಖಂಡಿತವಾಗಿಯೂ ಆತ ಭಾರೀ ಆಪತ್ತಿಗೆ ಸಿಲುಕಿರುವನೆಂಬುದರಲ್ಲಿ ಅನುಮಾನವಿರಲಿಲ್ಲ.

ವಾಸಿಲಿ ಕಾಜಾನ್‌ನಲ್ಲಿ ದೇಶಭ್ರಷ್ಟನಾಗಿ ನೆಲೆಸಿದ್ದಾಗ ಕೆ.ಜಿ.ಬಿ. ಅಧಿಕಾರಿಗಳಿಗೆ ರಹಸ್ಯ ಮಾಹಿತಿಗಳನ್ನು ಒದಗಿಸುತ್ತಿದ್ದ ಮಹಿಳೆಯೊಬ್ಬಳು ಅವನ ಬಳಿ ದಾದಿಯಾಗಿ ಸೇವೆ ಸಲ್ಲಿಸುತ್ತಿದ್ದಳು. ಕ್ರುಶ್ಚೇವ್ ಸರಕಾರ ವಾಸಿಲಿಯನ್ನು ಜೈಲಿನಿಂದ ಬಿಡುಗಡೆ ಮಾಡಿತು. ಆಗ ಅವನ ಆರೋಗ್ಯ ಚೆನ್ನಾಗಿರಲಿಲ್ಲ. ಈ ಮಹಿಳೆ ಮೋಹದ ಬಲೆ ಬೀಸಿ ವಾಸಿಲಿಯನ್ನು ಹಿಂಬಾಲಿಸಿದಳು. ಕಾಜಾನ್‌ನಲ್ಲಿ ವಾಸಿಲಿ ಆಕೆಯನ್ನು ಮದುವೆಯಾದ. ಆಕೆಯ ಹೆಸರು ಮಾಷಾ. ಅದು ಅಕ್ರಮ ವಿವಾಹವಾಗಿತ್ತು. ಏಕೆಂದರೆ ವಾಸಿಲಿ ಮೊದಲ ಹೆಂಡತಿಗೆ ವಿವಾಹ ವಿಚ್ಛೇದನ ನೀಡಿರಲಿಲ್ಲ. ಮಾಷಾಳಿಗಂತೂ ನಿರ್ದಿಷ್ಟ ಉದ್ದೇಶಕ್ಕೆ ವಾಸಿಲಿಯನ್ನು ಮದುವೆಯಾಗಬೇಕಾಗಿತ್ತು. ಈ ವಿವಾಹ ನಿರಾತಂಕವಾಗಿ ನೆರವೇರಲು ಕೆ.ಜಿ.ಬಿ. ಮತ್ತು ಸೋವಿಯತ್ ಪೊಲೀಸರು ನೆರವಾದರು. ವಾಸಿಲಿ ಮಿತಿಮೀರಿ ಕುಡಿಯುತ್ತಿದ್ದ. ಮಾಷಾ ಆಗಾಗ ವಾಸಿಲಿಗೆ ನಿದ್ದೆ ಬರಿಸುವ, ನೋವು ಉಪಶಮನಗೊಳಿ

ಸುವ ಇಂಜೆಕ್ಶನ್ ನೀಡುತ್ತಿದ್ದಳು. ವಾಸಿಲಿ 1962 ಮಾರ್ಚ್ 19ರಂದು ಅತ್ಯಂತ ನಿಗೂಢ ಸನ್ನಿವೇಶದಲ್ಲಿ ತೀರಿಕೊಂಡ. ಅಧಿಕಾರಿಗಳು ಅವನ ಸಾವಿನ ಬಗ್ಗೆ ಯಾವುದೇ ಅಧಿಕೃತ ಮರಣ ಸರ್ಟಿಫಿಕೇಟ್ ನೀಡಲಿಲ್ಲ. ಮರಣೋತ್ತರ ಶವಪರೀಕ್ಷೆಯೂ ನಡೆಯಲಿಲ್ಲ. ಅವನ ಸಾವಿಗೆ ಮೂಲ ಕಾರಣ ಇನ್ನೂ ನನ್ನ ಕುಟುಂಬಕ್ಕೆ ಗೊತ್ತಿಲ್ಲ.

ಮಾಷಾ ನನ್ನ ಸಹೋದರನ ಕಾನೂನು ಬದ್ಧ ಪತ್ನಿಯೆಂದೇ ವಾದಿಸಿದಳು. ವಾಸಿಲಿಯ ಪಾರ್ಥಿವ ಶರೀರವನ್ನು ಕಾಜಾನ್‌ನಲ್ಲಿಯೇ ದಫನ ಮಾಡಿದರು. ವಾಸ್ತವವಾಗಿ ವಾಸಿಲಿಯ ಶವವನ್ನು ದಫನ ಮಾಡಿದ ಸ್ಥಳದಿಂದ ಮೇಲಕ್ಕೆತ್ತಿ ಮರಣೋತ್ತರ ಶವಪರೀಕ್ಷೆ ನಡೆಸಬೇಕೆಂದು - ನಾನು, ವಾಸಿಲಿಯ ಮಕ್ಕಳು, ನಿಕಟ ಬಂಧುಮಿತ್ರರು ಒತ್ತಾಯಿಸಿದ್ದೆವು. ಮಾಸ್ಕೋದಲ್ಲಿದ್ದಾಗ ಈ ಬಗ್ಗೆ ಮಾತನಾಡಲು ಅಂದಿನ ವಿದೇಶಾಂಗ ಸಚಿವ ಗ್ರೊಮಿಕೋರನ್ನು ಭೇಟಿಯಾಗಲು ಪ್ರಯತ್ನಿಸಿದ್ದೆ. ಅವರು ನನ್ನನ್ನು ಭೇಟಿಯಾಗಲು ನಿರಾಕರಿಸಿದರು. ನನ್ನ ತಂದೆ ಹೇಗೆ ಮೃತರಾದರು ಎಂಬುದರ ಬಗ್ಗೆ ನನಗಿಂತ ಹೆಚ್ಚು ವಿಷಯ ವಾಸಿಲಿಗೆ ಗೊತ್ತಿತ್ತು. 1953 ಮಾರ್ಚ್‌ನಲ್ಲಿ ಸ್ಟಾಲಿನ್ ಸತ್ತಾಗ ಕುಂತ್ಸೆವೋ ನಿವಾಸದಲ್ಲಿದ್ದ ಬಹಳಷ್ಟು ಸಿಬ್ಬಂದಿ ಅವನೊಂದಿಗೆ ಮಾತನಾಡಿದ್ದರು. ಆತ ಆಗಾಗ ರೆಸ್ಟುರಾಂಟ್‌ನಲ್ಲಿ ವಿದೇಶಿ ಪತ್ರಿಕಾ ಪ್ರತಿನಿಧಿಗಳನ್ನು ಭೇಟಿಯಾಗಿ ಮಾತನಾಡುತ್ತಿದ್ದ. ಅವನ ಎಲ್ಲ ಚಟುವಟಿಕೆಗಳನ್ನು ಕೆ.ಜಿ.ಬಿ. ಅಧಿಕಾರಿಗಳು ಗಮನಿಸುತ್ತಿದ್ದರು. ಕೊನೆಗೆ ಅವನನ್ನು ಬಂಧಿಸಿದರು. ಕ್ಷಿಪ್ರವಾಗಿ ಸಾಯಲು ನೆರವಾದರು. ವಾಸಿಲಿ ವಿಪರೀತ ಕುಡಿಯುತ್ತಿದ್ದ. ಆದರೂ ಕೊನೆಯ ತನಕ ದೃಢಕಾಯನಾಗಿ ಉಳಿದಿದ್ದ. ಮೂವರು ಪತ್ನಿಯರು, ಮೂವರು ಮಕ್ಕಳನ್ನು ತ್ಯಜಿಸಿ ಆತ ಹೊರಟು ಹೋದ. ಆತ ತುಂಬಾ ಉದಾರಿಯಾಗಿದ್ದ. ತನ್ನ ಸುತ್ತಮುತ್ತ ಕಷ್ಟದಲ್ಲಿರುವವರಿಗೆ ನೆರವಾಗಲು ಆತ ಧಾವಿಸುತ್ತಿದ್ದ. ಅವನ ಸಾವಿನ ನಂತರ ಅವನ ಎಲ್ಲ ಸೊತ್ತುಗಳನ್ನು (ಆಯುಧಗಳು,



ಸೇನಾಪ್ರಶಸ್ತಿಗಳು, ಪೀಠೋಪಕರಣಗಳು, ಹಾಗೂ ಇತರ ಅಮೂಲ್ಯ ವಸ್ತುಗಳು) ಅವನ ಇಬ್ಬರು ಪತ್ನಿಯರು ಕಸಿದುಕೊಂಡರು. ಮಗನಿಗೆ ತಂದೆಯ ನೆನಪಾಗಿ ಒಂದು ಪೆನ್ಸಿಲ್ ಸಹಾ ದೊರಕಲಿಲ್ಲ.

ವಾಸಿಲಿಯ ಪಾರ್ಥಿವ ಶರೀರ ಕಾಜಾನ್‌ನಲ್ಲಿ ಇರಬಾರದಾಗಿತ್ತು. ಮಾಸ್ಕೋದಲ್ಲಿ ನಮ್ಮ ತಾಯಿಯ ದೇಹದ ಪಕ್ಕದಲ್ಲಿರಬೇಕಿತ್ತು. ಆತ ಸ್ಟಾಲಿನ್‌ರಿಗಿಂತಲೂ ಹೆಚ್ಚಾಗಿ ತಾಯಿಯನ್ನು ಪ್ರೀತಿಸುತ್ತಿದ್ದ. ತಾಯಿಯ ಸಾವು ಮಾನಸಿಕವಾಗಿ ಅವನನ್ನು ಜರ್ಝರಿತಗೊಳಿಸಿತ್ತು.

ಸ್ಟಾಲಿನ್ ಸಾವಿಗೆ ಅಧಿಕೃತ ಕಾರಣವನ್ನು ಸೋವಿಯತ್ ಸರಕಾರ ಈಗಾಗಲೇ ಘೋಷಿಸಿದೆ. (ಸ್ಟಾಲಿನ್ ಪಾರ್ಶ್ವವಾಯು ಪೀಡಿತನಾಗಿ ಸತ್ತ ಎಂಬುದು) ಆದರೆ ಸಾವಿಗೆ ನಿಜವಾದ ಕಾರಣ ಬೇರೆಯೇ ಇದೆ. ಇತಿಹಾಸಕಾರ ಎ.ಎನ್.ಪ್ರೊಸ್‌ಕ್ರಿಯಬಿಶೆವ್‌ರ ಅಪ್ರಕಟಿತ ''ನೆನಪುಗಳು'' ಕೃತಿಯ ಹಸ್ತಪ್ರತಿ ಇನ್ನೂ ಉಳಿದಿದೆ. ಎನ್.ಎಸ್.ವ್ಲಾಸಿಕ್‌ರ ಕೌಟುಂಬಿಕ ದಾಖಲೆಗಳು ಇವೆ. ಅವುಗಳಲ್ಲಿ ಸ್ಟಾಲಿನ್‌ರ ಕೆಲವು ಅಪರೂಪದ ಫೋಟೋಗಳಿವೆ. ವ್ಲಾಸಿಕ್ ಸುಮಾರು 30 ವರ್ಷ ಸ್ಟಾಲಿನ್‌ರ ನೆಚ್ಚಿನ ಅಂಗರಕ್ಷಕನಾಗಿದ್ದ. ಇವೆರಡು ದಾಖಲೆಗಳೂ ಸ್ಟಾಲಿನ್‌ರ ಸಾವಿನ ಬಗ್ಗೆ ವಿಪುಲ ಮಾಹಿತಿ ಒದಗಿಸಬಹುದು. ಪ್ರೊಸ್‌ಕ್ರಿಯಬಿಶೆವ್‌ರ 'ನೆನಪುಗಳು' ಕೆ.ಜಿ.ಬಿ. ವಶದಲ್ಲಿದೆ. ಕುಂತ್ಸೆವೊ ನಿವಾಸದಲ್ಲಿ

ಸೇವಕಿಯಾಗಿದ್ದ ಮಾತ್ರಿಯೋನಾ ಬುಟು ಜೋವ, ವಲಂತಿನಾ ಇಸ್ಟೊಮಿನಾ ಅಂಗರಕ್ಷಕ ದಳದ ಅಧಿಕಾರಿ ಕ್ರುಸ್ತ್ಯಾಲೊವ್, ಕುರ್ಯುಮಿ ಚೊವ್, ಮೊಜಾಖಿನ್, ಯೆಫಿಮೊವ್, ರಾಕೊವ್ ಮುಂತಾದವರ ಹೇಳಿಕೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಆದರೆ 30 ವರ್ಷಗಳ ಹಿಂದೆ ಅವರನ್ನೆಲ್ಲಾ ಸೇವೆಯಿಂದ ನಿವೃತ್ತಿಗೊಳಿಸಿ, ಪಿಂಚಣಿ ನೀಡಿ ಎತ್ತಲೋ ಸಾಗ ಹಾಕಲಾಯಿತು. ಈಚೆಗಿನ ವರ್ಷಗಳಲ್ಲಿ ಕುಂತ್ಸೆವೊ ನಿವಾಸಕ್ಕೆ ಸಾರ್ವಜನಿಕರು ಪ್ರವೇಶಿಸಿಸುವಂತಿಲ್ಲ. ಆಯ್ಕೆ ಮಾಡಿದ ಕೆಲವೇ ಕೆಲವು ಮಂದಿಗಷ್ಟೇ ಪ್ರವೇಶ ಲಭ್ಯ.

1967ರಲ್ಲಿ ನಾನು ಅಮೆರಿಕದಲ್ಲಿ ನೆಲೆಸಲು ಬಯಸಿ ಅಲ್ಲಿನ ಪೌರತ್ವ ಪಡೆಯಲು ಬಯಸಿದ್ದು ಸೋವಿಯತ್ ಸರಕಾರದ ಮೇಲೆ ವೈಯಕ್ತಿಕ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಅಲ್ಲ. ಇಂದಿಗೂ ನನಗೆ ಆ ಯೋಚನೆಯಿಲ್ಲ. ಇದೀಗ ನನ್ನ ನಾಲ್ಕನೇ ಕೃತಿಯ ಬರವಣಿಗೆಯನ್ನೂ ಮುಗಿಸಿದ್ದೇನೆ. ನನ್ನ ತಂದೆ ಮತ್ತು ಸೋದರನ ಬಗ್ಗೆ ನನಗೆ ಗೊತ್ತಿರುವುದನ್ನೆಲ್ಲಾ ಅದರಲ್ಲಿ ಬರೆದಿದ್ದೇನೆ. ಸ್ಟಾಲಿನ್ ಸತ್ತು ಮೂವತ್ತೈದು ವರ್ಷ ಕಳೆದಿದೆ. ಭವಿಷ್ಯದ ದಿನಗಳಲ್ಲಿ ನನ್ನ ಪುಸ್ತಕ ಸಂಶೋಧಕರಿಗೆ ವಿಪುಲ ಮಾಹಿತಿ ಒದಗಿಸುವ ಗ್ರಂಥವೆನಿಸಬಹುದು. ಸೋವಿಯತ್ ಸಮಾಜದ ರಾಜಕೀಯ ಸಾಮಾಜಿಕ ಬದುಕಿನ ಉನ್ನತ ಸ್ಥಾನದಲ್ಲಿರುವ ಯಾರೊಬ್ಬರೊಂದಿಗೂ ವೈಯಕ್ತಿಕವಾಗಿ ನನಗೆ ದ್ವೇಷವಿಲ್ಲ. ಸೇಡು ತೀರಿಸಿಕೊಳ್ಳುವ ಇರಾದೆಯಿಲ್ಲ. ಬೆರಿಯಾ ಒಬ್ಬನೇ ವಿಲಕ್ಷಣ ವ್ಯಕ್ತಿ. ನನ್ನ ಕುಟುಂಬ ಅರ್ಧಾಂಶ ಸದಸ್ಯರನ್ನು ನಾಶಗೊಳಿಸುವುದರಲ್ಲಿ ಆತ ಯಶಸ್ವಿಯಾದ.

* * *

ಬೆರಿಯಾನ ಅಂತ್ಯ

1953 ಜೂನ್‌ನಲ್ಲಿ ಒಂದು ದಿನ ನನ್ನ ಗೆಳತಿಯೊಬ್ಬಳು ಇದ್ದಕ್ಕಿದ್ದಂತೆ ಭೇಟಿಯಾಗಿ ``ನಿನಗೆ ಗೊತ್ತಿಲ್ಲವೇ ಬೆರಿಯಾನನ್ನು ಬಂಧಿಸಿದ್ದಾರೆ. ಅವನ ಫೋಟೋ ಎಲ್ಲೆಲ್ಲಿ ಇವೆಯೋ ಅವೆಲ್ಲವನ್ನೂ ಕಿತ್ತು ಹಾಕಲು ಆದೇಶ ನೀಡಲಾಗಿದೆ'' ಎಂದು ಕಂಪಿಸುವ ಧ್ವನಿಯಲ್ಲಿ ಹೇಳಿದಳು. ಅನಂತರ ಹಲವು ಮಿತ್ರರ ಮೂಲಕ ಬೆರಿಯಾನ ಪತನದ ಸುದ್ದಿ ಒಂದೊಂದಾಗಿಯೇ ಸೋರತೊಡಗಿತು. ಲಾವ್ರೆಂತಿ ಬೆರಿಯಾ ರಶಿಯಾದ ಇತಿಹಾಸದಲ್ಲಿ ಭಯೋತ್ಪಾದನೆಗೆ ಇನ್ನೊಂದು ಹೆಸರು. ಈತ ಸ್ಟಾಲಿನ್ ಆಳ್ವಿಕೆಯ ಅತಿ ಪ್ರಬಲ ನಾಯಕನೆನಿಸಿದ್ದ. 1938ರಲ್ಲಿ ಬೆರಿಯಾ ಎನ್‌ಕೆವಿಡಿ (ರಶಿಯದ ಒಳಾಡಳಿತ ವ್ಯವಹಾರಗಳ ಸಚಿವಾಲಯ) ಮುಖ್ಯಸ್ಥನಾಗಿದ್ದ. ಅನಂತರದ ವರ್ಷಗಳಲ್ಲಿ ಅದೇ ರಶಿಯದ ಬಲಿಷ್ಠ ಗೂಢಚರ್ಯೆ ಸಂಸ್ಥೆ ಕೆ.ಜಿ.ಬಿ. ಆಗಿ ಪರಿವರ್ತಿತವಾಯಿತು. ಸ್ಟಾಲಿನ್ ಆಳ್ವಿಕೆಯಲ್ಲಿ ಸಹಸ್ರಾರು ಮಂದಿ ರಾಜಕೀಯ ವಿರೋಧಿಗಳು, ಲೇಖಕರು, ಕಲಾವಿದರು, ವಿಜ್ಞಾನಿಗಳು, ನಟರು, ಬುದ್ಧಿಜೀವಿಗಳನ್ನು ಚಿತ್ರಹಿಂಸೆ ನೀಡಿ ಕಗ್ಗೊಲೆ ಮಾಡಿದ ದೈತ್ಯನೀತ. ಸ್ಟಾಲಿನ್ ಸತ್ತು ಅಧಿಕಾರದ ಸ್ಥಿತ್ಯಂತರವಾಗುವ ಘಟ್ಟದಲ್ಲಿ ಕ್ರುಶ್ಚೇವ್‌ರ ನೇತೃತ್ವದಲ್ಲಿ ಬೆರಿಯಾನ ಬಂಧನವಾಯಿತು. ಮಾಸ್ಕೋ ಮಿಲಿಟರಿ ಡಿಸ್ಟ್ರಿಕ್ಟ್‌ನ ಭೂಗತ ಸೆರೆಮನೆಯಲ್ಲಿದ್ದ ಬೆರಿಯಾನನ್ನು ಮಿಲಿಟರಿ ಅಧಿಕಾರಿಗಳು ವಿಚಾರಣೆ ನಡೆಸಿ ಗುಂಡಿಟ್ಟು ಸಾಯಿಸಿದರು. ಸಾಯುವ ಮೊದಲು ಬೆರಿಯಾ ಹಿರಿಯ ಮಿಲಿಟರಿ ಅಧಿಕಾರಿಗಳೆದುರು ಮೊಣಕಾಲೂರಿ ಪ್ರಾಣಭಿಕ್ಷೆ ಯಾಚಿಸಿದ್ದ.

ಬೆರಿಯಾನ ಹೆಸರು ಕೇಳಿದರೆ ಸಾಕು ಜನ ಭಯದಿಂದ ತತ್ತರಿಸುತ್ತಿದ್ದರು. ಚೇಳು, ವಿಷಸರ್ಪ, ಕ್ರೂರಮೃಗಕ್ಕಿಂತಲೂ ಹೆಚ್ಚಾಗಿ ಜನ ಅವನಿಗೆ ಹೆದರುತ್ತಿದ್ದರು. ಮಿಲಿಟರಿ ಅಧಿಕಾರಿಗಳು ಅತ್ಯವಸರದಲ್ಲಿ ಬೆರಿಯಾನ ವಿಚಾರಣೆ ಮುಗಿಸಿ ಅವನ ಬದುಕನ್ನು ಕೊನೆಗೊಳಿಸಿದರು. ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿ ಅಂತಿಮವಾಗಿ ಬೆರಿಯಾನಿಗೆ 'ವಿದೇಶಿ ಗೂಢಚಾರ' ಅಂತರ್ಯುದ್ಧದ ನಂತರದ ದಿನಗಳ ಪ್ರಮುಖ ಪ್ರತಿ ಕ್ರಾಂತಿಕಾರಿ, ಭ್ರಷ್ಟವ್ಯಕ್ತಿ ಮುಂತಾದ ಬಿರುದುಗಳನ್ನು ದಯಪಾಲಿಸಿತು. ●


ಬಿಸ್ಲಿನ ಬೆಳದಿಂಗಳ ರಾತ್ರಿ



ಎಲ್ಲೊ ನಿದ್ದೆಯಾಳದಲಿ
ಗೆಜ್ಜೆ ಉಲಿದಂತೆನಿಸಿ
ಮಂಪರ ಸರಿಸಿ ನೋಡಿದೆ
ಇಳಿ ವಯಸಿನ ಬಸ್ಸಲಿ
ಹೊಸ ಹರೆಯದ ಜೋಡಿ
ಕಾಡುಗತ್ತಲೆ ಹೊರಗೆ
ಇಲ್ಲಿ ಲಾಳಿಯ ಮಿಂಚು
ಭಾವ ವರ್ತುಲದಲ್ಲಿ
ಸಿಗ್ಗುಮೊಗ್ಗಿನ ಸಂಚು
ಭುಜವು ಭುಜಕುಜ್ಜಿ ಕಾವುಗೊಂಡು
ಬೆರಳು ಕದಪಿಗೆ ಇಳಿದು
ತುಟಿಗಳ ನಡುವೆ ಅಂತರ ಅಳಿದು
ಎದೆಗೆ ಹೂವಿನ ಚೆಂಡು
ಪಿಸು ಮಾತ ಜೇನ ಸೋನೆ
ನಡುವೆ ಕಿರುಗಂಟೆ ನಗೆ
ಎತ್ತರದ ಬಾನು ಹತ್ತಿರವಂತೆ
ಗಂಡಾಡುವ ಮಾತೆಲ್ಲ
ಮಡಿಲ ತುಂಬಿ ಮೌನ ಹೆಪ್ಪಾದಂತೆ
ಬಯಕೆ ತುಂಬಿದ ಹೆಣ್ಣು
ತಿಂಗಳ ಬೆಳಕಿನ ಕಣ್ಣು

ಇವನ ಕೈ ಚಳಕಕ್ಕೆ
ಕೆನ್ನೆ, ಮೈ ಬಿಸಿ ಬೆವರಿ
ಎದೆ, ನಡುವು, ಸೊಕ್ಕೇರಿ
ಕಾಯ್ದಿಟ್ಟ ಕನ್ನೆತನ
ಕೊಳ್ಳೆ ಹೋದೀತೆಂದು
ಭರೋ ಬೀಸುವ ಗಾಳಿ
ಕಿವಿಯಲುಸುರಿ
ಮುದಿ ಬಸ್ಸಿಗೂ ಮೈಯಿ
ಜುಮ್ಮೆನಿಸುವ
ರತಿಲಹರಿಯ ರಾಗ
ಈ ಲೀಲಾ ನಾಟಕಕೆ
ಕಣ್ಣ ಮಿಟಕಿ ಕಿಸಿಯಿತು
ಕಿರು ಬೆಳಕಿನ ತಾರೆ
ನಾನು ಕಾಣದ್ದೇನು
ಎಂಬಂತೆ ಚಂದ್ರಮ
ಬಿದಿಗೆ ನಗೆ ಮುಕ್ಕಳಿಸಿದ
ಅರೆನೆರೆತ ತಲೆಯಲ್ಲಿ
ಹರೆಯವ ಹುಡುಕುತ್ತ
ಮನಸಾರೆ ನಾಸು ನಕ್ಕೆ.

★



ಮರಣದೂತ ಏಡ್ಸ್‌ಗೆ ಮದ್ದು?

● ಚಂದ್ರಕಾಂತ ವಡ್ಡು

ರೋಗಾಣು ಮತ್ತು ವೈದ್ಯ ವಿಜ್ಞಾನಿಗಳ ನಡುವಿನ ಸಮರ ಇಂದಿನದಲ್ಲ. ವಿಜ್ಞಾನಿಗಳು ಮೇಲುಗೈ ಸಾಧಿಸಿದೆವೆಂದು ಬೀಗುವ ಮುಂಚೆಯೇ ಹೊಸದೊಂದು ರೋಗ ಚಿಗಿತು ವಿಜ್ಞಾನಿಗಳನ್ನು ಚಿತ್ ಮಾಡಬಹುದು. ಏಡ್ಸ್ ಎಂಬ ಮರಣದೂತ ತನ್ನ ಪಾಶ ಎಸೆದದ್ದೂ ಹೀಗೆಯೇ. ರೋಗಗಳ ರಾಜನಂತೆ ಮನುಕುಲದ ಮೇಲೆ ಎರಗಿದ ಏಡ್ಸ್ ಇದೀಗ ತುಸು ಮೆತ್ತಗಾದಂತೆ ತೋರುತ್ತದೆ. ಏಡ್ಸ್ ಮಾರಿಯನ್ನು ಪಳಗಿಸುವ ಸಂಶೋಧನೆಗಳು ಬೆಳಕಿಗೆ ಬರುತ್ತಿವೆ.

ಇದ್ದಕ್ಕಿದ್ದಂತೆ ಧುಪ್ಪೆಂದು ವಕ್ಕರಿಸಿದ ಏಡ್ಸ್‌ನ್ನು ಇದೀಗ ಸಾಕಷ್ಟು ವಿಶ್ಲೇಷಿಸಿ ಅರ್ಥ ಮಾಡಿಕೊಂಡಿರುವ ವಿಜ್ಞಾನಿಗಳು ಈ ರೋಗಕ್ಕೆ ಕಾರಣವಾದ ವೈರಸ್‌ಗಳು ವರ್ತಿಸುವ ರೀತಿ-ರಿವಾಜು, ಶಕ್ತಿ-ದೌರ್ಬಲ್ಯಗಳನ್ನೂ ಪತ್ತೆ ಹಚ್ಚಿದ್ದಾರೆ. ಇಲ್ಲಿಯವರೆಗೆ ಅಮೆರಿಕೆಯಲ್ಲಿ ಅಜಿಡೋಥೈಮಿಡಿನ್ (AZT) ಎಂಬ ವಿಷಕಣ ವಿರೋಧಿ ಔಷಧಿಯನ್ನು ಮಾತ್ರ ಏಡ್ಸ್ ವಿರುದ್ಧ ಬಳಸಲಾಗುತ್ತಿತ್ತು. ಆದರೆ ಈ ಔಷಧಿಯ ದೀರ್ಘಕಾಲೀನ ಬಳಕೆಯಿಂದ ಪಾರ್ಶ್ವಪರಿಣಾಮದ ರೂಪದಲ್ಲಿ ರೋಗಿಯ ಮೂತ್ರಪಿಂಡ ಹಾಗೂ ಪಿತ್ತಜನಕಾಂಗಗಳು ಹಾಳಾಗುವ ಸಾಧ್ಯತೆ ಇತ್ತು. ಹೊಸದಾಗಿ ಅಭಿವೃದ್ಧಿಪಡಿಸಿರುವ ಔಷಧಿ ಮಾತ್ರ ಈ ಬಗೆಯ ಪಾರ್ಶ್ವಪರಿಣಾಮದಿಂದ ಹೊರತಾಗಿದೆ.

ಕೋಡಗನ ರೋಗ ಪ್ರತಿರೋಧ ಶಕ್ತಿಯ ನಾಶಕ ವೈರಸ್‌ಗಳು (SIV-Simian Immuno-deficiency Virus) ಒಂದು ಬಗೆಯ ಸೋಂಕು ಹಬ್ಬಿಸುತ್ತವೆ. ಈ ಸೋಂಕನ್ನು ಏಡ್ಸ್‌ನ ಸಹೋದರನೆಂದರೂ ಆದೀತು. ನವೀನ ಸಂಶೋಧನೆಯ ಫಲಿತಾಂಶಗಳು ಈ ಸೋಂಕನ್ನು ಕೋತಿಗಳಲ್ಲಿ ತಡೆಗಟ್ಟುವ ಉಪಾಯವನ್ನು ಹುಡುಕಿ ತೆಗೆದಿವೆ. ಅಮೇರಿಕೆಯ ಅನೇಕ ಪ್ರಯೋಗಾಲಯಗಳಲ್ಲಿ ನಡೆಸಿದ ಅಸಂಖ್ಯಾತ ಪರೀಕ್ಷೆಗಳಲ್ಲಿ ಸಾಯಿಸಿದ ಕೋಡಗನ ವೈರಸ್‌ಗಳನ್ನು ಕೋತಿಗಳ ದೇಹದೊಳಗೆ ಹೊ ಗಿಸಲಾಯ್ತು. ತದನಂತರ ಕೋತಿಗಳಲ್ಲಿ ಸೋಂಕು ಹಬ್ಬಿಸಲು ಅಗತ್ಯವಾದದ್ದಕ್ಕಿಂತ ಹತ್ತು ಪಟ್ಟು ಹೆಚ್ಚುವರಿ ಸಜೀವ ವೈರಸ್‌ಗಳನ್ನು ನೀಡಲಾಯಿತು. ಪ್ರಯೋಗಕ್ಕೆ ಒಳಪಟ್ಟ ಬಹುಪಾಲು ಕೋತಿಗಳು ವೈರಸ್‌ಗಳನ್ನು ಯಶಸ್ವಿಯಾಗಿ ಎದುರಿಸಲು ಶಕ್ತವಾಗಿದ್ದವು. ಈ ಮುಂಚಿನ ತಳಿ ಶಾಸ್ತ್ರೀಯ ತಾಂತ್ರಿಕತೆಯ ಮಾರ್ಗದಲ್ಲಿ ನಡೆಸಿದ್ದ ಪರೀಕ್ಷೆಗಳಿಗಿಂತ ಈ ಪ್ರಯೋಗವು ಭಿನ್ನವಾಗಿರುವುದನ್ನು ಗಮನಿ

ಸಬಹುದು.

ಏಡ್ಸ್ ಅಪ್ಪಳಿಸಿದ ನಂತರ ಪ್ರಪಂಚದಾದ್ಯಂತ ಅನೇಕ ವಿಜ್ಞಾನಿಗಳು ಸೂಕ್ತ ಮದ್ದನ್ನು ಅಭಿವೃದ್ಧಿಪಡಿಸಲು ಅವಿಶ್ರಾಂತವಾಗಿ ದುಡಿಯುತ್ತಿದ್ದು ಅವರೆಲ್ಲರ ಸಂಶೋಧನೆಗಳನ್ನು ಒಗ್ಗೂಡಿಸಿ ಪರಸ್ಪರ ತಿಳಿವಳಿಕೆ ಮೂಡಿಸಲೆಂದೇ ಜೂನ್ 16ರಿಂದ 21ರವರೆಗೆ ಅಂತಾರಾಷ್ಟ್ರೀಯ ಏಡ್ಸ್ ಸಮ್ಮೇಳನ ನಡೆದಿದೆ. ಪ್ರಪಂಚದ ಮೂಲೆಮೂಲೆಗಳಿಂದ ಸುಮಾರು 8000 ವಿಜ್ಞಾನಿಗಳು ಇಟಲಿಯಲ್ಲಿ ನೆರೆದು ಏಡ್ಸ್‌ನ ಪೂರ್ವೋತ್ತರಗಳನ್ನು ಪರಿಶೀಲಿಸಿ ಹೊಸ ಆವಿಷ್ಕಾರದ ಹಾದಿಯಲ್ಲಿ ಹೆಜ್ಜೆ ಇಕ್ಕಿದ್ದಾರೆ. ಈ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಮುಖ ವಿಜ್ಞಾನಿಗಳೆಂದರೆ ಡಾ.ಜೋನ್ಸ್ ಸಾಕ್ (ಪೋಲಿಯೋ ಲಸಿಕೆಯ ಪಿತಾಮಹ), ಡಾ.ಡೇನಿಯಲ್ ಜಾಗುರಿ, ಮೇರಿ ಕ್ಯೂರಿ (ಪ್ಯಾರೀಸ್ ವಿ.ವಿ.) ಮುಂತಾದವರು. ಸಾಕ್ ಅವರು ಊನ ರೂಪದ ಏಡ್ಸ್ ವೈರಸ್‌ನ ಬೆನ್ನುಹತ್ತಿ ಲಸಿಕೆ ತಯಾರಿಸಲು ಯತ್ನಿಸುತ್ತಿದ್ದರೆ, ಜಾಗುರಿ ಅವರು ಪ್ರಸ್ತುತ ಮೈಲಿ ಬೇನೆಯ ಲಸಿಕೆಗೆ ಬಳಸುವ ವೈರಸ್‌ಗಳನ್ನು ಆಧರಿಸಿ ಏಡ್ಸ್‌ಗೆ ಮದ್ದು ಅರೆಯುತ್ತಿದ್ದಾರೆ. ಇವೆರಡೂ ಲಸಿಕೆಗಳು ಈಗಾಗಲೇ ಏಡ್ಸ್ ಸಂಬಂಧಿ ಸೋಂಕುಗಳಿಗೆ ಪರಿಣಾಮಕಾರಿ ಮದ್ದುಗಳಾಗುವ ಸುಳಿವು ನೀಡಿವೆ.

ಜಗತ್ತಿನಾದ್ಯಂತ ಸುಮಾರು ಹತ್ತು ದಶಲಕ್ಷ ಜನರ ಎದೆಯ ಕೋಣೆ ಹೊಕ್ಕು ಮೆರೆಯುತ್ತಿರುವ ಏಡ್ಸ್ ಈ ದಶಕದ ಅಂತ್ಯದೊಳಗೆ ತನ್ನ ಕರಾಳ ಹಸ್ತಗಳನ್ನು ಸುಮಾರು 50 ದಶಲಕ್ಷ ಜೀವಗಳೆಡೆ ಚಾಚಲಿದೆ. ಮಧ್ಯ ಆಫ್ರಿಕೆಯಲ್ಲಿ ಸ್ಫೋಟಿಸಿದ ರೀತಿಯಲ್ಲಿಯೇ ಏಡ್ಸ್ ಏಷ್ಯಾದ ಕೆಲವು ದೇಶಗಳಲ್ಲಿಯೂ ತನ್ನ ಸಾಮ್ರಾಜ್ಯ ವಿಸ್ತರಿಸಲಿದೆ; ಅದರಲ್ಲೂ ಥೈಲೆಂಡ್ ಹಾಗೂ ಭಾರತ ಅದರ 'ಹಿಟ್ ಲಿಸ್ಟ್'ನ ಅಗ್ರಸ್ಥಾನದಲ್ಲಿರುವುದು ಕಟುವಾಸ್ತವ!

ಭವಿಷ್ಯದ ದಿನಗಳಲ್ಲಿ ಏಡ್ಸ್‌ನ್ನು ನಿಯಂತ್ರಿಸಲು ಕೆಲವು ಕ್ರಮಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳದೆ ನಿರ್ವಾಹವಿಲ್ಲ. ಅವುಗಳೆಂದರೆ: ಏಡ್ಸ್‌ನ ಕಂದಕದಂಚಿಗೆ ತಳ್ಳುವ ಅಪಾಯಕಾರಿ ವರ್ತನೆಗಳ ಬಗೆಗೆ ಜನರನ್ನು ಎಚ್ಚರಿಸುವುದು, ಏಡ್ಸ್ ವಿರುದ್ಧ ಸೆಣಸಬಲ್ಲ ಔಷಧಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಏಡ್ಸ್ ಹರಡುವಿಕೆಯನ್ನು ತಡೆಗಟ್ಟಬಲ್ಲಂಥ ಪರಿಣಾಮಕಾರಿ ಲಸಿಕೆಯನ್ನು ತಯಾರಿಸುವುದು.

ಅಂತೂ ಏಡ್ಸ್‌ನ ರಹಸ್ಯದ ಬಾಗಿಲುಗಳು ನಿಧಾನವಾಗಿಯಾದರೂ ತೆರೆದುಕೊಳ್ಳತೊಡಗಿವೆ. ಭವಿಷ್ಯದ ದಿನಗಳಲ್ಲಿ ಪರಿಹಾರೋಪಾಯದ ಗಂಟೂ ಬಿಚ್ಚಿಕೊಂಡೀತು. ಅಲ್ಲಿಯವರೆಗೆ ಆ ದಿಕ್ಕಿನಲ್ಲಿ ಮನುಕುಲದ ಆಸೆಗಣ್ಣು ನೆಡಬೇಕಷ್ಟೇ. ●

(ಆಧಾರ)

ಸಕ್ಕರೆ ಎಂದರೆ ಅಕ್ಕರೆಪಡುವ ಜನರೀಗ, ಈ ಡಯಾಬಿಟಿಸ್ ಯುಗದಲ್ಲಿ, ಸಿಗುವುದು ದುಸ್ತರ. ನಿತ್ಯದ ಕಾಫಿ-ಟೀಗೂ ಸ್ಯಾಕರಿನ್ ಗುಳಿಗೆ ಬಳಸುವವರೇ ಬಹಳ. ಆದರೆ ಪ್ರತಿದಿನವೂ ಎರಡು ಪೌಂಡ್ ಸಕ್ಕರೆಯನ್ನು ಬರಿ ಬಾಯಿಂದ ತಿನ್ನುವ ಮಹಿಳೆ ಆಗ್ನೇಯ ಲಂಡನ್ನಿನಲ್ಲಿದ್ದಾಳೆ. ಕಳೆದ ಹತ್ತು ವರ್ಷಗಳಿಂದ ಆಕೆಗೆ ಅದೊಂದು ನಿತ್ಯ ಪರಿಪಾಠ. ಇಷ್ಟಾದರೂ 45 ವರ್ಷ ವಯಸ್ಸಿನ ಆಕೆ - ಮೇರಿ ಹಾರ್ಟನ್-ಗೆ ತೂಕ ಹೆಚ್ಚಾಗಿಲ್ಲ, ಬೊಜ್ಜು ಬೆಳೆದಿಲ್ಲ.

ಈ 'ಸಕ್ಕರೆ ಕಾಯಿಲೆ' ಆಕೆಗೆ ಶುರುವಾದದ್ದು ಇಪ್ಪತ್ತು ವರ್ಷಗಳ ಹಿಂದೆ. ಮದುವೆಯಾದ ಹೊಸತಿನಲ್ಲಿ ಆಗೀಗ ಚಮಚದಿಂದ ಸಕ್ಕರೆ ಹಾಕಿಕೊಳ್ಳಲಾರಂಭಿಸಿದ ಮೇರಿ ಇದೀಗ ಪ್ಲಾಸ್ಟಿಕ್ ಪೊಟ್ಟಣವನ್ನೇ ಬಾಯಿಗೆ ಸುರಿದುಕೊಳ್ಳುತ್ತಾಳೆ. ಅದೂ ರಾತ್ರಿಯಲ್ಲಿ. ಜತೆಗೆ ಆಕೆಗೆ ಧೂಮಪಾನ ಚಟವೂ ಇದೆಯಂತೆ.

– ಟೀಕಲ್ ಗೋಪಾಲಕೃಷ್ಣ

- 151 -

ಹೆಂಡತಿಯ ಅವತಾರಗಳು

ಕನ್ನಡದಲ್ಲಿ ನಾವು "ಹೆಂಡತಿ" ಎನ್ನುವಾಗ ಅವಳು ಹೆಣ್ಣು ಎನ್ನುವುದಷ್ಟೇ ಆ ಶಬ್ದದಿಂದ ಪ್ರತೀತವಾಗುತ್ತದೆ. ಆದರೆ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಸುಮಾರು ಹದಿನಾಲ್ಕು ಪದಗಳು ತುಲನಾತ್ಮಕ ದ್ರಾವಿಡ ಭಾಷಾ ನಿಘಂಟಿನಲ್ಲಿ ಹೆಂಡತಿಗೆ ಸಂಬಂಧಿಸಿ ಗುರುತಿಸಲ್ಪಟ್ಟಿವೆ. ಸಂಸ್ಕೃತದಲ್ಲಿಯೂ ಹೆಂಡತಿಯನ್ನು ನಿರ್ದೇಶಿಸುವ ಪದಗಳು ಹಲವಿವೆ. ಅವುಗಳ ಅಧ್ಯಯನ ಕೆಲ ಸಾಂಸ್ಕೃತಿಕ, ಸಾಮಾಜಿಕ ಅಂಶಗಳನ್ನು ಹೊರಗೆಡಹುತ್ತದೆ.

ಹೆಣ್ಣು ಎಂಬುದರಿಂದಲೇ ಮದುವೆ ಮಾಡಿಕೊಂಡವಳನ್ನು ನಿರ್ದೇಶಿಸುವುದು ಸಾರ್ವತ್ರಿಕ ಪ್ರವೃತ್ತಿ. ಉರ್ದು (ಅರಬ್ಬಿ) "ಔರತ್", ಹಿಂದಿ (ಸಂಸ್ಕೃತ) "ಸ್ತ್ರೀ" ಇತ್ಯಾದಿ ಉದಾಹರಣೆಗಳನ್ನು ಕೊಡಬಹುದು. ಇಂಗ್ಲೀಷಿನ wife, ಫ್ರೆಂಚಿನ femine, ಸ್ಪಾನಿಶ್ mulher ಎಲ್ಲ ಪ್ರಾಥಮಿಕವಾಗಿ ಹೆಣ್ಣು, ಹೆಂಗಸು ಎಂಬರ್ಥದವೇ. ದ್ರಾವಿಡ ಶಬ್ದಗಳಲ್ಲಿ ಕೂಡ ಕುಯಿ ಭಾಷೆಯ "ಆಪಿ" (=ಹುಡುಗಿ=ಹೆಂಡತಿ), ಪರ್ಜಿಯ "ಆಯಿ" ಮೊದಲಾದವೆಲ್ಲ ಇದೇ ವರ್ಗಕ್ಕೆ ಸೇರುತ್ತವೆ. ಯೋಚಿಸಿದರೆ ಹೆಂಡತಿಗೆ ಹೆಣ್ಣೆಂದಲ್ಲದೆ ಮತ್ತೇನೆನ್ನಬಹುದು? ಹೆಂಡತಿಯನ್ನು "ಏ ಹೆಣ್ಣೇ" ಎಂದು ಕರೆಯುವುದೂ ಉಂಟು. ತುಳು ಬ್ರಾಹ್ಮಣರು ಹಿಂದಿನ ತಲೆಮಾರುಗಳಲ್ಲಿ "ಜೇವೇ" (ಏ ಹುಡುಗಿ, ಏ ಹೆಣ್ಣೇ) ಎಂದೇ ಕೂಗುತ್ತಿದ್ದರು.

ಬೇರೆ ಸಮಾನ ಶಬ್ದಗಳಲ್ಲಿ ತಾನೇ ಸಾಂಸ್ಕೃತಿಕ, ಸಾಮಾಜಿಕ ಅಂಶಗಳು ವ್ಯಕ್ತವಾಗುವುದು. ಭಾರತದಲ್ಲಿ ಸಾರ್ವತ್ರಿಕವಾದ ಒಂದು ಅಂಶವೆಂದರೆ ಹೆಂಡತಿಯನ್ನು ಮನೆಗೆ ಸಮೀಕರಿಸುವುದು. ಸಂಸ್ಕೃತದಲ್ಲಿ "ಗೃಹಿಣೀ ಗೃಹ ಮುಚ್ಯತೇ" (ಗೃಹಿಣಿಯೇ ಗೃಹ ಎನಿಸುತ್ತಾಳೆ) ಎಂಬ ವಾಕ್ಯವುಂಟು. ಹೆಚ್ಚು ಜನರಿಗೆ ತಿಳಿಯದಿರುವ ಸಂಗತಿಯೆಂದರೆ, ಸಂಸ್ಕೃತದ "ದಂಪತಿ"ಯಲ್ಲಿ "ದಮ್" ಎಂಬುದು ಮೂಲತಃ ಮನೆ, ವಸತಿಯನ್ನು ಸೂಚಿಸುವ ಪದ. ಹೀಗೆ ಗಂಡ ಹೆಂಡತಿ ಎಂಬರ್ಥದಲ್ಲಿ "ದಂಪತಿ" ಎನ್ನುವಾಗ ನಾವು ಮನೆಯನ್ನೇ ಹೆಂಡತಿಯೆನ್ನುತ್ತೇವೆ. ದ್ರಾವಿಡದ "ಇತ್" ಎಂದರೆ ಮನೆ. ಕೆಲ ದ್ರಾವಿಡ ಭಾಷೆಗಳಲ್ಲಿ (ಉದಾ: ತಮಿಳು) ಇಲ್ಲೆಂದರೆ ಹೆಂಡತಿ ಕೂಡ. ಉತ್ತರ ತುದಿಯ ಬ್ರಾಹೂಇ ಭಾಷೆಯ "ಉರಾ" (=ಉಳಿಯುವ ಎಡೆ=ಮನೆ) ಹೆಂಡತಿಗೆ ನಡೆಯುತ್ತದೆ. ಅದೇ ಭಾಷೆಯ "ಕುಡ್ಲ್" ಮತ್ತು ಈ ತುದಿಯ ಮಲೆಯಾಳಿ "ಕುಟಿ" (=ಕನ್ನಡ-ಗುಡಿ) ಕೂಡ ಗುಡಿಸಲಿಗೂ ಹೆಂಡತಿಗೂ ಸಮವಾಗಿವೆ. ತಮಿಳಿನಲ್ಲಿ "ವೀಡಾರಂ" (=ಬಿಡಾರ) ಎಂದರೆ ಹೆಂಡತಿಯೂ ಹೌದು. ಮೇಲೆ "ಕುಟಿ"ಯ ಮಾತು ಹೇಳಿದೆವಲ್ಲ; ಬಹುಶಃ ಸಂಸ್ಕೃತದ "ಕುಟುಂಬ" ಎಂಬುದು ಈ "ಕುಟಿ"ಯಿಂದಲೇ ಯಾವುದೋ ದ್ರಾವಿಡ ಭಾಷೆಯ ಮೂಲಕ ಹೊಕ್ಕಿರಬೇಕೆಂದು ಸಂಶಯವಿದೆ. "ನಮ್ಮ ಕುಟುಂಬ" ಎಂದು ನಾವೂ ಹೆಂಡತಿಯನ್ನು ನಿರ್ದೇಶಿಸುತ್ತೇವಲ್ಲ. ಅಂತೂ ಹೆಂಡತಿಯಿಂದಲೇ ಮನೆ, ಹೆಂಡತಿಗಾಗಿಯೇ ಮನೆ. ಇಂಗ್ಲೀಷಿನಲ್ಲಿಯೂ house wife ಎನ್ನುವುದಿಲ್ಲವೆ? ಮೊದಲು ಮನೆ ಕಟ್ಟಿ ಆಮೇಲೆ ಹೆಣ್ಣು ತರುವುದು ಇಂದಿಗೂ ಕೆಲ ಗುಡ್ಡಗಾಡು ಜನಾಂಗಗಳಲ್ಲಿ ನಡೆದು ಬಂದಿದೆ.

''ಮಡದಿ'' ಶಬ್ದವನ್ನು ಹಿಂದೊಮ್ಮೆ ಚರ್ಚಿಸಿದ್ದೇನೆ. ಇದರ ಧಾತ್ವರ್ಥ ಅರಿಯದವಳು, ಮುಗ್ಧೆ. ಮುಗ್ಧ ಹೆಣ್ಣು ಭಾರತದ ಗಂಡಸರಿಗೆ ಪ್ರಿಯಳೆಂದು ಕಾಣುತ್ತದೆ. (ಬೇಕಾದಂತೆ ನಂಬಿಸಬಹುದಲ್ಲ!) ''ಮುಗ್ಧ ವಧು''ಗಳನ್ನು ಗೀತಗೋವಿಂದದ ಜಯದೇವ ಹೊಗಳಿದ್ದೇ ಹೊಗಳಿದ್ದು!

''ಪ್ರಿಯೇ'' ಎಂಬರ್ಥದ ಪದಗಳು ಹೆಂಡತಿಗೆ ಸಾರ್ವಭಾಷಿಕ ಅಭಿಧಾನಗಳಾಗಿವೆ. ಕನ್ನಡದ ''ಕಾದಲೆ'' ಇತ್ಯಾದಿಗಳು. ಇಂಗ್ಲೀಷ್ dear ಕೂಡ.

''ನನಗೂ ನಿನಗೂ ಅಂಟಿದ ನಂಟಿನ'' ಮಾತು ಬೇಂದ್ರೆಯವರ ಸಖೀಗೀತದ ಪಲ್ಲವಿಯಾಗಿದೆ. ಈ ''ನಂಟು'' ಅಥವಾ ಜೋಡಿಸುವಿಕೆ ಹೆಂಡತಿ (ಅಥವಾ ಗಂಡ) ಗೆ ಅನೇಕ ಭಾಷೆಗಳಲ್ಲಿ ಅನ್ವಯಿಸುತ್ತದೆ. ತಮಿಳಿನಲ್ಲಿ ''ಕಿರವಿ'' (ಜೋಡಿಯಾದವಳು- ಕಿರವೋನ್‌ರ್- ಜೋಡಿಯಾದವ= ಗಂಡ), ''ತುಣಲ್ವಿ'' (ಅದೇ ಅರ್ಥ) ಇದ್ದರೆ ಸಮುದ್ರಗಳಾಚೆ ಇಂಗ್ಲೀಷಿನ spouse, ಪೋರ್ಚುಗೀಸಿನ esposa ಇತ್ಯಾದಿಗಳು ಅದೇ ಅರ್ಥವನ್ನು ಪ್ರತಿಧ್ವನಿಸುತ್ತವೆ.

ಸಂಸ್ಕೃತದಲ್ಲಿ ಹೆಂಡತಿಗೆ, ವಿಶೇಷವಾಗಿ ಧರ್ಮಶಾಸ್ತ್ರಗಳಲ್ಲಿ, ''ಕ್ಷೇತ್ರ'' ಎಂಬ ಪದ ಬಳಸಲ್ಪಡುತ್ತದೆ. ಕ್ಷೇತ್ರವೆಂದರೆ ಗದ್ದೆ, ಹೊಲ, ಒಡೆತನದ ಭೂಮಿ. ಹೆಂಡತಿಯೂ ಕ್ಷೇತ್ರವೇ. ಯಾಕಂದರೆ ಅವಳಲ್ಲಿ ಬೀಜ ಬಿತ್ತಿ ಮಕ್ಕಳ ಬೆಳೆಯನ್ನು ಯಜಮಾನ ಪಡೆಯುತ್ತಾನೆ. ಇದು ಕೃಷಿಯುಗದಲ್ಲಿ ಪ್ರಚುರವಾದದ್ದು. ಹೊಲಗದ್ದೆಯಂತೆ ಹೆಂಡತಿಯೂ ಒಂದು ಸೊತ್ತು ಎಂಬ ಭಾವನೆಯಿಂದ ಹೊರಟ ಈ ಪದ ಹೆಣ್ಣಿನ ದಾಸ್ಯದ ಮೊದಲ ಹೆಜ್ಜೆಯಾಯಿತು. ತನ್ನಿಂದ ಮಕ್ಕಳಾಗದಿದ್ದರೆ ತಾನಾರಿಸಿದ ಅನ್ಯರಿಂದ ಹೆಂಡತಿಯಲ್ಲಿ ತನಗಾಗಿ ಮಕ್ಕಳನ್ನು ಪಡೆಯಬಹುದಿತ್ತು. ಅವನು ''ಕ್ಷೇತ್ರಜ'' ಎಂದು ಧರ್ಮಶಾಸ್ತ್ರದ ಪರಿಭಾಷೆ. ಎಷ್ಟು ಹೊಲಗದ್ದೆಗಳನ್ನು ಬೇಕಾದರೆ ಮಾಡಿಕೊಳ್ಳಬಹುದಾದ ಹಾಗೆ ಎಷ್ಟು ಹೆಂಡಿರನ್ನೂ ಮಾಡಿಕೊಳ್ಳಬಹುದು. ಹೆಂಡತಿಯನ್ನು ಗಿರವಿ ಇಡಬಹುದು. ಮಾರಬಹುದು, ಅಥವಾ ಪಾಂಡವರಂತೆ ಜುಗಾರಿಯಲ್ಲಿ ಪಣವಾಗಿ ಒಡ್ಡಬಹುದು. ವ್ಯಭಿಚಾರದಿಂದ ಹೆಂಡತಿ ಮಕ್ಕಳನ್ನು ಪಡೆದರೂ ಮಕ್ಕಳು ಗಂಡನಿಗೇ ಸೇರಬೇಕಲ್ಲದೆ ಮಿಂಡನಿಗಲ್ಲ. ಹೆಂಡತಿಯ ಮೇಲಿನ ಹಕ್ಕಿನಲ್ಲಿ ಪಾತಿವ್ರತ್ಯದ ಕಲ್ಪನೆ ಆಮೇಲೆ ಬಂದದ್ದಾಗಿರಬೇಕು. ಹೆಂಡತಿಯ ಅಪಹರಣದಲ್ಲಿ ಸೊತ್ತಿನ ಅಪಹರಣದ ಅಪರಾಧ ತಾನೇ ಅಡಕವಾಗಿತ್ತು. ಹಾಗಾದಲ್ಲಿ ನ್ಯಾಯಾಲಯಕ್ಕೆ ತನ್ನ ಸೊತ್ತನ್ನು ತಿರುಗಿ ಕೊಡಿಸಲು ದೂರು ಕೊಡಬಹುದಿತ್ತು. ಚಂದ್ರನು ತಾರೆಯನ್ನು ಅಪಹರಿಸಿದ್ದಕ್ಕೆ ಬೃಹಸ್ಪತಿ ಬ್ರಹ್ಮನಲ್ಲಿ ದೂರು ಕೊಟ್ಟು ಅವಳನ್ನು ಅವರ ಮಗುವಿನೊಡನೆ ಪಡೆದ.

ಸಂಸ್ಕೃತದಲ್ಲಿ ಹೆಂಡತಿಯೆಂದು ಅರ್ಥ ಕೊಡುವ ಇನ್ನೊಂದು ಪದ ''ಕಲತ್ರ''. ಇದು ಸ್ತ್ರೀಲಿಂಗದಲ್ಲಲ್ಲ, ನಪುಂಸಕಲಿಂಗದಲ್ಲಿ ನಡೆಯುವುದು ಒಂದು ಸೋಜಿಗ. ಮಹಾಭಾರತದಲ್ಲೇ ಈ ಅರ್ಥದಲ್ಲಿ ಈ ಶಬ್ದ ಕಾಣಸುತ್ತದೆ. ಈ ಪದದ ಮೂಲ ಏನೆಂಬುದು ಸ್ಪಷ್ಟವಾಗಿಲ್ಲ. ''ಕಲಶ'' ಮೊದಲಾದ ಕೆಲ ಪದಗಳು ಪಾತ್ರ, ಎಂಬರ್ಥದ ದ್ರಾವಿಡ ''ಕಲ''ದಿಂದ ಸಂಸ್ಕೃತಕ್ಕೆ ಹೋಗಿರಬೇಕೆಂದು ದ್ರಾವಿಡ ಭಾಷಾ ಶಾಸ್ತ್ರಿಗಳು ತರ್ಕಿಸುತ್ತಾರೆ. (ಆದರೆ ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿರುವ calix= ಚಿಕ್ಕ ಪಾತ್ರ, ಕುಳಿ ಎಂಬುದು ''ಕಲಶ''ಕ್ಕೆ ಜ್ಞಾತಿ ಪದವೆಂದು ಮೋನಿಯರ್ ವಿಲಿಯಮ್ಸ್ ಹೇಳುತ್ತಾನೆ) ಮೂಲ ಯಾವುದೇ ಇರಲಿ, ಅದು ಪಾತ್ರವೇ ಸೈ. ''ಕಲತ್ರ'' ಎಂಬುದೂ ತುಂಬಿಡುವ ಸಲಕರಣೆಯೇ. ಪುರಾತನ ಮಾನವ ಹೆಂಗಸನ್ನು ಹಾಗೆ ತಾನೆ ಕಲ್ಪಿಸಿದ್ದು? ಗರ್ಭವನ್ನು ತುಂಬಿಕೊಳ್ಳುವವಳು ಹೆಂಡತಿ; ಅವಳು ಪಾತ್ರ. ಆದ್ದರಿಂದಲೇ ''ಕಲತ್ರ'' ಬಂದಿರಬಹುದೇ? ಈ ಶಬ್ದಕ್ಕೆ ಯೋನಿ, ನಡು ಎಂಬರ್ಥವೂ ಇರುವುದನ್ನು ಗಮನಿಸಬೇಕು.

ಅಂದ ಹಾಗೆ ''ಕಮ್ಮಿಯಾಯಿತು'' ಎನ್ನುವಾಗ ಈ ''ಕಮ್ಮಿ'' ಕನ್ನಡ ''ಕಡಿಮೆ'' ಎಂಬುದರ ಹ್ರಸ್ವರೂಪ ಎಂದು ನೀವೆಣಿಸಿದ್ದೀರಾ? ತಪ್ಪು. ''ಕಮ್ಮಿ'' ಎಂಬುದು ಪಾರಸೀಕ ''ಕಮ್-ಕಮೀ''ಯಿಂದ ಬಂದದ್ದು. ಅರ್ಥ ಸುಮಾರಾಗಿ ಒಂದೇ. ●

- ಪಾವೆಂ.



ಹೆಂಡತಿಗೆ ಹೆದರಬೇಕೆ?

'ಸುಪ್ರಿಯ' ಚೊಕ್ಕಾಡಿ

'ಬ್ರಹ್ಮಚಾರಿಗೇಕೆ ಹೆಂಡತಿಯ ಚಿಂತೆ?' ಎಂದು ಮೂಗೆಳೆಯಬೇಡಿ. ಮಾನ್ಯ ಪತಿ ಮಹಾಶಯರ ಚಿಂತೆಯನ್ನು ನೋಡಿಯೇ ನಾನು ಅವರ ಹೆಂಡತಿಯ ಕುರಿತು ಬರೆಯಹೊರಟಿದ್ದು.

"Heaven will not be heaven to me if I do not meet my wife there"

- Andrew Jackson

"No man can live Piously or die righteously without a wife" - Richter

ಅರೆರೆ!, ಏನು!? ಸ್ವರ್ಗ ಲೋಕದಲ್ಲೆಲ್ಲಿಯಾದರೂ ನಿಮಗೆ ನಿಮ್ಮ ಪತ್ನಿ ಭೇಟಿಯಾದರೆ ಅದುವೇ ನಿಮಗೆ ನರಕವೆ? ನೀವೆ ಕೈ ಹಿಡಿದ ನಿಮ್ಮ ಪತ್ನಿ ಜೊತೆಗಿದ್ದರೆ ನರಕ ಹೇಗೆ ಸ್ವಾಮಿ?

ಪತಿ ಮಹಾಶಯರು: 'ಹ್ಞಂ, ನಿಮಗೆ ಗೊತ್ತಿಲ್ಲ ಬಿಡಿ. ಇಂದು ಹೆಂಡತಿಯನ್ನು ಕಟ್ಟಿಕೊಂಡ ಗಂಡನ ಪಾಡು ನರಕಸದೃಶ. ಈ ಸ್ವತಂತ. ಭಾರತದಲ್ಲಿ ಗಂಡಂದಿರು .... ಗಂಡಂದಿರು ಪತ್ನಿಯರ ಕಪಿಮುಷ್ಟಿಯಲಿ ಸಿಲುಕಿ ಪರದಾಸ್ಯದಲ್ಲಿ ಕೊರಗಿ ಅವರ ಅಡಿಯಾಳಾಗಿ ಅವರಿಗೆ ಹೆದರಿಕೊಂಡೇ ನಡೆಯಬೇಕು.'

ನಾನು: 'ಅಂದರೆ ...... ನೀವೂ ..'

ಪತಿ ಮಹಾಶಯರು: ಹ್ಞಾ ಹೌದು ... ಛೆ ... ಏನು ... ಇಲ್ಲ ನಾವು ಹೆಂಡಂದಿರಿಗೆ ಹೆದರುವುದಿಲ್ಲ!'

ಗೊತ್ತುಂಟು ಸ್ವಾಮಿ, ಪತ್ನಿಯನ್ನು ಕಟ್ಟಿಕೊಂಡು ನೀವು ಪಡುತ್ತಿರುವ ನಾಯಿಪಾಡು ನನಗೂ ಗೊತ್ತಿದೆ. ಆದರೂ ದಿಢೀರಾಗಿ ನಿಮ್ಮ ಪತ್ನಿಯನ್ನು ನಾನು ದೂಷಿಸಹೊರಟರೆ ನಿಮ್ಮ ಕೋಪ ನೆತ್ತಿಗೇರಿ ನೀವು ನನ್ನ ತಲೆ ತೆಗೆದರೇನು ಗತಿ? ಈವರೆಗೂ ಜೋಪಾನವಾಗಿ ಕಾಪಾಡಿಕೊಂಡು ಬಂದ ತಲೆಯನ್ನು ಈಗ ಕಳೆದುಕೊಳ್ಳಲು ನನಗೇನು ಕೇಡುಗಾಲ ಬಂತು ಸ್ವಾಮಿ? ಅದಕ್ಕಾಗಿ ಮೊದಲು ಪತ್ನಿಯನ್ನು ಹೊಗಳಿ ನಿಮ್ಮನ್ನು ಕುರುಬುವಂತೆ (ಅಯ್ಯೋ ನನಗಿಂತಹ ಒಳ್ಳೆ ಹೆಂಡತಿ ಇಲ್ಲವಲ್ಲಾ ಎಂದು) ಮಾಡಿ ನಂತರ ಧೈರ್ಯವಾಗಿ ನಿಮ್ಮ ಪತ್ನಿಯನ್ನು (ಆ ಮೂಲಕ ನಿಮ್ಮನ್ನು!) ದೂಷಿಸಬಹುದು ಅಂತ ನಿಮ್ಮ ಬಾಯಿ ಬಿಡಿಸಿದೆ. ಈಗ ನೀವೇ ನಿಮ್ಮ ಅತಂತ್ರಸ್ಥಿತಿಯನ್ನು ಹೇಳಿಕೊಂಡಿದ್ದೀರಿ. ಆದ್ದರಿಂದ ಈಗ ನಾನು ನಿಮ್ಮ ಪತ್ನಿಯನ್ನು ಕುರಿತು ಹೆದರಿಕೆಯಿಲ್ಲದೆ ಮಾತನಾಡಬಹುದು. ಸಾವಧಾನಚಿತ್ತರಾಗಿ ಓದಿಕೊಳ್ಳಿ - ನಮ್ಮ ಪತ್ನಿ ಬಿಟ್ಟರೆ! ನಿಮ್ಮ ಪತ್ನಿ ನಿಮ್ಮನ್ನು ತನ್ನಿಚ್ಛೆಯಂತೆ ಕುಣಿಸಿ ನಿಮ್ಮನ್ನು ಅವಳ ಅಂಕುಶದಲ್ಲಿಟ್ಟುಕೊಂಡಿರುವಾಗ 'ನಮ್ಮ ಹೆಂಡಂದಿರ ಕುರಿತಾಗಿ ಮಾತನಾಡಬೇಡಿ' ಎಂದು ನೀವು ಖಂಡಿತಾ ಹೇಳಲಾರಿರಿ.

''ಸಾವಿರ ಕುದುರೆಗೆ ಸರದಾರನಾದರೂ ಮನೇ ಹೆಂಡತಿಗೆ ಕಾಸ್ತಾರ'' ಎಂಬ ಗಾದೆ ಸರ್ವವೇದ್ಯ. ನಾನು ಓದಿದ ಹಲವಾರು ಬರಹಗಳಲ್ಲಿ

ಆಯಾ ಬರಹಗಾರರು ಹೆಂಡತಿಯನ್ನು ಹುಲಿಯಂತೆ ಚಿತ್ರಿಸಿರುವುದನ್ನು ನೋಡಿದ್ದೇನೆ. ಕಾಲೇಜಿನಲ್ಲಿ ಮದುವೆಯಾದ ಉಪನ್ಯಾಸಕರು ಬಹಳ ಕಟ್ಟುನಿಟ್ಟಿನವರಾಗಿದ್ದಾರೆ. ವಿದ್ಯಾರ್ಥಿಗಳು 'ಹ್ಞೂಂ, ಕಾಲೇಜಿನಲ್ಲಿ ಹೀರೋ, ಮನೆಯಲ್ಲಿ ಹೆಂಡತಿಯೆದುರು ಜೀರೋ' ಎನ್ನುವುದು ವಿದ್ಯಾವಂತರಾದ ನಮಗೆಲ್ಲಾ ತಿಳಿದ ವಿಚಾರವೇ! ಪ್ರಾಥಮಿಕ ತರಗತಿಯಲ್ಲಿ ನಮಗೊಬ್ಬ ದೂರ್ವಾಸ ಮೇಷ್ಟ್ರು ಇದ್ದರು. ಅವರು ಬೆತ್ತವನ್ನು ಬಿಟ್ಟು ತರಗತಿಗೆ ಪ್ರವೇಶಿಸುತ್ತಿರಲಿಲ್ಲ. ಆ ಬೆತ್ತ ಯಾವಾಗಲೂ ವಿದ್ಯಾರ್ಥಿ/ನಿಯರ ಬೆನ್ನಿನ ಮೇಲೆ ನರ್ತಿಸುತ್ತಿತ್ತು. ಆದರೆ ಸಂಜೆ ಇವರ ಮನೆಗೆ ಹೋದರೆ ಬೆತ್ತ ಇವರ ಕೈಯಿಂದ ಪತ್ನಿಯ ಕೈಗೆ ವರ್ಗಾವಣೆಯಾಗಿ ಬೆತ್ತ ತನ್ನ ಕೆಲಸ ಮುಂದುವರೆಸುತ್ತಿತ್ತಂತೆ. ಅಂತೂ ಬೆತ್ತಕ್ಕೆ ವಿಶ್ರಾಂತಿ ಇಲ್ಲ. ವ್ಯಂಗ್ಯ ಚಿತ್ರಕಾರರಂತೂ ಹೆಂಡತಿಯ ಕೈಯಲ್ಲಿ ಲಟ್ಟಣಿಗೆ ಕೊಟ್ಟು ತಲೆ ಊದಿಸಿಕೊಂಡು ಗಪ್‌ಚಿಪ್ ಆಗಿರುತ್ತಾರೆ.

ಈ ಮದುವೆಯಾದವರು ಯಾಕಾಗಿ ಹೆಂಡತಿಗೆ ಹೆದರುತ್ತಾರೆ? ಹೆದರಲೆಂದೇ ಮದುವೆಯಾದರೆ? ಅಂತೂ ಹೆದರುತ್ತಾರೆ. ದಾಸರಂತೂ 'ಹೆಂಡತಿ ಪ್ರಾಣ ಹಿಂಡುತಿ' ಎಂದು ಗೋಗರೆದಿದ್ದಾರೆ. ಈಗಿನ ಗಂಡಂದಿರು ಬಾಯ್ಬಿಟ್ಟು ಹೇಳದಿದ್ದರೂ ಒಳಗೊಳಗೆ ಸಂಕಟ ಅನುಭವಿಸುವವರೇ. ''ಬಾಯ್ಬಿಟ್ಟರೆ ಬಣ್ಣಗೇಡು!'' ಆದರೂ ಮದುವೆಯಾದ ಆರಂಭದಿಂದಲೇ ಹೆಂಡತಿಯರಿಗೆ ಹೆದರಬೇಕಾದ ಅವಶ್ಯಕತೆ ಇಲ್ಲವಂತೆ. ಇದ್ದಿದ್ದರಲ್ಲಿ ತೃಪ್ತಿ! ಖ್ಯಾತ ಪ್ರಬಂಧಕಾರರಾದ ಶ್ರೀ ಎ.ಎನ್.ಮೂರ್ತಿರಾಯರು 'ಹೆಂಡತಿಯ ಹೆಸರು' ಎನ್ನುವ ಪ್ರಬಂಧದಲ್ಲಿ ''ಹೆಂಡತಿಯ ಹೆಸರಿಗೆ ಹೆದರಬೇಕಾದ ಪ್ರಮೇಯವೇನೋ ಮುಂದೆ ಬರಬಹುದು, ಆದರೆ ಈಗಲೇ ಇಲ್ಲ. ಅವಳು ನಮ್ಮನ್ನು ಕಾಡಿ ಪ್ರಾಣ ತೆಗೆಯಬೇಕಾದರೆ ಒಂದೆರಡು ವರ್ಷ ಕಳೆದು, ಈಗ ಮುಗ್ಧೆಯಾಗಿರುವವಳು. ಪಳಗಿದ ಗೃಹಿಣಿಯಾಗಬೇಕು; ಅಲ್ಲಿಯವರೆಗೂ ಭಯವಿಲ್ಲ'' ಎಂದಿ



ದ್ದಾರೆ. ಅಂತೂ ಪತಿಮಹಾಶಯ ಯಾವುದೋ ಒಂದು ಅವಧಿಯ ನಂತರ ಮತ್ತೆ ಹೆಂಡತಿಗೆ ಹೆದರಬೇಕು.

ಹಾಗಿದ್ದರೆ ಇಬ್ಬರು ಹೆಂಡತಿಯರಿದ್ದರೆ ಯಾವ ಪತ್ನಿಗೆ ಹೆದರುವುದು? ಇವಳಿಗೆ ಹೆದರಿದರೆ ಅವಳು ಬೈದಾಳು, ಅವಳಿಗೆ ಹೆದರಿದರೆ ಇವಳು ಬೈದಾಳು! ಹೀಗೆ ಇಬ್ಬರೂ ಬಯ್ಯಲು ಹೊರಟು - ಅವರಿಬ್ಬರೂ ಕೈಕೈ ಮಿಲಾಯಿಸಲು ಹೊರಟರೆ ಪಾಪ ಗಂಡನಾದವನು ಯಾವ ಹೆಂಡತಿಯ ರಕ್ಷಣೆಗೆ ಧಾವಿಸುವುದು? ಒಬ್ಬಳನ್ನು ರಕ್ಷಿಸಹೊರಟು ಮತ್ತೊಬ್ಬಳಿಂದ ಗದರಿಸಿಕೊಳ್ಳಬೇಕಾದ ತೊಂದರೆ ತೆಗೆದುಕೊಳ್ಳಬೇಕಲ್ಲ. ಅದ್ದರಿಂದ ಹೆದರಿಕೆಯಿಂದ ನಡುಗುತ್ತಾ ಯುದ್ಧವನ್ನು ವೀಕ್ಷಿಸಬೇಕಷ್ಟೆ! ಅದಕ್ಕಾಗಿಯೇ ಇರಬಹುದು. ಈ ಸುಭಾಷಿತ:

ಬಿಲದಿ ಹಾವಿದೆ ಹೊರಗೆ ಬೆಕ್ಕಿದೆ
ನಡುವೆ ಸಿಕ್ಕಿದೆ ಹೆಗ್ಗಣ
ಅದರ ಪಾಡೇ ಹೆಂಡಿರಿಬ್ಬರ
ಕಟ್ಟಿಕೊಳ್ಳುವ ಗಂಡನ

ಈ ದೃಷ್ಟಿಯಿಂದ ಹಿಂದಿನ ರಾಜಮಹಾರಾಜರೇ ಉತ್ತಮ. ತನಗೆ ಬೇಕಾದಷ್ಟು ಪತ್ನಿಯರನ್ನು ಹೊಂದಿಯೂ ಅವರಿಗೆ ಹೆದರದೆ ರಾಜ್ಯವನ್ನಾಳುತ್ತಿದ್ದರಲ್ಲ, ಸಾಹಸಿಗರವರು! ಈಗಿನ ರಾಜ(ಪ್ರಜೆ)ರಂತೆ ಹೆಂಡತಿಯೆಂದರೆ ಮಾರುದ್ದ ಓಡದೆ ಧೈರ್ಯದಿಂದ ಅವರನ್ನು ನಿಭಾಯಿಸುತ್ತಿದ್ದರಲ್ಲ. ರಾಜರೇನೋ ಹೀಗೆ ಗೋಚರಸುತ್ತಿದ್ದರು. ಆದರೆ ಪ್ರಜೆಗಳ ಪಾಡು ಈಗಿನವರ ಹಾಗೇ ಇತ್ತು ಎಂಬುದನ್ನು ಒಂದು ಸಂಸ್ಕೃತ ಶ್ಲೋಕದಿಂದ ತಿಳಿದು ಬರುತ್ತದೆ. ಆ ಶ್ಲೋಕದ ಅನುವಾದ ಹೀಗಿದೆ:

''ತಗಣೆಗಳು, ಸೊಳ್ಳೆಗಳು
ಇರುಳಿನಲ್ಲಿ;
ನೊಣಗಳು, ತಿರುಕರು ಹಗಲಿ
ನಲ್ಲಿ;
ಇರುವೆಗಳು, ಹೆಂಡತಿ ಇವರಾ
ವರೋ
ಇರುಳು ಹಗಲು ಎರಡರಲ್ಲೂ
ನನ್ನನ್ನು ಬಾಧಿಸುತ್ತಾರೆ''

ಹೆಂಡತಿಯ ಕಾಟ ತಡೆಯಲಾಗದೆ ಬಸವಳಿದ ಹೃದಯದ ಆಕ್ರಂದನ ಇದು. ಆದ್ದರಿಂದ ಗಂಡ ಹೆಂಡತಿಗೆ ಹೆದರುವುದು ಹಿಂದಿನಿಂದ ಬಂದ ಒಂದು ಪದ್ಧತಿ ಎಂದು ಧೈರ್ಯವಾಗಿ ಹೇಳಬಹುದು.

"Men marry to make an end; women. to make a biginning" A. Dupuy

"Maids want nothing but husbands, and when they have them, they want every-thing" - Shakshpear


ಮೇಲಿನ ಎರಡು ವಾಕ್ಯಗಳಲ್ಲಿ ನಿಮಗೆ ಪತ್ನಿಯ ಸೂಕ್ಷ್ಮ ಚಿತ್ರಣ ಸಿಕ್ಕಿರಬಹುದು. ಹೆಂಡತಿಗೆ ಗಂಡಂದಿರು ಎಷ್ಟು ಹೆದರುತ್ತಾರೆಂದರೆ ಅಯ್ಯೋ ಹೆಂಡತಿಯ ಕಾಟ ತಡೆಯಲಾರೆನು ಎಂದು ಸಾಯಲೂ ಹೆದರಿಕೆಯೇ ಅಂತೆ - ''ಸಾಯುವೆನೆಂದರೆ ಹೆಂಡತಿ ಬಯ್ವಾಳು'' ಎಂದು! ವಸ್ತುಸ್ಥಿತಿ ಹೀಗಿದ್ದರೂ ಹೆಂಗಸರನ್ನು ಅಬಲೆಯರೆಂದು ಕರೆದು ಗಂಡಸರು ಮೀಸೆ ತಿರುವುತ್ತಾರಲ್ಲಾ, ಏನಿದರರ್ಥ? ಅನರ್ಥ!

ಹೆಂಡಂದಿರ ವಶೀಲಿಗಳಲ್ಲಿ ಎತ್ತಿದ ಕೈ. ದೊಡ್ಡ ಆಫೀಸರರ ಮಡದಿಯರಿಗಂತೂ ಒಂದು ಘಳಿಗೆ ಪುರುಸೊತ್ತಿಲ್ಲ, ಯಾಕೆಂದರೆ ಯಾವಾಗಲೂ ಜನರು ತಮ್ಮ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವಂತೆ ಮಾಡಬೇಕೆಂದು ಈ ಆಫೀಸರರ ಮಡದಿಯಲ್ಲಿ ಹೋಗಿ ಹೇಳುತ್ತಾರೆ. ಮಡದಿಯ ಶಿಫಾರಸ್ಸಿನಂತೆ ಪತಿ ಜನರ ಕೆಲಸಗಳನ್ನು ನಿರ್ವಹಿಸುತ್ತಾನೆ. ನಮ್ಮೂರಿನಲ್ಲಿ ಓರ್ವ ಆಫೀಸರ್ ಪತಿ ಇವರಲ್ಲಿ ಅಗ್ರಗಣ್ಯ. ಜನರು ತಮ್ಮ ಅಹವಾಲುಗಳನ್ನು ಅರ್ಜಿ ಮೂಲಕ ಕೊಡುತ್ತಿರುವುದು ಈ ಆಫೀಸರನ ಪತ್ನಿಯ ಕೈಗೆ. ಧನಲಕ್ಷ್ಮೀ ಸಹಿತವಾಗಿ ಹೋದ ಅರ್ಜಿದಾರರಿಗೆ ಈ ಗೃಹಲಕ್ಷ್ಮೀ ಹಸಿರು ನಿಶಾನೆ ತೋರಿಸುತ್ತಾಳೆ.

ಹೆಂಡತಿಗೆ ಹೆದರುವವರನ್ನು ಹೇಡಿ ಎನ್ನಲಾದೀತೆ? ಖಂಡಿತಾ ಇಲ್ಲ. ಆ ಜಿಗರೆ ಕಂಗಳ

ಚೆಲುವೆಯ ಮೋಡಿಗೆ ಒಳಗಾಗಿ ಮದುವೆಯಾಗಿ ಆಕೆಯ ಅಭೀಪ್ಸೆಗಳನ್ನು ಈಡೇರಿಸದಿದ್ದರೆ ಪ್ರಿಯ ಪತ್ನಿ ಕಣ್ಣೀರ್ಗರೆಯುಳೇ? ಹೆಂಡತಿಯ ಈ ಒಂದು ಜುಜುಬಿ ಅಪೇಕ್ಷೆಯನ್ನೂ ಈಡೇರಿಸಲಾಗದ ಪತಿ ಅವನೆಂಥವನು? ಆದ್ದರಿಂದ ಅವಳ ಸುಖಸಂತೋಷಗಳಿಗಾಗಿ ಆಕೆಗೆ ಹೆದರಿದರೆ ಅದರಲ್ಲೇನೂ ಹೇಡಿತನವಿಲ್ಲ. ಹೆದರಿಸುವುದನ್ನು ಆಕೆ ತನ್ನ ಹಕ್ಕೆಂದು ತಿಳಿದು ಹೆದರಿಸುವಾಗ ಪತಿಯಾದವನು ಹೆದರುವುದು ತನ್ನ ಕರ್ತವ್ಯವೆಂದು ತಿಳಿದು ಹೆದರಬೇಕು. ಹೆಂಡತಿಗೆ ಹೆದರದೆ ಕರ್ತವ್ಯ ಭ್ರಷ್ಟರಾಗಲು ಯಾವ ಪತಿ ಇಷ್ಟಪಟ್ಟಾನು? ಆದ್ದರಿಂದ ಹೆಂಡತಿಗೆ ಹೆದರುವುದರಲ್ಲೇ ತನ್ನ ಪುರುಷಾರ್ಥವಡಗಿದೆಯೆಂದು ಪತಿ ಮಹಾಶಯರು ತಿಳಿದಿದ್ದರೆ ಅದರಲ್ಲೇನು ಆಶ್ಚರ್ಯ?

ಸಮ್ಮೂರ ಗುಂಡನಂತೂ ಹೆಂಡತಿಗೆ ಹೆದರಬೇಕೆಂದಾದಲ್ಲಿ ನಾನು ಮದುವೆಯೇ ಆಗುವುದಿಲ್ಲ ಎನ್ನುತ್ತಾನೆ. ಅವನು ಹೇಳಲಿ ಬಿಡಿ, ಹೆಂಡತಿಗೆ ಹೆದರಬೇಕಾಗುತ್ತದೆಯೆಂದು ನೀವ್ಯಾರೂ ಮದುವೆಯಾಗದಿರಬೇಡಿ, ಯಾಕೆಂದರೆ ಮದುವೆಯೆನ್ನುವುದು ಯುದ್ಧಕ್ಕೆ ಹೋಗುವಂತೆ ಸಾಹಸದ ಕೆಲಸವಂತೆ (Marriage is an adventure, like going to war C.K.Chesterston) ಈಗಲಾದರೂ ನಿಮಗರ್ಥವಾಯ್ತಲ್ಲ, ನೀವು ಮದುವೆಯಾಗದಿದ್ದರೇ ಹೇಡಿಗಳೆನಿಸಿಕೊಳ್ಳುತ್ತೀರಿ. ನೀವು ಮದುವೆಯಾದಿರೋ, 'ಭೇಷ್! ಸಾಹಸಿಗ' ಎಂದು ಹಲವಾರು ಗಂಡಂದಿರು ನಿಮ್ಮ ಬೆನ್ನು ತಟ್ಟಿಯಾರು. ಆಮೇಲೆ ಬೆನ್ನಿಗೆ ತಟ್ಟಲು ಹೆಂಡತಿ ಸಾಕಲ್ಲ (ತೊಂದರೆ ಇಲ್ಲ ಯುದ್ಧಕ್ಕೆ ಹೊರಟ ವೀರರಲ್ಲವೆ ನೀವು.)




"When a man marries his trouble bigins" ಎಂಬುದೊಂದು ಮಾತಿದೆ. ಈ ತೊಂದರೆಗಳನ್ನು ಎದುರಿಸುವ ಸಾಹಸ, ಧೈರ್ಯ, ಜಾಣ್ಮೆಗಳನ್ನು ಹೊಂದಿರುವವರೆಂದರೆ ಮದುವೆಯಾದ ಗಂಡಸರು ಮಾತ್ರ! ಯಾವ ಗಂಡಸು ತಾನೆ ಈ ತೆರನ ಹೊಗಳಿಕೆಯನ್ನು ಇಷ್ಟಪಟ್ಟುಕೊಳ್ಳುವುದಿಲ್ಲ? (ಹೊಗಳಿಕೆಗಾಗಿಯೇ ತುದಿಗಾಲಲ್ಲಿ ನಿಂತಿದ್ದೇವೆ ..... ಛೆ! ಮರ್ಯಾದೆಯ ಪ್ರಶ್ನೆ.) ಆದ್ದರಿಂದ ಯುವಕರೇ, ಮದುವೆಯಾಗಿ ಸಾಹಸಿಗರೆನಿಸಿಕೊಳ್ಳಿ! ಹೇಡಿತನವೂ ಸಾಹಸವೇ ಎಂದು ತರ್ಕಬೇಕಾದರೂ ಮಾಡಿಕೊಳ್ಳಬಹುದು! ಹೆಂಡತಿಗಾಗಿ ಹಂಬಲಿಸಿ ಹಂಬಲಿಸಿ ಕೊನೆಗೆ ಅವಳಿಗೆ ಹೆದರುತ್ತಾ ಹೇಡಿಯಾದೆನಲ್ಲಾ ಎಂದು ವ್ಯಸನಪಟ್ಟುಕೊಳ್ಳುವ ಪ್ರಶ್ನೆಯಿಲ್ಲ. ಯಾಕೆಂದರೆ ಶತ್ರುವಿನ ಪೆಟ್ಟಿಗೆ ಯುದ್ಧದಲ್ಲಿ ಹೆದರಿಕೊಳ್ಳದವರೇ ಇಲ್ಲ.


ಮದುವೆಯಾದ ಓದುಗರೆ, ದಯವಿಟ್ಟು ನನ್ನ ಈ ಕೊರೆತವನ್ನು ಕ್ಷಮಿಸಿ. ಯಾಕೆಂದರೆ ಹೆಂಡತಿಯ ಕುರಿತು ಅಧಿಕೃತವಾಗಿ 'ಇದಮಿತ್ಥಂ' ಎನ್ನಲು ನನಗೆ ಅಧಿಕಾರವಿಲ್ಲ. ಮದುವೆಯಾದ ಮೇಲೆ ಹೆಂಡತಿಯ ಕುರಿತು ಹೀಗೆಲ್ಲಾ ಬರೆಯಲು ಅವಳು ಬಿಡಲಾರಳೆಂಬ ದೂರದೃಷ್ಟಿಯಿಂದ ಈಗ ಏನೇನೋ ಗೀಚಿದ್ದಾನೆ ಭೂಪ ಎಂದು ನೀವಂದುಕೊಂಡರೆ ಪರವಾಗಿಲ್ಲ- ನಿಮ್ಮ ಯೋಚನಾ ಸ್ವಾತಂತ್ರ್ಯಕ್ಕೆ ನಾನು ಧಕ್ಕೆ ತರಲಾರೆ.

ಹೆದರಿಸುವವಳು ಹೆಂಡತಿ, ಹಾಗಿದ್ದಲ್ಲಿ ಅವಳಿಗಿದು ಹೆಮ್ಮೆ ತರುವ ವಿಚಾರವೋ? ಹೌದೆಂದು ನನಗನಿಸುವುದಿಲ್ಲ. 'ನನ್ನ ಗಂಡ ನನಗೆ ಹೆದರುತ್ತಾನೆ' ಎಂದು ಯಾವ ಹೆಂಡತಿಯೂ ಡಂಗುರ ಸಾರುವುದಿಲ್ಲ- (ಹಾಗಾಗಿಯೇ ಗಂಡನ ಮಾನ ಉಳಿಯಿತು?) ಹಾಗೆ ಹೇಳಿದಳಾದರೆ ''ಎಂಥಾ ಗಂಡಸಯ್ಯ ಅವನು' ಎಂದು ಮೂದಲಿಸುವವರಿಗೇನು ಕೊರತೆ ನಮ್ಮಲ್ಲಿ? ಯಾರೋ ಕೆಲವು ಪ್ರಾಮಾಣಿಕ ಗಂಡಂದಿರು 'ನಾವು ಹೆಂಡಂದಿರಿಗೆ ಹೆದರುತ್ತೇವೆ' ಎಂದಾರು, ಆದರೆ ಅವರ ಹೆಂಡಂದಿರು 'ನಾವು ಹೆದರಿಸುವುದು ಹೌದು! ಎಂದು ಒಪ್ಪಿಕೊಳ್ಳಲಾರರು. ಇರಲಿ, ಹೆದರಿದರೂ ಅವರವರ ಹೆಂಡತಿಯರಿಗೆ ತಾನೆ ಎಂದು ಸಮಾಧಾನಪಟ್ಟುಕೊಳ್ಳುವುದೇ ಬುದ್ಧಿವಂತಿಕೆಯಲ್ಲವೆ?

ಒಂದನೇ ಹೆಂಡತಿ ತೀರಿ ಹೋಗಿ ಎರಡನೆ ಹೆಂಡತಿಯನ್ನು ಮದುವೆಯಾದವರು 'ನೀನೇನೋ ಒದರುತ್ತಿರುವುದು?' ಎಂದು ನನ್ನನ್ನು ದಬಾಯಿಸಿಯಾರು. ಹಾಗಿದ್ದರೆ ಇವರು ಮೊದಲನೇ ಹೆಂಡತಿಗೆ ಹೆದರುತ್ತಿರಲಿಲ್ಲ ಎಂದರ್ಥವೋ? ಖಂಡಿತ ಅಲ್ಲ. ಮೊದಲನೆ ಹೆಂಡತಿಗೆ ಹೆದರಿ ಹೆದರಿ ಅಭ್ಯಾಸವಾಗಿ ಅವರಿಗೆ ಅವರನ್ನು ಹೆದರಿಸಲು ಓರ್ವ ಹೆಂಡತಿ ಬೇಕೇ ಬೇಕು. ಅವರು ಹೆಂಡತಿಗೆ ಹೆದರುವುದರಲ್ಲೇ ಜೀವನ ರಹಸ್ಯವನ್ನು ಕಂಡುಕೊಂಡವರು. ಹೆಂಡತಿ ಹೆದರಿಸುತ್ತಾಳೆಂದ ಮಾತ್ರಕ್ಕೆ ಆಕೆ ಕೆಟ್ಟವಳೆ? ಅಲ್ಲ ಸ್ವಾಮಿ, ಪತಿ ಹಿತಕ್ಕಾಗಿ ವಿಧಿಯಿಲ್ಲದೆ ಹೆದರಿಸುವ ಕಾಯಕ ಅವಳದು!

ಮದುವೆಯಾದ ಗಂಡಸರನ್ನು ಈ ಪತ್ನಿಯರಿಂದ ರಕ್ಷಿಸೋ ಪ್ರಭು ಎಂದು ದೇವರಲ್ಲಿ ಬೇಡುವ ಹಾಗೂ ಇಲ್ಲ, ಯಾಕೆಂದರೆ ದೇವರು ವರವನ್ನನುಗ್ರಹಿಸಬೇಕಾದರೆ ಆತನಿಗೆ ಪತ್ನಿಯ ಅನುಮತಿ ಅವಶ್ಯಕವಾಗಿರಬಹುದು! (ದೇವನ ಪತ್ನಿ ತನ್ನ ಹಕ್ಕನ್ನು ಸುಲಭವಾಗಿ ಕಳೆದುಕೊಳ್ಳಲಾರಳು) ಅಲ್ಲದೆ 'Marriages are made in heaven' ಅಲ್ಲವೆ? ದೇವತೆಗಳೇ ನಿರ್ಧರಿಸಿದ ಮದುವೆ, ಹಾಗಿದ್ದ ಮೇಲೆ ದೇವ ಪತ್ನಿಯರ ಕೈವಾಡದಿಂದಲೇ ಪತಿಯು ಪತ್ನಿಗೆ ಹೆದರಿ ನಡೆಯುವುದೆಂಬುದಕ್ಕೆ ಬೇರೆ ಸಾಕ್ಷಿ ಬೇಕೆ? ಆದ್ದರಿಂದ ಪತಿಯಾದವನು ಪತ್ನಿಗೆ ಹೆದರಿಕೊಂಡಿರಬೇಕೆಂಬುದೇ ದಂಪತಿ ಮೀಮಾಂಸೆಯೋ ಏನೋ ಹಸಿವಾದಾಗ ಊಟ ಮಾಡುವಂತೆ ಹೆಂಡತಿಯೆನ್ನುವಾಗ ಹೆದರುವುದು ಗಂಡನಾದವನ ಒಂದು routine work!





ಪಾರಾಂಗನೆಯಾಗಿದ್ದ ಅವಳು
ವೀರಾಂಗನೆಯಾಗಿ ಪರಿವರ್ತನಗೊಂಡಳು

ಅಜೀಜನ್

ಮೂಲ : ಕುಸುಮಲತಾ ಮೇಘವಾಲ್

ಅನುವಾದ : ಎಸ್.ವಿಶ್ವನಾಥ

('ಜಾಹ್ನವೀ' ಕೃಪೆಯಿಂದ)

1857 ಜುಲೈ 17. ಕಾನ್‌ಪುರದ ಮೇಲೆ ಮತ್ತೆ ಆಂಗ್ಲರ ಆಧಿಪತ್ಯ ಪ್ರಾರಂಭವಾಯಿತು. ವಿಜಯದ ಅಟ್ಟಹಾಸದಿಂದ ಹಾಗೂ ಸೇಡಿನ ಕುದಿಯಿಂದ ಉಕ್ಕುತ್ತಿದ್ದ ಕ್ರೂರ ಆಂಗ್ಲ ಸೇನಾಪತಿ ಹ್ಯಾವ್‌ಲಕ್ ಹಗೆ ತೀರಿಸಿಕೊಳ್ಳಲು ತನ್ನ ಸೈನ್ಯಕ್ಕೆ ಆಜ್ಞೆಯಿತ್ತ; ಕಾನ್‌ಪುರ ನಗರವನ್ನು ಲೂಟಿ ಮಾಡಿ ಕಾದಾಡಲು ಸೈನ್ಯಕ್ಕೆ ಹೇಳಿದ. ಆ ದಿನ ಕಾನ್‌ಪುರದ ಗಲ್ಲಿಗಲ್ಲಿಗಳಲ್ಲಿ ಅತ್ಯಾಚಾರದ ಕ್ರೂರ ಕರಾಳ ರೂಪ ತಾಂಡವವಾಡಿತು.

ಮಾರನೆ ದಿವಸ ಆತ ಯುದ್ಧ ಬಂಧಿಗಳ ಭವಿಷ್ಯವನ್ನು ನಿರ್ಣಯಿಸಿದ. ಆತ ಪ್ರತಿಯೊಬ್ಬ ಕ್ರಾಂತಿಕಾರಿಯನ್ನೂ ಗುಂಡು ಹಾರಿಸಿ ಕೊಲ್ಲಿಸುತ್ತಿದ್ದ. ಆಗ ಅವನ ಸಮ್ಮುಖದಲ್ಲಿ ಸುಂದರ ಯುವತಿಯೊಬ್ಬಳನ್ನು ಕರೆ ತಂದು ನಿಲ್ಲಿಸಲಾಯತು.

''ಈಕೆ ಆಂಗ್ಲರನ್ನು ಮತ್ತು ಅವರ ಹೆಂಡಿರು ಮಕ್ಕಳನ್ನು ಬಂಧಿಸಿ ವಧೆ ಮಾಡಿಸಿದವಳು,'' ಎಂದು ಹೇಳಲಾಯಿತು. ಆದರೆ ಆ ಸೇನಾಧಿಪತಿಗೆ ಈ ಮಾತು ಕೇಳಿ ನಂಬಿಕೆ ಬರಲಿಲ್ಲ! ಇಷ್ಟು ಸುಂದರಳಾದ ತರುಣಿ ಇಂಥಾ ಕ್ರೂರ ಕೆಲಸವನ್ನು ಮಾಡುತ್ತಾಳೆಯೇ?! ಪಾಷಾಣ ಹೃದಯದ ಜನರಲ್ ಹ್ಯಾವ್ ಲಕ್ ಈ ಸುಂದರಿಯನ್ನು ನೋಡಿ ಬೆವರಿದ! ಆತ ಆ ಕೈದಿಯೊಡನೆ, ''ನೀನು ನಿನ್ನ ಅಪರಾಧಗಳಿಗೆ ನನ್ನಲ್ಲಿ ಕ್ಷಮೆ ಯಾಚಿಸಿದರೆ, ನೀನು ಮೃತ್ಯು ದಂಡವನ್ನು ತಪ್ಪಿಸಿಕೊಳ್ಳಬಹುದು,'' ಎಂದು ಹೇಳಿದ.

ಬ್ರಿಟಿಶ್ ಸೇನಾಪತಿಯ ಈ ಮಾತು ಕೇಳಿ ಆ ಸುಂದರ ಮುಖದ ಮೇಲೆ ನಸುನಗೆ ಮೂಡಿತು. ಅವಳು, ''ನಾನು ಅತ್ಯಾಚಾರಿ ಕೊಲೆಗಡುಕನಿಂದ ಕ್ಷಮೆ ಕೇಳುವುದಿಲ್ಲ. ನಾನು ಅತ್ಯಾಚಾರಿಗೆ ಶಿಕ್ಷೆ ವಿಧಿಸುವುದನ್ನು ಕಲಿತಿದ್ದೇನೆಯೇ ಹೊರತು ಅವನಿಂದ ಕ್ಷಮೆ ಯಾಚಿಸುವುದನ್ನಲ್ಲ!'' ಎಂದು ಗುಡುಗಿದಳು.

ಆ ಸಾಹಸಿ ಸ್ತ್ರೀಯ ಈ ನಿರ್ಭೀತ ನುಡಿಗಳನ್ನು ಕೇಳಿ ಹ್ಯಾವ್‌ಲಕ್ ಕ್ರೋಧದಿಂದ ನಡುಗಲಾರಂಭಿಸಿದ.

''ನೀವು ಆಂಗ್ಲ ಜನರೊಡನೆ ನಡೆಸಿದ ವ್ಯವಹಾರ ಅತ್ಯಾಚಾರವಲ್ಲವೇ?'' ಎಂದಾತ ಅವಳನ್ನು ಕೇಳಿದ.

''ನೀವು ಅತ್ಯಾಚಾರದ ಸೇಡು ತೀರಿಸಿಕೊಳ್ಳುವುದನ್ನಷ್ಟೇ ಕಲಿತಿದ್ದೀರಿ. ಆ ನರಪಶು ಜನರಲ್ ನೀಲ್ ಭಾರತೀಯರ ಮೇಲೆ ನಡೆಸಿದ ಅತ್ಯಾಚಾರಕ್ಕೆ ಕಾನ್‌ಪುರದಲ್ಲಿ ಹಗೆ ತೀರಿಸಿಕೊಂಡಿರಿ.''

''ನೀನು ಇಚ್ಛಿಸುವುದೇನು?'' ಆತ ಕೇಳಿದ.

''ಆಂಗ್ಲರ ದುಶ್ಶಾಸನದ ಅಂತ್ಯ.''

ಈ ಮಾತನ್ನು ಕೇಳಿ ಜನರಲ್ ಹ್ಯಾವ್ ಲಕ್‌ನ ಕ್ರೋಧದ ಸೀಮೆ ಮೀರಿತು. ಅವನು ಸಂಕೇತ ನೀಡಿದ ತಕ್ಷಣ ಸೈನಿಕರ ಬಂದೂಕುಗಳು ಘರ್ಜಿಸಿದವು. ಗುಂಡುಗಳು ಆ ಸುಂದರ ದೇಹದಲ್ಲಿ ಜರಡಿಯಂತೆ ರಂಧ್ರ ಕೊರೆದವು. ಅವಳ ನಿರ್ಜೀವ ದೇಹ ಭೂತಾಯಿಯನ್ನಪ್ಪಿತು. ಆದರೂ ಅವಳ ಮುಖದ ಮೇಲಿನ ನಗೆ ಹೇಗಿತ್ತೋ ಹಾಗೆಯೇ ಮಾಸದೆ ಉಳಿದಿತ್ತು.

ಈ ಸುಂದರಿ ಕಾನ್‌ಪುರದ ಒಬ್ಬ ಸಾಧಾರಣ ವೇಶ್ಯೆಯಾಗಿದ್ದಳು. ಹೆಸರು: ಅಜೀಜನ್. ರೂಪದ ಬಜಾರಿನಲ್ಲಿ ಕುಳಿತಿದ್ದ ಈ ನಾರಿ ಕೂಡ ಕೊನೆಯವರೆಗೂ ನಾರಿಯಾಗಿಯೇ ಉಳಿದಳು. ನಾರೀ ಹೃದಯದ ಸಹಜ ಆಕಾಂಕ್ಷೆಗಳೂ ಅವಳ ಈ ನರಕ ಜೀವನದಲ್ಲಿ ಹಿಂಗಿರಲಿಲ್ಲ. ಅದೊಂದು ದಿನ ಅವಳೂ ತನ್ನ ಹೃದಯವನ್ನು ಬೇರೆಯವರಿಗೆ ನೀಡಿದ್ದಳು! ಸ್ವಭಾವದಿಂದ ಆಕೆ ಶೌರ್ಯದ ಪೂಜಕಳಾಗಿದ್ದುದರಿಂದ ಅವಳ ಪ್ರೇಮಪಾತ್ರ ವ್ಯಕ್ತಿಯೂ ವೀರನೇ ಆಗಿದ್ದ.

ಅಜೀಜನ್ ಯಾರಿಗೆ ತನ್ನ ಹೃದಯವನ್ನರ್ಪಿಸಿದ್ದಳೋ, ಯಾರಿಗೆ ಸೋತಿದ್ದಳೋ ಆ ವ್ಯಕ್ತಿ ಕ್ರಾಂತಿವೀರ ನಾನಾಸಾಹೇಬ್ ಪೇಶ್ವೆಯ ಬಲಗೈಯಾಗಿದ್ದ. ಹೆಸರು: ಅಜೀಮುಲ್ಲಾ. ಶೌರ್ಯ ಮತ್ತು ಪ್ರತಿಭೆಗಳು ಏಕೀಭವಿಸಿದ್ದ ಈ ದೇಶ ಭಕ್ತ ನಿರ್ಧನ ಕುಟುಂಬದಲ್ಲಿ ಜನಿಸಿಯೂ, ತನ್ನ ಸ್ವಂತ ಬಲದಿಂದ ನಾನಾಸಾಹೇಬನ ಬಲಗೈ ಆಗುವವರೆಗೂ ಮುಂದೆ ಬಂದಿದ್ದ. ಅಜೀಮುಲ್ಲಾನಿಗೆ ತನ್ನ ಮಾತೃಭೂಮಿಯ ಮೇಲೆ ಅಸೀಮ ಪ್ರೇಮ. ಹಾಗಾಗಿ ಆತ ಕ್ರಾಂತಿಕಾರಿ ಅಜೀಜನ್‌ಳಿಗೆ, ಹೃದಯದ ಯಾವ ಕೋಣೆಯಲ್ಲಿ ಸ್ಥಾನ ನೀಡಲು ಸಾಧ್ಯ?! ಆದರೆ ಅಜೀಜನ್‌ಳ ಪ್ರೇಮವೂ ಉಚ್ಚಸ್ತರದ್ದೇ. ಅವಳೂ ತನ್ನ ಮಾತೃಭೂಮಿಯ ಋಣ ತೀರಿಸುವ ಹೊಣೆ ಹೊತ್ತಳು.

ಕಾಲ ಕಳೆದಂತೆ ಹತ್ತಿಕ್ಕಿದ ಸ್ವಾತಂತ್ರ್ಯ ಪ್ರೇಮದ ಕೆಂಡ ದಾವಾನಲವಾಗಿ 1857ರ ಕ್ರಾಂತಿ ರೂಪ ತಾಳಿ ಸ್ಫೋಟಿಸಿತು. ಕಾನ್‌ಪುರ ಈ ಕ್ರಾಂತಿಯ ಪ್ರಮುಖ ಕೇಂದ್ರವಾಯಿತು. ಇಂಥ ಅವಕಾಶ ಮತ್ತೆ ಸಿಗುವುದಿಲ್ಲವೆಂದು ಅಜೀಜನ್ ಭಾವಿಸಿದಳು. ರೂಪದ ಅಂಗಡಿಯಲ್ಲಿ ಕುಳಿತು ಸತೀತ್ವದ (ಪಾವಿತ್ರ್ಯದ) ವ್ಯಾಪಾರ ಮಾಡುವ ಈ ವಿಪರ್ಯಾಸದಿಂದ ರಕ್ಷಣೆ ಹೊಂದಲು, ನರಜನ್ಮದ ಸಾರ್ಥಕತೆ ಮಾಡಿಕೊಳ್ಳಲು ಇದೇ ಕೊನೆಯ ಅವಕಾಶವಾಗಿತ್ತು ಅವಳಿಗೆ. ಜೊತೆಗೆ ತನ್ನ ಪ್ರೇಮಿಯ ಹೃದಯವನ್ನು ಈ ರೀತಿ ಗೆಲ್ಲಬಹುದಾಗಿತ್ತು ಆಕೆ. ಹಾಗಾಗಿ ಅವಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮ್ಮಿಕ್ಕಿದಳು.

ಸ್ವಾತಂತ್ರ್ಯದ ಈ ಸಂಗ್ರಾಮವನ್ನು ಸರಿಯಾಗಿಯೇ ನಿಯೋಜಿಸಲಾಗಿತ್ತು. ಯೋಜನೆಯ ಮೇರೆಗೆ, ಮೇ 31ರಂದು ಒಮ್ಮೆಲೇ ಉತ್ತರ ಭಾರತದಲ್ಲಿ ಪೂರ್ತಿ ವಿದ್ರೋಹ ಸ್ಫೋಟಗೊಂಡರೆ ಸಫಲತೆ ಗಳಿಸುವುದು ನಿಶ್ಚಯವಾಗಿತ್ತು. ಆದರೆ ಮೀರಠ್‌ನಲ್ಲಾದ ಸೈನಿಕ ವಿದ್ರೋಹ, ಸಮಯಕ್ಕೆ ಮೊದಲೇ ಕ್ರಾಂತಿ ಪ್ರಜ್ವಲಿಸುವಂತೆ ಮಾಡಿತು. ಇದರಿಂದಾಗಿ ಆಂಗ್ಲರು ಚೇತರಿಸಿಕೊಳ್ಳಲು ಅವಕಾಶವಾಯಿತು. ಅಸಫಲವಾದರೂ ಈ ವಿದ್ರೋಹ ಆಂಗ್ಲರ ಶಾಸನದ ನಾವೆಯನ್ನು ಅಲುಗಾಡಿಸಿತ್ತು.

1857ರ ಜೂನ್ 4ರಂದು ಕಾನ್‌ಪುರದಲ್ಲಿ ಕ್ರಾಂತಿಯ ಜ್ವಾಲಾಮುಖಿ ಸ್ಫೋಟಿಸಿತು. ನೋಡ ನೋಡುತ್ತಿದ್ದಂತೆಯೇ ಕಾನ್‌ಪುರದಲ್ಲಿ ಕ್ರಾಂತಿಕಾರಿಗಳ ಆಧಿಪತ್ಯ ಆರಂಭವಾಯಿತು. ನಾನಾಸಾಹೇಬ್ ಅಲ್ಲಿಯ ಪೇಶ್ವೆಯಾದ; ಅಜೀಮುಲ್ಲಾ ಆತನ ಮಂತ್ರಿಯಾದ. ಈ ದಿನದಿಂದ

1857ರ ಜುಲೈ 17ರ ಅವಧಿಯವರೆಗೆ ಕಾನ್‌ಪುರದ ಮೇಲೆ ಕ್ರಾಂತಿಕಾರಿಗಳ ಆಧಿಪತ್ಯ ನಡೆಯಿತು. ಅಜೀಜನ್ ಈ ಸಂಗ್ರಾಮದ ಮಹಿಳೆಯರ ಘಟಕದ ಮುಂದಾಳಾಗಿದ್ದಳು. ತಬಲಾದ ತಾಳಕ್ಕೆ ತಕ್ಕಂತೆ ಕಾಲ್ಗೆಜ್ಜೆಗಳನ್ನು ಕುಣಿಸುತ್ತಿದ್ದ ಅಜೀಜನ್‌ಳ ದೇಹ ಈಗ ಕಾಯಕಲ್ಪಗೊಂಡಂತಿತ್ತು; ಅವಳು ಮಿಂಚಾಗಿ ಎಲ್ಲ ದಿಕ್ಕಿನಲ್ಲಿಯೂ ಪ್ರಜ್ವಲಿಸುತ್ತಿದ್ದಳು.

ಅವಳು ಹೆಂಗಸರ ಒಂದು ದಳವನ್ನು ಸಂಘಟಿಸಿದಳು. ಈ ಮಹಿಳಾದಳ ಪುರುಷ ವೇಷ ಧಾರಣೆ ಮಾಡಿ ಕೈಯಲ್ಲಿ ಕತ್ತಿ ಹಿರಿದು ಹೊರಟರೆ ಜನರಲ್ಲಿ ಹೊಸ ಹುರುಪು ಉತ್ಸಾಹ ಆವೇಶ ಉತ್ಪನ್ನವಾಗುತ್ತಿತ್ತು! ಈ ಮಹಿಳೆ ದಳಕ್ಕೆ ಆಜ್ಞೆ ನೀಡುವ ಹೊಣೆಯನ್ನು ಅಜೀಜನ್ ವಹಿಸಿಕೊಂಡಿದ್ದಳು. ಗುಂಡು-ಸಿಡಿಮದ್ದುಗಳನ್ನು ಸೈನಿಕರವರೆಗೆ ತಲುಪಿಸುವುದು; ಅವರಿಗೆ ವಿಶ್ರಾಂತಿ ನೀಡುವುದು, ಅವರಿಗೆ ಊಟ ಮಾಡಿಸುವುದು, ಖಾದ್ಯ ಸಾಮಗ್ರಿಗಳನ್ನು ಸಂಗ್ರಹಿಸುವುದು ಇತ್ಯಾದಿ ಎರಡನೆ ರಕ್ಷಣಾ ಕೋಟೆಯ ಕಾರ್ಯಾಚರಣೆ ಮಾಡುತ್ತ ಸಮಯ ಬಂದರೆ ಸೈನ್ಯದ ಮುಂಚೂಣಿಯಲ್ಲಿ ಈ ದಳ ಕಾದಾಡುತ್ತಿತ್ತು.

ಕಾನ್‌ಪುರದ ಮೇಲೆ ಪುನಃ ಆಧಿಪತ್ಯ ಮಾಡಲು ಆಂಗ್ಲರು ಹೆಚ್ಚು ಗಮನ ನೀಡಿದರು. ಜನರಲ್ ನೀಲ್‌ನ ಅತ್ಯಾಚಾರದ ಸಮಾಚಾರ ಕಾನ್‌ಪುರವನ್ನು ತಲುಪಿದಾಗ ಹಗೆತನದ ಬೆಂಕಿಯಲ್ಲಿ ಉರಿಯುತ್ತಿದ್ದ ಅಜೀಜನ್ ಆಂಗ್ಲರ ಹೆಂಗಸರು ಮಕ್ಕಳ ವಧೆಗೆ ಆಜ್ಞೆ ನೀಡಿದಳು. ಹೀಗೆ ಮಾಡುವುದರಿಂದ ಆಂಗ್ಲರು ಅತ್ಯಾಚಾರವನ್ನು ತ್ಯಜಿಸಬಹುದು ಎಂದು ಈಕೆ ಹೀಗೆ ಆಜ್ಞೆ ನೀಡಿದ್ದಳು. ಹೀಗೆ ಮಾಡುವುದರಿಂದ ಆಂಗ್ಲರ ಅತ್ಯಾಚಾರದ ಸೇಡು ತೀರಿಸಿಕೊಂಡಂತೆಯೂ ಆಗುತ್ತದೆಂದು ಆಕೆ ಭಾವಿಸಿದ್ದಳು.

ಜನರಲ್ ಹ್ಯಾವ್‌ಲಕ್‌ನೊಡನೆ ನಡೆದ ಅಂತಿಮ ನಿರ್ಣಾಯಕ ಯುದ್ಧದಲ್ಲಿ ಅವಳು ಪೂರ್ಣ ಶೌರ್ಯದಿಂದ ಕಾದಾಡಿದ್ದಳು. ದೌರ್ಭಾಗ್ಯದಿಂದ ಕೊನೆಯಲ್ಲಿ ಆಕೆ ಸೆರೆ ಹಿಡಿಯಲ್ಪಟ್ಟಳು. ಗೆದ್ದ ಹ್ಯಾವ್ ಲಕ್ ಅವಳ ದರ್ಪದೆದುರು ಪರಾಜಿತನಾಗಿ, ಮೃತ್ಯು ದಂಡ ವಿಧಿಸಬೇಕಾಯಿತು. ಜಾಗೃತ ನಾರಿಯ ಪ್ರತೀಕವಾಗಿ ಅವಳು ಇತಿಹಾಸದ ಪುಟಗಳಲ್ಲಿ ಅಮರಳಾಗಿದ್ದಾಳೆ! ●

ಏಕ ವಾಕ್ಯದ ಬೃಹತ್ ಕಾದಂಬರಿ!

ಎಷ್ಟೇ ಸಾಲುಗಳು ಇದ್ದರೂ ಕೊನೆಗೆ ಒಂದು ಪೂರ್ಣ ವಿರಾಮ ಚಿಹ್ನೆ ಇದ್ದೇ ಇರಬೇಕು. ಹಾಗೆ ಫುಲ್‌ಸ್ಟಾಪ್ ಇದ್ದಾಗಲೇ ವಾಕ್ಯ, ಭಾವ, ಸರಳವಾಗಿ ಅರ್ಥವಾಗುವುದು, ಆದರೆ ಫುಲ್ ಸ್ಟಾಪೇ ಇಲ್ಲದ ಪುಸ್ತಕ ಇದೆಯೆಂದರೆ ಆಶ್ಚರ್ಯವಾಗಬಹುದು! ಫುಲ್‌ಸ್ಟಾಪೇ ಇಲ್ಲದ ಪುಸ್ತಕ ಬರೆದ ಗೌರವ ಜಾರ್ಜ್ ಆಂಡ್ರೋಕ್‌ಗೆ ಸಲ್ಲುತ್ತದೆ. ಆತ, ತಾನು ಬರೆದ ಎಲ್ಲಾ ಕಾದಂಬರಿಗಳಿಗಿಂತ ಒಂದು ಭಿನ್ನವಾದ ಕಾದಂಬರಿ ರಚಿಸಬೇಕೆಂದು ನಿಶ್ಚಯಿಸಿ ಸತತವಾಗಿ ಎರಡು ವರ್ಷಗಳ ದೀರ್ಘ ಸಾಹಿತ್ಯ ಕೃಷಿಯಿಂದ 'ದಿ ಗೇಟ್ಸ್ ಆಫ್ ಪ್ಯಾರಡೈಸ್' ಎಂಬ ಫುಲ್‌ಸ್ಟಾಪೇ ಇಲ್ಲದ ಕಾದಂಬರಿಯನ್ನು ರಚಿಸಿದ. 40 ಸಾವಿರ ಪದಗಳಿರುವ ಈ ಪುಸ್ತಕದಲ್ಲಿ ಆರಂಭದಿಂದ ಅಂತ್ಯದವರೆಗೂ ಅಲ್ಪವಿರಾಮ ಚಿಹ್ನೆಯಾಗಲಿ, ಫುಲ್‌ಸ್ಟಾಪ್ ಆಗಲಿ ಎಲ್ಲೂ ಇಲ್ಲ. ಇದೇ ರೀತಿ ನಮ್ಮ ಭಾರತೀಯ ಸಾಹಿತಿಗಳಲ್ಲಿ ಇಂಥ ಒಬ್ಬರು ಇದ್ದಾರೆ. ಅವರು ಬಂಗಾಳಿಯ ಸುಪ್ರಸಿದ್ಧ ಲೇಖಕರಾದ ಕಮಕುಮಾರ್. ಅವರು ಬರೆದ 'ಸುಹಾಸಿನ್ ಫಾಮೆಟೋನ್' ಇದೇ ರೀತಿ ಫುಲ್‌ಸ್ಟಾಪ್, ವಿರಾಮ ಚಿಹ್ನೆ ರಹಿತ ಪುಸ್ತಕ.

● ಸಂಗ್ರಹ : ಜಿ.ವಿ.ಪ್ರಭು

‘ಮೂಡ್’ ನಂಬಿ ಕೆಡಬೇಡಿ



- ಆರ್.ವಿ.ಕಟ್ಟೀಮನಿ, ತಡಕಲ್

“ಮನಸಿದು ಹಕ್ಕಿಯ ಗೂಡು.”

“ಇದರೊಳಗೇನಿದೆ ನೋಡು .....”

ಹೌದು. ಮನಸ್ಸೆನ್ನುವುದು ಜಟಿಲವಾದ ಗೂಡಿದ್ದಂತೆ. ಮನಸ್ಸಿಗೆ ಸಂಬಂಧಿಸಿದಂತೆ ಎಷ್ಟೆಲ್ಲಾ ಸಂಕೀರ್ಣ ವಿಷಯಗಳಿವೆ?! ಅವುಗಳಲ್ಲಿ ‘ಮೂಡ್’ (mood) ಒಂದು.

‘ಛೆ! ಇವತ್ತು ನನ್ನ ಮೂಡ್ ಏ ಸರಿಯಾಗಿಲ್ಲ’; ‘ಥತ್! ಎಷ್ಟು ಒಳ್ಳೇ ಮೂಡ್ ಹಾಳಾಗ್ಹೋಯ್ತು!; ‘ಅಯ್ಯೋ, ಓದೋದಿಕ್ಕೆ ಮೂಡ್ ಏ ಬರ್ತಾ ಇಲ್ಲ’ ಎಂಬೆಲ್ಲಾ ಮಾತುಗಳನ್ನು ನೀವು ಕೇಳಿರಬಹುದು. ಈ ‘ಮೂಡ್’ಗೆ ಮನೋಭಾವ ಎಂದು ಸ್ಥೂಲವಾಗಿ ಹೆಸರಿಸಬಹುದು. ‘ಲಹರಿ’ ಎಂತಲೂ ಹೇಳಬಹುದು.

ಪ್ರತಿಯೊಂದು ಚಿಕ್ಕ ಕೆಲಸಕ್ಕೂ ‘ಮೂಡ್’ ಇಲ್ಲಾಂತ ಹೇಳೋದು ಇತ್ತೀಚೆಗೆ ರೂಢಿಯಾಗಿಬಿಟ್ಟಿದೆ. ಯಾವಾಗಲೋ ಒಂದು ಬಾರಿ ‘ಮೂಡ್’ ಹಾಳಾದರೆ ಏನೂ ಪರವಾಗಿಲ್ಲ. ಆದರೆ, ಆಗಾಗ ಹೀಗೆ ನಡೆಯುತ್ತಿದ್ದರೆ ಮಾತ್ರ, ಅದು ಆಲೋಚನೆ ಮಾಡಬೇಕಾದ ವಿಷಯವೇ. ‘ಮೂಡ್’ ಇರುವುದು, ಹಾಳಾಗುವುದು ಹೆಚ್ಚಾಗಿ ನಮ್ಮ ಕೈಯಲ್ಲೇ ಇದೆ. ‘ಮೂಡ್’ ತಂದುಕೊಳ್ಳುವುದು ನಮಗೆ ಅಸಾಧ್ಯವಾದ ಕೆಲಸವೇನಲ್ಲ.

ಮೂಡ್ ಹಾಳಾದರೆ ಮಾನಸಿಕ ಸ್ಥಿರತೆ ಚದುರಿಹೋಗುತ್ತದೆ. ಮನಸ್ಸು ಅನಾರೋಗ್ಯಕ್ಕೆ ಗುರಿಯಾಗುತ್ತದೆ. ಇದರ ಪ್ರಭಾವ ಶಾರೀರಿಕ ಕ್ರಿಯೆಗಳ ಮೇಲಾಗುತ್ತದೆ. ಜೀರ್ಣಶಕ್ತಿ ಕ್ಷೀಣಿಸುತ್ತದೆ. ಅನ್ನ ಅರಗುವುದಿಲ್ಲ. ಹುಳಿದೇಗುಗಳು. ಶಿಥಿಲತೆ ಉಂಟಾಗುತ್ತದೆ. ಹೆಚ್ಚು ಕಾಲ ಹೀಗೆಯೇ ಮೂಡ್ ಹಾಳಾಗಿದ್ದರೆ ಹೊಟ್ಟೆಯಲ್ಲಿ ಅಲ್ಸರ್ ಉಂಟಾಗುತ್ತದೆ. ಬ್ಲಡ್‌ಪ್ರೆಶರ್ ಏರುತ್ತದೆ.


ಮೂಡ್ ಚೆನ್ನಾಗಿದ್ದರೆ ಮನಸ್ಸು ಆರೋಗ್ಯವಾಗಿ, ಆನಂದವಾಗಿ ಇರುತ್ತದೆ. ಪ್ರಸನ್ನಚಿತ್ತರಿಗೆ ಮೂಡ್ ಯಾವಾಗಲೂ ಚೆನ್ನಾಗಿರುತ್ತದೆ. ಪ್ರಸನ್ನತೆ ಒಳ್ಳೆಯ ಆರೋಗ್ಯದ ಲಕ್ಷಣ. ಆರೋಗ್ಯ ಚೆನ್ನಾಗಿದ್ದರೆ ಆಲೋಚನೆಗಳು ಚೆನ್ನಾಗಿರುತ್ತವೆ. ಆದ್ದರಿಂದ ಒಳ್ಳೆಯ ಮೂಡ್ ಗೋಸ್ಕರ ನಾವು ಪ್ರಯತ್ನಿಸಬೇಕು.

ಮನಸ್ಸಿನ ಮೇಲೆ ಅಧಿಕಾರ :

ಈ ಪ್ರಪಂಚದಲ್ಲಿ ಕಷ್ಟಗಳಿಗೆ ಕೊರತೆಯೇನಿದೆ? ನಮಗೆ ನೋವುಂಟು ಮಾಡುವ ಘಟನೆಗಳು, ಪರಿಸ್ಥಿತಿಗಳು ಎದುರಾಗುತ್ತಲೇ ಇರುತ್ತವೆ. ಸುಖವನ್ನುಂಟು ಮಾಡುವ ಘಟನೆಗಳು ಸದಾ ಬರುವುದಿಲ್ಲ. ನಾವು ಮನಸ್ಸಿನ ಮೇಲೆ ಅಧಿಕಾರ ಹೊಂದಬೇಕು. ಮೂಡ್ ನಮ್ಮ ಮೇಲೆ

ಆಧಾರ ಪಟ್ಟಿರಬೇಕೇ ಹೊರತು ನಾವು ಮೂಡ್‌ನ ಮೇಲೆ ಆಧಾರ ಪಟ್ಟಿರಕೂಡದು.

ಮೂಡ್ ಯಾಕೆ ಕೆಡುತ್ತದೆಂದು ತಿಳಿದುಕೊಂಡ ಹೊರತು ನಾವದನ್ನು ನಿಯಂತ್ರಿಸಲಾರೆವು. ಅಕಸ್ಮಾತ್ತಾಗಿ ಕೆಡುವುದಿಲ್ಲವಲ್ಲ? ಅದಕ್ಕೆ ಏನೋ ಕಾರಣವಿರುತ್ತದೆ. ಆ ಕಾರಣ ತಿಳಿದುಕೊಂಡು ಸರಿಯಾದ ಉಪಶಮನ ಮಾಡದಿದ್ದರೆ ಅದು ನಮ್ಮ ಮೇಲೆ ಸವಾರಿ ಮಾಡುತ್ತದೆ. ಮೂಡ್ ಹಾಳಾಗುವುದು ನಮಗೆ ರೂಢಿಯಾದರೆ, ಆಗ ಕಷ್ಟ ಮತ್ತಷ್ಟು ಜಾಸ್ತಿಯಾಗುತ್ತದೆ. ಅದರಿಂದ ಮುಖ ಕಾಂತಿ ಕಳೆದುಕೊಳ್ಳುವುದು, ಕಣ್ಣುಗಳು ಒಳಕ್ಕಿಳಿಯುವುದು, ಬಲಹೀನತೆ, ಯಾರೊಂದಿಗೂ ಮಾತಾಡಬೇಕೆಂದೆನ್ನಿಸದಿರುವುದು ಮುಂತಾದ ಲಕ್ಷಣಗಳು ಉಂಟಾಗುತ್ತವೆ.



ಹಾಕಿಕೊಳ್ಳಬೇಕಾದ ಪ್ರಶ್ನೆಗಳು :

ಪ್ರತಿಯೊಬ್ಬರಿಗೂ ಅವರವೇ ಸ್ವಭಾವಗಳಿರುತ್ತವೆ, ಮಾನಸಿಕ ಸ್ಥಿತಿಗತಿಗಳಿರುತ್ತವೆ. ಋತುಗಳು ಬದಲಾದಂತೆ, ಇವು ಬದಲಾಗುತ್ತಿರುತ್ತವೆ. ನಾವು ಸುಖವಾಗಿರಬೇಕೆಂದರೆ ಯಶಸ್ಸು ಗಳಿಸಬೇಕೆಂದರೆ ನಾವು ಮೂಡ್ ಅನ್ನು ಜಯಿಸಬೇಕು. ಮೂಡ್ ಕೆಟ್ಟು ಹೋದೊಡನೇ ನಾವು ಶಾಂತವಾಗಿ ಆಲೋಚಿಸಬೇಕು. 'ನಾವ್ಯಾಕೆ ಅಶಾಂತಿಯಿಂದಿದ್ದೇವೆ? ಇತರರು ಕೋಪಿಸಿದ್ದರಿಂದ ನಮಗೆ ಬಾಧೆಯುಂಟಾಗಿದೆಯೆ? ನಮಗಿಷ್ಟವಿಲ್ಲದ ಕೆಲಸ ಮಾಡುತ್ತಿರುವೆವೆ? ಏನು ಮಾಡಬೇಕೆಂದು ತಿಳಿಯದ ಪರಿಸ್ಥಿತಿಯಲ್ಲಿದ್ದೇವೆಯೇ? ಯಾರ ಮೇಲಾದರೂ ನಮಗೆ ಕೋಪವಿದೆಯೇ? ಇತರರಲ್ಲಿ ತಪ್ಪು ಹುಡುಕಿದ್ದರಿಂದ ನಮಗೆ ಇಂತಹ ಪರಿಸ್ಥಿತಿ ಉಂಟಾಗಿದೆಯೇ? ಇತರರನ್ನು ಸಂಸ್ಕರಿಸುವುದರಲ್ಲಿ ನಾವು ವಿಫಲರಾಗಿದ್ದೇವೆಯೇ? ನಾವು ಬದಲಾವಣೆಗೆ ಇಷ್ಟಪಡುತ್ತಿಲ್ಲವೆ?'

ಪ್ರೇಮ, ಗೌರವ ಏನು ಕಳೆದುಕೊಂಡೆವೆಂದು ನಮ್ಮ ಮೂಡ್ ಹಾಳಾಯ್ತು? ನಮ್ಮ ಜೀವನದಲ್ಲಿ ಅವುಗಳ ಮೌಲ್ಯ ಎಷ್ಟು? ನಮಗೆ ನೋವುಂಟು ಮಾಡಿದ ವ್ಯಕ್ತಿಗಳನ್ನು ನೇರವಾಗಿ ಭೇಟಿಯಾಗಿ ಅವರ ವರ್ತನೆ ನಮಗೆ ಹೇಗೆ ನೋವುಂಟು ಮಾಡಿತು ಎಂಬುದನ್ನು ಹೇಳಿದರೆ ಒಂದೊಂದು ಸಲ ಸಮಸ್ಯೆ ಪರಿಹರಿಸಲ್ಪಡಬಹುದು. ಇನ್ನೊಬ್ಬರು ತಮಗೆ ತಿಳಿಯದಂತೆಯೇ ನಮ್ಮೊಂದಿಗೆ ಆ ರೀತಿ ವರ್ತಿಸಿರಬಹುದು. ನಾವು ತಿಳಿ ಹೇಳಿದರೆ ಸುಧಾರಿಸಿಕೊಳ್ಳಬಹುದು, ಕ್ಷಮಿಸೆಂದು ಕೇಳಬಹುದು. ನಮ್ಮ ಸಂಬಂಧಗಳು ಮತ್ತೆ ಮಾಮೂಲಿನಂತಾಗಬಹುದು.

ಸಂಬಂಧಿಸಿದ ವ್ಯಕ್ತಿಗಳೊಂದಿಗಲ್ಲದೆ ಇತರರೊಂದಿಗೆ ಹೇಳುವುದರಿಂದ ಅದಕ್ಕೆ ವಿಪರೀತ ಅರ್ಥಗಳುಂಟಾಗಬಹುದು. ಒಬ್ಬರ ಮೇಲಿನ ಕೋಪವನ್ನು ಮತ್ತೊಬ್ಬರ ಮೇಲೆ ತೋರುವುದಕ್ಕಿಂತ ನೇರವಾಗಿ ಆ ವ್ಯಕ್ತಿಯಿಂದಲೇ ಸ್ಪಷ್ಟೀಕರಣ ಕೋರುವುದೊಳ್ಳೆಯದು.

ಕೋಪ ಹಾನಿಕಾರಕ :

ಕೋಪದಿಂದ ಮೂಡ್ ಹಾಳಾಗುತ್ತದೆ. ಕೋಪ ಬಹುಕಾಲ ಇದ್ದರೆ ಅದು ಆರೋಗ್ಯಕ್ಕೆ ಹಾನಿಕರ. ಕೋಪಿಷ್ಠನೊಂದಿಗೆ ಸಂಪರ್ಕವಿಟ್ಟುಕೊಳ್ಳುವುದಕ್ಕೆ ಯಾರೂ ಇಷ್ಟಪಡುವುದಿಲ್ಲ.

ಕೋಪವನ್ನು ಜಯಿಸಲಾಗದಿರಬಹುದು. ಆದರೆ ಅಕಾರಣವಾಗಿ ಕೋಪ ಬರದಂತೆ ಮಾತ್ರ ನೋಡಿಕೊಳ್ಳಬಹುದು. ಯಾರ ಮೇಲೆ ಎಷ್ಟು ಕೋಪ ಪ್ರದರ್ಶಿಸಬೇಕೆಂಬುದನ್ನು ತಿಳಿದುಕೊಳ್ಳಬೇಕು. ಕೋಪ ತಣಿದ ನಂತರ ತಕ್ಷಣವೇ ಮಾಮೂಲು ಸ್ಥಿತಿಗೆ ಬರಲು ಪ್ರಯತ್ನಿಸಬೇಕು.

ಕಾಲ ಕಳೆದಂತೆಲ್ಲಾ ಕೋಪದ ಕಾರಣಗಳ ಮೇಲೆ ಧೂಳು ಪೇರಿಕೊಂಡು ಅವು ಮತ್ತಷ್ಟು ಬಲಗೊಳ್ಳುತ್ತವೆ.

ಅಪರಾಧ ಭಾವನೆಯಿಂದ ಬಹುಕಾಲ ನಮ್ಮ ಮೂಡ್ ಹಾಳಾಗಿರುತ್ತದೆ. ಕೋಪ ವ್ಯಕ್ತಪಡಿಸಲು ದಾರಿ ಸಿಗದಿದ್ದಾಗ ಅದು ಅಂತರ್ಮುಖಿಯಾಗುತ್ತದೆ. ತನ್ನ ಮೇಲೆ ತನಗೆ ಕೋಪ ಏರ್ಪಟ್ಟಾಗ ಅಪರಾಧ ಭಾವನೆ ಹುಟ್ಟುತ್ತದೆ. ತಪ್ಪು ಮಾಡಿದಾಗ ಒಪ್ಪಿಕೊಂಡರೆ ಅಪರಾಧ ಭಾವನೆ ತೊಲಗುತ್ತದೆ. ಪ್ರತಿಷ್ಠೆಗೆ ಕಟ್ಟುಬೀಳದೆ ನಾವು ನಮ್ಮ ತಪ್ಪುಗಳನ್ನು ಅಂಗೀಕರಿಸಬೇಕು. ಅಪರಾಧ ಭಾವನೆ ಬಹುಕಾಲ ಗೂಡು ಕಟ್ಟಿಕೊಂಡಿದ್ದರೆ ಅದು ನಮ್ಮ ಆರೋಗ್ಯಕ್ಕೆ ತುಂಬಾ ಹಾನಿಕರ. ಆದ್ದರಿಂದ ತಕ್ಷಣವೇ ಒಪ್ಪಿಕೊಳ್ಳುವುದು ಒಳ್ಳೆಯದು.

ಮನಸ್ಸಿಗೆ ಬಲವಂತ ಬೇಡ :

ಕೆಲವೊಂದು ಕೆಲಸಗಳನ್ನು ಬಲವಂತಕ್ಕಾಗಿ ಮಾಡುತ್ತೇವೆ. ಆಗ ನಮ್ಮ ಮೂಡ್ ಹಾಳಾಗುತ್ತದೆ. ಅದಕ್ಕೆ ಉಪಾಯ ಒಂದೇ, ಮನಸ್ಸು ಗಟ್ಟಿ ಮಾಡಿಕೊಂಡು ಎದುರಿನವರಿಗೆ 'ಇಂತಹ ತಪ್ಪು ಕೆಲಸ ನನ್ನಿಂದಾಗದು' ಎಂದು ಹೇಳಿಬಿಡುವುದು ಒಳ್ಳೆಯದು. ಮನಸ್ಸಿಗೆ ವ್ಯತಿರಿಕ್ತವಾದ ಕೆಲಸವನ್ನು ಮಾಡಲೇಬೇಡಿ. ಯಾವ ವ್ಯಕ್ತಿಯಾದರೂ ಕೃತಜ್ಞತೆಯ ಹೆಸರಿನಿಂದ ನಮ್ಮಿಂದ ತಪ್ಪು ಕೆಲಸ ಮಾಡಿಸಲು ಪ್ರಯತ್ನಿಸಿದರೆ ಆತನನ್ನು ಬಿಡಿಸಿಕೊಳ್ಳುವುದೊಳ್ಳೆಯದು. ಬಲವಂತಕ್ಕೆ ಈಡಾಗಿ ಕೆಲಸಗಳನ್ನು ಮಾಡಿದರೆ ಮೂಡ್ ಹಾಳಾಗುತ್ತದೆ.

ಇತರರಲ್ಲಿ ತಪ್ಪು ಹುಡುಕುವುದರಿಂದ ಕೂಡ ನಮ್ಮ ಮೂಡ್ ಕೆಟ್ಟುಹೋಗುತ್ತದೆ. ನಾವು ಇತರರ ದೋಷಗಳನ್ನು ಎತ್ತಿ ತೋರಿಸಿದಾಗ ಅವರು ಮಾತ್ರ ಸುಮ್ಮನಾಗುತ್ತಾರಾ? ನಮ್ಮ ಲೋಪದೋಷಗಳನ್ನು ಎತ್ತಿ ತೋರಿಸುವುದಿಲ್ವೇ? ಆಗ ನಮ್ಮ ಮೂಡ್ ಹಾಳಾಗದಿರುತ್ತದೆಯೇ? ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ. ಆದ್ದರಿಂದ ದೋಷಗಳನ್ನು ಹುಡುಕುವುದಕ್ಕಿಂತ ಗುಣಗಳನ್ನು ತಿಳಿದುಕೊಳ್ಳುವುದು, ಅವುಗಳನ್ನು ಪ್ರಶಂಸಿಸುವುದು ಒಳ್ಳೆಯ ಲಕ್ಷಣ.

ಒಂಮೊಂದು ಸಲ ನಾವು ಕೆಲವು ವಿಷಯಗಳಲ್ಲಿ ಎತ್ತಲೂ ನಿರ್ಣಯಿಸಿಕೊಳ್ಳಲಾಗದ ಸ್ಥಿತಿಯಲ್ಲಿರುತ್ತೇವೆ. ಏನು ಮಾಡಬೇಕೋ, ಏನು ಮಾಡಕೂಡದೋ ತಿಳಿಯದು. ಒಂದು ನಿರ್ಣಯಕ್ಕೆ ಬರುವವರೆಗೆ ಹೀಗೆಯೇ ಇರುತ್ತೇವೆ. ನಾವು ನಮ್ಮ ಜವಾಬ್ದಾರಿಗಳನ್ನು ವಾಯಿದೆ ಹಾಕುತ್ತಿರುವಾಗ ಇಂತಹ ಸ್ಥಿತಿ ಹೆಚ್ಚಾಗಿ ಏರ್ಪಡುತ್ತದೆ. ಯಾವುದು ಮಾಡಬೇಕೋ, ಯಾವುದು ವಾಯಿದೆ ಹಾಕಬೇಕೋ ತಿಳಿಯದ ಅನಿಶ್ಚಿತ ಸ್ಥಿತಿ ಏರ್ಪಡುತ್ತದೆ. ಆದ್ದರಿಂದ ಆಗಿನ ಕೆಲಸ ಆಗಲೇ ಮಾಡಿಬಿಡಬೇಕು.

ಪ್ರಪಂಚದಲ್ಲಿ ಯಾವೊಬ್ಬರ ನಿರ್ಣಯವೂ



ಪರಿಪೂರ್ಣವಾದುದಲ್ಲ. ವ್ಯಕ್ತಿಯ ಎಲ್ಲ ನಿರ್ಣಯಗಳೂ ಸರಿಯಾದವುಗಳಲ್ಲ. ಜೀವನದಲ್ಲಿ ಯಶಸ್ಸು ಸಂಪಾದಿಸಿದ ವ್ಯಕ್ತಿಗಳು ಕೂಡ ತಮ್ಮ ಶೇಕಡಾ ಎಪ್ಪತ್ತೈದರಷ್ಟು ನಿರ್ಣಯಗಳು ಮಾತ್ರವೇ ಸರಿಯಾದವೆಂದು ಅಂಗೀಕರಿಸಿದ್ದಾರೆ. ನಮ್ಮಂತಹವರಿಗಾದರೆ ಶೇಕಡಾ ಐವತ್ತರಷ್ಟು ಅಥವಾ ಅದಕ್ಕಿಂತಲೂ ಕಡಿಮೆ ಸರಿಯಾಗಬಹುದು.

ಬದಲಾವಣೆಗೆ ಸಿದ್ಧರಾಗಿ :

ಇತರರಿಗೆ ಸಲಹೆಗಳನ್ನು, ಉಪದೇಶಗಳನ್ನು ಕೊಡಲು ಪ್ರಯತ್ನಿಸುವುದು, ಅವರನ್ನು ತಿದ್ದಲು

ಪ್ರಯತ್ನಿಸುವುದರಿಂದಾಗಿ ನಮ್ಮ ಮೂಡ್ ಹಾಳಾಗುತ್ತದೆ. ಪ್ರತಿ ವ್ಯಕ್ತಿಗೂ ಒಂದು ಪದ್ಧತಿ, ಒಂದು ಲಕ್ಷಣ, ವಂಶಾನುಗತ ಲಕ್ಷಣಗಳು, ಜ್ಞಾನ ಇರುತ್ತವೆ. ನಮಗೆ ಸರಿಯೆಂದು ಅನ್ನಿಸಿದವುಗಳು ಎದುರಿನವರಿಗೆ ಸರಿಯೆಂದೆನ್ನಿಸದಿರಬಹುದು. ಇತರರು ಸರಿಯಾಗುವುದಕ್ಕಿಂತಲೂ ನಮ್ಮ ಮೂಡ್ ಹಾಳಾಗುವುದೇ ಹೆಚ್ಚಿನ ಸಂದರ್ಭಗಳಲ್ಲಿ ನಡೆಯುತ್ತದೆ.

ಪ್ರಪಂಚದಲ್ಲಿ ಬದಲಾವಣೆ ಸಹಜ. ಈ ಪ್ರಕೃತಿ ಕ್ಷಣ ಕ್ಷಣಕ್ಕೆ ಬದಲಾಗುತ್ತಿರುತ್ತದೆ. ಮನುಷ್ಯನ ಪ್ರವೃತ್ತಿ ಕೂಡ ಬದಲಾಗುತ್ತಿರಬೇಕು. ಬದಲಾವಣೆಗೆ ಸಿದ್ಧವಾಗಿರಬೇಕು. ಹಳೆಯ ಆಚಾರಗಳನ್ನು ಬಿಟ್ಟು ಕೊಡಲು ತಯಾರಿರಬೇಕು. ಪ್ರತಿಕೂಲ ಪರಿಸ್ಥಿತಿಗಳಲ್ಲಿ ಕೂಡ



ಮೂಡ್ ಅನ್ನು ನಿಯಂತ್ರಿಸಿಕೊಳ್ಳಬೇಕು.

ಪ್ರತಿ ಘಟನೆಯನ್ನೂ ಸೀರಿಯಸ್ ಆಗಿ, ಗಂಭೀರವಾಗಿ ತೆಗೆದುಕೊಳ್ಳಕೂಡದು. ಪರಿಸ್ಥಿತಿಗಳಿಗೆ ಅನುಕೂಲವಾಗಿ ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಪರಿಸ್ಥಿತಿಗಳೆಂದೂ ನಮಗೆ ಅನುಕೂಲವಾಗಿರಲಾರವು. ನಾವೇ ಅವುಗಳಿಗೆ ಹೊಂದಿಕೊಳ್ಳಬೇಕು. ಅಪಜಯಗಳನ್ನು ಅತಿಕ್ರಮಿಸಲು ಉಪಾಯಗಳನ್ನು ಆಲೋಚಿಸಬೇಕು. ಪರಿಹಾರ ಮಾರ್ಗವನ್ನು ಹುಡುಕಬೇಕು.

ಧೈರ್ಯವಂತರು, ವಿವೇಕಿಗಳು ಅನುಕೂಲ ಪರಿಸ್ಥಿತಿಗಳಿಗೆ ಹಿಗ್ಗುವುದಿಲ್ಲ. ಪ್ರತಿಕೂಲ ಪರಿಸ್ಥಿತಿಗಳಿಗೆ ಕುಗ್ಗುವುದಿಲ್ಲ.

ಹೊಟ್ಟೆಗೂ ಮೂಡ್? :

ಬ್ರಿಟನ್ನಿನ ಪ್ರಧಾನಿಯಾಗಿದ್ದ ಸರ್ ವಿನ್ಸ್ಟನ್ ಚರ್ಚಿಲ್ಲರ ಬಗ್ಗೆ ಕೇಳಿರದವರಾರು? ಚರ್ಚಿಲ್ಲರು ಉತ್ತಮ ವಾಗ್ಮಿ, ಒಳ್ಳೆಯ ಲೇಖಕ, ಅತ್ಯುತ್ತಮ ರಾಜಕಾರಣ ಪಟು. ಬರವಣಿಗೆಯನ್ನೇ ವೃತ್ತಿಯಾಗಿ ಸ್ವೀಕರಿಸಬೇಕೆಂದುಕೊಂಡಿದ್ದ ಉದಯೋನ್ಮುಖ ಲೇಖಕನೊಬ್ಬ ಅವರ ಬಳಿ ಬಂದು, ತನ್ನ ಕೃತಿಗೆ ಮುನ್ನುಡಿ ಬರೆದುಕೊಡಬೇಕೆಂದು ವಿನಂತಿಸಿಕೊಂಡು ಪುಸ್ತಕವನ್ನು ಕೈಗಿತ್ತ. ಪುಸ್ತಕವನ್ನು ತಿರುವಿ ಹಾಕಿದ ಚರ್ಚಿಲ್ಲರು ಮುನ್ನುಡಿ ಬರೆಯಲೊಪ್ಪಿ ಆ ಯುವಕನನ್ನು ''ನೀನು ದಿನಕ್ಕೆಷ್ಟು ಗಂಟೆ ಬರೆಯುತ್ತೀಯಾ?'' ಎಂದು ಕೇಳಿದರು.


ಅದಕ್ಕೆ ಆ ಲೇಖಕ ''ಇಂತಿಷ್ಟು ಎಂದು ನಿರ್ದಿಷ್ಟ ಸಮಯವಿಲ್ಲ ಸರ್. ನನಗೆ ಮೂಡ್ ಬಂದಾಗ ಬರೆಯುತ್ತೇನೆ. ಕೆಲವೊಮ್ಮೆ ಎಷ್ಟೋ ದಿನಗಳು ಮೂಡ್ ಬರುವುದೇ ಇಲ್ಲ.'' ಎಂದ.

ಅದಕ್ಕೆ ಒಡನೆಯೇ ಚರ್ಚಿಲ್ಲರು ''ಮೂರ್ಖ!'' ಎಂದು ಬೈದರು. ''ಬರವಣಿಗೆಯನ್ನು ವೃತ್ತಿಯನ್ನಾಗಿ ಆರಿಸಿಕೊಂಡಿರುವ ನೀನು 'ಮೂಡ್'ಅನ್ನು ಅವಲಂಬಿಸುತ್ತೀಯಾ? ಹೇಳು, ನಿನ್ನ ಹೊಟ್ಟೆಯೂ ನಿನ್ನ ಮೂಡ್ ಅನ್ನೇ ಅವಲಂಬಿಸಿರುತ್ತದೇನು?''

ಅದಕ್ಕೆ ಆ ಲೇಖಕ ನಾಚಿ ತಲೆ ತಗ್ಗಿಸಿದನಂತೆ.

'ಮೂಡ್' ಇಲ್ಲವೆಂದರೆ ಸೋಮಾರಿತನ :

'ಮೂಡ್'ನ ಪ್ರಕಾರ ಕೆಲಸ ಮಾಡುತ್ತಿರುವೆವೆಂದರೆ ನಾವು ಆವೇಶಕ್ಕೆ ದಾಸರೆಂದಾಯ್ತು. ಕೆಲಸವನ್ನು ಮುಂದೆ ಹಾಕಬೇಕೆಂದುಕೊಂಡಾಗ ಮೂಡ್ ಇಲ್ಲವೆನ್ನುತ್ತೇವೆ. ಮನಸ್ಸಿಗೆ ಹಿಡಿಸಿದರೆ ಮೂಡ್ ಅದಾಗೇ ಬರುತ್ತದೆ. ಮೂಡ್



ಇಲ್ಲವೆಂದು ಹೇಳುತ್ತಿದ್ದೇವೆಂದರೆ ನಮ್ಮ ಮನಸ್ಸು ಆರೋಗ್ಯವಾಗಿಲ್ಲವೆಂದರ್ಥ. ವಿಜಯ ಸಾಧಿಸುವ ವ್ಯಕ್ತಿಗಳು ಮೂಡ್‌ನ ದಾಸರಲ್ಲ. 'ಮೂಡ್ ಇಲ್ಲ' ಎನ್ನುವುದೆಂದರೆ ಏನು ಗೊತ್ತಾ? ಸೋಮಾರಿತನ!

ಕುಟುಂಬದಲ್ಲಿನ ವ್ಯಕ್ತಿಗಳನ್ನು, ನೆರೆಹೊರೆಯವರನ್ನು, ಜೊತೆಯವರನ್ನು ಪ್ರೀತಿಸಿದರೆ, ಮನಸ್ಸಿನೊಳಗಿಂದ ಅಸತ್ಯ, ಶತ್ರುತ್ವ, ಈರ್ಷ್ಯೆ ದ್ವೇಷಾದಿಗಳನ್ನು ತೊಲಗಿಸಿದರೆ ನಮ್ಮ ಮೂಡ್ ಯಾವತ್ತೂ ಚೆನ್ನಾಗಿರುತ್ತದೆ. ಈ ಪ್ರಪಂಚ ನಮಗೋಸ್ಕರವೆಂದೇ ಸೃಷ್ಟಿಸಲ್ಪಟ್ಟಿಲ್ಲ. ಇತರರು ಕೂಡ ಇದರಲ್ಲಿ ಭಾಗಸ್ಥರೇ.

ಆದ್ದರಿಂದ ಪರಿಸ್ಥಿತಿಗಳು ಯಾವತ್ತೂ ಅನುಕೂಲವಾಗಿರುವುದಿಲ್ಲ. ಒಬ್ಬರಿಗೆ ಅನುಕೂಲವೆಂದೆನ್ನಿಸಿದವುಗಳು ಮತ್ತೊಬ್ಬರಿಗೆ ಪ್ರತಿಕೂಲವಾಗಿ ಕಂಡುಬರಬಹುದು. ಸುಖ, ದುಃಖಗಳು, ಜನನ-ಮರಣಗಳು, ಜಯಾಪಜಯಗಳು ನಿರಂತರ ಸತ್ಯಗಳು. ಅವುಗಳನ್ನು ಸ್ವೀಕರಿಸುವುದಕ್ಕೆ ನಾವು ಯಾವಾಗಲೂ ಸಿದ್ಧರಾಗಿರಬೇಕು. ಆಗಲೇ ನಮ್ಮ ಮೂಡ್ ಚೆನ್ನಾಗಿರುತ್ತದೆ. ● (ಆಧಾರ)

ಮರಾಠಿ ಕಥೆ

ಅಬೋಲಿ!

ಮೂಲ : ಗಿರಿಜಾ ಕೀರ್
ಅನುವಾದ : ಶಾಮಸುಂದರ ದೇಶಪಾಂಡೆ

ಏಕನಾಥ ಜನಾರ್ದನ ವಾಘಮಾರ ಎಂಬ ಹೆಸರಿನ ಸಂಪಾದಕರಿಂದ 'ದೀಪಾವಳಿ ವಿಶೇಷಾಂಕ'ಕ್ಕಾಗಿ ಕಥೆ ಕಳುಹಿಸಿ ಎಂದು ಕಾಗದ ಬಂದಿದೆ. ದೀಪಾವಳಿ, ಯುಗಾದಿ ಹತ್ತಿರ ಬರುತ್ತಿದ್ದ ಹಾಗೇ ವಾಘಮಾರೆ, ಡೊಯಿಫೋಡೆ, ಅಥವಾ ಆಗಲಾವೆ, ಎಂಬಿತ್ಯಾದಿ ಹೆಸರಿನ ವ್ಯಕ್ತಿಗಳು 'ಸಂಪಾದಕ' ಪದವಿ ಧರಿಸಿ ಲೇಖಕರಿಗೆ ಕಾಗದಗಳನ್ನು ಬರೆಯುತ್ತಾರೆ. ಉಳಿದ ಸಮಯದಲ್ಲಿ ಸಾಹಿತ್ಯದೊಂದಿಗೆ ಯಾವ ಸಂಬಂಧವೂ ಇವರಿಗಿರುವುದಿಲ್ಲ. ಆದರೆ ವರ್ಷಕ್ಕೊಮ್ಮೆ, ಮಳೆಗಾಲದಲ್ಲಿ ಏಳುವ ನಾಯಿಕೊಡೆಗಳಂತೆ, ಈ ಸಂಪಾದಕರುಗಳು ಕಾಣತೊಡಗುತ್ತಾರೆ. ಸಾಕಷ್ಟು ಪ್ರಮಾಣದಲ್ಲಿ ಜಾಹೀರಾತುಗಳನ್ನು ಸಂಗ್ರಹಿಸಿ, ಸಣ್ಣ ದೊಡ್ಡ, ಲೇಖಕ, ಲೇಖಕಿಯರನ್ನು ಸಂಪರ್ಕಿಸಿ, ದೀಪಾವಳಿ ವಿಶೇಷಾಂಕಗಳನ್ನು ಮುದ್ರಿಸಿ 'ಸನ್ಮಾನ್ಯ ಸಂಪಾದಕ' ಎಂದು ಸ್ವಯಂ ಪಟ್ಟಾಭಿಷೇಕ ಮಾಡಿಕೊಳ್ಳುತ್ತಾರೆ.

ಏಕನಾಥ ಜನಾರ್ದನ ವಾಘಮಾರೆ ಕೂಡ ಸಾಹಿತ್ಯ ಪ್ರಪಂಚದ ಸಂಪಾದಕ ವೃಂದದಲ್ಲಿ ಹೀಗೇ ಒಂದು ಹೆಸರು ಅಷ್ಟೆ. ಕಾಗದವನ್ನು ನೇರವಾಗಿ ಕ.ಬು.ಗೆ ಎಸೆಯಬೇಕೆಂದು ಅನಿಸಿತಾದರೂ ಹಾಗೆ ಮಾಡುವುದು ಸಾಧ್ಯವಾಗಲಿಲ್ಲ. ಅದಕ್ಕೊಂದು ವೈಯಕ್ತಿಕ ಹಾಗೂ ಸಂವೇದನಾತ್ಮಕ ಕಾರಣವಿತ್ತು. ಇದು ಕೇವಲ ಕಾಕತಾಳೀಯವೂ ಅನ್ನಿ ಬೇಕಾದರೆ.

'ಅಬೋಲಿ' ನನ್ನ ಸ್ನೇಹಿತೆ. ಏಕನಾಥ ಜನಾರ್ದನ ವಾಘಮಾರೆ ಎಂಬ ವ್ಯಕ್ತಿಯ ಪತ್ನಿ ಆಕೆ. ಎರಡು ವರ್ಷಗಳ ಹಿಂದೆ ಇವರಿಬ್ಬರ ಮದುವೆ ರಜಿಸ್ಟರ್ಡ್ ಪದ್ಧತಿಯಿಂದಾಗಿತ್ತು. ಈ ವಿವಾಹಕ್ಕೆ ಅಬೋಲಿಯ ಪರವಾಗಿ ನಾನೇ ಸಾಕ್ಷೀದಾರಳಾಗಿದ್ದೆ. ಏಕನಾಥ ಮೆಡಿಕಲ್ ರಿಪ್ರೆಸೆಂಟೇಟಿವ್ ಆಗಿದ್ದ. ಕಂಪನಿಯ ಬ್ಯಾಗ್ ತೆಗೆದುಕೊಂಡು ಅಲ್ಲಲ್ಲಿ ಸುತ್ತಾಡಬೇಕಾಗುತ್ತಿತ್ತು. ಇದೊಂದನ್ನು ಬಿಟ್ಟರೆ ಆತ ಆರ್ಥಿಕವಾಗಿ ಸುಖಿಯೇ. ತಿಂಗಳ ಕೊನೆಯಲ್ಲಿ ಅವಶ್ಯಕತೆಗಳಿಗೆ ಸಾಕಾಗುವಷ್ಟು ಸಂಬಳ ಸಿಕ್ಕುತ್ತಿತ್ತು. ಅಬೋಲಿ ಗಂಡನೊಂದಿಗೆ ಖುಶಿಯಾಗಿಯೇ ಇದ್ದಳು.

ಆದರೆ 'ವಿಧಿ'ಗೆ ಇದು ಸಮ್ಮತವಾಗಿರಲಿಲ್ಲವೆಂದು ಕಾಣುತ್ತದೆ. ಒಂದು ರೈಲು ದುರ್ಘಟನೆಯಲ್ಲಿ ಏಕನಾಥ ಸಿಕ್ಕುಬಿದ್ದ. ಅಬೋಲಿಗೆ ಈ ವಿಷಯ ಗೊತ್ತಾಗುವ ವೇಳೆಗೆ ಬಹಳ ತಡವಾಗಿತ್ತು. ದಿನ ರಾತ್ರಿಯೆನ್ನದೆ ಊರೂರು ಸುತ್ತಾ

ಡುವ ಏಕನಾಥ ರೈಲು ಅಪಘಾತದಲ್ಲಿ ಸಾಯ ಬಹುದೆಂದು ಅಬೋಲಿ ಕಲ್ಪಿಸುವದಾದರೂ ಸಾಧ್ಯವೆ? ಆತನ ಛಿದ್ರ ವಿಛಿದ್ರ ದೇಹ. ಒಂದು ಕಡೆ ಆತನ ಬ್ಯಾಗ್ ಇನ್ನೊಂದು ಕಡೆ ಆತನ ಐಡೆಂಟಿಟಿಕಾರ್ಡ್ ಸಿಕ್ಕಿದ್ದವು. ಇವಿಷ್ಟೇ ಆತನ ಗುರ್ತಿನ ಪುರಾವೆಗಳು.

ಆತನ 'ಕಂಪನಿ'ಯಲ್ಲಿಯೇ ಅವಳಿಗೆ ಕ್ಲಾರ್ಕ್ ನೌಕರಿ ಸಿಕ್ಕಿತು. ಆದರೂ ಜೀವನ-ಸಂಗಾತಿಯನ್ನು ಕಳೆದುಕೊಂಡುದರ ನೋವು ಮುಖದ ಮೇಲೆ ಎದ್ದು ಕಾಣುತ್ತಿತ್ತು. ಅಬೋಲಿ ಮುಂಚಿನಂತೆ ಹಸನ್ಮುಖಿಯಾಗಿ ಉತ್ಸಾಹಿಯಾಗಿರುವುದನ್ನು ನೋಡುವುದಕ್ಕಾಗಿ ನಾನು ನಾನಾ ಪ್ರಯತ್ನಗಳನ್ನು ಮಾಡುತ್ತಲೇ ಇದ್ದೆ. ಅವಳನ್ನು ನಾಟಕ ಸಿನೇಮಾಗಳಿಗೆ ಕರೆದುಕೊಂಡು ಹೋಗುತ್ತಿದ್ದೆ. ಕಥಾಕಥನದ ಕಾರ್ಯಕ್ರಮಗಳಿಗಾಗಿ ಹೊರ ಊರುಗಳಿಗೆ ಹೋಗಬೇಕಾಗಿ ಬಂದಾಗಲೂ ಜೊತೆಗಿರಬೇಕವಳು. ನಾಟ್ಯ ಸ್ಪರ್ಧೆಗಳಿಗೆ ಪರೀಕ್ಷಕಳಾಗಿ ಹೋಗುವ ಪ್ರಸಂಗ ಬಂದಾಗಲೂ ಅವಳೇ ಜತೆಗಿರಬೇಕು. ಇದೆಲ್ಲದರ ಉದ್ದೇಶ ಒಂದೇ ಒಂದು. ಮೂವತ್ತರ ಸುತ್ತ ಮುತ್ತ ಇರುವ ಇವಳಿಗೆ ಜೀವನದಲ್ಲಿ ಮತ್ತ ಆಸಕ್ತಿ ಹುಟ್ಟುವಂತೆ ಮಾಡುವುದು ಸಾಧ್ಯವಾದರೆ, ಒಂಟಿಯಾಗಿರುವ ಇವಳನ್ನು ಅರ್ಥ ಮಾಡಿಕೊಂಡು ಹೊಸ ಜೀವನವನ್ನು ನೀಡಬಹುದಾದಂತಹ ಜೊತೆಗಾರನನ್ನು ಹುಡುಕುವುದು.

ನಮ್ಮ ಈ ಸಮಾಜದಲ್ಲಿ ಅದರಲ್ಲೂ ಮಧ್ಯಮ ವರ್ಗದಲ್ಲಿ ಈ ಸಂಗತಿ ಸಹಜ ಸಾಧ್ಯವಲ್ಲ, ಎಂಬುದರ ಅರಿವು ಇದ್ದರೂ ಅಸಾಧ್ಯವೂ ಅಲ್ಲ ಎಂಬ ಧೈರ್ಯದಿಂದ ನಾನು ಪ್ರಯತ್ನ ಮಾಡುತ್ತಲೇ ಇದ್ದೆ. ಹೇಗಾದರೂ ಅವಳು ಮತ್ತೆ ಸಹಜ ಸ್ಥಿತಿಗೆ ಬರುವುದು ನನಗೆ ಬೇಕಾಗಿತ್ತು. ಇದರಿಂದಾಗಿ ನನ್ನ ಅಬೋಲಿಯ ಸ್ನೇಹ ಇನ್ನಷ್ಟು ಹತ್ತಿರದ್ದಾಗಿತ್ತು.

ಮೊದಲಿನಿಂದಲೂ ಅಬೋಲಿಗೆ ನನ್ನ ಬಗ್ಗೆ ಸ್ನೇಹವಿದ್ದೇ ಇತ್ತು. ಅದು ಈಗ ಗಾಢ ವಿಶ್ವಾಸದಲ್ಲಿ ಪರಿವರ್ತಿತವಾಗಿತ್ತು. ಸಾಮಾನ್ಯವಾಗಿ ನಾನು ಹೇಳಿದ್ದನ್ನು ಅವಳು ಸಹಜವಾಗಿ ತಳ್ಳಿ ಹಾಕುವುದಿಲ್ಲ ಎಂಬ ಭಾವನೆ ಮೂಡತೊಡಗಿತ್ತು. ಇಂಥ ಪರಿಸ್ಥಿತಿಯಲ್ಲಿಯೇ ಪತ್ರಿಕಾ ಸಂಪಾದಕ 'ಏಕನಾಥ ಜನಾರ್ದನ ವಾಘಮಾರೆ' ಎಂಬ ವ್ಯಕ್ತಿಯ ಆಹ್ವಾನ ನನಗೆ ಬಂದಿದ್ದು. ಎಷ್ಟೊಂದು ವಿಚಿತ್ರ!

ನನ್ನ ಮನದಲ್ಲಿ ಕತೆ ಜನ್ಮ ತಾಳಿದ್ದೇ ಇಲ್ಲಿ. ಈ ಏಕನಾಥ ಜನಾರ್ದನ ವಾಘಮಾರೆ ..... ಯಾರಿರಬಹುದು? ಹೇಗಿರಬಹುದು? ಸುಂದರಾಂಗ, ಸುಸಂಸ್ಕೃತ ಹಾಗೂ ಬಹುಶಃ ವಿದುರ.

ನನ್ನ ಮನಸ್ಸು ಕಲ್ಪನೆಯ ವಸ್ತುವನ್ನು ಹೆಣೆಯತೊಡಗಿತು. ಒಂದು ಬಿಳಿಯ ಎಳೆಯಾದರೆ ಮತ್ತೊಂದು ಕೆಂಪು .... ಹೀಗೇ .....

ಸಾಹಿತ್ಯದೊಂದಿಗೆ ಈ ವ್ಯಕ್ತಿಯ ಸಂಬಂಧ ಹೇಗಿರಬಹುದು? ಈತ ಸಂಪಾದಕ ಹೇಗಾದ? ಎಷ್ಟು ಗೌರವಧನ ನೀಡಬಹುದು ಇತ್ಯಾದಿ ಸಂಗತಿಗಳನ್ನು ಸ್ವಲ್ಪವೂ ಯೋಚಿಸದೇ ಆತನಿಗೆ ಒಂದು ಕಾಗದವನ್ನು ಬರೆದೆ.

''ತಮ್ಮ ವಿಶೇಷ ಸಂಚಿಕೆಗೆ ಲೇಖನ ಬರೆಯಲು ನನಗೆ ಹರ್ಷವೆನಿಸುತ್ತದೆ. ನಿಮ್ಮ ಸಂಚಿಕೆ ಹೊಸದಾಗಿರುವುದರಿಂದ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಲು ಬಯಸುತ್ತೇನೆ. ತಾವು ಶನಿವಾರ ಸಾಯಂಕಾಲ 'ಟೀ'ಗೆ ನಮ್ಮ ಮನೆಗೆ ಬನ್ನಿ. ವಿವರವಾಗಿ ಮಾತನಾಡಬಹುದು.''

ಆತನಿಂದ ಸಮ್ಮತಿ ಸೂಚಕ ಕಾಗದ ಬಂತು. ನನ್ನ ಮನದಲ್ಲಿ ವಿಚಾರ ಸುತ್ತುತ್ತಲೇ ಇತ್ತು. ಕೆಲವು ಸಂಗತಿಗಳನ್ನು ಮನದಲ್ಲಿ ಗಟ್ಟಿ ಮಾಡಿಕೊಂಡು ಅಬೋಲಿಗೆ ಕೂಡ ಟೀಗೆ ಬರುವಂತೆ ತಿಳಿಸಿದೆ - ಯಾವುದೇ ಮುನ್ಸೂಚನೆ ನೀಡದೆ.

ಈ ಏಕನಾಥ ಜನಾರ್ದನ ವಾಘಮಾರೆಯ ವಯಸ್ಸು 30ರ ಸುತ್ತಮುತ್ತ ಇರಬಹುದು. ಸೌಮ್ಯ ಮುಖಭಾವ. ತಂದೆಯ 'ಪ್ರಿಂಟಿಂಗ್ ಪ್ರೆಸ್' ಇದೆ. ಹೊಸದಾಗಿಯೇ ಈ ಉದ್ಯಮಕ್ಕೆ ಕೈ ಹಾಕುತ್ತಿದ್ದಾನೆ. ಮಗನ ಬೌದ್ಧಿಕ ಸಾಮರ್ಥ್ಯ ಸಾಮಾನ್ಯವಾದುದು. ಹೆಚ್ಚು ಶಿಕ್ಷಣವೂ ಆಗಿಲ್ಲ. ಆದರೆ ಉತ್ತಮ ಆರ್ಥಿಕ ಸ್ಥಿತಿಯಿಂದಾಗಿ

ತಂದೆಯೇ ಆತನನ್ನು ಈ ಉದ್ಯಮದಲ್ಲಿ ತೊಡಗಿಸಿದ್ದಾರೆ. ಮುಖ್ಯ ವಿಷಯವೆಂದರೆ ಏಕನಾಥ ಅವಿವಾಹಿತ ಕೂಡ.

ನನಗೆ ಹುಡುಗ ಪರವಾಗಿಲ್ಲ ಎನಿಸಿತು. ಅಬೋಲಿಯ ಕುರಿತು ಏನಾದರೂ ಆಗುವ ಹಾಗಿದ್ದರೆ ಪ್ರಯತ್ನಿಸಲು ಅಡ್ಡಿ ಇಲ್ಲ ಅನಿಸಿತು.

ಆತನಿಗೆ ಗೌರವಯುತ ಅತಿಥಿ ಸತ್ಕಾರ ನೀಡಿದೆ. ''ಸಂಚಿಕೆಯ ಸಂಪಾದಕ ವಯಸ್ಸಿನಿಂದ ಚಿಕ್ಕವನಾದರೂ 'ಅಧಿಕಾರದಲ್ಲಿ' ದೊಡ್ಡವನೇ ಹೌದು.'' ಎಂದೆ. ಆತ ಆನಂದಿತನಾದ. ಕಥೆ ಬರೆದು ಕೊಡಲು ಒಪ್ಪಿದೆ. ಆತನಿಗೆ ಸಂತೃಪ್ತಿ ಉಂಟಾಯಿತು. ಸ್ವಲ್ಪ 'ಫ್ರೀ'ಯಾಗೇ ಮಾತನಾಡಿದ. ನಾನೂ ಈ ಸಮಯ ಸಾಧಿಸಿ ಅಬೋಲಿಯ ಪರಿಚಯ ಮಾಡಿಕೊಟ್ಟೆ. ಇಷ್ಟೊಂದು ಸಮಯದಿಂದ ಅವಳು ಸುಮ್ಮನೆ ಇರುವುದು ಒಮ್ಮೆಲೆ ನನ್ನ ಗಮನಕ್ಕೆ ಬಂತು. ಬಹುಶಃ ಹೆಸರಿನಲ್ಲಿಯ ಸಾಮ್ಯದಿಂದಾಗಿ ಅವಳು ಗೊಂದಲಕ್ಕೀಡಾಗಿರಬೇಕು. ಒಂದಿಷ್ಟು ಸಂಶಯಾತ್ಮಕ ದೃಷ್ಟಿಯಿಂದಲೇ ಆತನನ್ನು ನೋಡುತ್ತಿದ್ದಳು. ಅವಳ ಸ್ಥಿತಿಯನ್ನು ಅರಿತುಕೊಂಡು, ''ನನ್ನ ಸ್ನೇಹಿತೆಯ ಬರವಣಿಗೆ ಸುಂದರವಾಗಿದೆ. ಸಾಮಾನ್ಯವಾಗಿ ನನ್ನ ಕತೆಗಳನ್ನೆಲ್ಲ 'ಫೇರ್' ಮಾಡುವುದು ಅವಳೇ'' ಎಂದೆ.

''ಹಾಗಾದರೆ ನಿಮ್ಮ ಜೊತೆಯಿಂದಾಗಿ ಅವರೂ ಲೇಖಕರಾದಾರು'' ಆತನೆಂದ.

''ಹಾಗೇನಿಲ್ಲ. ಅವಳೂ ಈಗಲೂ ಇಚ್ಛೆ



ತ್ಯಾದಿ ವಿಚಾರಗಳು ಈಗ ಅಷ್ಟು ಮುಖ್ಯವಾಗಿರಲಿಲ್ಲ. ಸದ್ಯಕ್ಕೆ ಅವರಿಬ್ಬರು ಸುಖವಾಗಿ ಸಂಸಾರ ಆರಂಭಿಸುವುದು ನನ್ನ ದೃಷ್ಟಿಯಲ್ಲಿ ಮುಖ್ಯವಾಗಿತ್ತು.

ಏಕನಾಥ-ಅಬೋಲಿಯವರ ವಿವಾಹ ಮುಗಿಸಿ ನಾನು ಸ್ವಲ್ಪ 'ಫ್ರೀ'ಯಾದೆ. ಅವರಿಬ್ಬರೂ 'ಊಟಿ'ಗೆ ಮಧುಚಂದ್ರಕ್ಕೆ ಹೋಗಿ ಹಿಂತಿರುಗಿ ಬಂದಾಗ ಏಕನಾಥನ ಮುಖದ ಮೇಲೆ ತೃಪ್ತಿಯನ್ನೂ ಅಬೋಲಿಯ ಮುಖದ ಮೇಲೆ ಸಮಾಧಾನವನ್ನೂ ಕಂಡೆ. ಕೈಗೆತ್ತಿಕೊಂಡ ಕೆಲಸ ಯಶಸ್ವಿಯಾಗಿದ್ದಕ್ಕೆ ನನಗೂ ನೆಮ್ಮದಿಯುಂಟಾಗಿತ್ತು.

ಹೊಸ ವರ್ಷದ ದೀಪಾವಳಿ ಲೇಖನ ಪ್ರಾರಂಭವಾಗಿತ್ತು. ನನ್ನ ತಲೆಯಲ್ಲಿ ಒಂದು ಸುಖಾಂತ್ಯದ ಕಾದಂಬರಿ ಸಿದ್ಧಗೊಳ್ಳುತ್ತಿತ್ತು. ಲೇಖನವನ್ನು ಪ್ರಾರಂಭಿಸುವ ಉದ್ದೇಶದಿಂದ ನನ್ನ ಜಾಗಕ್ಕೆ ಬಂದು ಕುಳಿತೆ. ಬಿಳಿ ಹಾಳೆಯ ಮೇಲೆ ಇನ್ನೇನು ಬರೆಯಲು ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ಕರೆಗಂಟೆ ಕೇಳಿಸಿತು. ಕಿಂಚಿತ್ ಬೇಸರದಿಂದಲೇ ಬಾಗಿಲು ತೆರೆದೆ.

''ಒಳಗೆ ಬರಬಹುದೇ?'' ಆಗಂತುಕ ಪ್ರಶ್ನಿಸಿದ.

''ಹಾಂ ..... ನಿಮ್ಮನ್ನು ಎಲ್ಲೋ ನೋಡಿದ ನೆನಪು'' ನಾನೆಂದೆ.

''ನಾನು ಏಕನಾಥ ಜನಾರ್ದನ ವಾಘಮಾರೆ''

'' ....''

''ಗೊಂದಲಕ್ಕೀಡಾದಿರಲ್ಲವೇ? ಸಹಜ.'' ಎಂದು ಆತ ಮುಂದುವರೆಸಿದ, ''ಎಲ್ಲರೂ ನಾನು ಸತ್ತೇ ಹೋಗಿದ್ದೇನೆ ಎಂದು ಭಾವಿಸಿದ್ದಾರೆ. ನಾನು ಕಳೆದ ಒಂದು ವರ್ಷದಿಂದ ಆಸ್ಪತ್ರೆಯಲ್ಲೇ ಇದ್ದೆ. ಆ ಆಕ್ಸಿಡೆಂಟ್‌ನಿಂದಾಗಿ ಏನೇನು ಅನುಭವಿಸಬೇಕಾಯಿತೋ ..... ಛೆ. ಅದರ ನೆನಪೂ ಬೇಡ. ಪ್ಲಾಸ್ಟಿಕ್ ಸರ್ಜರಿಯಿಂದಾಗಿ ನನ್ನ ಮುಖಚರ್ಯೆ ಸ್ವಲ್ಪ ಬದಲಾಗಿದೆ. ಆದರೆ ಬದುಕುಳಿದದ್ದೇ ದೊಡ್ಡ ಸಂಗತಿ. .... ನೀವಾದರೂ ನನ್ನ ಗುರುತು ಹಿಡಿಯಬಹುದು ಅನಿಸಿತ್ತು. ಮೊದಲು ಮನೆಗೆ ಹೋದೆ. ಬೀಗ ಹಾಕಿತ್ತು. ಅಕ್ಕಪಕ್ಕದವರು ಯಾರೂ ಸರಿಯಾಗಿ ಉತ್ತರಿಸಲಿಲ್ಲ. ಅದಕ್ಕೆ ನಿಮ್ಮ ಬಳಿ ಧಾವಿಸಿ ಬಂದೆ. ಅಬೋಲಿ ಎಲ್ಲಿದ್ದಾಳೆ? ಹೇಗಿದ್ದಾಳೆ? ನಾನು ಅವಳನ್ನು ನೋಡಬೇಕು .....''


''ಓ! ನೋ! .... ನೀವು ಅವರಲ್ಲ. ನೀವು ಅವರಾಗಿರಲು ಸಾಧ್ಯವೇ ಇಲ್ಲ. ಏಕನಾಥ ಜನಾರ್ದನ ವಾಘಮಾರೆ ಅಬೋಲಿಯ ಮೊದಲ ಗಂಡ. ಎಂ.ಆರ್. ಆತ ಎಂದೋ ತೀರಿಕೊಂಡಿದ್ದಾನೆ. ಆತ ಬದುಕಿರಲು ಸಾಧ್ಯವಿಲ್ಲ'' ನಾನು ಎಡಬಿಡದೆ ನುಡಿದೆ.

''ಮೊದಲ ಗಂಡ?'' ಆಗಂತುಕ ಪ್ರಶ್ನಿಸಿದ. ಸಂಶಯದಿಂದ ''ರೀ ಮಿಸ್ಟರ್ ನೀವು ಯಾರಾದರೂ ಪರವಾಗಿಲ್ಲ. ಇಲ್ಲಿಂದ ಹೊರಟ್ಹೋಗಿ. ಪ್ಲೀಜ್ ಗೆಟ್ ಔಟ್'' ನಾನು ಕಿರುಚಿದೆ. ಎದೆಯಲ್ಲಿ ನೋವು ಕಾಣಿಸಿಕೊಂಡಂತೆ ಅನಿಸಿತು. ಕಣ್ಮುಂದೆ ಗಾಢಾಂಧಕಾರ ತುಂಬಿಕೊಂಡಿತು. ●

ಕಾರ್ಲೈಲ್ ದಾರ್ಶನಿಕನಾದದ್ದು :

ಸುಪ್ರಸಿದ್ಧ ದಾರ್ಶನಿಕ ಕಾರ್ಲೈಲನು ಆರಂಭದಲ್ಲಿ ತುಂಬಾ ಮಾತುಗಾರನಾಗಿದ್ದನು. ಎಂತಹ ಉಜ್ವಲ ತಾತ್ವಿಕ ವಿಚಾರಗಳನ್ನೂ ತನ್ನ ಜಾಣ ಮಾತುಗಾರಿಕೆಯಿಂದ ಅವಹೇಳನ ಮಾಡುತ್ತಿದ್ದನು. ಒಂದು ದಿನ ಅವನು ಮಿತ್ರನೊಬ್ಬನೊಡನೆ ಮಾತನಾಡುತ್ತಿದ್ದನು. ಆಗ ಏಕಾಏಕಿ ಸಿಡಿಲೊಂದು ಬಡಿದು ಆ ಮಿತ್ರ ಸತ್ತು ಬಿದ್ದನು. ಈ ಗಂಭೀರ ಪ್ರಸಂಗದಿಂದ ಪ್ರಭಾವಿತನಾದ ಕಾರ್ಲೈಲ್ ಮುಂದೆ ಗಂಭೀರ ತಾತ್ವಿಕ ಚಿಂತನೆಯಲ್ಲಿ ತೊಡಗಿ ವಿಶ್ವವಿಖ್ಯಾತ ದಾರ್ಶನಿಕನೆನಿಸಿದನು.


● ಕೆ.ವೆಂಕಣ್ಣಾಚಾರ್



ಪುಸ್ತಕ ವಿಭಾಗ



ದೊರೆಯ ಅವಸಾನದ ಸಂಪೂರ್ಣ ವೃತ್ತಾಂತ



ದೊರೆಯ ಅವಸಾನದ ಸಂಪೂರ್ಣ ವೃತ್ತಾಂತ

● ರವಿ ಬೆಳಗೆರೆ

ದೊರೆ ಮರೆಯಾಗಿ ನಾಲ್ಕು ತಿಂಗಳಾಗುತ್ತ ಬಂತು. ಶಾಂತಿ ಬೀಜಗಳನ್ನು ಜಗತ್ತಿನಾದ್ಯಂತ ಬಿತ್ತಿ ಬಂದ ಬುದ್ಧ, ತನ್ನ ದಣಿವಾರಿಸಿಕೊಂಡ ಪುಟ್ಟ ದ್ವೀಪ ಶ್ರೀಲಂಕೆ. ಈ ಬೌದ್ಧ ನಾಡಿನಲ್ಲೆದ್ದ ಹಿಂಸೆಯ ಬಿರುಗಾಳಿ ನೆರೆಯ ನಾಡಿನ ದೊರೆಯನ್ನೇ ಅಡ್ಡಗಲ ನುಂಗಿತು. ವಿಶಿಷ್ಟಾದ್ವೈತದ ಸೃಷ್ಟಿಕರ್ತ ರಾಮಾನುಜಾಚಾರ್ಯರು ಕಣ್ತೆರೆದ ಶ್ರೀಪೆರುಂಬುದೂರಿನ ನೆಲವಿನ್ನೂ ರಾಜೀವರ ನೆತ್ತರಿಂಗಿಸಿಕೊಂಡಿಲ್ಲ. ಭರತ ಭೂಮಿಯ ಕೋಟ್ಯಂತರ ಮಾನವರ ಎದೆಗಳ ಕಂಪನವಿನ್ನೂ ನಿಂತಿಲ್ಲ. ನಲವತ್ತನಾಲ್ಕನೇ ಸ್ವಾತಂತ್ರ್ಯ ದಿವಸದ ಹೊತ್ತಿಗೆ ನಲವತ್ತಾರರ ಹರೆಯದ ಮಗನನ್ನು ಮಣ್ಣಿಗಿಟ್ಟು ಕುಳಿತಿದ್ದಾಳೆ ತಾಯಿ ಭಾರತಿ.

ಹಂತಕರ ಸುಳಿವು, ಉದ್ದೇಶ, ಸಂಚು, ಕೊಲೆ ನಡೆದ ರೀತಿ ಮುಂತಾದ ವಿವರಗಳೆಲ್ಲ ಅಷ್ಟಿಷ್ಟು ಸ್ಪಷ್ಟವಾಗಿದೆ, ನಿಜ. ಆದರೆ ಭಾರತದ ಇತಿಹಾಸದ ದಿಕ್ಕನ್ನೇ ಬದಲಿಸಿದ ಮೂರು ಭೀಕರ ಹತ್ಯೆಗಳ ಪೈಕಿ ಮೂರನೆಯದಾದ ರಾಜೀವ್ ಹತ್ಯೆಯ ಕುರಿತು ಈಗಲೇ ಖಚಿತವಾಗಿ ಏನನ್ನಾದರೂ ಹೇಳುವುದು ಅವಸರದ ಮಾತಾದೀತು. ಇತಿಹಾಸವನ್ನು ಇಷ್ಟು ಹತ್ತಿರದಿಂದ ನೋಡುವುದು ಎಂಥ ಕಣ್ಣಿಗಾದರೂ ಕಷ್ಟವೇ.

ಇರಲಿ, ರಾಜೀವ್ ಬದುಕು-ಅಧಿಕಾರ-ಸಂಚು-ಹತ್ಯೆಗಳ ಸರಪಳಿಯನ್ನು ಬಿಚ್ಚುವ ಯತ್ನ ಇಲ್ಲಿ ನಡೆದಿದೆ. ವೃತ್ತಾಂತದ ಭಾಗಗಳನ್ನು ಸಂಬಂಧಪಟ್ಟವರಿಂದಲೇ ಹೇಳಿಸಲಾಗಿದೆ. ಓದಿಕೊಳ್ಳಿ.

ದಾದಿ ಹೇಳಿದ ಕಥೆ :

ನಾನು ... ಆ್ಯನಾ! ಆ್ಯನಾ ಆರ್ನ್‌ಷೋಲ್ .... ಹೌದು. ಡೆನ್ಮಾರ್ಕಿನ ಮನಸ್ಸು ಮುದುಡುವ ಚಳಿಯಲ್ಲಿ ಬೆಚ್ಚಗಿನ ರಗ್ಗು ಹೊದ್ದು ಕುಳಿತು ಭಾರತದ ತಿಳಿ ಬಿಸಿಲ ಕನಸು ಕಾಣುವ ಮುದುಕಿ. ನನ್ನ ಹೆಸರು ಆ್ಯನಾ ಆರ್ನ್‌ಷೋಲ್. ಡೆನ್ಮಾರ್ಕಿನವಳು ಅಂದೆನಲ್ಲ, ಹೌದು. ಭಾರತದ ಬಹು ದೊಡ್ಡ ಭವನವೊಂದರಲ್ಲಿ ಎಂಥದೋ ಸಡಗರ, ದುಗುಡ, ಆತಂಕಗಳನ್ನು ಹೊತ್ತು ಅಂದು ನಡೆದಾಡಿದ್ದು ಈಗ ನಲವತ್ತಾರು ವರ್ಷಗಳಾದರೂ ಮರೆವಾಗಿಲ್ಲ. 1944ರ ಅಗಸ್ಟ್ ತಿಂಗಳ ಆ ಮುಂಜಾವುಗಳು ಶ್ರಾವಣದ ಮಳೆಯ ಮಧ್ಯೆಯೂ ಇದ್ದಕ್ಕಿದ್ದಂತೆ ದೊಡ್ಡ ಬೆಳಕಿನೊಂದಿಗೆ ಹೊಳೆಯುತ್ತಿದ್ದವು. ರಾತ್ರಿ ಗಾಢಾಂಧಕಾರ ಮತ್ತು ಸಂಜೆಗಳ ಜಟಿಜಟಿ ಮಳೆಯಿಂದ ಬೇಸತ್ತ ನಮ್ಮ ಮನಸ್ಸುಗಳು ಮುಂಜಾವಿನ ಆ ಹೊಳೆವ ಬೆಳಕು ಕಂಡೊಡನೆ ಅದೊಂದು ಅಲೌಕಿಕವಾದ ಸಂತಸದಿಂದ ನಲಿಯುತ್ತಿದ್ದೆವು. ಪ್ರಿಯಾ ಆಗಾಗ ನನ್ನೆಡೆಗೆ 'ಏನಾದೀತು ಆ್ಯನಾ?' ಎಂಬಂತೆ ನೋಡುತ್ತಿದ್ದಳು. 'ಹೆದರಬೇಡ ... ಎಲ್ಲ ಸರಿ

ಹೋಗುತ್ತೆ' ಎಂಬಂತೆ ನಾನು ಮುಗುಳ್ನಗುತ್ತಿದ್ದೆ. ಸಾಗರ ತೀರದ ಪಟ್ಟಣವಾದ ಮುಂಬಯಿಯ ಆ ಬಂಗಲೆ ಯಾವುದೋ ಅನನ್ಯ ಜೀವಿಯ ಬರುವಿಕೆಗಾಗಿ ಸಿದ್ಧಗೊಳ್ಳುತ್ತಿತ್ತು.

1944 ಅಗಸ್ಟ್ 30ರಂದು ಇಂದಿರಾ ಪ್ರಿಯದರ್ಶಿನಿ, ನನ್ನ ಮೆಚ್ಚಿನ ಹುಡುಗಿ ಪ್ರಿಯಾ, ಮುದ್ದಾದ ಗಂಡು ಮಗು ಹಡೆದಳು. ಮಗುವನ್ನೆತ್ತಿಕೊಂಡು ಇನ್ನಿಲ್ಲದ ಮಮತೆಯಿಂದ ನಾನು ಲೊಚಲೊಚನೆ ಮುತ್ತಿಕ್ಕಿದಾಗ,

''ಆ್ಯನಾ ... ಡೆನ್ಮಾರ್ಕಿನಲ್ಲೂ ಹೀಗೆ ಮಕ್ಕಳಿಗೆ ಮುದ್ದು ಮಾಡ್ತೀರಾ?'' ನೋವಿನ ನಡುವೆಯೇ ಹುಸಿ ನಗೆ ನಕ್ಕು ಕೇಳಿದಳು ಪ್ರಿಯಾ. ''ಡೆನ್ಮಾರ್ಕಿನ ತಾಯಂದಿರು ತಾಯಂದಿರಲ್ಲವೇನೇ?'' ಎಂದು ಅವಳ ಕೆನ್ನೆ ತಟ್ಟಿ ಮಗುವನ್ನು ಮಡಿಲಿಗೆ ಹಾಕಿಕೊಂಡೆ. ಭಾರತದ ಆಗರ್ಭ ಶ್ರೀಮಂತ ನೆಹರೂ ಮನೆತನಕ್ಕೆ 'ಗವರ್ನೆಸ್' ಆಗಿ ಡೆನ್ಮಾರ್ಕಿನಿಂದ ಬಂದ ನಾನು ಜವಾಹರಲಾಲ್ ನೆಹರೂ ಎಂಬುವವರ ಮಗಳಾದ ಇಂದಿರಾ ಪ್ರಿಯದರ್ಶಿನಿಯ ಮೊದಲ ಮಗುವನ್ನು ಎತ್ತಿಕೊಂಡ ಆ ಕ್ಷಣಗಳನ್ನು ಮರೆಯಲಾರೆ.

ಭಾರತದಲ್ಲಿ ನನ್ನ ದಿನಗಳು ಸಂತೋಷವಾಗಿ ಕಳೆದವೇನೋ ನಿಜ. ಆದರೆ ನೆಹರೂ ಕುಟುಂಬದವರು ಅಷ್ಟೊಂದು ಸಮಾಧಾನದಿಂದಿರಲಿಲ್ಲ. ಅದೇಕೋ ಅವರು ಬ್ರಿಟಿಷರ ವಿರುದ್ಧ ಜಗಳ ಕಾಯುತ್ತಿದ್ದರು. ಮಹಾತ್ಮಾ ಗಾಂಧಿ ಎಂಬ ವೃದ್ಧರೊಬ್ಬರ ಮಾತು ಕೇಳಿಕೊಂಡು ಮುಷ್ಕರಗಳನ್ನು ಹೂಡಿದ್ದರು. ಪಾಪ, ಗಂಡು ಹಡೆದ ಪ್ರಿಯಾ ಆ ಸಂತೋಷವನ್ನು ಹಂಚಿಕೊಳ್ಳಲು ಮನೆಯಲ್ಲಿ ಇದ್ದವರಾದರೂ ಯಾರು? ಅದೇನೋ 'ಚಲೇಜಾವ್ ಚಳವಳಿ'ಯಂತೆ, ಅದನ್ನು ಮಾಡಲು ಹೋಗಿ ಮನೆಯವರೆಲ್ಲ ಜೈಲು ಸೇರಿದ್ದರು. ಪ್ರಿಯದರ್ಶಿನಿಯನ್ನು ತುಂಬ ಹಚ್ಚಿಕೊಂಡಿದ್ದ ನಾನೇ ಅವಳ ತಾಯಾಗಿ, ತಂದೆಯಾಗಿ, ಗೆಳತಿಯಾಗಿ, ಅಕ್ಕನಾಗಿ ಉಳಿದೆ.


ಆಗಲೇ ಅಲ್ಲವೇ ಅವಳು ಅದೆಲ್ಲ ಹೇಳಿಕೊಂಡದ್ದು?

ಹೌದು, ಮಾತಿಗೊಮ್ಮೆ ಕರೆಯುತ್ತಿದ್ದಳು. ಹೋಗಿ ಪಕ್ಕದಲ್ಲಿ ನಿಂತರೆ ಕೈ ಹಿಡಿದು ತನ್ನ ಮಂಚದ ಮೇಲೇ ಕೂಡಿಸಿಕೊಂಡು ಕತೆಯೆಲ್ಲ ಹೇಳಿಕೊಳ್ಳುತ್ತಿದ್ದಳು.

''ಆ್ಯನಾ, ನನ್ನ ತಂದೆ ಜವಾಹರ್‌ಲಾಲ್ ನೆಹ್ರೂ ಮತ್ತು ಅಮ್ಮ ಕಮಲಾ ಮದುವೆಯಾದ ಇಪ್ಪತ್ತು ತಿಂಗಳಿಗೆ ನಾನು ಹುಟ್ಟಿದೆ ಕಣೇ. ಅಪ್ಪ ಬಲು ಬುದ್ಧಿವಂತ. ಎಂಥ ರಸಿಕ ಅಂತೀಯ? ನನ್ನನ್ನು ಜೀವದಂತೆ ಪ್ರೀತಿಸ್ತಾನೆ. ನಂಗೆ ಇಂದಿರಾ ಪ್ರಿಯದರ್ಶಿನಿ ಅಂತ ಹೆಸರಿಟ್ಟೋನೂ ಅವನೇ. ನಮ್ಮ ದೇಶದ ಹಿಂದೂಗಳಲ್ಲಿ ಹೆಣ್ಣುಮಗಳು ತನ್ನ ಮೊದಲ ಪ್ರಸವ ತವರು ಮನೇಲೇ ಆಗಬೇಕಂತ ಇಷ್ಟಪಡುತ್ತಾಳೆ. ನನ್ನಮ್ಮ ಕಮಲಾ ಅದರಂತೆಯೇ ಹೆರಿಗೆಗೆ ದಿಲ್ಲಿಗೆ ಹೋಗಬೇಕೂಂತ ಇದ್ದಳಂತೆ. ಆದರೆ ನನ್ನಜ್ಜ ಮೋತಿಲಾಲ್ ನೆಹರೂ ಮಾತ್ರ ಜಪ್ಪಯ್ಯ ಅಂದ್ರೂ ಒಪ್ಪದೆ ಆನಂದ ಭವನದಲ್ಲೇ ಇರಲೆಂದರಂತೆ. ಗಂಡು ಮಗುವಾದೀತೆಂದು ಕಾಯುತಿದ್ದ ನನ್ನಜ್ಜಿ ಸ್ವರೂಪರಾಣಿಗೆ ನಾನು ಹುಟ್ಟಿದ್ದು ಕಂಡು ನಿರಾಸೆಯಾಯಿತಂತೆ. 'ನೋಡ್ತಿರು, ನನ್ನ ಮಗಳು ಸಾವಿರಾರು ಗಂಡು ಮಕ್ಕಳಿಗಿಂತ ಪ್ರಬಲಳಾಗುತ್ತಾಳೆ. ಭಾಗ್ಯವಂತೆ!' ಎಂದರಂತೆ ಅಜ್ಜ ಮೋತಿಲಾಲ್.''

ಮಾತು ನಿಲ್ಲಿಸಿದ ಬಾಣಂತಿಯ ಕಂಗಳಲ್ಲಿ ಉತ್ಸಾಹವಿದ್ದರೂ ಮುಖದೊಳಗಿನ ದಣಿವು 'ಮಾತು ಸಾಕು' ಎನ್ನುತ್ತಿತ್ತು. ನಾನು ಇಂದಿರೆಗೆ ಕುಡಿಯಲು ಬಿಸಿ ನೀರೋ, ಕಾಫಿಯೋ ಕಲೆಸಿ ಕೊಡುತ್ತಿದ್ದೆ. ಅವಳು ಮತ್ತೆ ಮಾತಿಗಿಳಿಯುತ್ತಿದ್ದಳು.

''ಆ್ಯನಾ, ನನ್ನಂಥ ಶ್ರೀಮಂತರ ಹುಡುಗಿಗೆ ಶಾಲೆಯೊಂದು ಸಮಸ್ಯೇನಾ? ಆದ್ರೆ ನೋಡು, ನಮ್ಮಪ್ಪ ಕಾಂಗ್ರೆಸ್ಸು. ಆಗೆಲ್ಲ ಕಾಂಗ್ರೆಸ್ಸಿನೋರು ಬ್ರಿಟಿಷರನ್ನು ಬಹಿಷ್ಕರಿಸಿದ್ದ ಕಾಲ. ನನ್ನ ಓದಿಗೂ ಬಂತು ದಾಳಿ. ಮೊದಲು ನನ್ನನ್ನ ಅಲಹಾಬಾದಿನ ಮಾಡರ್ನ್ ಶಾಲೆಗೆ ಕಳಿಸಿದರು. ನನ್ನ ಶಾಲೆಯ



ಫಿರೋಜ್ - ಪ್ರಿಯಾ ವಿವಾಹ

ವಿಷಯಕ್ಕೆ ಬರೀ ನನ್ನ ಕುಟುಂಬದವರಲ್ಲ, ಮಹಾತ್ಮಾ ಗಾಂಧಿ ಕೂಡ ತಲೆ ಕೆಡಿಸಿಕೊಂಡಿದ್ದರು. ಶಾಲೆ ಬಿಡಿಸಿದರು. ಮನೆಯಲ್ಲೇ ಪಾಠ ಹೇಳಿಸಿದರು. 1926ರಲ್ಲಿ ಅಮ್ಮನಿಗೆ ಕ್ಷಯ ರೋಗ ಅಂತ ಗೊತ್ತಾದಾಗ ನಾನು ಅಪ್ಪ-ಅಮ್ಮನ ಜೊತೆ ಯೂರೋಪಕ್ಕೆ ಹೋದೆ ನೋಡು! ಅಲ್ಲಿ ಜನೀವಾದಲ್ಲಿ ಒಂದೂವರೆ ವರ್ಷ ಒಂದು ಶಾಲೇಲಿ ಓದಿದೆ. ಮತ್ತೆ 1927ರಲ್ಲಿ ಭಾರತಕ್ಕೆ ವಾಪಸು ಬಂದಾಗ ಸೇಂಟ್ ಮೇರೀಸ್ ಕಾನ್ವೆಂಟಗೆ ಸೇರಿದೆ. ಪುಣೆಯ ಗರ್ಲ್ಸ್ ಸ್ಕೂಲಿನಲ್ಲೂ ಓದಿದೆ. 1933ರ ನಂತರ ರವೀಂದ್ರನಾಥ ಠಾಕೂರಜೀ ಜೊತೇಲಿ ಶಾಂತಿನಿಕೇತನದಲ್ಲಿದ್ದೆ, ಗೊತ್ತಾ? ಅಲ್ಲೇ ನಂಗೆ ಹದಿನೇಳು ವರ್ಷ ತುಂಬಿದ್ದು.

''ಆದ್ರೆ ಅಷ್ಟರಲ್ಲಿ ಅಮ್ಮಂಗೆ ಮತ್ತೆ ಕ್ಷಯ ಬಂತು. ಮತ್ತೆ ಸ್ವಿಟ್ಜರ್‌ಲಂಡಿಗೆ ಹೋದ್ವಿ. 1936 ಫೆಬ್ರುವರೀಲಿ ಅಮ್ಮ ತೀರಿಕೊಂಡಳು. ಅಪ್ಪ ಅವಳ ಪಕ್ಕದಲ್ಲೇ ಕೂತು ಕಣ್ಣೀರಿಡ್ತಾ ಇದ್ದ. ಮನಸ್ಸು ಚುರ್ರಂದು ಹೋಯ್ತು ಲ್ಯಾನಾ ...! ಅವತ್ತೇ ನಾನು ನನ್ನ ತಂದೆ ಜವಾಹರ್‌ಲಾಲ್ ನೆಹ್ರೂಗೆ ತಾಯಿ, ಗೆಳತಿ, ಮಗಳು, ಬಂಧು, ಕಾರ್ಯದರ್ಶಿ .... ಎಲ್ಲವೂ ಆದೆ.''

ಇಂದಿರೆ ಉತ್ಸಾಹದಿಂದ ಹೇಳುತ್ತಿದ್ದಳು. ಅಷ್ಟರಲ್ಲಿ ಮಗು ಎದ್ದು ಅಳತೊಡಗಿತು. ಅದನ್ನು ಸುಧಾರಿಸಿ ಹಾಲೂಡಿಸಿ ಮಲಗಿಸಿದ ನಂತರ ಪ್ರಿಯದರ್ಶಿನಿ ಮತ್ತೆ ಮಾತು ಬಿಚ್ಚಿದಳು.

''ಮುಂದೆ ಓದಲು ನಾನು ಬ್ರಿಟನ್ನಿಗೆ ಹೋದೆ ನೋಡು ಲ್ಯಾನಾ, ನನ್ನ ಬದುಕಿನ ದಿಕ್ಕು ಬದಲಾ

ಯಿತು. ಅಲಹಾಬಾದಿನವರೇ ಆದ ಫಿರೋಜ್ ಗಾಂಧಿ ಆತ್ಮೀಯರಾದರು. ಪರಿಚಯ ಮೊದಲೇ ಇತ್ತು. ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ವಿದ್ಯಾರ್ಥಿಯಾಗಿದ್ದರು. ಆತ ನನ್ನ ತಾಯಿಯ ಆತ್ಮೀಯರು. ಆದರೆ ನನ್ನ ತಂದೆಗೆ ಆತನ ಬಗ್ಗೆ ಅಷ್ಟೊಂದು ಆಸಕ್ತಿಯಿರಲಿಲ್ಲ. ನಾನು ಶಾಂತಿನಿಕೇತನಕ್ಕೆ ಹೋಗುವ ಮೊದಲೇ ಫಿರೋಜ್ ನನ್ನೆಡೆಗಿನ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದರು. ಆದರೆ ನಾನೊಪ್ಪಿರಲಿಲ್ಲ. ಫಿರೋಜ್ ನನ್ನ ತಾಯಿಯೊಂದಿಗೂ ನಮ್ಮ ಮದುವೆಯ ಬಗ್ಗೆ ಪ್ರಸ್ತಾಪಿಸಿದ್ದರು.

''ಅದೊಂದು ಪ್ರಶಸ್ತ ಸಂಜೆ ಆ್ಯನಾ .... ಪ್ಯಾರಿಸ್ಸಿನ ಮೋಂಟ್ ಮಾರ್ಟ್ರೆಯ ಮೆಟ್ಟಿಲುಗಳನ್ನು ನನ್ನೊಂದಿಗೆ ಇಳಿದು ಬರುತ್ತಿದ್ದ ಫಿರೋಜ್ ನನ್ನನ್ನೇ ನೇರವಾಗಿ ಕೇಳಿದರು. .... ಆ್ಯನಾ, ನಾನು ಒಪ್ಪಿಕೊಂಡೆ .....'' ಇಂದಿರಾ ತುಂಬು ನಾಚಿಕೆಯ ದನಿಯಲ್ಲಿ ಹೇಳಿದ್ದಳು. ನಾನು ಪ್ರೀತಿಯಿಂದ ಅವಳ ಹಣೆ ನೇವರಿಸಿದೆ.

ಮುಂದಿನ ಕಥೆ ನನಗೆ ಗೊತ್ತೇ ಇತ್ತು. ಭಾರತಕ್ಕೆ ಅವರಿಬ್ಬರೂ ಮರಳಿ ಬಂದ ಮೇಲೆ ಅವರ ಪ್ರೇಮ ಪಕ್ವವಾಯಿತು. ಅದಕ್ಕೆ ಜವಾಹರರಿಂದ ಪ್ರತಿರೋಧ ಬಂದಾಗ ಮಹಾತ್ಮಾಗಾಂಧಿ ಆ ಫಾರಸೀ ಯುವಕನನ್ನು ಪ್ರಿಯದರ್ಶಿನಿ ಮದುವೆಯಾಗುವುದೇ ಸೂಕ್ತವೆಂದು ನಿರ್ಧರಿಸಿದರು. ಮಾರ್ಚ್ 26, 1942ರಂದು ಇಂದಿರಾ ಪ್ರಿಯದರ್ಶಿನಿ-ಫಿರೋಜ್‌ರ ಮದುವೆಯಾಗಿತ್ತು.

ಮದುವೆಯಾದ ಆರು ತಿಂಗಳಲ್ಲೇ ಗಂಡ ಹೆಂಡತಿಯರಿಬ್ಬರೂ ಜೈಲು ಕಂಡರು. ಸಾಲದೆಂಬಂತೆ ಇಂದಿರೆಯ ಸೋದರತ್ತೆ ವಿಜಯಲಕ್ಷ್ಮಿ ಕೂಡ ಜೈಲು ಪಾಲಾದಳು. ಜವಾಹರರನ್ನು ಅಹ್ಮದನಗರದ ಚಾಂದ್‌ಬೀಬಿಯ ಹಳೆಯ ಕೋಟೆಯ ಜೈಲಿನಲ್ಲಿಡಲಾಗಿತ್ತು. ಆ ಇಡೀ ಕುಟುಂಬಕ್ಕೆ ಕಾಂಗ್ರೆಸ್ಸಿನ ದೆವ್ವ ಹಿಡಿದಿತ್ತು. ಅದೇನು ಹೋರಾಟವೋ ಕಾಣೆ! 1944ರ ಅಗಸ್ಟ್ 20ರಂದು ಮೊಮ್ಮಗ ಹುಟ್ಟಿದರೆ ಅದನ್ನು ನೋಡಲು ಅಜ್ಜ ಬಂದದ್ದು ಹನ್ನೊಂದು ತಿಂಗಳ ನಂತರ ..... 15 ಜೂನ್ 1945ರಂದು. ಬಂದವರೇ ಮಗುವನ್ನೆತ್ತಿಕೊಂಡರು. ಜವಾಹರರ ಕಣ್ಣು ದೇದೀಪ್ಯಮಾನವಾಗಿ ಹೊಳೆಯುತ್ತಿದ್ದವು.

'ಅಪ್ಪಾ ...... ಮಗುವಿಗೊಂದು ಹೆಸರು ಕೊಡು' ಅಕ್ಕರೆಯಿಂದ ಕೇಳಿದಳು ಪ್ರಿಯದರ್ಶಿನಿ. ಮುದ್ದಾದ ಮಗು ಬೊಚ್ಚುಬಾಯಲ್ಲಿ ನಗುತ್ತಿತ್ತು. ಅದೇನನ್ನಿಸಿತೋ ಅಜ್ಜನಿಗೆ,

'ರಾಜೀವ್!' ಅಂದರು.

'ರಾಜ್ಯವಾಳು!' ಎಂಬ ಆದೇಶವೂ ಆ ಹೆಸರಿನಲ್ಲಿತ್ತೇನೋ! ಅದರ ಬದಲು ಎಲ್ಲ ಅಜ್ಜಂದಿರಂತೆ ಮೊಮ್ಮಗನ ತಲೆ ನೇವರಿಸಿ 'ನೂರ್ಕಾಲ ಬಾಳು' ಎನ್ನಬಾರದಿತ್ತೆ, ಅಂದುಕೊಂಡೆ.

ಜವಾಹರರನ್ನು ಒಂಬತ್ತನೆಯ ಬಾರಿ ಜೈಲಿನಿಂದ ಹೊರಬಿಡಲಾಗಿತ್ತು. ಮತ್ತು ಅದು ಕಡೆಯ ಕಾರಾವಾಸವೂ ಆಗಿತ್ತು. 1945ರ ದಿನಗಳು. ಊರೆಂಬ ಊರೇ ಸಡಗರಗೊಳ್ಳುತ್ತಿತ್ತು. ಬ್ರಿಟಿಷರು ದೇಶ ಬಿಟ್ಟು ಹೋಗುತ್ತಾರೆಂಬ ಸುದ್ದಿ ಮಿಂಚಿನಂತೆ ಸಂಚರಿಸುತ್ತಿತ್ತು. ಬ್ರಿಟಿಷರು ಬಿಟ್ಟು ಹೋದರೆ ಭಾರತೀಯರಿಗೇನು ಸಂತೋಷವೋ .... ಎಂದು ನನ್ನ ಡೇನಿಶ್ ಮನಸ್ಸು ಅಚ್ಚರಿಗೊಳ್ಳುತ್ತಿತ್ತು. ಏನೇ ಆದರೂ ಜವಾಹರರು ಸೆರೆಮನೆಯಿಂದ ಹೊರ ಬಂದುದು ನನಗಂತೂ ತುಂಬ ಸಂತೋಷವಾಗಿತ್ತು. ಅವರಿಟ್ಟ ಹೆಸರೇ ಗಟ್ಟಿಯಾಗಿ ನಾವೆಲ್ಲ ಮಗುವನ್ನು 'ರಾಜೀವ್' ಎಂದೇ ಕರೆಯತೊಡಗಿದೆವು. ಎಂಥ ಮುದ್ದು ಹುಡುಗ! ಕೊಂಚವೂ ಹಠವಿಲ್ಲ. ಅಮ್ಮನೇ ಬೇಕೆಂದಿಲ್ಲ. ಎತ್ತಿಕೊಂಡವರ ಕೂಸು. ಹೊಟ್ಟೆ ತುಂಬಿದ್ದು ಆಟಕ್ಕೆ ಬಿದ್ದರೆ, ಅವನದೇ ಲೋಕ. ನನ್ನೆದೆಯ ಮಿದುವಿನ ಮೇಲೆ ಅದೆಷ್ಟು ನೆಮ್ಮದಿಯ ರಾತ್ರಿಗಳನ್ನು ಕಳೆದನೋ ನನ್ನ ರಾಜೀವ!

ಜವಾಹರರಿಗೆ ಯಾವುದರ ಕೊರತೆ? ಒಬ್ಬಳೇ ಮಗಳು ಪ್ರಿಯಾ, ಅವಳ ಗಂಡ ಪ್ರವರ್ಧಮಾನಕ್ಕೆ ಬರಲಿ ಎಂದು ಬಯಸಿದ್ದರಲ್ಲಿ ಪಿತೃ ಸಹಜ ಪ್ರೀತಿಯಿತ್ತು. ಅಳಿಯ ಫಿರೋಜ್‌ಗಾಂಧಿಯನ್ನು ತನ್ನ ಒಡೆತನದಲ್ಲಿದ್ದ ಲಖನೌಗಿಂದ ಹೊರಡು

ತ್ತಿದ್ದ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯ ಮುಖ್ಯ ಸ್ಥನನ್ನಾಗಿ ಮಾಡಿದರು. ಹಿಂದೆ 1942ರಲ್ಲಿ ಪತ್ರಿಕೆಗಳ ಮೇಲೆ ಬ್ರಿಟಿಷರು ಅದೇನೋ 'ಸೆನ್ಸಾರ್' ಅಂತ ಹೇರಿದಾಗ ಈ ಪತ್ರಿಕೆಯನ್ನು ಮುಚ್ಚಿ ಹಾಕಲಾಗಿತ್ತು. ಪತ್ರಿಕೆ ಎಷ್ಟಾದರೂ ಜವಾಹರರ ದಲ್ಲವೆ? ಮತ್ತೆ ಶುರುವಾಯಿತು.

ಈ ಫಾರಸೀ ಹುಡುಗ ಫಿರೋಜನೇನೂ ಸಾಮಾನ್ಯನಲ್ಲ. ಮಹಾ ಗಟ್ಟಿಗ. ಹೆಂಡತಿ, ಮಗುವನ್ನು ಕರೆದುಕೊಂಡು ಲಖನೌಗೆ ಹೊರಟ. 1946ರಲ್ಲಿ ಪತ್ರಿಕೆ ಮತ್ತೆ ಶುರುವಾಯಿತು. ಇಂದಿರಾ ಆ ದಿನಗಳಲ್ಲಿದ್ದಷ್ಟು ಸಂತೋಷವಾಗಿ ಮತ್ತೆಂದೂ ನಾನವಳನ್ನು ನೋಡಲಿಲ್ಲ. ಎಂಥ ಅನ್ಯೋನ್ಯ ದಾಂಪತ್ಯ! ಪ್ರಿಯದರ್ಶಿನಿ ಮತ್ತೆ ಗರ್ಭವತಿಯಾದಳು. ಈ ಮುದ್ದು ಹುಡುಗ ರಾಜೀವ್ ನನ್ನ ಒಡಲು ಬಿಟ್ಟು ಕದಲಲಿಲ್ಲ. ಆಗಾಗ ಇಂದಿರಾ ಲಖನೌದಿಂದ ದಿಲ್ಲಿಗೆ ಹೋಗಿ ಬರುತ್ತಿದ್ದಳು. ವಿಧುರ ತಂದೆಗೆ ಮಗಳ ನೆರವು ತುಂಬಬೇಕಿತ್ತು. ಹಾಗೊಮ್ಮೆ ದಿಲ್ಲಿಗೆ ಹೋದಾಗಲೇ 1946 ಡಿಸೆಂಬರ್ ಹದಿನಾಲ್ಕರಂದು ಎರಡನೆಯ ಗಂಡುಮಗುವಿಗೆ ಪ್ರಿಯದರ್ಶಿನಿ ಜನ್ಮವಿತ್ತಳು.


ಅಜ್ಜ, ಮೊಮ್ಮಗನಿಗೆ ಹೆಸರಿಟ್ಟ 'ಸಂಜಯ್!'
ಎಂಥ ಮಗು ಅದು?

ಅದೇನು ಹೊರಳಾಟ, ಅದೆಂಥ ಕಿರುಚಾಟ, ಕೈ ಬೀಸಿದನೆಂದರೆ ಮುಗಿಯಿತು. ಹಿಡಿದಪಟ್ಟು ಬಿಡುವ ಮಾತೇ ಇಲ್ಲ. ನನ್ನ ರಾಜೀವನ ಸ್ವಭಾವಕ್ಕೆ ತದ್ವಿರುದ್ಧ. ಐದು ನಿಮಿಷ ಯಾರಾದರೂ ಮಾತಾಡಿಸಲಿಲ್ಲವೆಂದರೆ ಸಾಕು, ತೀನ್ ಮೂರ್ತಿ ಭವನದ ಸೂರು ಅದುರುವಂತೆ ಕಿರುಚುತ್ತಿದ್ದ. ಪ್ರಿಯದರ್ಶಿನಿಗೆ ಅವನನ್ನು ಹಿಡಿಯುವುದು ಸಾಕು ಸಾಕಾಗುತ್ತಿತ್ತು.

ದಿಲ್ಲಿ-ಲಖನೌಗಳ ನಡುವೆ ಓಡಾಡುತ್ತಿದ್ದ ಇಂದಿರೆಗೆ ಲಖನೌದ ಸಂಜೆಗಳು ಬಣ್ಣಗೆಡುತ್ತಿದ್ದುದು ಅರಿವಿಗೆ ಬಾರದಿರಲಿಲ್ಲ. ಒಬ್ಬಂಟಿಗನಾದ ತಂದೆಯನ್ನು ಹೊತ್ತು ಹೊತ್ತಿಗೆ ನೋಡಿಕೊಳ್ಳುವ ಜವಾಬ್ದಾರಿ, ಕ್ರಮೇಣ ಆಸೆಯಾಗಿ ಪರಿಣಮಿಸಿತು. ಫಿರೋಜ್ ತನ್ನ ಮಡದಿಯ ಅಂತರಂಗ ಅರಿತುಕೊಂಡವನಂತೆ, ಈ ವಿಷಯದಲ್ಲಿ ಹೆಚ್ಚೆಚ್ಚು ಮೌನಿಯಾದ. ಅಂತರ್ಮುಖಿಯಾದ. ಪ್ರೀತಿಸಿದ ಮಡದಿಗೆ ಹತ್ತಿರದವನಾಗದಿದ್ದರೂ ಬೇಡ, ಮಕ್ಕಳಿಗೊಬ್ಬ ಒಳ್ಳೆಯ ಅಪ್ಪನಾಗಲು ಆತ ತುಂಬ ಆಸೆಪಟ್ಟ.

ಮಕ್ಕಳಿಗೆ ಆಡಲು ಕಲಿಸುವುದೆಂದರೆ ಆ ಫಾರಸೀ ಹುಡುಗನಿಗೆ ಅದೆಂಥ ಪ್ರೀತಿಯೋ! ರಾಜೀವ್‌ನನ್ನು ಬಿಡುವಾದಾಗಲೆಲ್ಲ ಕೂಡಿಸಿಕೊಂಡು ಬೊಂಬೆ ಮಾಡಿ ಕೊಡುತ್ತಿದ್ದ. ಬೊಂಬೆ ಮಾಡುವುದು ಕಲಿಸುತ್ತಿದ್ದ. ಆ ಮೂಲಕ ಕ್ರಿಯಾತ್ಮಕವಾಗಿ ಬದುಕುವ ಕನಸು ತುಂಬುತ್ತಿದ್ದ. ರಾಜೀವ್ ನೂರಕ್ಕೆ ನೂರು ಅಪ್ಪನ ಮಗನೇ! ಅದೇ ನೆಮ್ಮದಿಯ, ಸ್ಥಿರವಾದ, ಪ್ರಶಾಂತ ಸ್ವಭಾವ. ತಂದೆಯಿಂದ ದುಡಿಮೆ, ಶ್ರಮ, ಆತ್ಮಾಭಿಮಾನದ ಪಾಠಗಳನ್ನು ಕಲಿತಿದ್ದ. ಅಂತೆಯೇ ಭಾರತೀಯ ಶಾಸ್ತ್ರೀಯ ಸಂಗೀತ ಈತನಿಗೆ ಬಾಲ್ಯದಿಂದಲೇ ಪ್ರಿಯವಾಯಿತು. ಅದು ಫಿರೋಜ್ ಗಾಂಧಿಯ ಅಚ್ಚುಮೆಚ್ಚು. ಪ್ರಾಣಿಗಳೆಂದರಂತೂ ರಾಜೀವ್ ಕುಣಿದಾಡಿಬಿಡುತ್ತಿದ್ದ. ನಾಯಿ, ಗಿಳಿ, ಪಾರಿವಾಳ, ಅಳಿಲು, ಹುಲಿಮರಿ ..... ಓ .... ಮನೆಯಲ್ಲಿದ್ದುದು ಒಂದೇ ಎರಡೇ

ಭಾರತಕ್ಕೆ ಸ್ವಾತಂತ್ರ್ಯ ಬಂದು ನೆಹ್ರೂ ಪ್ರಧಾನಿಯಾಗಿದ್ದರು. ಅಪ್ಪನನ್ನು ನೋಡಿಕೊಳ್ಳುವ ಜವಾಬ್ದಾರಿಯೊಂದಿಗೆ ಒಂದು ದೇಶದ ಸರ್ವೋಚ್ಚ ಅಧಿಕಾರವನ್ನು ಅತ್ಯಂತ ಹತ್ತಿರದಿಂದ ನೋಡುವ, ಅನುಭವಿಸುವ ಅಭಿಲಾಷೆ ಪ್ರಿಯದರ್ಶಿನಿಯನ್ನು ಕ್ರಮೇಣ ಫಿರೋಜ್‌ನಿಂದ ದೂರ ಮಾಡಿತು. 'ಛೆ, ಇದಲ್ಲಮ್ಮಾ ಪ್ರಿಯಾ, ಇದಲ್ಲ ದಾರಿ' ಎಂದು ಸಾವಿರ ಸಲ ಹೇಳಬಯಸಿದೆನಾದರೂ ನೆಹರೂ ಮನೆತನದ ಒಬ್ಬ ಸಾಮಾನ್ಯ 'ಗವರ್ನೆಸ್' ಆಗಿ ನಾನು ಆಡಬಹುದಾದ ಮಾತಲ್ಲ ಬಿಡು ಎಂದುಕೊಂಡು ಸುಮ್ಮನಾದೆ. ನನಗಿಂತ ಹೆಚ್ಚು ಮೌನಿಯಾಗಿದ್ದವನು ಫಿರೋಜ್ ಗಾಂಧಿ. ಆತನ ಮನಸ್ಸು ಒಳಗೆಲ್ಲೋ ಸದ್ದಿಲ್ಲದೆ ಮುರಿದು ಹೋಗಿತ್ತು.



ಕಮಲಾ - ಜವಾಹರ - ಇಂದಿರಾ

ಪ್ರಿಯದರ್ಶಿನಿ ತನ್ನ ಮಕ್ಕಳೊಂದಿಗೆ ದಿಲ್ಲಿಗೆ ಬಂದು ನೆಲೆಸಿದಳು. ಆಕೆ ಭಾರತದ ಪ್ರಪ್ರಥಮ ಪ್ರಧಾನಿಯ ಅತ್ಯಂತ ಹತ್ತಿರದ ವ್ಯಕ್ತಿಯಾಗಿದ್ದಳು. ನಾಲ್ಕೂವರೆ ವರ್ಷದ ಕಂದಮ್ಮ ರಾಜೀವ್ ಗಾಂಧಿಯನ್ನು ಇಂದಿರಾಪ್ರಿಯದರ್ಶಿನಿ ಅದೊಂದು ದಿನ ಆ ಮಹಾತ್ಮಾಗಾಂಧಿ ಎಂಬ ವೃದ್ಧರ ಬಳಿಗೆ ಕರೆದೊಯ್ದಳು. ರಾಜೀವ್ ಆ ಅಜ್ಜನಿಗೆ ಹೂವು ಕೊಟ್ಟು ನಮಸ್ಕರಿಸಿದ. ಅಜ್ಜ, ಮಹಾತ್ಮಾಗಾಂಧಿ ಮಗುವಿನ ಕೆನ್ನೆ ತಟ್ಟಿ, ತಲೆ ಸವರಿ ಆಶೀರ್ವದಿಸಿದರು. ಅವತ್ತೇ ಕೊನೆ.

ಮರುದಿನ ಮಹಾತ್ಮಾಗಾಂಧಿಯನ್ನು ನಾಥೂರಾಮ್ ಘೋಡಸೆ ಎಂಬಾತನು ದಾರುಣವಾಗಿ ಕೊಂದು ಹಾಕಿದ.

ಭಾರತವೆಂಬ ಶಾಂತ ದೇಶದಲ್ಲಿ ಮಾನವ ಪ್ರೇಮದ ತತ್ವ ಸಾರಿದ ಧರ್ಮ ಮತ್ತು ಜಾತಿಗಳು ಮೊದಲ ಬಾರಿಗೆ ಜ್ವರಪೀಡಿತವಾದವು. ನಾಥೂರಾಮ ಘೋಡ್ಸೆ ಆ ವೃದ್ಧರ ಕೊಲೆಯ ಮೂಲಕ ತನ್ನ ಜಾತಿ-ಮತಗಳ ಸೈತಾನನ ರಾಜ್ಯಕ್ಕೆ ಮೊದಲ ಕಂದಾಯ ಕಟ್ಟಿದ್ದ. ಆಮೇಲೆ ದೇಶದಲ್ಲಿ ಏನೆಲ್ಲ ಆದವು. ಸಾವುಗಳ ಸಾಲೇ ಸಾಲು.

ನಾನು ನೆಹರೂ ಮನೆತನದ 'ಗವರ್ನೆಸ್' ನೌಕರಿಯಿಂದ ನಿವೃತ್ತಳಾಗಿ ನನ್ನ ಕಡು ಚಳಿಯ ದೇಶಕ್ಕೆ ಮರಳಿ ಬಂದೆ.

ಮೂಲೆಗಲ್ಲು ಹೇಳಿದ ಕಥೆ :

ನಿಮಗೆ ನಾನು ಗೊತ್ತಿಲ್ಲ.

ಬಹಳ ಜನಕ್ಕೆ ಗೊತ್ತಿಲ್ಲ. ನನ್ನ ಒಡತಿಯ ಹೆಸರು ದೇಶಕ್ಕೇ ಗೊತ್ತು. ತೀನ್ ಮೂರ್ತಿ ಭವನ! ಅದೇಕೋ ನಾನದನ್ನು 'ಒಡೆಯ' ಅನ್ನಲಾರೆ. ಒಡತಿಯೆಂಬ ಹೆಸರೇ ಸರಿ. ಎಂಥ ಹೆಣ್ಣುಕರುಳು .... ಏನೆಲ್ಲ ನೋಡಿದ್ದಾಳೆ .... ನೋಡಿಯೂ ಸುಮ್ಮನಿದ್ದಾಳೆ. ಸರಿ, ಈಗ ನಾನ್ಯಾರೆಂದು ಹೇಳುತ್ತೇನೆ ಕೇಳಿ.

ನಾನು ನನ್ನೊಡತಿಯ ಬುನಾದಿಯೊಳಗಿನ ಮೂಲೆ ಕಲ್ಲು. ನನ್ನಂತೆ ನೂರಾರು, ಸಾವಿ

ರಾರು ಕಲ್ಲು ನನ್ನೊಡತಿಯ ಮೈ ತುಂಬ ಮೆತ್ತಿಕೊಂಡಿವೆ. ಅದಷ್ಟೇ ಅಲ್ಲ, ದಿಲ್ಲಿಯ ಬಂಗಲೆಗಳ ಎಲ್ಲ ಬುನಾದಿ ಕಲ್ಲುಗಳೂ ನನ್ನ ಪದರಿನವೇ! ಪಾಂಡವರಂಥ ಪಾಂಡವರಾಳಿದ ಹಸ್ತಿನಾವತಿಯ ದಿನಗಳಿಂದ ಹಿಡಿದು ಇಂದಿನೀವತ್ತಿನ ವರ್ತಮಾನದ ತನಕ ದಿಲ್ಲಿಯ ಏರಿಳಿತಗಳನ್ನು ಕಂಡಿದ್ದೇವೆ. ನಾವು ಮಾತನಾಡಿಲ್ಲ. ಮೌನ ಮುರಿದಿಲ್ಲ. ಅಧಿಕಾರದ ಭಾರಕ್ಕೆ ಕಿರುಗುಟ್ಟಿದ್ದೇವೆ, ಪಾಪದ ಕೊಡ ತುಂಬಿ ಬಂದಾಗ ಹೂಂಗುಟ್ಟಿದ್ದೇವೆ. ಮತ್ತೆ ಸುಮ್ಮನಾಗಿದ್ದೇವೆ.

ಮೊನ್ನೆ ಮೊನ್ನಿನ ಹುಡುಗ ರಾಜೀವ್ ಗಾಂಧಿ ಪುಟಪುಟನೆ ಹೆಜ್ಜೆಯಿಕ್ಕುತ್ತ ಅವರಮ್ಮನ ಸೆರಗು ಹಿಡಿದು ನನ್ನೆದೆಯ ಮೇಲೆಲ್ಲ ಓಡಾಡಿದ್ದು ನನಗೆ ಇಂದಿಗೂ ನೆನಪಿದೆ. ಮಹಾತ್ಮಾಗಾಂಧಿ ಕೊಲೆಯಾದ ದಿವಸ ನನ್ನೊಡತಿಯ ಒಡಲಲ್ಲಿ ಅಳು, ಉನ್ಮಾದ, ಆಕ್ರೋಶ, ಅಸಹಾಯಕತೆಗಳ ಹಿಂಡೇ ಅಲೆದಿತ್ತು. ಆದರೆ ಎಂಥ ಜಾಣ, ನೆಹರೂ! ಕೆಲವೇ ದಿನಗಳಲ್ಲಿ ಎಲ್ಲ ಮರೆತು ಕೆಂಪು ಕೋಟೆಯ ಗುಂಬಸ್ಸಿನ ಮೇಲೆ ನಿಂತು ಬಿಳಿಯ ಪಾರಿವಾಳಗಳ ರೆಕ್ಕೆಯರಳಿಸತೊಡಗಿದ. ರಾಜಕಾರಣದ ಕೆನ್ನೆಯ ಮೇಲೆ ಕಣ್ಣೀರು ಎಷ್ಟು ಹೊತ್ತು ನಿಂತೀತು?

ಮಹಾತ್ಮಾ ಗಾಂಧಿ ಮರೆಯಾಗಿ ಹೋದ.

ಆದರೆ ಮೌನದುಸುಬಿನಲ್ಲಿ ಕುಳಿತೇ ಸಿಡಿಯುತ್ತಿದ್ದ ಮತ್ತೊಬ್ಬ ಗಾಂಧಿಯ ಬಗ್ಗೆ ನನ್ನೊಡತಿ ಕಾತರಳಾಗಿದ್ದಳು. ನೆಹರೂಜಿಯ ಮಗಳು ಇಂದಿರಾ ಪ್ರಿಯದರ್ಶಿನಿ ಗಂಡನ ಮನೆಯಿಂದ ಮಕ್ಕಳನ್ನು ಕರೆದುಕೊಂಡು ದಿಲ್ಲಿಗೆ ಬಂದಿದ್ದಳಷ್ಟೆ? ತಂದೆಯೊಡನೆ ರಾಜಕೀಯದ ಚಾವಡಿಗಳಲ್ಲಿ ಓಡಾಡಿದ ಹೆಣ್ಣು ಮಗಳು ಕೆಲವೇ ದಿನಗಳಲ್ಲಿ ಪ್ರಬುದ್ಧ ಹೆಂಗಸಾದಳು. ಪ್ರಧಾನಿಯನ್ನು ಕಾಣ ಬಂದವರು ಎಷ್ಟೋ ಜನ ಇಂದಿರಾಜಿಯನ್ನು ಕಂಡು ಸಂತೃಪ್ತರಾಗಿ ಮರಳಬೇಕಾಗುತ್ತಿತ್ತು. ಕಾಂಗ್ರೆಸ್ಸಿನೊಳಗೂ ಆಕೆ ಪ್ರಬಲಳಾದಳು.

1957ರ ಹೊತ್ತಿಗೆ (ಸ್ವಾತಂತ್ರ್ಯ ಬಂದ ಹತ್ತೇ ವರ್ಷದೊಳಗೆ) ಪ್ರಿಯದರ್ಶಿನಿ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಬೋರ್ಡಿನ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದಳು. ಅವು ನಿಜಕ್ಕೂ ಆಕೆಯ ಉಚ್ಛ್ರಾಯದ ದಿನಗಳು. ಬದಲಾಗುತ್ತಿದ್ದ ದೇಶದ ರಾಜಕಾರಣಕ್ಕೆ ತಕ್ಕ ಹೆಜ್ಜೆಯೂರಿಕೊಂಡು ನಡೆಯುವ ಕಲೆ ಆಕೆಗೆ ಕರಗತವಾಗಿತ್ತು.

ಆದರೆ ಲಖನೌದಲ್ಲಿ ಆಕೆ ಬಿಟ್ಟು ಬಂದಿದ್ದ ಮಹಾಮೌನಿ ಫಿರೋಜ್‌ಗಾಂಧಿ 1942ರ ಚಲೆ ಜಾವ್ ಚಳವಳಿಯ ಆದರ್ಶಗಳ ಮೊಟ್ಟೆಯಿಂದ ಇನ್ನೂ ಹೊರಬಂದಿರಲಿಲ್ಲ. ಅತ್ಯುತ್ತಮ ಸಂಸದೀಯ ಪಟುವಾಗಿದ್ದ ಫಿರೋಜ್ ತನ್ನ ಪ್ರಗತಿಪರ ನಿಲುವಿಗೆ ಬದ್ಧನಾಗಿದ್ದ. ಲಂಚಕೋರತನದ ಪ್ರಬಲ ವಿರೋಧಿಯಾಗಿದ್ದ ಈ ನೆಹರೂ ವಂಶದ ಅಳಿಯ 1957ರಲ್ಲಿ ಖಾಸಗಿ ವಾಣಿಜ್ಯೋದ್ಯಮಿಗಳು ಹಾಗೂ ಸರ್ಕಾರಿ ಒಡೆತನದ ವಿಮಾ ನಿಗಮವೊಂದರ ಲಂಚಕೋರ ಚಟುವಟಿಕೆಗಳನ್ನು ಹಠಾತ್ತನೆ ಬಯಲುಗೊಳಿಸಿದಾಗ ತೀನ್ ಮೂರ್ತಿಭವನದ ಗೋಡೆಗಳು ಕಂಪಿಸಿದವು. ನೆಹರೂಜಿಯ ನೆಚ್ಚಿನ ಹಿಂಬಾಲಕರಾಗಿದ್ದ ಟಿ.ಟಿ.ಕೃಷ್ಣಮಾಚಾರಿ (ಅಂದಿನ ಹಣಕಾಸು ಮಂತ್ರಿ) ರಾಜಿನಾಮೆ ಕೊಡುವ ಪ್ರಸಂಗವುಂಟಾಯಿತು. ನೆಹರೂ ಸಿಡಿಮಿಡಿಗೊಂಡು ಮನೆಯ ತುಂಬ ಓಡಾಡಿದರು. ಫಿರೋಜ್‌ಗಾಂಧಿ ರಾಷ್ಟ್ರದಾದ್ಯಂತ ಖ್ಯಾತರಾದರು. ಆದರೆ ಅದೆಲ್ಲಿ ಹೊಂಚಿ ಕುಳಿತಿತ್ತೋ ಸಾವು ..... 1959ರಲ್ಲಿ ಮೊದಲ ಹೃದಯಾಘಾತಕ್ಕೊಳಗಾದ ಫಿರೋಜ್ 1960ರ ಸಪ್ಟಂಬರಿನಲ್ಲಿ ತಮ್ಮ ನಲವತ್ತೆಂಟನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.

ತೀನ್ ಮೂರ್ತಿಭವನ ತನ್ನ ವಿಧವೆ ಮಗಳನ್ನು ತಬ್ಬಿ ಸಂತೈಸಿತು. ಆದರೆ ಇಂದಿರಾಪ್ರಿಯದರ್ಶಿನಿ ವೈಧವ್ಯದ ಮುಸುಕಿನಲ್ಲಿ ಮುಳುಗಲಿಲ್ಲ. ರಾಜಕಾರಣ ಕೆನ್ನೆಯೊರೆಸಿತು. ತಂದೆಯ ನೆರಳಾಗಿ ನಿಂತಿದ್ದವಳು ಈಗಂತೂ ರಾಜಕಾರಣದಲ್ಲಿ ಐಕ್ಯಳಾಗಿ ಹೋದಳು. ನಾವು ರಾಜೀವ್, ಸಂಜಯರ ಪುಟ್ಟ ಹೆಜ್ಜೆಗಳ ನವಿರು ಭಾರ ಹೊತ್ತು ಪುಳಕಿತರಾಗುತ್ತಲೇ ಇದ್ದೆವು. ರಾಜೀವ್ ಈಗ ಜರ್ಮನ್ ಹೆಣ್ಣು ಮಗಳಾದ ಎಲಿಜಬೆತ್

ಗುಬಾ ಎಂಬಾಕೆ ನಡೆಸುತ್ತಿದ್ದ ಶಿಶುವಿಹಾರಕ್ಕೆ ಹೋಗತೊಡಗಿದ್ದ. ಮುಂದೆ ವೆಲ್ಹಮ್ ಬಾಯ್ಸ್ ಪ್ರಿಪರೇಟರಿ ಸ್ಕೂಲು ಮುಗಿಸಿ ಡೆಹರಾಡೂನಿನ ಡೂನ್ ಶಾಲೆ ಸೇರಿದ. ಆಗ ಮುದ್ದು ಬಾಲಕ ರಾಜೀವ್‌ಗೆ ಬರೀ ಹನ್ನೊಂದು ವರ್ಷ. ಡೂನ್ ಶಾಲೆಯಲ್ಲಿ 'ಮುಟ್ಟಿದರೆ ಮುನಿ' ಯಂತೆ ನಾಚುತ್ತಲೇ ಓಡಾಡಿಕೊಂಡಿದ್ದ ರಾಜೀವ್ ಸದಾ ಕಡೆಯ ಬೆಂಚಿನ ಹುಡುಗನೇ. ಆಟಗಳಲ್ಲೂ ಆತ ಮುಂದಿರಲಿಲ್ಲ. ಈ ಹುಡುಗ ಪ್ರಯೋಗಶೀಲನೂ ಅಲ್ಲ. ತಮ್ಮನಂತೆ ಅಪಾಯಕಾರಿಯೂ ಅಲ್ಲ ಅನ್ನಿಸಿಕೊಂಡ. ಆದರೆ ಆತನ ನೆಮ್ಮದಿಯ ನಡವಳಿಕೆ ಎಲ್ಲರಿಗೂ ಪ್ರಿಯವಾಗುವಂತಿತ್ತು. 1960ರಲ್ಲಿ ರಾಜೀವ್ ಕೇಂಬ್ರಿಜ್ ಪರೀಕ್ಷೆಯನ್ನು ದ್ವಿತೀಯ ದರ್ಜೆಯಲ್ಲಿ ಮುಗಿಸಿದಾಗ, ನಮಗಾದರೂ ಏನು ಗೊತ್ತು ..... ಈತ ಮುಂದೆ ರಾಷ್ಟ್ರದ ರಾಜಕಾರಣಕ್ಕೆ ದಾರಿ ತೋರುವಾತನಾದಾನೆಂದು? ಏನೇನೋ ಮಾತಾಡಿಕೊಂಡೆವು. ಪಂಡಿತ ಪುತ್ರರಲ್ಲಾ ಇಷ್ಟೇ ..... ಅಂತ.

ಮುಂದೆ ಕೆಲವೇ ದಿನಗಳಲ್ಲಿ ರಾಜೀವ್‌ನನ್ನು ಲಂಡನ್ನಿಗೆ ಕಳಿಸಲಾಯಿತು. ಮೊದಲು ಇಂಪೀರಿಯಲ್ ಕಾಲೇಜಿನಲ್ಲಿ ಕಲಿಯತೊಡಗಿದ ರಾಜೀವ್ ಎರಡನೇ ವರ್ಷದಲ್ಲೇ ಜಗದ್ವಿಖ್ಯಾತ ಟ್ರಿನಿಟಿ ಕಾಲೇಜು ಸೇರಿಕೊಂಡ. ಅಲ್ಲಿ ಈ ರಾಜಪುತ್ರ ಕಲಿಯಲು ತೊಡಗಿದ್ದು ಮೆಕ್ಯಾನಿಕಲ್ ಇಂಜನೀಯರಿಂಗು! ಅದ್ಯಾಕೆ ಬೇಕಿತ್ತೋ, ಪುಕ್ಕ ಕಟ್ಟಿಕೊಂಡು ಹಾರ ಬಯಸಿದವನಿಗೆ? ಇಲ್ಲಿ ಅಮ್ಮ, ಅಜ್ಜನ ಮಧ್ಯೆ ಮುದ್ದಾಗಿ ಬೆಳೆದವನು ಅಲ್ಲಿ ಇಂಗ್ಲಂಡಿನಲ್ಲಿ ಪಟ್ಟ ಪಾಡು ಪಾಡಲ್ಲ ನೋಡಿ. ಅದೆಂಥ ಹಣದ ಕೊರತೆಯಿತ್ತೋ ಈ ರಾಜಕುಮಾರನಿಗೆ .... ಐಸ್‌ಕ್ರೀಮ್ ಮಾರಿದನಂತೆ, ಲಾರಿಗೆ ಮೂಟೆ ಹೊತ್ತನಂತೆ, ಬೇಕರಿಯೊಂದರಲ್ಲಿ ರಾತ್ರಿ ಹೊತ್ತು ದುಡಿಯುತ್ತಿದ್ದನಂತೆ! ತೀನ್‌ಮೂರ್ತಿ ಭವನದ ಹಾಲುಗಲ್ಲುಗಳ ಮೇಲೆ ಮಖಮಲ್ಲಿನ ಹಾಸು ಹೊದಿಸಿ ಕೈ ಹಿಡಿದು ನಡೆಸಲ್ಪಡುತ್ತಿದ್ದ ಹುಡುಗ ಲಂಡನ್ನಿನ ಚಳಿಯಲ್ಲಿ ಮೂಟೆ ಹೊತ್ತನೆಂಬ ಸುದ್ದಿ ಕೇಳಿ



ತಾಯಿ - ತಾತ ಮತ್ತು ಲೇಡಿ ಮೌಂಟಬ್ಯಾಟನ್‌ರೊಂದಿಗೆ ಮೂರು ವರ್ಷದ ರಾಜೀವ

ನಾವೆಲ್ಲ ಪೇಚಾಡಿಕೊಂಡೆವು. ಕಡೆ ಕಡೆಗೆ ಆತ ತೋಟವೊಂದರಲ್ಲಿ ಹಣ್ಣು ಹರಿಯಲು ಹೋದದ್ದೂ ಹೌದಂತೆ!

ನೋಡಲು ತುಂಬ ಸುಂದರನಾದ ರಾಜೀವ್ ಅದೆಂಥಾ ಒಳಮುಚ್ಚುಗ ಮನುಷ್ಯನೆಂಬುದು ನಮಗೆ ಗೊತ್ತಿತ್ತು. ಹುಡುಗಿಯರಿಂದ ಗಾವುದ ದೂರ. ಗೆಳೆಯರೊಂದಿಗೆ 'ಪಬ್ಬು'ಗಳಿಗೆ ಹೋದರೂ ತನ್ನ ಪಾಡಿಗೆ ತಾನು 'ಕೋಲಾ' ಕುಡಿಯುವ ಜಾಣ. ಗೆಳೆಯರೊಂದಿಗೆ ತಾಸುಗಟ್ಟಲೆ ಭಾರತದ ರಾಜಕಾರಣದ ಬಗ್ಗೆ ಚರ್ಚೆ ಮಾಡಿದರೂ ಲಂಡನ್ನಿನ ವಿದ್ಯಾರ್ಥಿ ಚಳವಳಿಗಳ ತಂಟೆಗೆ ಹೋದವನಲ್ಲ. ಅಷ್ಟೇಕೆ, ಎಂದಿಗೂ ಲಂಡನ್ನಿನಲ್ಲಿ ತಾನು ಭಾರತದ ಪ್ರಧಾನಿಯ ಮೊಮ್ಮಗನೆಂದು ಹೇಳಿಕೊಳ್ಳದ ಅಂತರ್ಮುಖಿ ರಾಜೀವ್.

ಅಂಥ ಹುಡುಗ ಇದ್ದಕ್ಕಿದ್ದಂತೆ ನಮ್ಮ ಬಂಗಲೆಯ ಗೋಡೆಗಳಿಗೆ ಸುದ್ದಿಯಾದ. 'ಇಟಲಿಯ ಹುಡುಗಿಯಂತೆ ..... ಸೋನಿಯಾ ಮೈನೋ ಅಂತ ..... ಇಟಲಿಯಿಂದ ಇಂಗ್ಲಂಡಿಗೆ ಇಂಗ್ಲೀಷು ಕಲಿಯಲು ಬಂದವಳಂತೆ! ನೋಡೋಕೆ ತುಂಬ ಚೆನ್ನಾಗಿದ್ದಾಳಂತೆ ....!' ನಾವು ಬಿಡುವಿಲ್ಲದೆ ಹಗಲು ರಾತ್ರಿ ಹರಟಿದೆವು. ಬೆಳಗಾಗುವದರೊಳಗಾಗಿ ನಮ್ಮ ರಾಜಕುವರ ತನ್ನ ಇಟಲಿಯ ಗೆಳತಿಯೊಂದಿಗೆ ಬಂದಿಳಿದೇ ಬಿಟ್ಟ. ಆಕೆಯನ್ನು ನೇರವಾಗಿ ಮನೆಗೆ ಕರೆ ತರದೆ ತನ್ನ ಅಕ್ಕರೆಯ ಗೆಳೆಯರಾದ 'ಬಚ್ಚನ್' ಕುಟುಂಬದವರ ಮನೆಯಲ್ಲಿಟ್ಟದ್ದು ತೀನ್ ಮೂರ್ತಿಭವನದ ಸಣ್ಣ ಪುಟ್ಟ ಕಲ್ಲುಗಳಿಗೂ ಸಿಟ್ಟು ಬರಿಸಿತ್ತು. 'ನಮ್ಮ ಮನೆಯ ಸೊಸೆ ನಮ್ಮ ಮನೆಗೆ ಬರಬಾರದೆ' ಎಂದು ರೇಗಿಕೊಂಡೆವು.

ಆದರೆ ಜವಾಹರ್‌ಲಾಲ್ ನೆಹರೂ 1964ರಲ್ಲಿ ಗತಿಸಿದ ನಂತರ ತೀನ್‌ಮೂರ್ತಿ ಭವನಕ್ಕೂ-ನೆಹರೂ ಕುಟುಂಬಕ್ಕೂ ಸಂಬಂಧ ಕಡಿದು ಹೋಗಿ ನಮ್ಮ ಭವನವೀಗ ಕೇವಲ ಸ್ಮಾರಕವೆಂಬುದು ನಮ್ಮ ಅರಿವಿಗೇ ಬರಲಿಲ್ಲ. ಎಷ್ಟೋ ದಿನಗಳ ನಂತರ 1968ರ ಫೆಬ್ರುವರಿ 25ರಂದು ರಾಜೀವ್, ಸೋನಿಯಾ ಮೈನೋರನ್ನು ಮದುವೆಯಾದರೆಂದು ತಿಳಿದು ಬಂತು. ನಮ್ಮ ಮನೆಗೆ ಬಾರದಿದ್ದರೇನಂತೆ, ಸೊಸೆ ಸೋನಿಯಾ ಎಲ್ಲಿದ್ದರೂ ನಮಗೆ ಸುದ್ದಿ ತಿಳಿಯುತ್ತಲೇ ಇತ್ತು. ದಿಲ್ಲಿಯ ಯಾವ ಮನೆಯ ಬುನಾದಿ ಕಲ್ಲೂ ಒಬ್ಬಂಟಿಯಲ್ಲ. ನಾವೆಲ್ಲ ಒಂದೇ ಪದರಿನ ಕಲ್ಲುಗಳು. ಸುದ್ದಿ ಬರುತ್ತಲೇ ಇತ್ತು. ಈಗಲೂ ಬರುತ್ತಿದೆ .... ಸಫ್ದರ್ ಜಂಗ್ ರಸ್ತೆಯ ಮೊದಲ ಮನೆಯಿಂದ, ಜನಪಥ್ ರಸ್ತೆಯ ಹತ್ತನೇ ಮನೆಯಿಂದ... ಆದರೆ ಮೊದಲಿನ ಉತ್ಸಾಹ, ಸಂತಸ ಈಗ ಉಳಿದಿಲ್ಲ.

ಇಂಗ್ಲಂಡಿನಿಂದ ಹಿಂತಿರುಗುವಾಗ ಕೈಯಲ್ಲಿ ಡಿಗ್ರಿಯಿರದಿದ್ದರೂ ಮೆಚ್ಚಿದ ಮಡದಿಯೊಂದಿಗೆ ಬಂದ ರಾಜೀವ್, ಆ ಹೊತ್ತಿಗಾಗಲೇ ರಾಜಕಾರಣದಲ್ಲಿ ಮೇರು ಶಿಖರವೇರತೊಡಗಿದ್ದ ತಾಯಿಯನ್ನು ಕಂಡು ಹೆಮ್ಮೆಯಿಂದ ಮುಗುಳ್ನಕ್ಕನೇ ಹೊರತು ರಾಜಕಾರಣದ ಗೋಜಲಿಗೆ ಕೈ ಹಾಕಲಿಲ್ಲ. 'ಅಮ್ಮಾ, ನಾನು ವಿಮಾನವೇರುತ್ತೇನೆ' ಎಂದ.

ಮೊದಲಿನಿಂದಲೂ ರಾಜಕಾರಣಕ್ಕೆ ಹೇಳಿ ಮಾಡಿಸಿದ ಸ್ವಭಾವ ತನ್ನ ಹಿರಿಯ ಮಗನದಲ್ಲವೆಂದು ತೀರ್ಮಾನಿಸಿದ್ದ ಇಂದಿರಮ್ಮ ರಾಜೀವ್‌ನನ್ನು ದಿಲ್ಲಿಯ ಫ್ಲೈಯಿಂಗ್ ಕ್ಲಬ್‌ಗೆ ಸೇರಲು ಕೂಡಲೆ ಅನುಮತಿಸಿದರು. ಪ್ರವೇಶ ಪರೀಕ್ಷೆ ಪಾಸು ಮಾಡಿದ ರಾಜೀವ್ ಖಾಸಗಿ ಪೈಲಟ್ ವೃತ್ತಿಯ ಜೊತೆಗೆ ಕಮರ್ಶಿಯಲ್ ಪೈಲಟ್ ವೃತ್ತಿಯ ಅನುಮತಿ ಪತ್ರಗಳನ್ನೂ ಸಂಪಾದಿಸಿದ. ಕೆಲವೇ ದಿನಗಳಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನದ ಡ್ರೈವರಿಕೆ ದೊರೆಯಿತು.

ಸಫ್ದರ್ ಜಂಗ್ ರಸ್ತೆಯ ಮನೆಯಲ್ಲಿ ಹೆಂಡತಿ ಸೋನಿಯಾ, ತಾಯಿ ಇಂದಿರಾಜಿ ಜೊತೆ ತನ್ನ ಬದುಕಿನ ಅತ್ಯುತ್ತಮ ದಿನಗಳನ್ನು ಕಳೆಯತೊಡಗಿದ ರಾಜೀವ್ 1970ರ ಜೂನ್ 19ರಂದು ಮೊದಲ ಮಗ ರಾಹುಲನನ್ನೆತ್ತಿಕೊಂಡ. ಮಗಳು ಪ್ರಿಯಾಂಕ 1972ರ ಶಿಶಿರದಲ್ಲಿ ಜನವರಿ 12ರಂದು ಜನಿಸಿದಳು. ಮನೆಯಲ್ಲಿ ಸಂತಸ ನಿರಂತರವಾಗಿ



ಸೋನಿಯಾ - ರಾಜೀವ್ ಒಂದಾದಾಗ

ಹರಿದಿತ್ತು. ತಮ್ಮ ಸಂಜಯ್ ತನ್ನ ಕಾರುಗಳ ಕನಸಿನಲ್ಲಿ, ರಾಜಕಾರಣದ ಹುರುಪಿನಲ್ಲಿ ಲೋಕ ವನ್ನೇ ಮರೆತಿದ್ದ. ರಾಜೀವ್ ವಿಮಾನವಿಳಿದ ಕೂಡಲೆ ಹೆಂಡತಿ ಮಕ್ಕಳ ಸಾಮೀಪ್ಯದಲ್ಲಿ ಮೈಮರೆಯುತ್ತಿದ್ದ.

ಹದಿನಾಲ್ಕು ವರ್ಷಗಳ ಕಾಲ ಇಂಡಿಯನ್ ಏರ್‌ಲೈನ್ಸ್‌ನ ವಿಮಾನಗಳೊಂದಿಗೆ ಹಕ್ಕಿಯಾಗಿ ಹಾರಿದ ರಾಜೀವ್ ಭಾರತದ ರಾಜಕಾರಣದ ಬಗ್ಗೆ ತುಂಬ ನಿರ್ದಿಷ್ಟವಾದ ಅನಿಸಿಕೆಗಳನ್ನು ಹೊಂದಿದ್ದರು. ರಾತ್ರಿಯ ನೀರವತೆಯಲ್ಲಿ ಅವರು ಮಡದಿ ಸೋನಿಯಾರೊಂದಿಗೆ ಮಾಡಿದ ಚರ್ಚೆಗಳಲ್ಲಿ ಈ ದಂಪತಿಗೆ ಇದ್ದ ಭಾವನೆಗಳ ಸಾಮ್ಯವನ್ನು ಸಫ್ದರ್ ಜಂಗ್‌ನ ಮನೆ ಗೋಡೆಗೋಡೆಗಳೂ ಬಲ್ಲವು. ಭಾರತದ ರಾಜಕಾರಣವೊಂದು ಕೊಳಕು, ಲಂಚಕೋರ, ಅಧಿಕಾರ ಲಾಲಸೀ ಬಾಲಬಡುಕರ ಒಟ್ಟು ಸಮೂಹವೆಂಬುದು ಅವರಿಬ್ಬರ ಅಂತಿಮ ಅನಿಸಿಕೆಯಾಗಿತ್ತು. ಇಟಲಿಯಿಂದ ಸಾವಿರಾರು ಮೈಲು ದೂರಕ್ಕೆ ವಲಸೆ ಬಂದ ಸೋನಿಯಾಗೆ ಭಾರತದ ರಾಜಕಾರಣಕ್ಕೂ, ಇಟಲಿಯ ಕ್ರಿಶ್ಚಿಯನ್ ಡೆಮೊಕ್ರಾಟ್ಸ್ ಪಕ್ಷಕ್ಕೂ ಇದ್ದ ಸಮಾನ ರೋಗಗಳು ನಿಚ್ಚಳವಾಗಿ ಕಂಡು ಬಂದವು. ಇಟಲಿಯ ಮಾಫಿಯಾದೊಂದಿಗೆ ಮುಸುಕಿನ ವ್ಯವಹಾರ ನಡೆಸುತ್ತಲೇ ಪ್ರಜಾ ಪ್ರಭುತ್ವದ ಕುರಿತು ಭಾಷಣ ಮಾಡುತ್ತಿದ್ದ ಡೆಮೊಕ್ರಾಟ್ಸ್ ನಾಯಕರಿಗೂ, ಭಾರತದ ರಾಜಕಾರಣಿಗಳಿಗೂ ಹೆಚ್ಚಿನ ವ್ಯತ್ಯಾಸವಿಲ್ಲವೆಂಬುದು ಸೋನಿಯಾರ ಅನಿಸಿಕೆಯಾಗಿತ್ತು. ರಾಜೀವ್‌ರ ಅಭಿಪ್ರಾಯವೂ ಇದೇ ಆಗಿತ್ತಾದರೂ ಭಾರತದ ರಾಜಕಾರಣವನ್ನು ತೀರ ಹತ್ತಿರದಿಂದ ಬಲ್ಲ ಅವರಿಗೆ ಪ್ರಜಾಪ್ರಭುತ್ವದ ಕುಂದುಕೊರತೆಗಳು ಗೊತ್ತಿದ್ದಂತೆಯೇ ಅದರ ವ್ಯಾಪ್ತಿ ವಿಸ್ತೀರ್ಣಗಳ ಅರಿವೂ ಇತ್ತು. ಇಚ್ಛೆಯನರಿವ ಸತಿ, ವೆಚ್ಚಕ್ಕೆ ಹೊನ್ನು, ಬೆಚ್ಚನೆಯ ಮನೆ, ಮೆಚ್ಚಿನ ನೌಕರಿ .... ಇಷ್ಟೆಲ್ಲ ಇದ್ದ ರಾಜೀವ್ ರಾಜಕಾರಣದ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲವೆಂಬುದು ಅಪ್ಪಟ ಸತ್ಯ. ಹದಿನಾಲ್ಕು ವರ್ಷಗಳ ಕಾಲ ಅವರು ಹಾಯಾಗಿ ವಿಮಾನದಲ್ಲಿ ಹಾರಾಡಿಕೊಂಡಿದ್ದರು. 1977ರಲ್ಲಿ ಎಮರ್ಜೆನ್ಸಿಯ ಫಲಿತವೆಂಬಂತೆ ಇಂದಿರಾಜಿ ಚುನಾವಣೆಗಳಲ್ಲಿ ದಾರುಣವಾಗಿ ಸೋತಾಗ ರಾಜೀವ್ ಭಾರತವನ್ನೇ ಬಿಟ್ಟು ಇಟಲಿಯಲ್ಲಿ ಪತ್ನಿ ಮಕ್ಕಳೊಂದಿಗೆ ನೆಲೆಗೊಳ್ಳುವ ವಿಚಾರವನ್ನೂ ಮಾಡಿದ್ದರು. ಆದರೆ ಇಂದಿರಾಜಿ ಆ ವಿಚಾರವನ್ನು ಶತಾಯಗತಾಯ ವಿರೋಧಿಸಿ ಮಗ ಸೊಸೆಯನ್ನು ಭಾರತದಲ್ಲೇ ಉಳಿಸಿಕೊಂಡರು. 1980ರಲ್ಲಿ ನಡೆದ ಚುನಾವಣೆಗಳಲ್ಲೂ ರಾಜೀವ್ ತಲೆ ಹಾಕಲಿಲ್ಲ. ಅದರ ವಿಜಯದ ಎಲ್ಲ ಕೀರ್ತಿಯೂ ಸಂದದ್ದು ಸಂಜಯ್ ಗಾಂಧಿ ಮತ್ತು ಗುಂಪಿಗೇ. ತುರ್ತು ಪರಿಸ್ಥಿತಿ ಮತ್ತು ತದ ನಂತರದ ಸ್ಥಿತ್ಯಂತರಗಳನ್ನು ಇಂದಿರಾಜಿ ಸ್ಥಿರವಾಗಿ ನಿಂತು ಎದುರಿಸಿದ್ದು ಮತ್ತು ಗೆದ್ದದ್ದು ಸಂಜಯ್‌ಗಾಂಧಿಯ ಬಲದಿಂದಲೇ ಎಂಬುದು ಸರ್ವವಿದಿತ.

ಆದರೆ ಆಕಾಶದಲ್ಲಿ ಹಾರುತ್ತಿದ್ದ ರಾಜಕುವರ ರಾಜೀವ್ ಅನಿವಾರ್ಯವಾಗಿ ಭಾರತದ ರಾಜಕಾರಣಕ್ಕಿಳಿದದ್ದು ತನ್ನ ತಮ್ಮ ಸಂಜಯ್ 23 ಜೂನ್ 1980ರ ಮುಂಜಾನೆ ವಿಮಾನಾಪಘಾತದಲ್ಲಿ ಸತ್ತು ನೆಲಕ್ಕುರುಳಿದಾಗ.


ಅಮೇಥಿಯ ನೆಲದಿಂದ...

ಅಮೇಥಿಯ ಬೀದಿಯಲ್ಲಿ ಗೋಲಿಯಾಡುವ ಮಕ್ಕಳಿಗೂ ಗೊತ್ತು. ನೆಹರೂ ಮನೆತನದ ಕೂಸು, ಕಂದಮ್ಮಗಳು, ದಿಲ್ಲಿ ಕೋಟೆಯ ನೆತ್ತಿಯೇರಿ ರಾಜ್ಯವಾಳಿದ ಕಥೆ. ನಾವು ಆರಿಸಿದವರೆಲ್ಲ ದೇಶವಾಳಿದ್ದಾರೆ! ಮೊದಲು ನೆಹರೂ ಆಮೇಲೆ ಅವರ ತಂಗಿ ವಿಜಯಲಕ್ಷ್ಮಿ ಪಂಡಿತ್. ಪಾಪ, ಅದೊಂದು ಹೆಣ್ಣು ಮಗಳು ಸದಾ ತೆರೆಯ ಹಿಂದಿನ ನೆರಳಾಗಿಯೇ ಉಳಿದು ಹೋದಳು. ಮುಂದೆ ಅಮೇಥಿಯ ನೆಲದಿಂದ ಎದ್ದು ಬಂದ ಬೆಂಕಿ ಚೆಂಡು, ಆ ಹುಡುಗ ಸಂಜಯ್ ಗಾಂಧಿ! ಅದೆಂಥ ಉನ್ಮಾದ, ಅದೇನು ನಡೆದಾಟ, ಗುಡುಗಿನಂಥ ಮಾತು, ಪಾದರಸದಂಥ ನಿರ್ಧಾರಗಳು! ಆರೇಳು ವರ್ಷಗಳಲ್ಲಿ ಇಡೀ ದೇಶದ ಪಾರುಪತ್ಯವನ್ನೇ ಬದಲಿಸಿ ಬಿಸಾಡಿಬಿಟ್ಟ ಪುಣ್ಯಾತ್ಮ. ಇನ್ನಷ್ಟು ಕಾಲ ಬದುಕಿದ್ದಿದ್ದರೆ ಇನ್ನೇನೇನು ನೋಡುತ್ತಿದ್ದೆವೋ! 23 ಜೂನ್ 1980 ಮುಂಜಾನೆ ದಿಲ್ಲಿಯ ಆಕಾಶದಿಂದ ಮಾಂಸದ ಮುದ್ದೆಯಾಗಿ ಆ ಹುಡುಗ ಉರುಳಿ ಬಿದ್ದನೆಂಬ ಸುದ್ದಿ ಕೇಳಿದಾಗ ಮಗುವನ್ನು ಕಳೆದುಕೊಂಡ ಬಾಣಂತಿಯಂತೆ ಬಿಳಿಚಿ ಹೋಗಿತ್ತು ಅಮೇಥಿಯ ನೆಲದೊಡಲು. ದೊರೆಯ ಮಗಳು ಇಂದಿರಮ್ಮ ಆಗಷ್ಟೆ ಗೆದ್ದು ಗದ್ದುಗೆಯೇರಿದ್ದಳು. ಆದರೇನು? ಕೂತರೆ ಕೂಡಲು ಬಿಡದೆ, ನಿಂತರೆ ನಿಲ್ಲಲು ಬಿಡದೆ ಕಾಡಿತ್ತು ಮಗನ ಸಾವು. ಆಗ ಬಂದ ಈ ಹುಡುಗ ರಾಜೀವ್ ರಾಜಕೀಯಕ್ಕೆ.

ಅಂದ್ಹಾಗೆ ನಾನು ಕಾಲಸಿಂಹಠಾಕೂರ್ ಅಂತ. ಮುಪ್ಪು ನನ್ನನ್ನು ಗಂಭೀರನೂ, ಗೌರವಾನ್ವಿತನೂ ಹಾಗೂ ನಿಸ್ಸಹಾಯಕನೂ ಆಗುವಂತೆ ಮಾಡಿದೆ. ಚಿಕ್ಕವನಿದ್ದಾಗ ನನ್ನ ದೊರೆ ನೆಹರೂ ಮಾಡಿದ ಭಾಷಣಗಳನ್ನು ಕೇಳಿಸಿಕೊಂಡಿದ್ದೇನೆ. ಮುಂದೆ ಆ ಹೆಣ್ಣು ಮಗಳು ವಿಜಯಮ್ಮ, ಆಕೆಯ ಸೋದರ ಸೊಸೆ ಇಂದಿರಮ್ಮ ಕೂಡ ನಮ್ಮೂರಿಗೆ ಬಂದು ಮಾತನಾಡಿದ್ದರು. ಆ ಹುಡುಗ ಸಂಜಯ, ಸುಂಟರಗಾಳಿಯಂತೆ ಬಂದು ಬೆಳ್ಳಗೆ ನಗುತ್ತ ನಮ್ಮೂರ ಬೀದಿಗಳಲ್ಲಿ ಸುಳಿದಾಡಿ ಕೈಕೈ ಮುಗಿದು ಓಟು ಕೇಳುತ್ತಿದ್ದ ಗತ್ತುಗಾರಿಕೆಯನ್ನು ದೂರದಿಂದಲೇ ನೋಡಿ ಮೌನವಹಿಸಿದ್ದೇನೆ.

ಆ ಹುಡುಗ ಹೋದ ನಂತರ ಕನಲಿ ಹೋದಳು ಇಂದಿರಮ್ಮ. ಸೊಸೆ ಮನೇಕಾ ಜಗಳವಾಡಿಕೊಂಡು ಮಗನ ಸಮೇತ ಮನೆ ಬಿಟ್ಟು ಹೋಗಿಬಿಟ್ಟಳು. ಕಂಗಾಲಾದ ಮುದುಕಿ ಹಿರಿ ಮಗನ ಕೈ ಹಿಡಿದಳು. ನೆಹರೂ ಮನೆಯ ಪಾಲಿಗವು ಬಲು ಕೆಟ್ಟ ದಿನಗಳು. ಒಲ್ಲೆನೆಂದರೂ ಮಗನನ್ನು ರಾಜಕೀಯಕ್ಕೆಳೆಸಿದಳು. ಸೊಸೆ ಸೋನಿಯಾ ಅಂತೂ ರಾಜಕೀಯಕ್ಕೆ ತನ್ನ ಗಂಡ ಬರುವುದೇ ಬೇಡವೆಂದು ಅತ್ತು ರಂಪಾಟ ಮಾಡಿದಳಂತೆ. ಆದರೆ ಅಮೇಥಿಯ ನೆಲ ಮತ್ತೊಬ್ಬ ರಾಜನ ಬರುವಿಕೆಗಾಗಿ ಕಾದಿತ್ತು. ರಾಜಕಾರಣಕ್ಕೆ ಬಂದ ಹೊಸತರಲ್ಲಿ ಕೇವಲ ಕಾಂಗ್ರೆಸ್ ಪಕ್ಷದ ಗಿಷೇರಿಯಲ್ಲಿ ನಿರತನಾದ ರಾಜೀವ್ ಬಗ್ಗೆ ಪತ್ರಿಕೆಯೊಂದು ಬರೆದ ವಿಮರ್ಶೆ ಮಜವಾಗಿತ್ತು. "ರಾಜಕೀಯವೆಂದರೆ ಅಮ್ಮನ ಸೀರೆಯ ನೆರಿಗೆಗಳ ಮರೆಯಲ್ಲಿ ನಿಂತಾಡುವುದಲ್ಲ... ಧೈರ್ಯವಿದ್ದರೆ ಚುನಾವಣೆಗೆ ನಿಂತು ಗೆಲ್ಲಲಿ!" ಅಂತ ಬರೆದಿದ್ದರು. ರಾಜೀವ್ ಸೀರೆ ನೆರಿಗೆಗಳ ಮರೆಯಿಂದಾಚೆಗೆ ಬಂದರು. ಅಮೇಥಿ ಕಾಯುತ್ತಿತ್ತು. ನಾನು ನನ್ನ ಮನೆ ಹತ್ತಿರದ ಮತಗಟ್ಟೆಯಲ್ಲಿ ಓಟ್ ಮಡಚಿ ಡಬ್ಬಿಗೆ ಹಾಕುವಾಗ ಇಂದಿರಮ್ಮನ ಉತ್ತರಾಧಿಕಾರಿಯನ್ನು ಆರಿಸುತ್ತಿದ್ದೇನೆಂಬ ಕಲ್ಪನೆ ನನ್ನಲ್ಲಿ ನಿಚ್ಚಳವಾಗಿತ್ತು.

ಮುಂದೆಲ್ಲ ರಾಜೀವರ ಏರಿಕೆಯ ದಿನಗಳೇ! ಅವರು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದರು. ನೌಕರಿ ಮಾಡಿ



ಮಕ್ಕಳು, ಸೊಸೆಯಂದಿರು ಮೊಮ್ಮಕ್ಕಳೊಂದಿಗೆ ಇಂದಿರಾ

ಕೊಂಡು ಹೆಂಡತಿ ಮಕ್ಕಳೊಂದಿಗೆ ವಾರಕ್ಕೊಮ್ಮೆ ವಿಹಾರಕ್ಕೆ ಹೋಗುತ್ತಿದ್ದ ವ್ಯಕ್ತಿ ಇದ್ದಕ್ಕಿದ್ದಂತೆ ಅಧಿಕಾರದ ಕುದಿವ ಕಡಾಯಿಯ ಮುಂದೆ ನಿಲ್ಲಬೇಕಾದಾಗ ಮೊದ ಮೊದಲು ಚಡಪಡಿಸುವಂತಾಯಿತು. ಆದರೆ ಪಾಕದ ರುಚಿ ಹತ್ತಲು ಎಷ್ಟು ಹೊತ್ತು ಬೇಕು? ಅಧಿಕಾರ ಆತ್ಮೀಯವಾಯಿತು. ಸಹಜವಾಯಿತು... ಕಡೆಗೆ ಅನಿವಾರ್ಯವಾಯಿತು. ಅವತ್ತು ದೇಶವನ್ನೇ ತಲ್ಲಣಗೊಳಿಸಿದ ಪಂಜಾಬ್, ಅಸ್ಸಾಂ ಮತ್ತು ಕಾಶ್ಮೀರದ ಸಮಸ್ಯೆಗಳೊಂದಿಗೆ ತಾಯಿ ಹಣಗುತ್ತಿದ್ದಳು. ಆಂಧ್ರದಲ್ಲಿ ನಟಭಯಂಕರ ಎನ್.ಟಿ. ರಾಮರಾಯರು ಸಡ್ಡು ಹೊಡೆದಿದ್ದರು. ಅಸ್ಸಾಮದ ಯುವಕರು ಮುದಿಯರನ್ನು ಕಂಡಕಂಡಲ್ಲಿ ಎದುರಿಸಿ ದಾಂಗುಡಿಯಿಡುತ್ತಿದ್ದರು. ಬೆಲೆಗಳೇರಿದವು. ಹಿಂಸಾಚಾರ ಬೀದಿಗಳಿಂದ ಮನೆಗಳಿಗೆ ನುಗ್ಗಿತು. ಈ ಮಧ್ಯೆ ಇಂದಿರಾಜಿಯ ಹೆಮ್ಮೆ ಹಮ್ಮುಗಳ ಸಂಕೇತವಾದ 'ಏಷಿಯನ್ ಗೇಮ್ಸ್' ಗಳನ್ನು ರಾಜೀವ್ ಅತ್ಯಂತ ಸಮರ್ಥವಾಗಿ ನಡೆಸಿ ಕೊಟ್ಟರು.

ಇಷ್ಟೆಲ್ಲ ನಡೆಯುತ್ತಿದ್ದಾಗಲೂ ಒಬ್ಬ ಹುಡುಗಿ ನಮ್ಮ ಅಮೇಥಿಯ ಬೀದಿಗಳಲ್ಲಿ, ಬಡವರ ಕೊಳಗೇರಿಗಳಲ್ಲಿ ತನ್ನ ಪಾಡಿಗೆ ತಾನು ಅಲೆಯುತ್ತ ನೊಂದವರ ಪಾಡು ಕೇಳುತ್ತ, ತನ್ನ ಕೈಲಾದ ನೆರವು ನೀಡುತ್ತ ನಮ್ಮೆಲ್ಲರ ಪ್ರೀತಿ ಗಳಿಸಿಕೊಂಡಳು. ಎಲ್ಲಿ ಅಮೇಥಿ? ಎಲ್ಲಿಯ ಇಟಲಿ? ತನ್ನ ಗಂಡ ಗೆದ್ದು ಹೋದ ಅಮೇಥಿಯ ಕೋಟೆಯನ್ನು ಈ ಹುಡುಗಿ ಸೋನಿಯಾ ಗಟ್ಟಿಗೊಳಿಸುತ್ತಲೇ ನಡೆದಳು. 1981ರಲ್ಲಿ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಮಹಾಸಭೆಯಲ್ಲಿ 'ಇಂದಿನ ಈ ಯುವಕರೇ ನಾಳಿನ ನಮ್ಮ ಆಶಾಕಿರಣ' ಎಂದು ಕಾಂಗ್ರೆಸ್ಸಿನ ಮುದುಕರು ಬೊಬ್ಬೆ ಬಾಯಿ ಚಪ್ಪರಿಸುತ್ತಿದ್ದಾಗ ಈ ಇಟಲಿಯ ಹೆಣ್ಣು ಮಗಳು ಅಮೇಥಿಯ ಧೂಳು ರಸ್ತೆಗಳಲ್ಲಿ ಬಡವರ ಮನಸ್ಸುಗಳೊಂದಿಗೆ ಮಾತನಾಡುತ್ತ ನಡೆದಿದ್ದಳು.

ಕಾಲ ಉರುಳಿತು. ಪಂಜಾಬದ ಹೇಮ ಮಂದಿರದ ಮಧ್ಯೆ ಎದ್ದ ಬೆಂಕಿ ದಾವಾನಲ ವಾಯಿತು. ಇಂದಿರಾಜಿ ತಾವೇ ಬೆಳೆಸಿದ ಬಂದೂಕಿನ ಬೆಳೆಗೆ ಬಲಿಯಾದರು. 1984ರ ಅಕ್ಟೋಬರ್ 31 ರಂದು ಅವರ ಅಂಗ ರಕ್ಷಕರೇ ಅವರನ್ನು ಮುಗಿಸಿ ಹಾಕಿದರು. ಅಮೇಥಿ ಮತ್ತೆ ಅಂಧಕಾರದಲ್ಲಿ ಮುಳು ಗಿತು. ನಾನಂತೂ ನನ್ನ ರೇಡಿಯೋಕ್ಕೆ ಕಿವಿ ಗಳನ್ನು ಮೆತ್ತಿಕೊಂಡು ಕುಳಿತುಬಿಟ್ಟೆ. ಕಾಡ ತೂಸುಗಳಿಂದ ಛಿದ್ರ ಛಿದ್ರವಾದ ಪ್ರಧಾ ನಿಯ ದೇಹವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾ ದಿಲ್ಲಿಯ ಆಸ್ಪತ್ರೆಗೆ ಕರೆದೊಯ್ದ ಸೋನಿಯಾ ಮಧ್ಯಾಹ್ನ ಎರಡೂವರೆತನಕ ಅತ್ತೆ ಬದುಕು ಳಿದಾಳೇನೋ ಎಂಬ ಆಸೆಯಿಂದ ಆಸ್ಪತ್ರೆಯ ಕಾರಿಡಾರುಗಳಲ್ಲಿ ಕಾತರಿಸಿದ ಸುದ್ದಿಗಳು ಬಂದವು. ಕಡೆಗೆ ಬಂದದ್ದು ಇಂದಿರಾಜಿಯ ಅಂತ್ಯದ ವಾರ್ತೆ.

ಆ ಹೊತ್ತಿನಲ್ಲಿ ರಾಜೀವ್ ದಿಲ್ಲಿಯಿಂದ ಒಂದು ಸಾವಿರ ಮೈಲಿ ದೂರದ ಪಶ್ಚಿಮ ಬಂಗಾಳದ ಕೊಂಟೈ ಎಂಬಲ್ಲಿ ಕಾಂಗ್ರೆಸ್ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಮುಂಜಾನೆ ಹನ್ನೊಂದರ ಹೊತ್ತಿಗ ಅವರಿಗೆ ತಾಯಿ ಗಾಯಗೊಂಡ ಸುದ್ದಿ ತಿಳಿಸಲಾ ಯಿತು. ಅಲ್ಲಿದ್ದ ಕಾಂಗ್ರೆಸ್ ನಾಯಕರು ಎದೆಯೊಡೆದುಕೊಂಡರೂ ರಾಜೀವ್ ಮಾತ್ರ ಸ್ಥಿರವಾದ ದನಿಯಲ್ಲಿ 'ಕಾರ್ಯಕ್ರ ಮಗಳನ್ನು ಮುಂದುವರೆಸಿ' ಎಂದವರೇ ಕಾರು ಹತ್ತಿ ದಿಲ್ಲಿಯತ್ತ ಹೊರಟರಂತೆ.. ಕೈಲಿದ್ದ ಪುಟ್ಟ ಟ್ರಾನ್ಸಿಸ್ಟರಿನಲ್ಲ ಬಿ.ಬಿ.ಸಿ. ಬಿತ್ತರಿಸುತ್ತಿದ್ದ ವಾರ್ತೆಗಳು ಅವರಿಗೆ ಸತ್ಯವ ನ್ನರೆಯುತ್ತಿದ್ದವು. ಕೊಂಟೈನಿಂದ ಹೊರಟ ರಾಜೀವ್ ಕೋಲಾಘಾಟ್ ಎಂಬಲ್ಲಿ ತಮ ಗಾಗಿ ಕಾಯುತ್ತಿದ್ದ ಇಂಡಿಯನ್ ಏರ್‌ಲೈನ್ಸ್‌ನ ಹೆಲಿಕಾಪ್ಟರೊಂದನ್ನು ಹತ್ತಿ ದಿಲ್ಲಿಗೆ ಬಂದರು. ಆ ಹೊತ್ತಿಗೆ ಎಲ್ಲ ಮುಗಿದು ಹೋಗಿತ್ತು. ಯಾವಾಗಲೋ ಮುಗಿದಿತ್ತು!

ಇಂದಿರಾಜಿ ಮರಣ ವಾರ್ತೆ ಕೇಳಿದ ತಕ್ಷಣ ಮಾರಿಷಸ್-ಯೆಮನ್ ಅರಬ್ ರಿಪ ಬ್ಲಿಕ್‌ಗಳ ಪ್ರವಾಸದಲ್ಲಿದ್ದ ಅಂದಿನ ರಾಷ್ಟ್ರಪತಿ ಜೈಲ್‌ಸಿಂಗ್ ಎಲ್ಲ ಕಾರ್ಯಕ್ರಮ ರದ್ದುಗೊ ಳಿಸಿ ಸಂಜೆ ಐದು ಗಂಟೆ ಹೊತ್ತಿಗೆ ದಿಲ್ಲಿಗೆ ಬಂದಿಳಿದರು. ಐದೂವರೆ ಹೊತ್ತಿಗೆ ರಾಜೀವ್‌ರನ್ನು ರಾಷ್ಟ್ರಪತಿ ಭವನಕ್ಕೆ ಬರಲು ಹೇಳಿದರು. ಸಂಜೆ ಆರೂ ಮೂವತ್ತಕ್ಕೆ ಮ್ಲಾನವದನ ರಾಜೀವ್, ತಮ್ಮ ನಲವತ್ತನೇ ವಯಸ್ಸಿನಲ್ಲಿ ರಾಷ್ಟ್ರಪತಿ ಭವನದ ಅಶೋಕಾ ಹಾಲ್‌ನಲ್ಲಿ ಭಾರತದ ಏಳನೆಯ ಮತ್ತು ಅತ್ಯಂತ ಕಿರಿಯ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರೇಡಿಯೋಗಳು ಸುದ್ದಿ ಸುರಿದವು. ನಾನು ಮನೆಯಿಂದ ಹೊರಗೆ ಬಂದು ಖಾಲಿಯಂಗಳದಲ್ಲಿ ನಿಂತು ಆಗಸದತ್ತ ಕಣ್ಣೆತ್ತಿದೆ. ಅಮೇಥಿಯ ಆಗ ಸವೂ ಖಾಲಿಯಿತ್ತು, ನನ್ನ ಕಣ್ಣಿನಂತೆ.


ದಿಲ್ಲಿ ಹೊತ್ತಿ ಉರಿಯತೊಡಗಿತು. ಸಿಖ್ ಹತ್ಯಾಕಾಂಡಕ್ಕೆ ವರ್ಣನೆ ಬೇಕಿಲ್ಲ. ದೇಶದಾ ದ್ಯಂತ ಸಾವಿನ ರುದ್ರನೃತ್ಯ. ಒಂದೆಡೆ ತಾಯಿಯ ಸಾವು, ನಡೆಯಬೇಕಿದ್ದ ಅಂತ್ಯಕ ರ್ಮಗಳು, ಈ ಮಧ್ಯೆ ಕ್ರೋಧದಿಂದ ಭುಗಿ ಲೆದ್ದ ದೇಶದಲ್ಲಿ ಸ್ಥಾಪಿಸಬೇಕಾಗಿದ್ದ ಶಾಂತಿ ಇವೆಲ್ಲವುಗಳನ್ನು ಅತಿ ಕಷ್ಟದಿಂದ ನಿಯಂತ್ರಿ ಸಿದರು ರಾಜೀವ್.

ಮುಂದೆ ಕೆಲವೇ ದಿನಗಳಲ್ಲಿ ಘೋಷಿಸ ಲಾದ ಚುನಾವಣೆಗಳು ರಾಜೀವ್ ಪಾಲಿನ ಮೊದಲ ತಲೆನೋವು ತಂದವು. ಎ. ಆರ್. ಅಂತುಳೆಯಂತಹ ಶಕ್ತಿಗಳು ಕಾಂಗ್ರೆಸ್ಸಿನ ವಿರುದ್ಧ ಬಂಡೆದ್ದವು. ಆದರೆ ಎಲ್ಲ ಅವಘ ಡಗಳನ್ನು ಮೀರಿ, ಸ್ವತಃ ರಾಜೀವ್ ಕೂಡ ಊಹಿಸದ ಮಟ್ಟದಲ್ಲಿ ಕಾಂಗ್ರೆಸ್ ಜಯ ಭೇರಿ ಬಾರಿಸಿತು. ವಿರೋಧ ಪಕ್ಷಗಳು ಸುಳಿವೇ ಇಲ್ಲದಂತೆ ಧೂಳೆದ್ದು ಹೋದವು.

ಇಂದಿರಾ ಮರಣದ ಅನುಕಂಪದ ಅಲೆ ಕಾಂಗ್ರೆಸ್ಸನ್ನೂ, ರಾಜೀವರನ್ನು ಕೆಂಪುಕೋಟೆಯ ಮೇಲೆ ಸ್ಥಿರಗೊಳಿಸಿದವು. ಅಂದಿನ ಚುನಾವಣಾ ಫಲಿತಾಂಶವನ್ನು ಕಂಡ ಅಮೇಥಿಯ ಜನ ಅಂದುಕೊಂಡರು, "ಈ ಹುಡುಗ ಇನ್ನೊಂದು ದಶಕ ಯಾರನ್ನೂ ಏಳಲು ಬಿಡೋದಿಲ್ಲ!"

ಇಂದಿರಾ ಮರಣದ ಅನುಕಂಪದ ಅಲೆ ಅಧಿಕಾರವನ್ನೇನೋ ತಂದು ಕೊಟ್ಟಿತು. ಆದರೆ ಸರಕಾರಗಳು ಅಲೆಗಳ ಮೇಲೆ ನಡೆಯಲಾರವು, ಎಂಬ ಸತ್ಯ ರಾಜೀವರಿಗೆ ಕೆಲವೇ ದಿನಗಳಲ್ಲಿ ಮನವರಿಕೆಯಾಯಿತು. ಡೂನ್ ಶಾಲೆಯ ಹಳೆಯ ದೋಸ್ತರು, ಕಾಂಗ್ರೆಸ್ಸಿನ ಹೊಸ ಪೀಳಿಗೆಯ ಪುಂಡರು ಸೇರಿಕೊಂಡು 'ಮಿಸ್ಟರ್ ಕ್ಲೀನ್' ಹೆಸರಿಗೆ ನಿಧಾನವಾಗಿ ಮಸಿ ಬಳಿದದ್ದು ರಹಸ್ಯವಾಗಿ ಉಳಿಯಲಿಲ್ಲ. ಲಂಚಗುಳಿತನದ ಕಥೆಗಳು ದಿಲ್ಲಿಯಿಂದ ಅಮೇಥಿಗೆ ಹಗಲಾಗುವುದರೊಳಗೆ ಸರಿದು ಬಂದವು. ಕಾಂಗ್ರೆಸ್ಸಿನಿಂದ ಸಿಡಿದು ಹೋದ ಕೆಲ ನಾಯಕರು ಸರಕಾರದ ವಿರುದ್ಧ ಬಂಡಾಯದ ಬಾವುಟಗಳನ್ನೆತ್ತಿದರು. ಅಮೇಥಿಯ ಕೆಲವು ಮನೆಗಳಲ್ಲೂ ಅಸಹನೆ ಕದಲಾಡಿತು. ನೋಡು ನೋಡುತ್ತಿದ್ದಂತೆಯೇ ರಾಜೀವ್‌ರ ಕನಸಿನ ಗೋಪುರ ಮುರಿದು ಬಿತ್ತು. ಮತ್ತೆ ಆ ಹುಡುಗ ಅಮೇಥಿಯ ಬೀದಿಗಳಲ್ಲಿ ಓಟು ಕೇಳಲು ಬಂದಾಗ ಮೈಯೆಲ್ಲಾ ಕೆಸರು. ಕಂಗಳಲ್ಲಿ ನಾಚಿಕೆ, ಆತಂಕ, ಪಾಶ್ಚಾತ್ತಾಪಗಳ ನೆರಳು. ಆದರೆ ಜೊತೆಗಿದ್ದ ಹುಡುಗಿ ಸೋನಿಯಾ ನಮ್ಮ ಮನಸ್ಸು ಗೆದ್ದ ಮಗಳಲ್ಲವೇ? ನಾವು ಮತ್ತೆ ರಾಜೀವ್‌ರನ್ನು ಗೆಲ್ಲಿಸಿದೆವು.

ಆದರೆ ಈ ಬಾರಿ ರಾಜಗದ್ದುಗೆ ಸಿಗಲಿಲ್ಲ. ವಿರೋಧ ಪಕ್ಷದ ನಾಯಕರಾಗಿ ಕುಳಿತರು ರಾಜೀವ್. ಸೋನಿಯಾ ಮಾತ್ರ ಎಂದಿನಂತೆಯೇ, ಅಮೇಥಿಯ ಆಸುಪಾಸಿನಲ್ಲಿದ್ದಳು. ಕಾಂಗ್ರೆಸ್ಸನ್ನು ಮೂಲೆಗೆ ತಳ್ಳಿ ಭುಜ ತಟ್ಟಿಕೊಂಡು ಬಂದವರಾದರೂ ಎಷ್ಟರಮಟ್ಟಿಗೆ



1950 – ನೆಹರೂರೊಂದಿಗೆ ಗಾಂಧಿಗಳು

ರಾಜ್ಯವಾಳಿದರು? ಕನ್ನಡಕದ ಹಿಂದೆ ಕನಸು ಕಟ್ಟಿಕೊಂಡು ಬಂದ ವಿ. ಪಿ. ಸಿಂಗ್ ಸರಕಾರ ಜಾತಿಗಳ ಭೂತಸವಾರಿ ಮಾಡಿ ನಾಶವಾಯಿತು. ಕಳ್ಳ ದಾರಿಯಲ್ಲಿ ಬಂದು ಅಧಿಕಾರದ ಬಾಗಿಲು ತಟ್ಟಿದ ಚಂದ್ರಶೇಖರ್ ಕೋಟೆ ಬಾಗಿಲು ತೆರೆಯುವ ಮೊದಲೇ ಮುಗ್ಗರಿಸಿದರು. ಭಾರತದ ಮೈ ತುಂಬ ಸಮಸ್ಯೆಗಳ ಗಾಯ. ನೊಂದ ಜೀವಿಗಳ ಆಕ್ರಂದನ. ರಾಮರಥದ ಗಾಲಿ, ಮಂಡಲ ವರದಿಯ ಚಂಡ ಮಾರುತದ ಗಾಳಿ ಇಡೀ ದೇಶವನ್ನೇ ಕಮರಿಗೆ ತಳ್ಳಿದವು. ಮನ ಮನೆಯಲ್ಲಿ ಗೋಡೆಗಳೆದ್ದು ನಿಂತವು.

"ಇಲ್ಲ, ನಾನು ಭಾರತಕ್ಕೆ ಹೊಸದೊಂದು ಕನಸುಕೊಡುತ್ತೇನೆ. ನನಗೆ ಮತ್ತೊಂದು ಅವಕಾಶ ಕೊಡಿ" ಎಂದು ಮತ್ತೊಮ್ಮೆ ಎದ್ದು ನಿಂತರು ರಾಜೀವ್. ಅಮೇಥಿ ಮತ್ತೆ ಆಸೆಯ ಗರ್ಭ ಧರಿಸಿತು.

ನನಗೀಗ ತುಂಬ ವಯಸ್ಸಾಗಿದೆ. ಕಣ್ಣು ಮಂಜಾಗಿವೆ. ಕಾಲು ಮೊದಲಿನಂತೆ ಕದಲುವುದಿಲ್ಲ. ಆದರೂ ಹಣಗಿಕೊಂಡೇ ನಡೆದು ಹೋದೆ. ನನ್ನ ಮನೆ ಹತ್ತಿರದ ಮತಗಟ್ಟೆಯಲ್ಲಿ ಚೀಟಿ ಮಡಚಿ ಹಾಕಿದೆ! "ಗೆಲ್ಲು ನನ್ನ ದೊರೆಯೇ... ಗೆದ್ದು ರಾಜ್ಯವಾಳು!" ಎಂದು ಹರಸಿ ಬಂದೆ. ನನ್ನ ಹಾರೈಕೆ ಅರ್ಥ ನಿಜವಾಯಿತು. ರಾಜೀವ್ ಗೆದ್ದರು! ಆದರೆ ಫಲಿತಾಂಶ ಬರುವ ಮೊದಲೇ ದಕ್ಷಿಣದ ತುದಿಯಿಂದ ಕೇಳಿ ಬಂದ ಸಿಡಿಮದ್ದಿನ ಸದ್ದು ನಮ್ಮ ಮನೆಯ ಹುಡುಗನ ಸಾವಿನ ಸುದ್ದಿ ಹೊತ್ತು ಬಂತು. ಅಮೇಥಿಯಲ್ಲಿ ಸ್ಮಶಾನ ಮೌನ. "ನಮ್ಮೆಲ್ಲರೊಳಗೆ ಏನೋ ಸತ್ತಂತಹ ಭಾವ. ಬದುಕನ್ನು ಸತ್ತದ್ದು ನಮ್ಮೊಳಗಿನ ಭವಿತವ್ಯದ ಆಸೆ".

ನಾನು ಮುಸುಕು ಹೊದ್ದು ಮಲಗಿಬಿಟ್ಟಿದ್ದೇನೆ. ಆ ಕಣ್ಣುಗಳು ಸೋನಿಯಾ ಇತ್ತ ಬರುವುದಿಲ್ಲವೆಂದು ಕೇಳಿದ ಮೇಲಿಂದ ಬಾಷ್ಪಭರಿತ, ಆಸಕ್ತಿಯಿಲ್ಲದಾಗಿದೆ. ಇಲ್ಲಿಗೆ ಎಲ್ಲ ಮುಗಿಯಿತೆನಿಸುತ್ತಿದೆ. ನನ್ನ ಮಟ್ಟಿಗಂತೂ ಅದು ಹೌದು! ಮತ್ತೊಂದು ಸರಕಾರ, ಮತ್ತೊಬ್ಬ ಪ್ರಧಾನಿ. ಇದು ಮುಂದುವರೆದೀತು. ಅದು ಸಹಜ. ಆದರೆ ದೇಶದ ಮನಸ್ಸಿನ ಗಾಯ-ಅದು ಮಾಯುವಂತಹುದಲ್ಲ. ಮರೆಯುವಂತಹುದೂ ಅಲ್ಲ.

ನಿರಾಶ್ರಿತನ ನಿಟ್ಟುಸಿರು...

"ನೀವು ನನ್ನ ದೇಶದ ತೆಂಗುಗರಿಗಳನ್ನು ಇರುಳಲ್ಲಿ ಆಗಸದ ಚಿಕ್ಕೆಗಳೊಂದಿಗೆ ಪಿಸುಗುಡುವುದನ್ನು ನೋಡಬೇಕು. ಈ ಪುಟ್ಟ ದ್ವೀಪವನ್ನು ಎದ್ದೆದ್ದು ಬಂದು ಮುತ್ತಿಡುವ ನೀಲ ಜಲಧಿಯನ್ನು ಕಾಣಬೇಕು. ನನ್ನ ದೇಶದ ಸಾಗರ ತೀರಗಳ ಸಕ್ಕರೆ ಮರಳಲ್ಲಿ ಮಲಗಿ ಕನಸು ಬಿಚ್ಚಿಕೊಳ್ಳಬೇಕು. ಹಸಿರು ಕಾಡುಗಳಲ್ಲಿ ನವಿಲಿನಂತೆ ನಡೆದಾಡಬೇಕು. ಇಲ್ಲಿನ ತೋಟಗಳಲ್ಲಿ ನೀವು ಚಿಟ್ಟೆಗಳಾಗಬೇಕು. ಈ ಬೌದ್ಧ ನಾಡಿನ ನೆಮ್ಮದಿಯಲ್ಲಿ ನೀವು ಲೀನವಾಗಬೇಕು. ಬನ್ನಿ...ನನ್ನೂರಿಗೆ ಬನ್ನಿ, ಸುಂದರ ಶ್ರೀಲಂಕೆಗೆ"- ಪ್ರಿಯ ಓದುಗರೇ, ಹೀಗೆ ನಿಮ್ಮನ್ನು ಹತ್ತು ವರ್ಷಗಳ ಹಿಂದೆ ಕರೆಯುತ್ತಿದ್ದೆ. ನೀವು ಬರುತ್ತಿದ್ದಿರಿ. ಆಗೆಲ್ಲ ಎಷ್ಟೊಂದು ಸಂತಸವಿತ್ತು, ಏನೆಲ್ಲ ಸಡಗರವಿತ್ತು?

ಈಗೇನಿದೆ?

ನಾನು ದೇಶಭ್ರಷ್ಟ. ಏಕಾಂಗಿ. ಭಾರತದ ಹಳ್ಳಿಯೊಂದರಲ್ಲಿ ಅನಾಥನಾಗಿ ನಿರಾಶ್ರಿತ ಶಿಬಿರವೊಂದರಲ್ಲಿ ಕುಳಿತು ಹಳೆಯ ಗಾಯಗಳನ್ನು, ಮನದ ನೋವುಗಳನ್ನು ಸವರಿಕೊಳ್ಳುತ್ತಿದ್ದೇನೆ. ಭವಿತವ್ಯದ ಅನಿಶ್ಚಿತತೆ, ಗತಕಾಲದ ನೋವುಗಳ ನಡುವೆ ಒಂದು ಕ್ರೂರ ವರ್ತಮಾನವನ್ನು ಅನುಭವಿಸುತ್ತಿದ್ದೇನೆ.

ನನ್ನ ಹೆಸರು ಕಣ್ಣನ್. ನನ್ನ ಶ್ರೀಲಂಕೆಯ ಜಾಫ್ನಾ ಕರಾವಳಿಯಲ್ಲಿ ಪುಟ್ಟ ಹಳ್ಳಿಯೊಂದರಲ್ಲಿ ನನ್ನ ಗುಡಿಸಲಿತ್ತು. ಒಂದು ಹಾಯಿ

ದೋಣಿ, ನಾಲ್ಕಾರು ಬಲೆಗಳು, ಮನೆಯಲ್ಲಿ ಹೆಂಡತಿ, ಅಂಗಳದಲ್ಲಾಡುವ ಮಕ್ಕಳು...ಸಾಗರದಲ್ಲಿ ಸಾವಿರಾರು ಬಂಗಾರದ ಮೀನುಗಳು! ನನ್ನ ಬದುಕು ತಣ್ಣಗಿತ್ತು, ಮರದ ನೆರಳಿನಂತೆ, ಮಗುವಿನ ನಗೆಯಂತೆ. ಅದೆಷ್ಟು ತಲೆಮಾರುಗಳಿಂದ ನಾವು ಶ್ರೀಲಂಕೆಯಲ್ಲಿ ನೆಲೆಸಿದವರೋ. ನಾನು ಕಣ್ತೆರೆದದ್ದಂತೂ ಇದೇ ಜಾಫ್ನಾ ಕರಾವಳಿಯ ನೆಲದಲ್ಲಿ.

ನನ್ನ ಶ್ರೀಲಂಕೆ ಐರ್ಲೆಂಡಿನಷ್ಟೇ ಪುಟ್ಟ ದ್ವೀಪ. ಹತ್ತಾರು ಧರ್ಮಗಳ ನೆಲೆವೀಡಾದ ಶ್ರೀಲಂಕೆ ಎಲ್ಲ ಮತೀಯರಿಗೂ ಪವಿತ್ರ ಭೂಮಿ. ದ್ವೀಪದ ಪೂರ್ವದಲ್ಲಿರುವ ಬೆಟ್ಟ ಹಿಂದೂ, ಮುಸ್ಲಿಂ, ಕ್ರೈಸ್ತ ಮತ್ತು ಬೌದ್ಧರ ಪಾಲಿನ ಬಂಗಾರದ ಬೆಟ್ಟ. ಇದರ ಮೇಲಿರುವ ಕಲ್ಲಿನ ಪಾದದ ಗುರುತನ್ನು ಮುಸ್ಲಿಮರು ಧರೆಗಿಳಿದು ಬಂದ ಮೊದಲ ಮಾನವ 'ಆದಾಮು'ನ ಪಾದವೆಂದು ಪೂಜಿಸುತ್ತಾರೆ. ಕ್ರೈಸ್ತರು ಅದನ್ನು ಕ್ರಿಸ್ತನ ಮೊದಲ ಶಿಷ್ಯನಾದ ಸಂತ ಥಾಮಸ್‌ನ ಪಾದವನ್ನುತ್ತಾರೆ. ಹಿಂದೂಗಳ ಪಾಲಿಗದು ವಿಷ್ಣುಪಾದ. ಚೀನೀಯರಿಗದು ಮನುಕುಲದ ತಂದೆಯ ಪದಚಿತ್ರ. ಅನೇಕ ಸಲ ದ್ವೀಪಕ್ಕೆ ಬಂದ ಭಗವಾನ್ ಬುದ್ಧ ಈ ಬೆಟ್ಟದ ಮೇಲೆ ವಿಶ್ರಾಂತಿ ಪಡೆದಿದ್ದನೆಂದೂ, ಈ ಪಾದ ಆತನದೇ ಎಂದೂ ಬೌದ್ಧರು ನಂಬುತ್ತಾರೆ.

ನನ್ನ ದೇಶದಲ್ಲಿ ಜಾತಿಗಳಷ್ಟೇ ಅಲ್ಲ, ಜನಾಂಗಗಳೂ ಅನೇಕ. ನೀಲಿಕಣ್ಣಿನ ಐರೋಪ್ಯರಿಂದ ಹಿಡಿದು ಕಾಡುಗಪ್ಪು ಬಣ್ಣದ ಕಂಗಳ ಚೆಲುವರೂ ಇದ್ದಾರೆ. ಗುಂಗುರು ಕೂದಲ ಕೃಷ್ಣ ಸುಂದರಿಯರಿರುವಂತೆಯೇ ನೀಳ ತಲೆಗೂದಲ ಅಂದಗಾತಿಯರೂ ಇಲ್ಲಿದ್ದಾರೆ. ಚಪ್ಪಟೆ ಮೂಗು, ಬಾಣದಂತೆ ಸೀಟಾದ ಮೂಗು-ಇವೆಲ್ಲ ಈ ದ್ವೀಪದ ವಿವಿಧ ಜನಾಂಗಗಳ ಸ್ಪಷ್ಟ ಸೂಚಿಗಳು. ಅಂತೆಯೇ ಬದುಕಾಲ ಒಂದೇ ದ್ವೀಪದಲ್ಲಿ ಬಾಳಿದುದರಿಂದ ಜನಾಂಗಗಳ ಸಂಕರವೂ ಯಥೇಚ್ಛವಾಗಿ ಆಗಿದೆ. ಇದಲ್ಲ ವೈವಿಧ್ಯತೆಯ ನಡುವೆಯೂ ನೆಮ್ಮದಿಯನ್ನುಳಿಸಿಕೊಂಡು ಬಂದಿದ್ದ ಶ್ರೀಲಂಕೆ ಇದ್ದಕ್ಕಿದ್ದಂತೆ 'ರಾವಣ ದ್ವೀಪ'ವಾಗಿದ್ದು 1983ರಲ್ಲಿ.

ಕ್ಷಮಿಸಿ, ಇದ್ದಕ್ಕಿದ್ದಂತೆ ಅಂದೆನಲ್ಲಾ, ಅದು ಸರಿಯಲ್ಲ. ಶ್ರೀಲಂಕೆಯನ್ನು ಸುಮಾರು ನಾಲ್ಕು ದಶಕಗಳಿಂದೀಚೆಗೆ ಜಾತಿ, ಭಾಷೆ, ಜನಾಂಗ, ವರ್ಗಗಳೆಂಬ ರಕ್ಕಸ ಗರೆಗಳು ಛಿದ್ರ ಛಿದ್ರಗೊಳಿಸುತ್ತಲೇ ಬಂದಿವೆ. ಅದೆಲ್ಲಾ ಒಳಗೇ ಕುದಿಯುತ್ತಿದ್ದ ಲಾವಾರಸ. ಧಿಗ್ಗನೆ ಹೊತ್ತಿಕೊಂಡು ಉರಿಯಲೊಂದು ನೆವ ಬೇಕಿತ್ತು. ಅದು 1983ರ ಜುಲೈ ತಿಂಗಳಲ್ಲಿ



ಪ್ರಭಾಕರನ್

ಕಾಣಿಸಿಕೊಂಡಿತು. ಅಂದಿನಿಂದೀತನಕ ಜ್ವಾಲೆ ಆರಿಲ್ಲ.

1983ರ ಜುಲೈ ತಿಂಗಳಲ್ಲಿ ಮೂವರು ತಮಿಳು ಯುವತಿಯರನ್ನು ಅಪಹರಿಸಿ, ಮಾನಭಂಗ ಮಾಡಲಾಯಿತು. ಜಾಫ್ನಾ ತಮಿಳರ ಕಣ್ಮಣಿಗಳಾಗಿದ್ದ ಇಬ್ಬರು ಎಲ್.ಟಿ.ಟಿ.ಇ. ಯೋಧರನ್ನು ದಾರುಣವಾಗಿ ಕೊಲ್ಲಲಾಯಿತು. ಶ್ರೀಲಂಕಾ ಸೈನಿಕರ ಈ ದುಷ್ಕೃತ್ಯಕ್ಕೆ ಜಾಫ್ನಾದ ಎಲ್.ಟಿ.ಟಿ.ಇ ಯೋಧರು ಮರುದಿನ ರಾತ್ರಿಯೇ ಮಾರುತ್ತರ ನೀಡಿದರು. ಪಾಲಿಲ್ಲೆ ಸೈನಿಕ ಶಿಬಿರ

ಕ್ಕೊಂದು ಸುಳ್ಳೇ ನೆವ ಹೇಳಿ ಫೋನು ಮಾಡಿ ಹದಿಮೂರು ಜನ ಸೈನಿಕರನ್ನು ಶಿಬಿರದಿಂದ ಹೊರತರಲಾಯಿತು. ನೋಡನೋಡುತ್ತಿದ್ದಂತೆಯೇ ಶ್ರೀಲಂಕಾ ಸೈನಿಕರ ಜೀಪು ಭೂಗತ ಬಾಂಬೊಂದರ ಸಿಡಿತಕ್ಕೆ ಆಹುತಿಯಾಗಿ ಚೂರುಚೂರಾಯಿತು. ಹದಿಮೂರು ಸೈನಿಕರು ಮಣ್ಣಾದರು.

ಮರುದಿನ ಸುದ್ದಿ ಕೊಲಂಬೋ ತಲುಪಿದಾಗ ಸಿಂಹಳೀಯರೆದೆಗಳಲ್ಲಿ ಭೂತ ಸಂಚಲನ! ಆಗ ಶುರುವಾಯಿತು ತಮಿಳರ ಕಗ್ಗೊಲೆಗಳ ಅಂತ್ಯವಿಲ್ಲದ ಅಧ್ಯಾಯ. ಸತ್ತವರನ್ನು ಕೊಂದವರೇ ಲೆಕ್ಕವಿಟ್ಟಿಲ್ಲ. ಇತಿಹಾಸಕ್ಕಾದರೂ ನೆನಪಿನ ಶಕ್ತಿ ಎಷ್ಟಿದ್ದೀತು? ಸಾವು, ದ್ವೀಪದಲ್ಲಿ ಗುಡ್ಡೆಯಾಗಿ ಬಿದ್ದಿದೆ.

ಲಂಕೆಯ ಇತಿಹಾಸದ ತೊಡಕುಗಳು ಒಂದೊಂದಲ್ಲ. ಬೌದ್ಧ ಗ್ರಂಥಗಳ ಪ್ರಕಾರ ಸಿಂಹಳೀಯ ಜನಾಂಗವನ್ನು ಸ್ಥಾಪಿಸಿದವನು ಉತ್ತರ ಭಾರತದ ದೊರೆಯೊಬ್ಬನ ಮೊಮ್ಮಗನಾದ ವಿಜಯ. ಈತ ಲಂಕೆಯ ಸಿಂಹಿಣಿಯೊಂದಿಗೆ ಸಂಸಾರ ಮಾಡಿದನಂತೆ. ಆ ಸಿಂಹ-ಮಾನವ ಸಮಾಗಮದ ಸಂತತಿಯೇ ಸಿಂಹಳೀಯರು. ತಂದೆಯಿಂದ ಹೊರದೂಡಲ್ಪಟ್ಟ ಈ ವಿಜಯ ಕ್ರಿಸ್ತಪೂರ್ವ 500ರಲ್ಲಿ ತನ್ನ ಏಳುನೂರು ಜನ ಆರ್ಯ ಸೈನಿಕರೊಂದಿಗೆ ಈ ದ್ವೀಪಕ್ಕೆ ಬಂದನಂತೆ. ಅದೇ ವರ್ಷ ಬುದ್ಧ ನಿರ್ವಾಣ ಹೊಂದಿದ. ಅದಕ್ಕೆ ಮುಂಚೆ ಕನಿಷ್ಠ ಮೂರುಸಲ ಭಗವಾನ್ ಬುದ್ಧ ಶ್ರೀಲಂಕೆಗೆ ಬಂದು ಧರ್ಮ ಪ್ರಚಾರ ಮಾಡಿದ್ದ.

ಹೀಗೆ ಶ್ರೀಲಂಕೆಯ ಮೂಲ ನಿವಾಸಿಗಳೂ, ಆರ್ಯ ಮೂಲದವರೂ ಆದ ಸಿಂಹಳೀಯರು ದ್ವೀಪವನ್ನು ತಮ್ಮ ಸ್ವಂತ ಭೂಮಿಯೆಂದು ಪರಿಗಣಿಸುತ್ತಾರೆ. ಮತ್ತು ಇದೇ ದ್ವೀಪದ ಮತ್ತೊಂದು ಪ್ರಮುಖ ಜನಾಂಗವಾದ ತಮಿಳರನ್ನು ದ್ರಾವಿಡರೂ, ಎರಡನೆ ದರ್ಜೆಯ ಜನಾಂಗದವರೂ ಹಾಗೂ ವಲಸೆ



ಮಹಾತಯಾ

ಬಂದ ಪರಕೀಯರು ಎಂದು ದ್ವೇಷಿಸುತ್ತಾರೆ.

ಆದರೆ ತಮಿಳರ ವಾದ ಬೇರೆಯೇ ಇದೆ. ನಿಜಕ್ಕೂ ಈ ದ್ವೀಪದ ಮೂಲನಿವಾಸಿಗಳೇ ನಾವು. ನಂತರ ಬಂದವನು ಉತ್ತರ ಭಾರತದ ಆರ್ಯರ ವಿಜಯ. ಬೌದ್ಧ ಧರ್ಮವೂ ಅವನು ಬಂದು ನೆಲೆಗೊಂಡ ಎಷ್ಟೋ ವರ್ಷಗಳ ನಂತರ ಬಂತೇ ಹೊರತು, ಅವನಿಗಿಂತ ಮುಂಚೆ ಬಂದುದಲ್ಲ. ತೀರ ಪ್ರಾಚೀನ ಕಾಲದಿಂದಲೂ ಇಲ್ಲಿನ ಅನೂರಾಧಪುರದಲ್ಲಿ ತಮಿಳು ರಾಜ್ಯವೊಂದಿತ್ತು. ಅದರ ಕೊನೆಯ ದೊರೆ 'ಈಳಲ' ಅಥವಾ 'ಈಳರ'ನೆಂಬುವವನನ್ನು ಸಿಂಹಳೀಯ ರಾಜ ಧುತ್ತಗಮನಿ ಸೋಲಿಸಿ ಕ್ರಿಸ್ತಪೂರ್ವ 101ರಲ್ಲಿ ತಮಿಳು ರಾಜ್ಯವನ್ನು ನಿರ್ನಾಮ ಮಾಡಿದ. ಈಳಲನ ಸೋಲಿನ ನಂತರ ತಮಿಳರೇನಾದರು ಎಂಬ ಬಗ್ಗೆ ಇತಿಹಾಸ ಮೌನವಾಗಿದೆ. ಪಾಲಿ ಗ್ರಂಥಗಳಲ್ಲಿ ಸಿಂಹಳೀಯ ದೊರೆಗಳು ಕೆಲ ಯುದ್ಧಗಳನ್ನು ಮಾಡಿದರೆಂದು ಹೇಳಲಾಗಿದೆ. ಅದೇನೇ ಇರಲಿ. ನಾವು ತಮಿಳರೇ ಇಲ್ಲಿನ ಮೂಲ ನಿವಾಸಿಗಳು-ಇದು ಶ್ರೀಲಂಕಾ ತಮಿಳರ ವಾದ. 'ಈಳಲ' ದೊರೆಯ ಹೆಸರಿನಲ್ಲೇ ಇಂದು ತಮಿಳರು ತಮ್ಮ ತಾಯ್ನಾಡು 'ಈಳಂ' ಸ್ಥಾಪನೆಗೆ ಹೆಣಗುತ್ತಿರುವುದು.

ಕ್ರಿಸ್ತಶಕ 1215ರ ಹೊತ್ತಿಗೆ ಜಾಫ್ನಾದಲ್ಲಿ ತಮಿಳು ರಾಜ್ಯವೊಂದು ಅಸ್ತಿತ್ವಕ್ಕೆ ಬಂತೆಂ

ಬುದು ಇತಿಹಾಸ ಸಿದ್ಧಪಡಿಸಿದೆಯಾದರೂ, ಆದು ಕೇವಲ ತಾತ್ಕಾಲಿಕ ಪ್ರಭುತ್ವವೆಂದು ಸಿಂಹಳೀಯರು ವಾದಿಸುತ್ತಾರೆ. ಈ ತಾತ್ಕಾಲಿಕ ಪ್ರಭುತ್ವ ಕಾಲವೇ ನಮ್ಮ ಸುವರ್ಣ ಯುಗವೆಂದು ತಮಿಳರು ನಂಬುತ್ತಾರೆ.

ಇಷ್ಟಕ್ಕೂ ಸಿಂಹಳ-ತಮಿಳರಿಬ್ಬರನ್ನೂ ಒಂದೇ ತಕ್ಕೆಯಲ್ಲಿ ಆದುಮಿ ರಾಜ್ಯವಾಳಿದವರು 1505ರಲ್ಲಿ ಬಂದ ಪೋರ್ತುಗೀಸಿ ಭೂಪರು. ಅವರು ದ್ವೀಪಕ್ಕೆ ಬಂದಾಗ ಸಿಂಹಳೀಯರ ಆಡಳಿತವಿದ್ದ 'ಕೊಟ್ಟೆ' ರಾಜ್ಯ ಈಗಿನ ಕೊಲಂಬೋದ ಬಳಿಯಿತ್ತು. ಅದು ದ್ವೀಪದ ದಕ್ಷಿಣ ಮತ್ತು ಪಶ್ಚಿಮ ಭಾಗಗಳನ್ನಾಳುತ್ತಿತ್ತು. ಎರಡನೇಯದು 'ಕ್ಯಾಂಡಿ' ರಾಜ್ಯವಾಗಿದ್ದು, ಅದು ದ್ವೀಪದ ಮಧ್ಯಭಾಗವನ್ನಾಳುತ್ತಿತ್ತು. ಉತ್ತರ ಮತ್ತು ಪೂರ್ವ ಭಾಗಗಳನ್ನಾಳುತ್ತಿದ್ದ ರಾಜ್ಯವೇ ತಮಿಳು ಅರಸರ ಹಿಡಿತದಲ್ಲಿದ್ದ ಜಾಫ್ನಾ. ದಂಡೆತ್ತಿ ಬಂದ ಪೋರ್ತುಗೀಸರು ಜಾಫ್ನಾ ಮತ್ತು ಕೊಟ್ಟೆ ರಾಜ್ಯಗಳನ್ನು ಗೆದ್ದುಕೊಂಡರಾದರೂ, ವಿಭಿನ್ನ ಭಾಷೆ, ಸಂಸ್ಕೃತಿ, ಧರ್ಮಗಳನ್ನು ಹೊಂದಿದ್ದ ಸಿಂಹಳೀಯ ಹಾಗೂ ತಮಿಳು ರಾಜ್ಯಗಳನ್ನು ಬೇರೆ ಬೇರೆಯಾಗಿಯೇ ಆಳಿದರು. ಕ್ಯಾಂಡಿ ರಾಜ್ಯ ಮಾತ್ರ ಪೋರ್ತುಗೀಸರನ್ನೂ, ನಂತರ ಬಂದ ಡಚ್ಚರನ್ನೂ ಎದುರಿಸಿ ನಿಂತಿತೇ ಹೊರತು ಶರಣಾಗಲಿಲ್ಲ. ಆದರೆ ಪೌರ್ವಾತ್ಯ ರಾಷ್ಟ್ರಗಳ ಪಾಲಿಗೆ ಶಾಪದಂತೆ ತೇಲಿಬಂದ ಬ್ರಿಟಿಷರು ಮಾತ್ರ ನೆಲೆಯೂರುತ್ತಿದ್ದ ಡಚ್ಚರನ್ನು ಓಡಿಸಿ 1796ರಲ್ಲಿ ಶ್ರೀಲಂಕೆಯಲ್ಲಿ ಸ್ಥಿರವಾದರು.

ಬ್ರಿಟಿಷರ ಆಧಿಪತ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ದ್ವೀಪ ಒಂದು ಅಖಂಡ ರಾಜ್ಯವಾಯಿತು. ಕೇಂದ್ರೀಕೃತ ಆಡಳಿತ ವ್ಯವಸ್ಥೆಯುಂಟಾಯಿತು. ತಮಿಳರು ನೆಲೆ ಕಳೆದುಕೊಂಡರು. ನೆಮ್ಮದಿಯಿಂದಿದ್ದ ದ್ವೀಪಕ್ಕೆ ರೋಗದಂತೆ ಬಂದ ಬ್ರಿಟಿಷರು, ತಮ್ಮ ವ್ಯಾಪಾರೀ ಲಾಭಗಳಿಗಾಗಿ ದ್ವೀಪದ ಆರ್ಥಿಕ ವ್ಯವಸ್ಥೆಯನ್ನೇ ಬದಲಿಸಿದರು. ಕಾಫಿ ಪ್ಲಾಂಟೇಶನ್ ದ್ವೀಪದ ಪ್ರಮುಖ ಕಸುಬಾಯಿತು. ಮೊದಲಿದ್ದಂತೆ ಆರ್ಥಿಕ ಸ್ವಾವಲಂಬನೆ ಉಳಿಯಲಿಲ್ಲ. ಕ್ಯಾಂಡಿಯನ್ನರು ತಮ್ಮ ಹೊಲಗಳಿಂದ ಹೊರದೂಡಲ್ಪಟ್ಟರು. ಸಿಂಹಳೀಯರಾಗಲೀ, ಶ್ರೀಲಂಕೆಯ ಮೂಲದ ತಮಿಳರಾಗಲೀ ಬ್ರಿಟಿಷರ ಆಳುಗಳಾಗಿ ಪ್ಲಾಂಟೇಶನ್ನುಗಳಲ್ಲಿ ದುಡಿಯಲು ಸಿದ್ಧರಾಗಲಿಲ್ಲ. ಆಗ ಶುರುವಾಯಿತು ವಲಸೆ! ಭಾರತದ ತಮಿಳುನಾಡಿನಲ್ಲಿ ದಟ್ಟ ದಾರಿದ್ರ್ಯ, ಸಾಲ, ಅನಿಶ್ಚಿತತೆಗಳ ನಡುವೆ ನಲುಗುತ್ತಿದ್ದ ತಮಿಳರನ್ನು ಈ ಬ್ರಿಟಿಷರು ಕೆಲಸ ಕೊಡುತ್ತೇವೆಂದು ಶ್ರೀಲಂಕೆಗೆ ಕರೆತಂದರು. ಕಾಫಿ ಪ್ಲಾಂಟೇಶನ್ನುಗಳಲ್ಲಿ ವರ್ಷದುದ್ದಕ್ಕೂ ಕೆಲಸವಿರುತ್ತಿರಲಿಲ್ಲವಾದ್ದರಿಂದ ತಮಿಳು ಕೂಲಿಗಳು ಕೆಲ ತಿಂಗಳಮಟ್ಟಿಗೆ ದ್ವೀಪಕ್ಕೆ ಬಂದಿರುತ್ತಿದ್ದರು.

ಕೆಲವೇ ದಿನಗಳಲ್ಲಿ ಕಾಫಿ ತೋಟಗಳಿಗೆ ರೋಗ ಬಿತ್ತು. ಇಡೀ ಸೀಮೆಯೇ ಸತ್ತು ಹೋಯಿತು. ಕಾಫಿಯ ಜಾಗಕ್ಕೆ ಬ್ರಿಟಿಷರು ತಂದು ನೆಟ್ಟದ್ದು ಚಹದೆಲೆಯ ಸಸಿಗಳನ್ನು! ರಾತ್ರೋರಾತ್ರಿ ಶ್ರೀಲಂಕೆ ಚಹದ ಕಣಜವಾಯಿತು. ಈ ಚಹದ ತೋಟಗಳಲ್ಲಿ ವರ್ಷವಿಡೀ ಕೆಲಸ. ತಮಿಳು ಕೂಲಿಗಳು ದ್ವೀಪದಲ್ಲೇ ಸ್ಥಿರಗೊಂಡರು. ಅಕ್ಷರಶಃ ಬ್ರಿಟಿಷರ ಗುಲಾಮರಂತಿದ್ದ ತಮಿಳು ಕೂಲಿಗಳು ಕಾಲಕ್ರಮದಲ್ಲಿ ಶ್ರೀಲಂಕೆಯವರೇ ಆಗಿ ಹೋದರು.

ಭಾರತದಲ್ಲಿ ಹಿಂದೂ-ಮುಸ್ಲಿಂ ಏಕತೆಯನ್ನು ಸೀಳಿ ಒಲೆಗಿಟ್ಟಂತೆಯೇ ಬಿಳಿಯರಿಗೆ ಶ್ರೀಲಂಕೆಯ ಯಾವುದೇ ಜನಾಂಗವನ್ನು ಬಲಿಷ್ಠವಾಗಿ ಬೆಳೆಯಲು ಬಿಡಬಾರದೆಂಬ ಕಲ್ಪನೆಯಿತ್ತು. ಬಹುಸಂಖ್ಯಾತ ಸಿಂಹಳೀಯರ ವಿರುದ್ಧ ಅಲ್ಪಸಂಖ್ಯಾತ ತಮಿಳರನ್ನು (ದ್ವೀಪದ ಮೂಲ ನಿವಾಸಿ ತಮಿಳರನ್ನು) ಎತ್ತಿಕಟ್ಟಿದರು. ಸಿಂಹಳದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ

ರುವ ಮೂಲ ತಮಿಳರು ಹಿಂದೂಗಳಾಗಿದ್ದು ಬ್ರಿಟಿಷರ ಕಾಲಕ್ಕೆ ಬಂದ ಕ್ರೈಸ್ತ ಮಿಶನರಿಗಳನ್ನು ಯಾವುದೇ ಪ್ರತಿರೋಧವಿಲ್ಲದೆ ಒಪ್ಪಿಕೊಂಡರು. ಆದರೆ ದಕ್ಷಿಣ ಮತ್ತು ಪಶ್ಚಿಮ ಭಾಗದ ಬೌದ್ಧ ಮೂಲದ ಸಿಂಹಳೀಯರು ತಮ್ಮ ಸಂಸ್ಕೃತಿ ನಾಶವಾದೀತೆಂದು ಮಿಶನರಿಗಳನ್ನು ತಿರಸ್ಕರಿಸಿದರು.

ಇದರ ನೇರ ಪರಿಣಾಮವೆಂದರೆ, ತಮಿಳರು ನೂತನ ವಿದ್ಯಾಭ್ಯಾಸಕ್ಕೆ ತೊಡಗಿ ಬ್ರಿಟಿಷ್ ಆಡಳಿತದಲ್ಲಿ ಅಧಿಕಾರಿಗಳಾಗಿ, ಗುಮಾಸ್ತರಾಗಿ, ಶಿಕ್ಷಕರಾಗಿ ಬೆಳೆಯುತ್ತ ಹೋದರು. ಇಂಗ್ಲಿಷ್ ಓದು ಅವರನ್ನು ಬುದ್ಧಿವಂತರನ್ನಾಗಿಸಿತು. ಸಂಖ್ಯೆಯಲ್ಲಿ ಮೂಲ ತಮಿಳರು ಸಿಂಹಳೀಯರಿಗಿಂತ ಕಡಿಮೆಯಿದ್ದರೂ ನೌಕರಿ ಪಡೆಯುವಲ್ಲಿ ಸಿಂಹಳೀಯರಿಗೆ ಸಮನಾದರು. ಅವರಿಗೆ, ಅದರಲ್ಲೂ ಸುಶಿಕ್ಷಿತ ಮಧ್ಯಮ ವರ್ಗದ ಮೂಲ ತಮಿಳರಿಗೆ ಬ್ರಿಟಿಷರು ಕೊಡುವ ಚಿಲ್ಲರೆ ಉತ್ತೇಜನವೇ ದೊಡ್ಡ ವರವಾಯಿತು. ತಮ್ಮ ಸೋದರರಾದ ಕೂಲಿ ತಮಿಳರು (ಪ್ಲಾಂಟೇಶನ್ ಕೂಲಿಗಳು) ಹೀನಾಯವಾಗಿ ಬದುಕುತ್ತಿದ್ದರೂ, ಮೂಲ ತಮಿಳರು ಬ್ರಿಟಿಷರ ನೆರಳಲ್ಲಿ ಸುಖವಾಗಿದ್ದರು. ಸಿಂಹಳೀಯರಿಗೂ, ಮೂಲ ತಮಿಳರಿಗೂ ಗೆಳೆತನ ಸಾಧ್ಯವೇ ಆಗಬಾರದೆಂಬ ಉದ್ದೇಶದಿಂದ ಬ್ರಿಟಿಷರು 1931ರಲ್ಲಿ ರಾಜಕೀಯ ಸುಧಾರಣೆಗಳನ್ನು ತರುವ ನೆಪದಲ್ಲಿ, ಭಾಷೆ, ಧರ್ಮ ಮತ್ತು ಜನಾಂಗಗಳಿಗೆ ಅನುಗುಣವಾಗಿ ರಾಜಕೀಯದಲ್ಲಿ ಅವಕಾಶ ಕಲ್ಪಿಸಿಕೊಡುತ್ತೇವೆಂದು, ತನ್ಮೂಲಕ ದ್ವೀಪವನ್ನು ಅಡ್ಡಡ್ಡ ಸೀಳತೊಡಗಿದರು. 1933ರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ರಚನೆಯಾದಾಗ ಅದರಲ್ಲಿ ಐರೋಪ್ಯ ಸಂಕರ ಸಂತತಿಯವರಾದ ಬರ್ಗೀರರು, ಐರೋಪ್ಯರು, ಸಿಂಹಳೀಯರು, ತಮಿಳರು, ತಮಿಳು ಮಾತನಾಡುವ ಮುಸ್ಲಿಮರು, ಕ್ಯಾಂಡಿಯನ್ ಸಿಂಹಳೀಯರು, ಭಾರತ ಮೂಲದ ಮುಸ್ಲಿಮರು, ಮೂಲ ಶ್ರೀಲಂಕೆಯ ಮುಸ್ಲಿಮರು ಎಂಬುದಾಗಿ ವಿಭಜನೆಗಳನ್ನು ಮಾಡಿ ಜಾತಿವಾರು, ಭಾಷಾವಾರು ಪ್ರಾತಿನಿಧ್ಯ ಕಲ್ಪಿಸಿಕೊಟ್ಟರು. ತಮಿಳರನ್ನೂ, ಸಿಂಹಳೀಯರನ್ನೂ, ಮುಸ್ಲಿಮರನ್ನೂ, ಯುರೋಪಿಯನ್ನರನ್ನೂ ಅವರವರಲ್ಲೇ ಪಂಗಡಗಳನ್ನಾಗಿಸಿ ಸೀಳಿದರು.


ಒಂದೇ ಒಂದು ಪಕ್ಷವೂ ಪ್ರಬಲವಾಗಿ ಬೆಳೆಯದಂತಾಯಿತು. ಮನೆಮನೆಗಳಲ್ಲಿ ಗೋಡೆಗಳೆದ್ದು ನಿಂತವು. 1948ರಲ್ಲಿ ಸಿಲೋನ್ ದ್ವೀಪಕ್ಕೆ ಸ್ವಾತಂತ್ರ್ಯ ದೊರಕಿದಾಗ ದ್ವೀಪದ ಯಾವ ಪ್ರಜೆಯಲ್ಲೂ ಅದು ದೊರಕಿತೆಂಬ ಸಂತಸವಾಗಲೀ, ಜಯದ ಉನ್ಮಾದವಾಗಲೀ ಕಾಣಲಿಲ್ಲ. ಶ್ರೀಲಂಕೆಗೆ ಒಂದು ನೂತನ ಸಂವಿಧಾನವನ್ನು ನಾವು ರಚಿಸಿಕೊಂಡದ್ದು ಸ್ವಾತಂತ್ರ್ಯ ಸಿಕ್ಕ ಇಪ್ಪತ್ತು ವರ್ಷಗಳ ನಂತರ, 1972ರಲ್ಲಿ! ಆತನಕ ಬ್ರಿಟಿಷರಿಟ್ಟ ಹೆಸರಿನಲ್ಲೇ ನಾವು ಕರೆಸಿಕೊಂಡೆವು.

ಆಗಷ್ಟೆ ನಾನು ಮದುವೆಯಾಗಿದ್ದೆ. ಹಾಯಿದೋಣಿಯ ಮೇಲೆ ತೇಲಿಬರುವಾಗ ಹೆಂಡತಿಯ ನೆನಪನ್ನೂ ಆಚೆಗೆ ನೂಕಿ ರಾಜಕಾರಣದ ಸುದ್ದಿ ಕಿವಿಗೆ ಬೀಳುತ್ತಿತ್ತು. ಇಂಗ್ಲಿಷರ ಕಾಲದಲ್ಲಿ ಕೇಂಬ್ರಿಜ್‌ನಲ್ಲಿ ಓದಿ ಬಂದಿದ್ದ ಡಾನ್ ಸ್ಟೀಫನ್ ಸೇನಾನಾಯಕೆ ಎಂಬಾತ 1946ರಲ್ಲಿ ಯುನೈಟೆಡ್ ನ್ಯಾಷನಲ್ ಪಾರ್ಟಿ (ಯು.ಎನ್.ಪಿ.)ಯನ್ನು ಸ್ಥಾಪಿಸಿದ್ದಾನೆಂದು ಸುದ್ದಿಯಾಗಿತ್ತು. 1947ರಲ್ಲಿ ಚುನಾವಣೆ ಗೆದ್ದು ರಾಜ್ಯವಾಳತೊಡಗಿದ. ಅಲ್ಲಿಂದ ಶುರುವಾಯಿತು ನೋಡಿ, ತಮಿಳರ ಮೇಲೆ ದಾಳಿ!

ಮೊದಲು ತಗಾದೆ ಬಂದದ್ದು ಸಿಲೋನ್‌ನಲ್ಲಿ ವಾಸವಾಗಿದ್ದ ಭಾರತೀಯರ ಬಗ್ಗೆ. ಆ ಪುಣ್ಯಾತ್ಮ ಸೇನಾನಾಯಕೆ ಎಲ್ಲ

ಭಾರತೀಯರನ್ನೂ ಸೀಲೋನದ ಪೌರತ್ವಕ್ಕೆ ಅನರ್ಹರೆಂದು ಘೋಷಿಸಿಬಿಟ್ಟ. ನಾವು ಯಾವ ದೇಶದ ಪೌರರೂ ಅಲ್ಲವೆಂದ! ಮೂರು ತಲೆಮಾರುಗಳಿಂದ ದ್ವೀಪದಲ್ಲಿ ನೆಲೆಗೊಂಡವರು ಮಾತ್ರ ಪೌರತ್ವಕ್ಕೆ ಅರ್ಹರೆಂದ. ಎಲ್ಲಿಂದ ತರೋಣ ಜನ್ಮಪ್ರಮಾಣ ಪತ್ರಗಳನ್ನ? ಶ್ರೀಲಂಕಾದಲ್ಲಿ ಜನನ ನೋಂದಣಿ ಶುರುವಾಗಿದ್ದೇ 1985ರಲ್ಲಿ. ಹಾಗಿರುವಾಗ ನನ್ನ ಮುತ್ತಜ್ಜನ ಅಜ್ಜ ಶ್ರೀಲಂಕಾದಲ್ಲೇ ಹುಟ್ಟಿದನೆಂಬುದಕ್ಕೆ ಪುರಾವೆ ಎಲ್ಲಿ ತರಲಿ? ತಮಿಳು ಕೂಲಿಗಳಿಗಂತೂ ನೆಲೆಯೇ ಇಲ್ಲದಾಯಿತು. ಭಾರತ ಮೂಲದ ತಮಿಳರ ಪೌರತ್ವ ತಕರಾರಿಗಿಟ್ಟು ಕೊಂಡಿತು. ನೌಕರಿಯಿಲ್ಲದ ಅಪಾಪೋಲಿ ಸಿಂಹಳೀಯನೊಬ್ಬ ಏನೂ ಕಷ್ಟವಿಲ್ಲದೆ ದ್ವೀಪದ ನಾಗರಿಕನೆನಿಸಿಕೊಳ್ಳುತ್ತಿದ್ದ. ಎಲ್ಲ ಇದ್ದೂ ತಮಿಳರು ಬೀದಿ ಪಾಲಾದರು. ಪ್ಲಾಂಟೇಶನ್ ತಮಿಳರು ಓಟಿನ ಹಕ್ಕಿನಿಂದ ವಂಚಿತರಾದರು. ಅವರಲ್ಲಿದ್ದ ಒಗ್ಗಟ್ಟು, ಸಂಘಟನೆಯನ್ನು ನಾನೆಲ್ಲೆಲ್ಲೂ ನೋಡಿಲ್ಲ. ಅವರಿಗೆ ಓಟಿನ ಹಕ್ಕು ಕೊಟ್ಟರೆ ತಮ್ಮ ಭಾರತೀಯ ಬಂಧುಗಳನ್ನು (ವಲಸೆ ಬಂದ ತಮಿಳರನ್ನು) ಆರಿಸಿ ಕಳಿಸುತ್ತಾರೆ. ಅವರದೇ ರಾಜ್ಯವಾಗುತ್ತದೆ. ತಾವು ಮೂಲೆಗುಂಪಾಗುತ್ತೇವೆ ಎಂಬುದು ಸಿಂಹಳೀಯರ ಆತಂಕವಾಗಿತ್ತು.

ಈ ಮಧ್ಯೆ ಆಕ್ಸ್‌ಫರ್ಡಿನಲ್ಲಿ ಓದಿ ಬಂದಿದ್ದ ಎಸ್.ಡಬ್ಲ್ಯು.ಆರ್.ಡಿ. ಬಂಡಾರ ನಾಯಿಕೆ ಎಂಬಾತ ಕೆಲಕಾಲ ಯುನೈಟೆಡ್ ನ್ಯಾಷನಲ್ ಪಾರ್ಟಿ (ಯು.ಎನ್.ಪಿ.) ಯಲ್ಲಿದ್ದು ಇದ್ದಕ್ಕಿದ್ದಂತೆ ಒಂದಿನ ತನ್ನ ಕ್ರೈಸ್ತಧರ್ಮ ತ್ಯಜಿಸಿ ಬೌದ್ಧನಾದ! ಪಾದ್ರಿಗಳು ಹಾಕಿದ ಹಿಡಿಶಾಪ ಎಲ್ಲಿ ಹೋಯಿತೋ ಬಿಡಿ, ಆತನಂತೂ ರಾಜಕೀಯವಾಗಿ ಬೆಳೆದು ನಿಂತ. ಬೌದ್ಧನಾಗುವ ಉದ್ದೇಶವೇ ಅದಿತ್ತಲ್ಲ? 1951ರಲ್ಲಿ ಆತ ಶ್ರೀಲಂಕಾ ಫ್ರೀಡಂ ಪಾರ್ಟಿ


ಬಾಲಸಿಂಘಂ

(ಎಸ್.ಎಲ್.ಎಫ್.ಪಿ.) ಕಟ್ಟಿದ. ಎಷ್ಟಾದರೂ ಬ್ರಿಟಿಷರ ಕೈಗಳಲ್ಲಿ ಪಳಗಿದ ಹುಡುಗ ನೋಡಿ, ತಮಿಳರ ವಿರುದ್ಧ ಬೌದ್ಧರನ್ನು ಎತ್ತಿ ಕಟ್ಟತೊಡಗಿದ. ಹಳ್ಳಿಗಾಡಿನ ಜಮೀನುದಾರರು, ಶಿಕ್ಷಕರು, ಬೌದ್ಧ ಭಿಕ್ಷುಗಳು, ವೈದ್ಯರು ಮುಂತಾದವರನ್ನು ಒಗ್ಗೂಡಿಸಿದ. 1952ರಲ್ಲಿನ್ನೂ ಭಾಷೆಯ ಸಮಸ್ಯೆ ಉದ್ಭವಿಸಿರಲಿಲ್ಲ. ಈ ಪುಣ್ಯಾತ್ಮ ಬಂಡಾರನಾಯಿಕೆ ದ್ವೀಪದ ಆಡಳಿತ ಭಾಷೆಯಾದ ಇಂಗ್ಲಿಷಿನ ಸ್ಥಾನದಲ್ಲಿ 'ಸ್ವಭಾಷಾ' ಸ್ಥಾಪನೆ ಮಾಡಬೇಕೆಂದು ರೊಳ್ಳೆ ತೆಗೆದ. ಸ್ವಭಾಷೆಯೆಂದರೆ ಆತನ ಅರ್ಥದಲ್ಲಿ ಸಿಂಹಳೀ ಭಾಷೆ. ಅಂದಿನ ಪ್ರಧಾನಿ ಜಾನ್ ಕೋಟೆಲವಾಲ, ಇಂಗ್ಲಿಷ ತೊಲಗಿದ ನಂತರ ಸಿಂಹಳೀ ಮತ್ತು ತಮಿಳು ಭಾಷೆಗಳನ್ನು ಸಮಾನ ಸ್ಥಾನದಲ್ಲಿಡುವುದಾಗಿ ಭರವಸೆ ಕೊಟ್ಟರು. ಅದನ್ನು ಮೊದಲು ಒಪ್ಪಿಕೊಂಡಿತಾದರೂ 1955ರ ಹೊತ್ತಿಗೆ ಬಂಡಾರನಾಯಿಕೆ ಪಕ್ಷ (S.L.F.P.) ಸಿಂಹಳಿಯನ್ನೇ ಆಡಳಿತ ಭಾಷೆ ಮಾಡಬೇಕೆಂದಿತು. ಆದರೆ ಯು.ಎನ್.ಪಿ. ಮತ್ತು ಎಡಪಂಥೀಯ ಪಕ್ಷಗಳು ಎರಡಕ್ಕೂ ಸಮಾನ ಸ್ಥಾನ ಬೇಕೆಂದವು.

ಈ ಮಧ್ಯೆ ತಮಿಳರೂ ರಾಜಕೀಯವಾಗಿ ಜಾಗೃತರಾಗಿದ್ದರು. 1952ರಲ್ಲಿ ಅಧಿಕಾರದ

ಳ್ಳಿದ್ದ ಯು.ಎನ್.ಪಿ.ಯೊಂದಿಗೆ ಸರಕಾರ ರಚಿಸಲು ನೆರವಾದ ತಮಿಳು ಕಾಂಗ್ರೆಸ್ ಪಕ್ಷ 1956ರಲ್ಲಿ ಮತ್ತೆ ಚುನಾವಣೆಗಳು ಬಂದಾಗ ಭಾಷಾ ಸಮಸ್ಯೆ ಮತ್ತು ಅಲ್ಪಸಂಖ್ಯಾತ ತಮಿಳರ ಸಮಸ್ಯೆಗೆ ಯು.ಎನ್.ಪಿ. ಪರಿಹಾರ ಒದಗಿಸುತ್ತಿಲ್ಲವೆಂದು ರೇಗಿ ರಾಜೀನಾಮೆ ನೀಡಿತು. ತಮಿಳರಿಗೂ ಸಿಂಹಳೀಯರಿಗೂ ಸಮಾನ ಬದುಕು ನೀಡಿ! ಇಲ್ಲದಿದ್ದರೆ ನಾವು ಪ್ರತ್ಯೇಕ ತಮಿಳು ರಾಷ್ಟ್ರ ಕಟ್ಟಿಕೊಳ್ಳುತ್ತೇವೆ ಎಂದು ತಮಿಳು ಕಾಂಗ್ರೆಸ್ ಗುಡುಗಿತು. ಆಗ ಬಿತ್ತಲಾಯಿತು-ಪ್ರತ್ಯೇಕತಾವಾದದ ಬೀಜ!

ಈ ಮಧ್ಯೆ ತಮಿಳರ ಮಧ್ಯೆ ಚೆಲುವನಾಯಕಂ ಎಂಬ ನಾಯಕ ಬೆಳೆದು ನಿಂತಿದ್ದ. ಆತ ತಮಿಳು ಭಾಷೆಗಾಗಿ ಬಡಿದಾಡತೊಡಗಿದ. ತಮಿಳರ ಪೌರತ್ವ, ದ್ವೀಪದ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ತಮಿಳರಿಗೆ ಸ್ವಾಯತ್ತತೆ ನೀಡಬೇಕೆಂಬ ಹೋರಾಟ ಉಗ್ರವಾಯಿತು. 1957ರ ಹೊತ್ತಿಗೆ ಇದರಿಂದ ಮೆತ್ತಗಾದ ಬಂಡಾರನಾಯಿಕೆ ತಮಿಳು ನಾಯಕ ಚೆಲುವನಾಯಕಂ ಜೊತೆ ಒಪ್ಪಂದ ಮಾಡಿಕೊಂಡ. ಕೊಂಡಿ ಬೆಸೆಯುವುದರಲ್ಲಿತ್ತು. ಆದರೆ ಅಧಿಕಾರದಿಂದ ವಂಚಿತವಾಗಿದ್ದ ಯುನೈಟೆಡ್ ನ್ಯಾಷನಲ್ ಪಾರ್ಟಿಯು ಈ ಒಪ್ಪಂದವನ್ನು ವಿರೋಧಿಸಿತು.

ಬಂಡಾರನಾಯಿಕೆ ತಮಿಳರಿಗೆ ಕೊಡಬಹುದಾಗಿದ್ದ ವಿನಾಯಿತಿ, ಸೌಲಭ್ಯಗಳನ್ನು ಸಿಂಹಳರು ವ್ಯವಸ್ಥಿತವಾಗಿ ತಡೆದರು. ಈ ವಿಷಯದಲ್ಲಿ ಬೌದ್ಧ ಭಿಕ್ಷುಗಳು ನಡೆದುಕೊಂಡಷ್ಟು ಅಮಾನವೀಯವಾಗಿ ಮತ್ಯಾರೂ ನಡೆದುಕೊಳ್ಳಲಿಲ್ಲ. ಇದಾ, ಆ ಬುದ್ಧ ಭಗವಾನನ ಸಂತತಿ? ಎಂದು ನಾವು ಕಣ್ಣಗಲಿಸಿದೆವು. ತಮಿಳರ ಮುಖಂಡ ಚೆಲುವನಾಯಕಂ ಜೈಲು ಸೇರಿದರು. ಬಂಡಾರನಾಯಿಕೆ ರಂಗು ಬದಲಿಸಿದ. ತಮಿಳರನ್ನು ಬಹಿರಂಗವಾಗಿ ಖಂಡಿಸಿದ. ಆವರಿಗಿದ್ದ ಒಂದೇ ರಾಜಕೀಯ ಮುಖವಾಣಿಯೆಂದರೆ ಫೆಡರಲ್ ಪಾರ್ಟಿ. ಅದು ಕೂಡ ಸಂವಿಧಾನ ಬಾಹಿರವೆಂದು ಘೋಷಿತವಾಯಿತು. ತಮ್ಮ ಹಕ್ಕುಗಳಿಂದಾಗಿ ತಮಿಳರು ಶಾಂತಿಯುತ ಹೋರಾಟಕ್ಕಿಳಿದರು. ಸಿಂಹಳರ ಕೈಗಳಲ್ಲಿ ಖಡ್ಗ ಝಳಪಿಸಿದವು. ಪಣದುರವೆಂಬ ಊರಿನ ಗುಡಿಯೊಂದರ ಪೂಜಾರಿಯನ್ನು ಸಿಂಹಳರು ಪೂರ್ತಿ ಸೀಮೆಎಣ್ಣೆಯಲ್ಲಿ ತೋಯಿಸಿ ಕಡ್ಡಿಗೀರಿದರು. ಶ್ರೀಲಂಕೆ ಸರಿಯಾಗಿ ಎರಡು ತುಂಡಾಯಿತು. ಕೊಲಂಬೋ ಸಿಂಹಳರ ನೆಲೆಯಾದರೆ, ಜಾಫ್ನಾ ಕೂಳಿಲ್ಲದ ತಮಿಳರ ಬೀಡಾಯಿತು. ತಮಿಳರ ಮೇಲಾದ ಅನ್ಯಾಯ, ಅತ್ಯಾಚಾರಗಳಿಗೆ ಕೊನೆಯೇ ಇಲ್ಲದಾಯಿತು. ಹಕ್ಕುಗಳಿಗಾಗಿ ದನಿಯೆತ್ತಿದ ತಮಿಳರನ್ನು ಬಂಡಾರನಾಯಿಕೆ 'ದೇಶದ್ರೋಹಿ'ಗಳೆಂಬಂತೆ ನೋಡಿದ.

ಭಾರತದಿಂದ ವಲಸೆ ಬಂದ ತಮಿಳರ ಮೇಲೆ ಶುರುವಾದ ಹಿಂಸಾಚಾರ ಕ್ರಮೇಣ ದ್ವೀಪದ ಮೂಲ ತಮಿಳರನ್ನೂ ಆವರಿಸಿಕೊಂಡಿತು. ಅವರೂ ಪೌರತ್ವ ಕಳೆದುಕೊಂಡರು. ಭಾಷೆ ಕಳೆದುಕೊಂಡರು. 'ಎಂಥ ತಪ್ಪು ಮಾಡಿದೆವಯ್ಯಾ! ಬ್ರಿಟಿಷರು ದೇಶ ಬಿಟ್ಟು ಹೋಗುವಾಗ ತಮಿಳರಿಗೊಂದು ಪ್ರತ್ಯೇಕ ದೇಶ ಮಾಡಿಕೊಟ್ಟು ಹೋಗಿ ಅಂತ ಕೇಳದೆ ಬಹಳ ದೊಡ್ಡ ತಪ್ಪು ಮಾಡಿದೆವು!' ಎಂದು ತಮಿಳರು ಮಾತಾಡಿಕೊಂಡದ್ದನ್ನು ನಾನೆಷ್ಟೋ ಸಲ ಕೇಳಿ ಸುಮ್ಮನಾಗಿದ್ದೇನೆ. ಕೊಲಂಬೋದಿಂದ ಓಡಿಸಲಾದ ತಮಿಳರ ಕಣ್ಣೀರಿಗೆ ಅಂತ್ಯವೇ ಇರಲಿಲ್ಲ. ತಮಿಳು ಗ್ರಂಥಗಳನ್ನೋದಿದವರು ಇಡೀ ಲಂಕೆಯೇ ತಮಿಳರದು ಎನ್ನುತ್ತಿದ್ದರು. ಅಷ್ಟಲ್ಲದಿದ್ದರೂ ತಮಿಳರ ಸಂಖ್ಯೆ ಹೆಚ್ಚಿದ್ದ ದ್ವೀಪದ ಉತ್ತರ ಮತ್ತು ಪೂರ್ವ ಭಾಗಗಳನ್ನಾದರೂ ತಮಗೆ ಬಿಟ್ಟುಕೊಟ್ಟುಬಿಡಿ ಎಂಬುದು ಅವರ ಕೂಗಾಯಿತು. ತಮಿಳರ ಅವತ್ತಿನ ಎಲ್ಲ ಅಸಹನೆ,

ಆಕ್ರೋಶ, ಆಶೋತ್ತರಗಳಿಗೆ ಮುಖವಾಣ ಯಾದದ್ದು 'ತಮಿಳ್ ಯುನೈಟೆಡ್ ಲಿಬರೇ ಶನ್ ಫ್ರಂಟ್' (TULF) ಎಂಬ ಪಕ್ಷ.

'ಈಳಂ' ಎಂಬ ಕನಸು ಮೊದಲು ಟಿಸಿ ಲೊಡೆದದ್ದು 1976ರಲ್ಲಿ. ತಮಿಳರು ಬಹು ದೊಡ್ಡ ಸಂಖ್ಯೆಯಲ್ಲಿ 'ವಡುಕ್ಕೊಡ್ಡೈ' ಎಂಬಲ್ಲಿ ಸಭೆ ಸೇರಿದರು. ಶತಾಯಗತಾಯ ಹೋರಾಟ ಮಾಡಿ ನಾವು ತಮಿಳು ರಾಷ್ಟ್ರ ವಾದ 'ಈಳಂ' ಪಡೆದೇ ತೀರುತ್ತೇವೆಂದು ನಾಯಕರು ಆಣೆ ಮಾಡಿದರು. ನಿರ್ಗತಿಕರಾ ಗಿದ್ದ ತಮಿಳರಲ್ಲಿ ದೇಶಪ್ರೇಮದ ರಕ್ತ ಸಂಚ ರಿಸಿತು. ಆ ನಡುರಾತ್ರಿಯ ನಿರ್ಧಾರಗಳಿಗಾಗಿ ಅದೆಷ್ಟು ನೆತ್ತರ ಕಾಲುವೆಗಳನ್ನು ಹರಿಸಬೇ ಕಾಯಿತೋ...! ನನಗಂತೂ ಎಲ್ಲ ಕಣ್ಣಿಗೆ ಕಟ್ಟಿದಂತಿದೆ.

1976ರಲ್ಲಿ ತಮಿಳರು ಮಾಡಿದ ನಿರ್ಧಾ ರಕ್ಕೆ ಕಾರಣವಿಲ್ಲದೆ ಇಲ್ಲ. 1972ರಲ್ಲಿ ಶ್ರೀಲಂಕಾ ಸರ್ಕಾರ ತನ್ನ ಸಂವಿಧಾನ ಬದ ಲಾಯಿಸಿತು. ಆತನಕ 'ಸಿಲೋನ್' ಎಂದೇ ಕರೆಸಿಕೊಳ್ಳುತ್ತಿದ್ದ ದ್ವೀಪಕ್ಕೆ 'ಶ್ರೀಲಂಕಾ' ಎಂದು ಹೆಸರಿಟ್ಟರು. ಇರಲಿ, ತಮಿಳರು ಬೇಡೆನ್ನಲಿಲ್ಲ. ಆದರೆ ನಾನಾ ಜಾತಿ, ಭಾಷೆ, ಪಂಗಡಗಳ ನೆಲೆಬೀಡಾದ ದ್ವೀಪವನ್ನು 'ಸಿಂಹಳ-ಬೌದ್ಧನಾಡು' ಎಂದು ಘೋಷಿಸು



ಯೋಗಿ

ವುದೇ? ಸಿಂಹಳೀ ಭಾಷೆಯನ್ನು ಏಕೈಕ ಅಧಿಕೃತ ಭಾಷೆಯೆಂದು ನಿರ್ಧರಿಸುವುದೆ? ಬೌದ್ಧ ಧರ್ಮವೊಂದೇ ರಾಷ್ಟ್ರಧರ್ಮವೆಂದು ತೀರ್ಮಾನಿಸುವುದೆ?

ಸಹಜವಾಗಿಯೇ ತಮಿಳರು ಕೆರಳಿದರು. ಅವರ ಸಿಟ್ಟಿಗೆ ಅರ್ಥವಿತ್ತು. ಕಾರಣಗಳಿ ದ್ದವು. ಅವರ ಮೇಲೆ ನಡೆದ ಅತ್ಯಾಚಾರ, ಹಿಂಸೆಗಳಿಗೆ ಉತ್ತರವಾಗಿ ಅವರು ಸಂಪೂರ್ಣ ಅಸಹಕಾರ ಚಳವಳಿ ಆರಂಭಿಸಿ ದರು. ಜಾಫ್ನಾ ಬಾಗಿಲುಗಳು ಮುಚ್ಚಿಕೊಂ ಡವು. ತಮಿಳರು ತಮ್ಮದೇ ಆದ ಅಂಚೆ ವ್ಯವಸ್ಥೆ ಮಾಡಿಕೊಂಡರು. ಸರ್ಕಾರದ ಜಮೀನುಗಳನ್ನು ನಿರಾಶ್ರಿತರಾಗಿ ಬಂದವ ರಿಗೆ ಹಂಚಿದರು. ಅಷ್ಟರಲ್ಲಿ ತುರ್ತು ಪರಿ ಸ್ಥಿತಿ ಘೋಷಿಸಲಾಯಿತು. ಸಿಂಹಳದ ಸೇನೆ ಜಾಫ್ನಾದೊಳಕ್ಕೆ ನುಗ್ಗಿ ಬಂತು. ನಿರಾಯುಧ, ಶಾಂತಿಪ್ರಿಯ ತಮಿಳರನ್ನು ಅವರ ಮನೆ ಯಲ್ಲೇ ಸದೆಬಡಿಯಲಾಯಿತು.

ಆದರೆ 1966ರಲ್ಲಿ ಮತ್ತೆ ಚೆಲುವನಾ ಯಕಂ ಹಾಗೂ ಶ್ರೀಲಂಕೆಯ ಅಂದಿನ ಆಡ ಳಿತಗಾರ ದೂದ್ಲೆ ಸೇನಾನಾಯಿಕೆ ಮಧ್ಯೆ ಮತ್ತೊಂದು ಒಪ್ಪಂದವಾಯಿತು. ಅದರ ಪ್ರಕಾರ ದ್ವೀಪದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ತಮಿಳು ಆಡಳಿತ ಭಾಷೆಯಾ ಗುತ್ತದೆ., ಅಲ್ಲಿನ ನ್ಯಾಯಾಲಯಗಳಲ್ಲಿ ತಮಿಳು ಬಳಸಲಾಗುತ್ತದೆ. ಜಿಲ್ಲಾ ಮಂಡ ಲಿಗಳನ್ನು ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡಲಾಗುತ್ತದೆ ಮತ್ತು ತಮಿಳರ ಮೇಲೆ ಸಿಂಹಳರ ದಬ್ಬಾಳಿಕೆ ತಡೆಯಲಾಗುವುದು! ನಿಜಕ್ಕೂ ಈ ಒಪ್ಪಂದ ತಮಿಳರ ಆಶಾಕಿರ ಣವಾಗಿತ್ತು. ಅದು ಸಾಕಾರಗೊಂಡಿದ್ದಿದ್ದರೆ ರಕ್ತಪಾತದ ವ್ಯಥೆ ಮುಂದುವರೆಯುತ್ತಿರ ಲಿಲ್ಲ. ಆದರೆ 1966ರಲ್ಲಿ ಪಾರ್ಲಿಮೆಂಟು ಈ ಒಪ್ಪಂದದ ಬಗ್ಗೆ ಚರ್ಚಿಸುತ್ತಿದ್ದಂತೆಯೇ ಹೊರಗೆ ಮೂರುಸಾವಿರ ಸಿಂಹಳೀ ಬೌದ್ಧ ಭಿಕ್ಷುಗಳು ಗದ್ದಲವೆಬ್ಬಿಸಿದರು. ಸಿಂಹಳೀಯ

ಯುವಕರ ಉಗ್ರಗಾಮಿ ಸಂಘಟನೆಯಾದ 'ಜನತಾ ವಿಮುಕ್ತಿ ಪೆರುಮುನ' ಮತ್ತೆ ತಮಿಳರ ಸುಮುಖಕರ ಕೊಲೆಗಾಗಿ ಮಚ್ಚು ಮಸೆಯತೊಡಗಿತು. ಮೂರನೆಯ ಬಾರಿ ದ್ವೀಪದಲ್ಲಿ ತುರ್ತುಪರಿಸ್ಥಿತಿ ಘೋಷಿಸಲಾಯಿತು.

1970ರಲ್ಲಿ ಬಂಡಾರನಾಯಿಕೆಯ ಹೆಂಡತಿ ಸಿರಿಮಾವೋ ಬಂಡಾರನಾಯಿಕೆ ಅಧಿಕಾರಕ್ಕೆ ಬಂದಳು. ಎಡಪಂಥೀಯರ ಬೆಂಬಲ ಆಕೆಗಿತ್ತು. ತಮಿಳರ ಪರವಾಗಿ ಆಗ ಮಾತಾಡಬಲ್ಲವರು ಕೇವಲ ಎಡಪಂಥೀಯರು. ತಮಿಳರಿಗೆ ಓಟಿನ ಹಕ್ಕೇ ಇರಲಿಲ್ಲವಾದ್ದರಿಂದ ಅವರಿಗೆ ಪ್ರಾತಿನಿಧ್ಯವಿರಲಿಲ್ಲ. ಆದರೆ ಎಡಪಂಥೀಯರ ದನಿಯನ್ನೂ ಯುನೈಟೆಡ್ ನ್ಯಾಷನಲ್ ಪಾರ್ಟಿ (ಯು.ಎನ್.ಪಿ.) ಬಗ್ಗುಬಡಿಯಿತು.

ಇಷ್ಟಾದರೂ ತಮಿಳು ನಾಯಕರ (TULF) ಹೋರಾಟ ಒಂದಲ್ಲ ಒಂದುದಿನ ಗೆದ್ದು ತಮಿಳರಿಗೆ ನ್ಯಾಯದೊರಕೀತೆಂದು ನಮ್ಮ ತಲೆಮಾರಿನವರಿಗೆ ಆಸೆಯಿತ್ತು. ಇದ್ದಕ್ಕಿದ್ದಂತೆ ಒಂದು ದಿನ ಆ ಹುಡುಗ ರೇಗಿ ನಿಂತ. 'ಏ ತಮಿಳು ಮುದಿ ನಾಯಕರೇ, ನಿಮ್ಮ ಗೋಣಗಾಟ ಹುಸಿಮಾತು ಚಮಚಾಗಿರಿಗಳಿಂದ ಎಷ್ಟು ವರ್ಷ ತೆವಳಿದರೂ ನಮ್ಮ ಕನಸಿನ ಈಳಂ ಕಟ್ಟಲಾಗುವುದಿಲ್ಲ. ಅದಕ್ಕೆ ನಮ್ಮಂಥ ಯುವಕರ ಬಿಸಿನೆತ್ತರ ಸಿಂಚನಬೇಕು! ಹೋರಾಟ ನಿಮ್ಮ ತಾಕತ್ತಿನದಲ್ಲ. ಹೋಗಿ ಗುಡಿಸಲಲ್ಲಿ ಬಿದ್ದುಕೊಳ್ಳಿ. ಈಳಂ ನಾವು ಯುವಕರು ಕಟ್ಟುತ್ತೇವೆ!' ಎಂದು ಅಬ್ಬರಿಸಿದ.

ಆತ 1972ರಲ್ಲಿ 'ತಮಿಳ್ ನ್ಯೂ ಟೈಗರ್ಸ್' ಎಂಬ ಗುಂಪು ಕಟ್ಟಿದ. ನಾಲ್ಕು ವರ್ಷಗಳ ನಂತರ ಅದಕ್ಕೆ 'ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಳಂ' (LTTE) ಎಂದು ಹೆಸರಿಟ್ಟ. ಮೊದಲಬಾರಿಗೆ ಬಂದೂಕು ಮುಟ್ಟಿದಾಗ ಆ ಹುಡುಗನಿಗೆ ಹದಿನೆಂಟು ವರ್ಷ. ಒಬ್ಬ ಬೆಸ್ತರ ಗುಡಿಸಲಿನ ಹುಡುಗ. ಆತನೇ ವೆಲ್ಲುಪಿಳ್ಳೈ ಪ್ರಭಾಕರನ್! ಮಾತೆಂದರೆ ಸಿಡಿಲಿನಂತೆ. ನಡೆದರೆ ಮದ್ದಾನೆಯಂತೆ. ಯುವಕರಷ್ಟೇ ಏಕೆ, ಇಡೀ ತಮಿಳು ಸಂಕುಲ ಈ ಯುವಕ ಪ್ರಭಾಕರನ್‌ನನ್ನು ಆಸೆ, ಹೆಮ್ಮೆ ಪ್ರೀತಿಗಳಿಂದ ನೋಡಿತು. ಹಸಿರು ಪಟ್ಟೆಗಳ ಅಂಗಿ, ಬ್ರಶ್ ಮೀಸೆ, ಗುಂಗುರು ಕೂದಲು, ಮುದ್ದಾದ ಮುಖ, ಹೆಗಲಿಗೆ ಎಕೆ-47 ಬಂದೂಕು, ಕೈಲೊಂದು ಹುಲಿ ಮರಿ, ಕೊರಳಿಗೊಂದು ಸೈನೈಡ್ ಕ್ಯಾಪ್ಸೂಲಿನ ಕಪ್ಪು ದಾರ....ಇದು ಹೆಬ್ಬುಲಿ ಪ್ರಭಾಕರನ್‌ನ ಚಿತ್ರ. ಸಾವಿರಸಾವಿರ ಯುವಕರನ್ನು ಸಂಘಟಿಸಿದ ಧೀರ.

ದ್ವೀಪದ ಉತ್ತರ ಮತ್ತು ಪೂರ್ವ ಭಾಗಗಳು ನೈಸರ್ಗಿಕ ಸಂಪನ್ಮೂಲಗಳಿಲ್ಲದ ಬಡ ಪ್ರಾಂತ್ಯಗಳು. ಅಲ್ಲಿನ ತಮಿಳರಿಗೆ ವಿದ್ಯಾಭ್ಯಾಸವೊಂದೇ ಬದುಕಿನ ದಾರಿ. ಇಂಗ್ಲಿಷರ ಕಾಲದಿಂದಲೇ ಶಾಲೆ ಕಂಡ ಮಕ್ಕಳವು. ಚೆನ್ನಾಗಿ ಓದಿಕೊಂಡರು. ಸರಕಾರಿ ಕೆಲಸಗಳು ಸಿಗುತ್ತಿದ್ದವು. ಅವರ ನೆಮ್ಮದಿಗೆ ಮೊದಲ ಪೆಟ್ಟು ಬಿದ್ದಿದ್ದೆಂದರೆ ಸಿಂಹಳೀ ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಮಾಡಿದಾಗ! ಈ ಹುಡುಗರಿಗೆ ಬರುತ್ತಿದ್ದ ತಮಿಳೂ, ಇಂಗ್ಲಿಷೂ ಮೂಲೆಗೆ ಬಿದ್ದವು. ನೌಕರಿಗಳು ಸಿಗಲಿಲ್ಲ. ಸರಿ, ಹುಡುಗರೇನು ದಡ್ಡರೇ? ವಿಜ್ಞಾನ ಓದತೊಡಗಿದರು. ಡಾಕ್ಟರು, ಇಂಜಿನಿಯರು, ಮೆಕ್ಯಾನಿಕ್‌ಗಳಾಗುತ್ತೇವೆಂದು ಹೊರಟರು. ದ್ವೀಪದ ಅರ್ಧ ಭಾಗದ ತುಂಬಾ ಸೈನ್ಸ್ ಪದವೀಧರರೇ! ಅಷ್ಟು ಜನಕ್ಕೂ ಉದ್ಯೋಗ ಸಿಗಬಹುದಿತ್ತು. ಆದರೆ ಶ್ರೀಲಂಕಾ ಸರಕಾರ ಸಿಂಹಳೀಯ ಯುವಕರಿಗೆ ಆದ್ಯತೆ ನೀಡಿತು. ತಮಿಳರಿಗಿಂತ ಅರ್ಧದಷ್ಟು ಮಾರ್ಕು ತೆಗೆದ ಸಿಂಹಳೀಯರಿಗೆ ನೌಕರಿ ಕೊಟ್ಟರು. ಇವರು ನೂರಕ್ಕೆ ತೊಂಬತ್ತು ತಂದರೂ ನೌಕರಿ ಸಿಗಲಿಲ್ಲ. ಏನು ಮಾಡಿಯಾರು? ಸೈನ್ಸು ಕಲಿತವರೆಲ್ಲ ಶಿಕ್ಷಕರಾದರು. ಜಾಫ್ನಾ ಕರಾವ

ಳಿಯ ತುಂಬ ಶಾಲೆಗಳು. ಅವುಗಳಿಂದ ಗುಂಪುಗುಂಪಾಗಿ ಹೊರಬಂದ ವಿದ್ಯಾರ್ಥಿಗಳಿಗೆ ಮತ್ತೆ ಎದುರಾದದ್ದು ನಿರುದ್ಯೋಗ! ಶ್ರೀಲಂಕಾ ಸರಕಾರಿ ಉದ್ಯೋಗಗಳಲ್ಲಿ ಸಿಂಹಳೀಯರಿಗೆ 80% ಪಾಲು! ತಮಿಳರು ಬೀದಿ ಪಾಲು.

1981ರ ಹೊತ್ತಿಗೆ ಸಿಂಹಳೀಯರ ಮಾತು ಹಾಗಿರಲಿ, ಶ್ರೀಲಂಕಾ ಸರಕಾರಿ ಸೇನೆ, ಪೊಲೀಸು ಪಡೆಗಳೇ ತಮಿಳರ ಮೇಲೆ ಹಿಂಸಾಚಾರ ಆರಂಭಿಸಿದವು. ಹುಚ್ಚೆದ್ದ ಸೈನಿಕರು ಜಾಫ್ನಾದ ಅತಿ ಪ್ರಾಚೀನ ಗ್ರಂಥಾಲಯಕ್ಕೆ ಬೆಂಕಿಯಿಟ್ಟರು. ಅದರಲ್ಲಿ 95,000 ಪುರಾತನ ತಮಿಳು ಗ್ರಂಥಗಳಿದ್ದವು. ಬೂದಿ! ತಮಿಳು ಪತ್ರಿಕಾಲಯಗಳಿಗೆ ಬಾಂಬಿಟ್ಟರು. ಎಲ್.ಟಿ.ಟಿ.ಇ. ಬೆಂಬಲಿಗನೆಂಬ ಕಾರಣಕ್ಕೆ ಲೋಕಸಭಾ ಸದಸ್ಯ ಯೋಗೀಶ್ವರನ್ ಮನೆಗೆ ಬೆಂಕಿಯಿಟ್ಟರು. ತಮಿಳರು ಎದೆಗುಂದಿ ಹೋದರು. "ಪರಕೀಯರೇ ಎಚ್ಚರಿಕೆ! ನಿಮ್ಮ ಹುಚ್ಚು ಕುಣಿತ ಸಾಕು. ನಿಮ್ಮ ನಾಶ ಸಮೀಪದಲ್ಲಿದೆ!" ಎಂಬ ಪೋಸ್ಟರುಗಳನ್ನು ಸಿಂಹಳೀಯರು ದೇಶವಿಡೀ ಹಚ್ಚಿದರು. ಆತನಕ ಕೇವಲ ಸಿಂಹಳೀ ಬೌದ್ಧರ ದಾಳಿ ಸಹಿಸಿದ ತಮಿಳರು ಈಗ ಸಿಂಹಳೀ ಕ್ರೈಸ್ತರ ದಾಳಿಯನ್ನೂ ಸಹಿಸಬೇಕಾಯಿತು. ಎಷ್ಟೂಂತ ಸಹಿಸಿಯಾರು? ಶತಶತಮಾನಗಳಿಂದ ಇದೇ ದ್ವೀಪದಲ್ಲಿ ನೆಲೆಗೊಂಡವರನ್ನು ಪರಕೀಯರೆಂದರೆ ಯಾಕೆ ಸುಮ್ಮನಿದ್ದಾರು? ಪ್ರಭಾಕರನ್ ಗರ್ಜಿಸಿದ. ತಮಿಳು ಹುಡುಗರು ಕೊರಳಿಗೆ ಸೈನೈಡ್ ಕ್ಯಾಪ್ಸೂಲ್ ಕಟ್ಟಿಕೊಂಡು ಬಂದೂಕು ಹೊತ್ತರು. 'ಏಟಿಗೆ ಇದಿರೇಟು' ಮಂತ್ರವಾಯಿತು.

ಆದರೆ ಆದಕ್ಕೆ ಶ್ರೀಲಂಕಾ ಸರ್ಕಾರ ನೀಡಿದ ಮಾರುತ್ತರ ಪರಮ ಘೋರವಾಗಿತ್ತು. ಸರಕಾರಿ ಸೈನ್ಯ ದಾರುಣವಾಗಿ ತಮಿಳರ ಮೇಲೆ ಹಲ್ಲೆ ಮಾಡಿತು. ಮೂರುಸಾವಿರ ಅಮಾಯಕ ತಮಿಳರ ಕಗ್ಗೊಲೆಯಾಯಿತು. ಹದಿನೆಂಟು ಸಾವಿರ ಮನೆ ಧ್ವಂಸವಾದವು. ತಮಿಳರ ಐದುಸಾವಿರ ಅಂಗಡಿಗಳು ಬೆಂಕಿಬಿದ್ದು ಹೋದವು. ಒಂದೂವರೆ ಲಕ್ಷ ಜನ ನಿರಾಶ್ರಿತರಾದರು. ಇದೆಲ್ಲ ನಡೆದದ್ದು ಎಂಟೇ ದಿನಗಳ ಅವಧಿಯಲ್ಲಿ. ಆಗ ಇದೇ ಜೆ.ಆರ್. ಜಯವರ್ಧನೆ ರಾಜ್ಯವಾಳುತ್ತಿದ್ದ. ಬೌದ್ಧನಂತೆ ಬೌದ್ಧ! ಮೂರನೆಯ ದಿನ ಶ್ರೀಲಂಕಾ ಬಾನುಲಿಯಲ್ಲಿ ಭಾಷಣ ಮಾಡಿದ ಈ ದೊಡ್ಡ ಮನುಷ್ಯ ಆಡೆಯ ಪಕ್ಷ ತಮಿಳರ ಕಗ್ಗೊಲೆಯನ್ನು ಖಂಡಿಸಲೂ ಇಲ್ಲ. ಸಿಂಹಳೀಯರ ಕೃತ್ಯವೇ ಸರಿಯೆಂಬಂತೆ ಮಾತನಾಡಿದ. ಎಲ್ಲ ತಮಿಳು ರಾಜಕೀಯ ಪಕ್ಷಗಳನ್ನೂ ಕಾನೂನು ಬಾಹಿರವೆಂದು ಘೋಷಿಸಿದ. 'ತಮಿಳು ಈಳಂ ವಿಡುದಲೈ ಪುಲಿಗಳ್' (ಎಲ್.ಟಿ.ಟಿ.ಇ.) ಮೊಟ್ಟಮೊದಲ ಬಾರಿಗೆ ಸಿಂಹಳೀಯರ ವಿರುದ್ಧ ಸಶಸ್ತ್ರ ಹೋರಾಟ ಪ್ರಾರಂಭಿಸಿತು. ತಮಿಳು ವ್ಯಾಘ್ರಗಳು ಪೊಲೀಸರನ್ನು ಕಂಡಲ್ಲಿ ಸಿಗಿದು ಹಾಕಿದರು. 1981ರಲ್ಲಿ ತಮಿಳು ನೆಲೆಯಾದ ಜಾಫ್ನಾದಲ್ಲೇ ತಮಿಳರ ಮೇಲೆ ಹಿಂಸಾಚಾರ ನಡೆದಾಗ ಆದ ರಕ್ತಪಾತ ವ್ಯಾಘ್ರಗಳನ್ನು ಮತ್ತಷ್ಟು ರೊಚ್ಚಿಗೆಬ್ಬಿಸಿತು.

ಕೆಲದಿನಗಳಲ್ಲಿಯೇ ಎಲ್.ಟಿ.ಟಿ.ಇ. ಛಿದ್ರವಾಯಿತು. ಮುಖ್ಯವಾಗಿ ನಗರದ ಯುವಕ-ಯುವತಿಯರ ಉಗ್ರಗಾಮಿ ಸಂಘಟನೆಯಾದ ಇದು ತಮಿಳು ರಾಷ್ಟ್ರ ವಿಮೋಚನಾ ಹೋರಾಟದೊಂದಿಗೆ ಶ್ರೀಮಂತರ ವಿರೋಧಿ ವರ್ಗ ಹೋರಾಟವನ್ನೂ ಮಾಡುತ್ತದೆಂದು ಹೇಳಿಕೊಳ್ಳುತ್ತದಾದರೂ ಅಲ್ಲಿ ಆಂತರಿಕ ಪ್ರಜಾಪ್ರಭುತ್ವದ ಚಿಹ್ನೆಗಳೇನೂ ನನಗೆ ಕಂಡಿಲ್ಲ. ಪೂರ್ವ ಮತ್ತು ಉತ್ತರ ಶ್ರೀಲಂಕೆಯ ಮೇಲೆ ಹಿಡಿತವಿರುವ ಈ ಸಂಘಟನೆಗೆ ಜಾಫ್ನಾ ಭದ್ರಕೋಟೆಯಾಗಿತ್ತು. ಇದರೊಂದಿಗೇ ಇದ್ದ ಮತ್ತೊಬ್ಬ ಹುಡುಗ ಉಮಾಮಹೇಶ್ವರನ್ 1980ರಲ್ಲಿ

ಎಲ್.ಟಿ.ಟಿ.ಇ. ಬಿಟ್ಟು ಹೋಗಿ ಮತ್ತೊಂದು ಸಂಘಟನೆ ಕಟ್ಟಿದ. PLOTE ಅದರ ಹೆಸರು (ಪೀಪಲ್ಸ್ ಲಿಬರೇಶನ್ ಆರ್ಗನೈಸೇಷನ್ ಆಫ್ ತಮಿಳ್ ಈಳಂ) ಈ ಸಂಘಟನೆಗೆ ಎಲ್.ಟಿ.ಟಿ.ಇ.ಯ ಗೆರಿಲ್ಲಾ ತಂತ್ರಗಳು ಇಷ್ಟವಿಲ್ಲ. ಜನರ ನಡುವೆ ಇದ್ದುಕೊಂಡೇ ಚಳವಳಿ ರೂಪಿಸುತ್ತೇನೆನ್ನುತ್ತದೆ. ಇದು ಶ್ರೀಲಂಕೆಯ ಎರಡನೇ ಅತಿದೊಡ್ಡ ಉಗ್ರಗಾಮಿ ಸಂಸ್ಥೆ.

1975ರಲ್ಲಿ ಈ. ರತ್ನಸಭಾಪತಿ ಎಂಬ ಹುಡುಗ ಲಂಡನ್ನಿಗೆ ಹೋಗಿ ಅಲ್ಲಿಂದಲೇ EROS (ಈಳಂ ರೆವೊಲ್ಯೂಷನರಿ ಆರ್ಗನೈಸೇಷನ್ ಆಫ್ ಸ್ಟೂಡೆಂಟ್ಸ್) ಎಂಬ ಸಂಘಟನೆ ಮಾಡಿದ. ಈತನಿಗೆ ಯಾಸೀರ್ ಅರಾಫತ್‌ನ ಉಗ್ರಗಾಮಿಗಳೊಂದಿಗೆ (PLO) ಸಂಪರ್ಕವಿತ್ತು. ಕೆಲವು ತಮಿಳು ಹುಡುಗರಿಗೆ ಪಿ.ಎಲ್.ಓ. ತರಬೇತಿಯನ್ನು ನೀಡಿತು. ರತ್ನಸಭಾಪತಿ ಮೂಲತಃ ಮಾರ್ಕ್ಸವಾದಿ-ಲೆನಿನ್‌ವಾದಿ ಸಿದ್ಧಾಂತ ಒಪ್ಪಿಕೊಂಡವನು. ಭಾರತದಲ್ಲಿ ಇಂಥ ಹುಡುಗರನ್ನು ನೀವು 'ನಕ್ಸಲೈಟರು' ಅಂತೀರಿ.

ಇದೇ ಸಂಘಟನೆ ಮತ್ತೆ ಛಿದ್ರವಾಗಿ ಅದರ ಮಾರ್ಕ್ಸವಾದಿಗಳು EPRLF (ಈಳಂ ಪೀಪಲ್ಸ್ ರೆವೊಲ್ಯೂಷನರಿ ಲಿಬರೇಶನ್ ಫ್ರಂಟ್) ಎಂಬ ಸಂಘಟನೆ ಕಟ್ಟಿಕೊಂಡರು.

ಮುಂದೆ ಸಬಾರತ್ನಂ ಎಂಬ ಹುಡುಗ 1979ರಲ್ಲಿ TELO (ತಮಿಳ್ ಈಳಂ ಲಿಬರೇಷನ್ ಆರ್ಗನೈಸೇಷನ್) ಕಟ್ಟಿದನಾದರೂ 1986ರಲ್ಲಿ LTTE ಯೋಧರು ಸಬಾರತ್ನಂ ಸಮೇತ ಸಂಘಟನೆಯ ಎಲ್ಲ ಹುಡುಗರನ್ನು ಗುಂಡಿಟ್ಟು ಕೊಂದು ಹಾಕಿದರು.


ಅನಿವಾರ್ಯವಾಗಿ ಭಾರತದ ಪ್ರಧಾನಿ ಇಂದಿರಾಗಾಂಧಿಯವರು ಒಂದು ಹಂತದಲ್ಲಿ ಶ್ರೀಲಂಕೆಯ ದಳ್ಳುರಿಯತ್ತ ಗಮನಹರಿಸಬೇಕಾಯಿತು. ಅವರು ತಮ್ಮ ಕಡೆಯಿಂದ 1984ರಲ್ಲಿ ಜಿ. ಪಾರ್ಥಸಾರಥಿ ಎಂಬುವವರನ್ನು ಕೊಲಂಬೋಕ್ಕೆ ಕಳಿಸಿದರು. ಆತ ಜಯವರ್ಧನೆಯೊಂದಿಗೂ, TULF ನಾಯಕರೊಂದಿಗೂ ಚರ್ಚೆ ಮಾಡಿದರು. ಕಡೆಗೂ ಒಂದು ಪಂಚಾಯಿತಿ ಮಾಡಿ ಶ್ರೀಲಂಕಾದಲ್ಲಿ ತಮಿಳರ ಸಂಖ್ಯೆ ಹೆಚ್ಚಿರುವ ಪ್ರಾಂತ್ಯಗಳಲ್ಲಿ ಪ್ರಾಂತೀಯ ಮಂಡಲಿಗಳನ್ನು ರಚಿಸಿ ಅಲ್ಲಿ ತಮಿಳರಿಗೇ ಅಧಿಕಾರ ನೀಡುವಂತೆ ಒಪ್ಪಂದ ಮಾಡಿಸಿದರು. ಮೊದಲು ಎಲ್ಲಕ್ಕೂ ಆಗಲಿ ಎಂದು ತಲೆಯಾಡಿಸಿದ ಜಯವರ್ಧನೆ ಸಿಂಹಳೀಯರ ಒತ್ತಡ ಬಂದಾಗ ತಮಿಳರತ್ತ ತಾರಮ್ಮಯ್ಯ ಆಡಿಸಿಬಿಟ್ಟ! ಮತ್ತೆ ಶುರುವಾಯಿತು ಹಿಂಸೆ.

1985ರ ಮೇ ತಿಂಗಳಲ್ಲಿ ತಮಿಳು ಹುಲಿಗಳು ಒಂದೇ ದಿನದಲ್ಲಿ ನೂರೈವತ್ತು ಸಿಂಹಳೀಯರ ಕೊಲೆ ಮಾಡಿದಾಗ ವಿಧಿಯಿಲ್ಲದೆ ಜಯವರ್ಧನೆ ಭಾರತಕ್ಕೆ ಓಡಿಬಂದರು. ಆ ಹೊತ್ತಿಗೆ ಪಾಪ, ಪ್ರಧಾನಿ ಇಂದಿರಾಗಾಂಧಿಯವರ ಕೊಲೆಯಾಗಿ ಅವರ ಮಗ ರಾಜೀವ್ ಗಾಂಧಿ ಎಂಬುವವರು ನಿಮ್ಮ ದೇಶವಾಳುತ್ತಿದ್ದರಂತೆ. ಈ ಜಯವರ್ಧನೆ ಮಾತುಕತೆಗೆ ಒಪ್ಪುತ್ತೇನೆಂದಾಗ ನಿಮ್ಮ ರಾಜೀವ್ ಗಾಂಧಿ ಶ್ರೀಲಂಕಾದ ಐದೂ ತಮಿಳು ಉಗ್ರಗಾಮಿ ಸಂಘಟನೆಗಳವರನ್ನು ಸಂಪರ್ಕಿಸಿ 'ಮೊದಲು ಬಂದೂಕು ಕೆಳಗಿಳಿಸಿ, ಮಾತನಾಡೋಣ' ಅಂದರು. ಈ ಗುರುಗುಡುವ ಹುಲಿಗಳೂ ಬಂದೂಕು ಕೆಳಗಿಟ್ಟು ಭಾರತಕ್ಕೆ ಬಂದರು. ಅವರಿಗೆಲ್ಲ ದಿಲ್ಲಿಯ ಅಶೋಕಾ ಹೋಟಲಿನಲ್ಲಿ ರೂಮು, ಊಟ, ಭಾರೀ ವ್ಯವಸ್ಥೆಯಂತೆ. ಮುಂದೆ ಎಲ್ಲರನ್ನೂ ಭೂತಾನದ ಥಿಂಪು ಎಂಬಲ್ಲಿಗೆ ಕರೆದುಕೊಂಡು ಹೋಗಿ ಮಾತುಕತೆಗೆ ಕೂಡಿಸಿದರಂತೆ. ಆಶ್ಚರ್ಯವೆಂದರೆ LTTE, EROS, EPRLF ಮತ್ತು TELO ಎಲ್ಲರೂ ತಮಿಳು ಈಳಂ ಪ್ರಶ್ನೆ ಬಂದಾಗ ಒಗ್ಗಟ್ಟಾದರಂತೆ. "ನಮಗೆ ಹೀಗೆಲ್ಲಾ ಕೂತು ಮಾತಾಡೋಕೆ ಬರಲ್ಲಾ,

ನಿಮಗೆ ಅನುಭವ ಇದೆ, ನೀವೇ ಮಾತಾಡಿ" ಅಂತ ಮತ್ತೆ TULFನ ಮುದಿ ನಾಯಕರನ್ನೇ ಮಾತಿಗೆ ಬಿಟ್ಟರಂತೆ. ಆದರೆ ಶ್ರೀಲಂಕಾದ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳನ್ನು ಒಂದುಗೂಡಿಸಿ, ತಮಿಳರಿಗೇ ಆಡಳಿತಾಧಿಕಾರ ಕೊಡಿ ಅಂತ ಉಗ್ರಗಾಮಿಗಳು ಪಟ್ಟುಹಿಡಿದಾಗ ಮಾತುಕತೆ ವಿಫಲವಾದವಂತೆ. ಇಷ್ಟಾದರೂ ಪಾಪ, ನಿಮ್ಮ ರಾಜೀವ್ ಗಾಂಧಿಯವರು ಇಬ್ಬರಿಗೂ ರಾಜಿ ಮಾಡಿಸೋಕೆ ಪ್ರಯತ್ನ ಮಾಡೇ ಮಾಡಿದರು. ಕಡೇಗೆ 1985ರ ನವೆಂಬರ್‌ನಲ್ಲಿ 'ನೋಡ್ರಪ್ಪಾ, ನಾನು ಮಾಡೋಷ್ಟು ಮಾಡಿದೀನಿ. ಉಳಿದದ್ದು ನಿಮ್ಗೇ ಬಿಡ್ತೀನಿ' ಅಂದು ಬಿಟ್ರಂತೆ.

ಮತ್ತೆ 1986ರಲ್ಲಿ ರಾಜೀ ಪಂಚಾಯಿತಿ ನಡೀತು. ಈ ಸಲ ತಮಿಳುನಾಡಿನ ಮುಖ್ಯಮಂತ್ರಿ ಎಂ.ಜಿ. ರಾಮಚಂದ್ರನ್ ಭಾರೀ ಆಸಕ್ತಿ ವಹಿಸಿದರು. ಅವರಿಗೆ ಶ್ರೀಲಂಕಾ ತಮಿಳರು ಅಂದ್ರೆ ಬಲು ಪ್ರೀತಿ. ಜಯವರ್ಧನೆ ಜೊತೆ ರಾಜಿ ಮಾಡಿಸಿ ಪೂರ್ವ ಮತ್ತು ಉತ್ತರ ಪ್ರಾಂತ್ಯಗಳಿಗೆ ಪ್ರಾಂತೀಯ ಆಡಳಿತ ಮಂಡಳಿ ಮಾಡಿಸಿ, ಅಧಿಕಾರ ಕೊಡಿಸ್ತೀನಿ ಅಂದರಂತೆ. ಆದರೆ ಈ ಹುಲಿಗಳು ಮೊದಲು ಎರಡೂ ಪ್ರಾಂತ್ಯಗಳನ್ನು ವಿಲೀನ ಮಾಡಿ ಅಂತ ಪಟ್ಟುಹಿಡಿದಾಗ ಎಂ.ಜಿ.ಆರ್. ಕೂಡ ಸೋತು ಸುಮ್ಮನಾದರಂತೆ.

ರಾಜೀವ್ ಗಾಂಧಿಯವರಿಗಾದರೂ ಎಷ್ಟು ಸಹನೆ ಇದ್ದೀತು. 1987ರಲ್ಲಿ ಪ್ರಭಾಕರನ್‌ಗೆ ಮದ್ರಾಸು ಬಿಟ್ಟು ಹೋಗಿ ಅಂತ ಎಂ.ಜಿ.ಆರ್. ಅವರಿಂದ ಹೇಳಿಸಿದರು. ತನ್ನ ಹುಡುಗರನ್ನೆಲ್ಲ ಕರೆದುಕೊಂಡು ಜಾಫ್ನಾಕ್ಕೆ ಬಂದ ಪ್ರಭಾಕರನ್ ಅತ್ಯಂತ ಹುಂಬ ಕೆಲಸ ಮಾಡಿಬಿಟ್ಟ. "ಜಾಫ್ನಾದಲ್ಲಿ ನಾನು ಪರ್ಯಾಯ ಸರಕಾರ ಪ್ರಾರಂಭಿಸುತ್ತೇನೆ" ಎಂದು ಘೋಷಿಸಿ ಬಿಟ್ಟ. ಆಗ ಬಂತು



ಕಿಟ್ಟು

ನೋಡಿ ದಾಳಿ! ಮೊದಲೇ ಇಂಥ ಅವಕಾಶಕ್ಕಾಗಿ ಕಾಯುತ್ತಿದ್ದ ಜಯವರ್ಧನೆ ಜಾಫ್ನಾ ವಿರುದ್ಧ ಆರ್ಥಿಕ ದಿಗ್ಬಂಧನ ಘೋಷಿಸಿಬಿಟ್ಟರು. ಜನರ ನರಳಾಟ ಹೇಳತೀರದು. ತಿನ್ನಲು ಗತಿಯಿಲ್ಲದ ಸ್ಥಿತಿ ಬಂತು. ಸೀಮೆ ಎಣ್ಣೆ ಇಲ್ಲದೆ ಒಲೆ ಹಚ್ಚಲಾಗದೆ ಅಕ್ಕಿಯನ್ನು ನೀರಿನಲ್ಲಿ ನೆನೆಸಿಟ್ಟು ತಿಂದ ದಿನಗಳು ನನಗೆ ಚೆನ್ನಾಗಿ ನೆನಪಿವೆ. ಔಷಧಿಗಳಿಲ್ಲದೆ ಸತ್ತವರೆಷ್ಟೋ? ಜಾಫ್ನಾ ಸ್ಮಶಾನವಾಯಿತು. ಸಾಲದೆಂಬಂತೆ ಸಿಂಹಳೀಯ ಸೈನಿಕ ದಾಳಿ.

ಎಲ್.ಟಿ.ಟಿ.ಇ. ಬಂದೂಕು ಕೆಳಗಿಡುವ ಮಾತೇ ಇಲ್ಲ ಎಂದು ಪಟ್ಟು ಹಿಡಿಯಿತು. ತಮಿಳರ ಹಾಹಾಕಾರ ನೋಡಿ ಸುಮ್ಮನಿರಲಾಗದ ಭಾರತ ಸರಕಾರ ತನ್ನ ವಾಯುಪಡೆಯ ನೆರವಿನಿಂದ ಜಾಫ್ನಾದ ಜನಕ್ಕೆ ಆಹಾರ, ಔಷಧಿ ಒದಗಿಸಿತು. ಶ್ರೀಲಂಕಾ ದ್ವೀಪದ ನೆತ್ತಿಯ ಮೇಲೆ ಭಾರತದ ವಿಮಾನಗಳು ರೆಕ್ಕೆ ಬಿಚ್ಚಿದುದನ್ನು ಕಂಡು ಶ್ರೀಲಂಕಾ ಸರಕಾರ ದಿಗಿಲುಗೊಂಡಿತು. ಅನಿವಾರ್ಯವಾಗಿ ಭಾರತದೊಂದಿಗೆ ಅದು ಒಪ್ಪಂದ ಮಾಡಿಕೊಳ್ಳಬೇಕಾಯಿತು.

ಅದೇ ಐತಿಹಾಸಿಕ 29 ಜುಲೈ 1987ರ ಭಾರತ-ಶ್ರೀಲಂಕಾ ಒಪ್ಪಂದ. ರಾಜೀವ್ ಗಾಂಧಿಯವರು ಅಂದು ಶ್ರೀಲಂಕೆಗೆ ಬಂದು ಕೊಲಂಬೋದಲ್ಲಿ ಅಧ್ಯಕ್ಷ ಜಯವರ್ಧನೆ

ಯವರನ್ನು ಭೇಟಿಯಾದರು. ಎರಡೂ ದೇಶಗಳ ಸ್ನೇಹವೃದ್ಧಿ ಮತ್ತು ಶ್ರೀಲಂಕಾದ ಆಂತರಿಕ ಶಾಂತಿಗಾಗಿ ಈ ಒಪ್ಪಂದವೆಂದರು. ದ್ವೀಪದ ಎಲ್ಲ ಪ್ರಜೆಗಳ ಕ್ಷೇಮಕ್ಕಾಗಿ ಈ ಮಾತುಕತೆಯೆಂದರು. ಅದರ ಪ್ರಕಾರ ಶ್ರೀಲಂಕೆಯ ಅಖಂಡತೆ, ಸಾರ್ವಭೌಮತ್ವ ಕಾಯಬೇಕು. ದ್ವೀಪದ ಎಲ್ಲ ಜನಾಂಗಗಳ ಸಂಸ್ಕೃತಿಗಳ ರಕ್ಷಣೆಯಾಗಬೇಕು. ದ್ವೀಪದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಅನಾದಿಕಾಲದಿಂದಲೂ ಬಾಳುತ್ತಿರುವ ತಮಿಳರನ್ನು ಸ್ಥಳೀಯರೆಂದು ಗುರುತಿಸಿ ಸಹಬಾಳ್ವೆಗೆ ಅವಕಾಶ ಮಾಡಿಕೊಡಬೇಕು.

ಪೂರ್ವ ಮತ್ತು ಉತ್ತರ ಪ್ರಾಂತ್ಯಗಳ ವಿಲೀನಕ್ಕೆ ಶ್ರೀಲಂಕಾ ಸರಕಾರ ಒಪ್ಪಬೇಕು. ಈ ವಿಲೀನದ ಮಧ್ಯಂತರ ಅವಧಿ, ಪ್ರಾಂತೀಯ ಮಂಡಳಿಗಳ ಚುನಾವಣೆಗಳು ನಡೆದ ನಂತರ ಪ್ರಾರಂಭವಾಗಿ ಆ ಕಾಲದಲ್ಲಿ ಇಡೀ ಪ್ರಾಂತ್ಯಕ್ಕೆ ಒಬ್ಬ ಗವರ್ನರ್, ಒಬ್ಬ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟ ಹೊಂದಿರುತ್ತದೆ. 31 ಡಿಸೆಂಬರ್ 1988ರೊಳಗಾಗಿ ಪೂರ್ವ ಪ್ರಾಂತ್ಯದ ಜನರು ಈ ವಿಲೀನಕ್ಕೆ ಸಮ್ಮತರು ಹೌದೋ ಅಲ್ಲವೋ ಎಂದು ತಿಳಿದುಕೊಂಡು ಸಮ್ಮತರಾಗದ ಪಕ್ಷದಲ್ಲಿ ಅವರು ಮತ್ತೊಂದು ರಾಜ್ಯವಾಗಿ ಬೇರ್ಪಟ್ಟು ತಮ್ಮದೇ ಆದ ಮಂತ್ರಿಮಂಡಳ, ಮುಖ್ಯಮಂತ್ರಿ ಮತ್ತು ರಾಜ್ಯಪಾಲರನ್ನು ಹೊಂದಬೇಕು. ಜನಾಂಗೀಯ ಘರ್ಷಣೆಯಲ್ಲಿ ಮನೆಮಾರು ಕಳೆದುಕೊಂಡವರಿಗೂ ಮತದಾನದ ಹಕ್ಕು ದೊರಕಿಸಬೇಕು. ಅವರು ಮತ್ತೆ ತಂತಮ್ಮ ಸ್ಥಳದಲ್ಲಿ ನೆಲೆಗೊಳ್ಳಬೇಕು. ಒಪ್ಪಂದ ಸಹಿಯಾದ ಕೂಡಲೆ ಉಗ್ರಗಾಮಿಗಳು ಶಸ್ತ್ರಾಸ್ತ್ರ ಒಪ್ಪಿಸಬೇಕು. ಶ್ರೀಲಂಕಾ ಸೈನ್ಯವನ್ನು 25 ಮೇ 1987 ರಂದು ಹಿಂತೆಗೆದುಕೊಳ್ಳಬೇಕು. ಎಲ್ಲ ಬಂಧಿತ ಉಗ್ರಗಾಮಿಗಳ ಬಿಡುಗಡೆ, ಪುನರ್ವಸತಿಗೆ ಸರ್ಕಾರ ಬದ್ಧವಾಗಬೇಕು. ಈ ಎಲ್ಲ ಅಂಶಗಳ ಸಾಕಾರಕ್ಕಾಗಿ ಭಾರತ ತನ್ನ ಸೇನೆಯನ್ನು ದ್ವೀಪಕ್ಕೆ ಅವಶ್ಯಕವಾದಾಗ ಕಳಿಸಿಕೊಡುತ್ತದೆ. ಚುನಾವಣೆಗಳನ್ನು ನಡೆಸಲೂ ಸಹಾಯಮಾಡುತ್ತದೆ ಮತ್ತು ಶ್ರೀಲಂಕೆಯಲ್ಲಿ ಸಿಂಹಳವು ಅಧಿಕೃತ ಭಾಷೆಯಾಗಿದ್ದು ತಮಿಳು ಹಾಗೂ ಇಂಗ್ಲಿಷ್ ಸಹ ಅಧಿಕೃತ ಭಾಷೆಗಳಾಗಿರುತ್ತವೆ.

ಎಲ್ಲ ಸರಿಯೇ, ಆದರೆ ಇದಕ್ಕೆ ಯಥಾಪ್ರಕಾರ LTTE ಒಪ್ಪಲಿಲ್ಲ. ಒಪ್ಪಂದಕ್ಕೆ ಸಹಿಯಾದ ಮಾರನೆಯ ದಿನವೇ ರಾಜೀವ್ ಅವರು ಭಾರತದಿಂದ ದ್ವೀಪಕ್ಕೆ ಭಾರತೀಯ ಶಾಂತಿಪಾಲನಾ ಪಡೆ (IPKF) ಕಳಿಸಿದರು. ನಲವತ್ತೆಂಟು ಗಂಟೆಗಳೊಳಗಾಗಿ ಉಗ್ರಗಾಮಿಗಳು ಶಸ್ತ್ರ ಕೆಳಗಿಡಬೇಕಿತ್ತು. ತಕ್ಷಣ ವಿಲ್ಲುಪಿಳ್ಳೈ ಪ್ರಭಾಕರನ್‌ರನ್ನು ದಿಲ್ಲಿಗೆ ಕರೆಸಿಕೊಳ್ಳಲಾಯಿತು. ಅಲ್ಲಿ ಆತ ರಾಜೀವ್‌ರೊಂದಿಗೆ ತೊಂಬತ್ತು ನಿಮಿಷ ಮಾತುಕತೆ ನಡೆಸಿದ. ಒಪ್ಪಂದ ಬೇಡವೆಂದ. ತಮಿಳರ ಹೋರಾಟಕ್ಕೆ ಬೆಂಬಲ ನೀಡಿ ಅಂದ. ಆದರೆ ರಾಜೀವ್ ಖಡಾಖಂಡಿತವಾಗಿ ಈ ಒಪ್ಪಂದ ಅಂತಿಮವಾದ್ದು. ನೀವೂ ಸಮ್ಮತಿಸಲೇ ಬೇಕು, ಇಲ್ಲದಿದ್ದರೆ ಶಾಂತಿಪಡೆ ಕಾದಾಟಕ್ಕಿಳಿಯುತ್ತದೆ ಎಂದು ಎಚ್ಚರಿಸಿದರಂತೆ. ಮೊದಲೇ ಲಂಕೆಯ ಸೈನಿಕರ ದಾಳಿಯಿಂದ ಜರ್ಜರಿತನಾಗಿದ್ದ ಪ್ರಭಾಕರನ್ ಭಾರತದ ಸೈನ್ಯವನ್ನೆದುರು ಹಾಕಿಕೊಳ್ಳುವುದು ಬೇಡವೆನಿಸಿ 'ಸರಿ, ಬಂದೂಕು ಕೆಳಗಿಡುತ್ತೇನೆ' ಅಂದು ಬಂದನಂತೆ. ಅತ್ತ ಪ್ರಭಾಕರನ್ ದಿಲ್ಲಿಗೆ ಹೋದ ಕೂಡಲೆ ತಮಿಳು ಜನ ಕೆರಳಿ ನಿಂತರು. ತಮ್ಮ ನಾಯಕನನ್ನು ಬಂಧಿಸಿದ್ದಾರೆಂಬ ಗುಮಾನಿ ಅವರಿಗೆ.

ಕಡೆಗೆ ಆಗಸ್ಟ್ 4, 1987 ರಂದು ಪ್ರಭಾಕರನ್ ದಿಲ್ಲಿಯಿಂದ ಮರಳಿ ಬಂದ. ಆ ಹುಡುಗ ಅಂದು ಸಂಜೆ ಜಾಫ್ನಾದ ಸುದುಮಲೈ ಅಮ್ಮನ್ ಮಂದಿರದ ಮುಂದಿನ

ಬಯಲಲ್ಲಿ ಮಾಡಿದ ಭಾಷಣ ನಿಜಕ್ಕೂ ಅಪೂರ್ವವಾಗಿತ್ತು. ಎಂಥ ಆವೇಶವಿತ್ತು ಹುಡುಗನಲ್ಲಿ.

ಮರುದಿನವೇ (ಆಗಸ್ಟ್ 5) ಪಾಲಲೈ ಎಂಬಲ್ಲಿ ನಡೆದ ಸಮಾರಂಭದಲ್ಲಿ LTTE ಯೋಧರು ಕೆಲವರು ಶಸ್ತ್ರಾಸ್ತ್ರಗಳನ್ನು ಶರಣೊಪ್ಪಿಸುವ ಕೆಲಸ ಮಾಡಿದರು. ಆದರೆ ಸತ್ಯವೇನೆಂಬುದು ನನಗೆ ಗೊತ್ತಿತ್ತು. ಯಾವ ಉಗ್ರಗಾಮಿ ತಂಡವೂ ತನ್ನ ಎಲ್ಲ ಆಯುಧಗಳನ್ನು ಒಪ್ಪಿಸಲಿಲ್ಲ. ನೆಪಕ್ಕೆರಡು ಬಂದೂಕು ತಂದಿಟ್ಟರು. ಆದರೂ LTTE ಮಾತು ತಪ್ಪದಂತೆ ಶಾಂತಿಯುತ ಹೋರಾಟ ನಡೆಸಿತು. ಒಪ್ಪಂದದ ಪ್ರಕಾರ ಮಧ್ಯಂತರ ಪ್ರಾಂತೀಯ ಮಂಡಲಿ ಅಸ್ತಿತ್ವಕ್ಕೆ ಬರಲಿಲ್ಲ. LTTE ಮೊದಲಬಾರಿಗೆ ಅನ್ನಸತ್ಯಾಗ್ರಹ ಆರಂಭಿಸಿತು. ಅದರ ಯೋಧ ಅಮೃತಲಿಂಗಂ ತಿಲೀಪನ್ ಉಪವಾಸ ಕುಳಿತ. ಸತ್ತೇ ಹೋದ! ಆಯುಧ ಕೆಳಗಿಟ್ಟರೆ ಎಲ್ಲ ಉಗ್ರಗಾಮಿಗಳಿಗೆ ಕ್ಷಮೆ ನೀಡುತ್ತೇನೆಂದು ಘೋಷಿಸಿದ ಒಪ್ಪಂದವನ್ನು ಮುರಿದು ಶ್ರೀಲಂಕಾ ಸರಕಾರ ಇಬ್ಬರು LTTE ನಾಯಕರನ್ನೂ, ಹತ್ತು ಜನ ಯೋಧರನ್ನೂ ಬಂಧಿಸಿತು. ನಮ್ಮನ್ನು ಬಿಡದಿದ್ದರೆ, ಕೊಲಂಬೋಗೆ ಕೊಂಡೊಯ್ದು ಹಿಂಸಿಸಿದರೆ, ಅದು ನಿಮ್ಮ ಜವಾಬ್ದಾರಿ ಎಂದು LTTE ನಾಯಕರು ಭಾರತದ ಶಾಂತಿಪಡೆಗೆ ಎಚ್ಚರ ನೀಡಿದರು. ಶಾಂತಿಪಡೆ ತೆಪ್ಪಗಿತ್ತು. ಅವರನ್ನು ಕೊಲಂಬೋಗೆ ಒಯ್ಯಲು ಸಿದ್ಧವಾದ ಕೂಡಲೆ ಎಲ್ಲ ಹನ್ನೆರಡು ಜನ ಸೈನೈಡು ನುಂಗಿ ಸತ್ತರು! LTTEಗೆ ಭಾರತದ ಮೇಲಿನ ವಿಶ್ವಾಸ ಮುರಿದುಬಿತ್ತು. ಮತ್ತೆ ಹಿಂಸಾಚಾರ ಆರಂಭ. ಈ ಬಾರಿ LTTE ಯೋಧರು ಸಿಂಹಳದ ಪ್ರಜೆಗಳನ್ನು ಸದೆ ಬಡಿದರು. ಸಿಂಹಳದ ಪೊಲೀಸರು ಜೈಲುಗಳಲ್ಲಿದ್ದ ತಮಿಳು ಖೈದಿಗಳನ್ನು ದಾರುಣವಾಗಿ ಕೊಂದರು. ಒಪ್ಪಂದ ಮುರಿದಿರೆಂದು ಶ್ರೀಲಂಕಾ ಸರಕಾರ LTTEಯನ್ನು ದೂಷಿಸಿತು. ಅದನ್ನು ಭಾರತ ಸರ್ಕಾರ ಅನುಮೋದಿಸಿತು. ಯುದ್ಧಕ್ಕೆ ಎಲ್ಲರೂ ಕಾಲು ಕೆರೆದಿದ್ದರು. ತಪ್ಪು ತಿಳಿವಳಿಕೆಗಳ ಮೋಡಕಟ್ಟಿತ್ತು.

1987 ಅಕ್ಟೋಬರಿನಲ್ಲಿ ಯುದ್ಧ ಸಿದ್ಧತೆಗಳು ಶುರುವಾದವು. ಭಾರತ-ಲಂಕಾ ಪಡೆಗಳು ಕೊಲಂಬೋದಲ್ಲಿ ಕುಳಿತು ಕತ್ತಿ ಮಸೆದವು. ಈತನಕ ಜಾಫ್ನಾ ಪಟ್ಟಣವನ್ನು ಶ್ರೀಲಂಕಾ ಸೈನ್ಯ ವಶಪಡಿಸಿಕೊಂಡಿರಲಿಲ್ಲ. ಅದು ಭಾರತ ಸರ್ಕಾರದ ಮಾತಿಗೆ ಮನ್ನಣೆ ಕೊಟ್ಟು ಸುಮ್ಮನಿತ್ತು. ಆದರೆ ಎಂಥ ವಿಪರ್ಯಾಸ! ಈಗ ಭಾರತ ಸೈನ್ಯ ಶ್ರೀಲಂಕಾ ಸರಕಾರದ ಪರವಾಗಿ ತಮಿಳರ ಭದ್ರಕೋಟೆ ಜಾಫ್ನಾವನ್ನು ವಶಪಡಿಸಿಕೊಳ್ಳಹೊರಟಿತ್ತು! ಕೇವಲ ಎರಡುಸಾವಿರ LTTE ಯೋಧರಿದ್ದ ಜಾಫ್ನಾ ಕೋಟೆಯನ್ನು 25 ಅಕ್ಟೋಬರ್ 1987 ರಂದು ಭಾರತ ಶಾಂತಿ ಪಡೆಗಳು ವಶಪಡಿಸಿಕೊಂಡವು. ಆದರೆ ಸರಳವಾಗಿ ಅಲ್ಲ.

ಮಾವೋ-ತ್ಸೆ-ತುಂಗ್ ಕಲಿಸಿದ ಗೆರಿಲ್ಲಾ ಯುದ್ಧ ಪದ್ಧತಿ ಅಳವಡಿಸಿಕೊಂಡ LTTE ಯೋಧರು ಜಾಫ್ನಾದ ಜನಸಾಮಾನ್ಯರಲ್ಲಿ ಸಲೀಸಾಗಿ ಬೆರೆತು ಮರೆಯಾಗಿಬಿಡುತ್ತಿದ್ದರು. ಅಪಾರವಾದ ಜನಬೆಂಬಲವಿದ್ದುದರಿಂದ ಅವರನ್ನು ಗುರುತಿಸುವುದೂ ಕಷ್ಟ. ಹೀಗಾಗಿ ಭಾರತದ ಪಡೆಗಳು ಕಂಡವರ ಮೇಲೆ ದಾಳಿ ಮಾಡಿತು. ನಾಗರಿಕರು ಎಷ್ಟೋ ಜನ ಸತ್ತರು. ಕೈಕಾಲು ಕಳೆದುಕೊಂಡರು.

ಎಲ್ಲಕ್ಕಿಂತ ದಾರುಣವಾದದ್ದೆಂದರೆ ತಮಿಳು ಹೆಣ್ಣುಮಕ್ಕಳ ಮೇಲೆ ನಡೆದ ಅತ್ಯಾಚಾರಗಳು. ಈ ರಕ್ತರಂಜಿತ ಪುಟವನ್ನು ಮನುಕುಲದ ಇತಿಹಾಸದಿಂದ ಕಿತ್ತು ಹಾಕಲು ಅದೆಷ್ಟು ಬುದ್ಧರು ಹುಟ್ಟಬೇಕೋ, ಎಷ್ಟು ಜನ ಗಾಂಧಿಗಳು ಮೂಡಿಬರ

ಬೇಕೋ ! ಮನೆಮನೆಗೂ ನುಗ್ಗಿದ ಸೈನಿಕರು ಗಂಡಸರಿಗೆ ಗುಂಡಿಕ್ಕಿದರು. ಹೆಂಗಸರನ್ನು ಅವರ ಅಣ್ಣ, ತಮ್ಮ, ತಾಯಿ, ತಂಗಿಯರ ಮುಂದೇ ಸರದಿಯಂತೆ ಹತ್ತಾರು ಜನ ಮಾನಭಂಗ ಮಾಡಿದರು. ಯಾವ ಮನಸ್ಸು ಕುದಿಯುವುದಿಲ್ಲ, ಹೇಳಿ ?

ತಮಿಳು ವ್ಯಾಘ್ರಗಳು ಅತ್ಯಂತ ಕಡಿಮೆ ಅಂಜುವುದು, ಸಾವಿಗೆ ? ಅವರ ಯೋಧ ಆಕಸ್ಮಾತ್ ಬಂಧಿತನಾದರೆ ಅವನು ಪರಮ ಅಯೋಗ್ಯನೆಂದು ಪರಿಗಣಿಸಲ್ಪಡುತ್ತಾನೆ. ನಗುತ್ತಲೇ ಸೈನೈಡು ತಿನ್ನುತ್ತಾರ ಚಾಕಲೇಟಿನಂತೆ. ಅವರು ಅತ್ಯಂತ ಬುದ್ಧಿವಂತ ಹುಡುಗರು. ಸೈನ್ಸ್ ಗ್ರಾಜುಯೇಟುಗಳು. ಮನೆಯಲ್ಲೇ ಕೂತು ಬಾಂಬು ಮಾಡುತ್ತಾರೆ. ನೆಲದಲ್ಲಿ ಹುಗಿದು ಬಂದು ಮನೆಯಲ್ಲೇ ಕೂತು ನೂರಾರು ಮೀಟರು ದೂರದ ಬಾಂಬು ಸಿಡಿಸುತ್ತಾರೆ. ಶಾಂತಿಪಡೆಯ ಟ್ಯಾಂಕರುಗಳನ್ನೇ ಪುಡಿಪುಡಿ ಮಾಡಿದ್ದಾರೆ. ಕ್ಯಾನುಗಟ್ಟಲೆ ಪೆಟ್ರೋಲಿಗೆ ಬೆಂಕಿ ನೀಡಿ ಸೈನಕರ ಮೇಲೆಸೆದಿದ್ದಾರೆ. ಅದೆಂಥ ಭೀಕರ ಯುದ್ಧವೆಂದರೆ, ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಒಂದೇ ಸಲಕ್ಕೆ ಶತ್ರುವಿನ ಮೇಲೆ ನೌಕಾಪಡೆ, ವಾಯುಪಡೆ ಮತ್ತು ಭೂಸೈನ್ಯಗಳನ್ನು ಬಳಸಲಾಯಿತು. ಒಬ್ಬ LTTE ಯೋಧನಿಗೆ ಎಪ್ಪತ್ತು ಜನರಂತೆ ಭಾರತದ ಸೈನಿಕರನ್ನು ಕಳಿಸಲಾಗಿತ್ತು.

ಸೈನಿಕರ ವರ್ತನೆ ವಿಪರೀತವಾಗಿತ್ತು, ಅನವಶ್ಯಕವಾಗಿ ಆಸ್ಪತ್ರೆ, ಕಚೇರಿ, ಪತ್ರಿಕಾಲಯ, ಟಿ.ವಿ. ಕೇಂದ್ರಗಳನ್ನು ಬಾಂಬಿಟ್ಟು ಚೂರು ಚೂರು ಮಾಡಿದರು. ಅಕ್ಟೋಬರ್ 25ರ ಹೊತ್ತಿಗೆ LTTE ಹುಲಿಗಳು ಸೋತು ಗವಿ ಸೇರಿಕೊಂಡವು. ಅವರ ಎರಡೂವರೆ ಸಾವಿರ ಯೋಧರಲ್ಲಿ ಏಳುನೂರು ಜನ ಸತ್ತಿದ್ದರು. ಎರಡು ದಿನಗಳ ನಂತರ LTTE ನಾಯಕರಲ್ಲೊಬ್ಬನಾದ ಅಜಿತ್ ಮಹಾತಯ ಯುದ್ಧ ನಿಲ್ಲಿಸಿ ಎಂದು ಕೈಮು

ವ್ಯರ್ಥ

ಕಡಲು ಕಳಿಸಿದ
ಮೇಘ ಸಂದೇಶ
ಪರ್ವತಗಳ ತಡೆಗೆ
ಎಲ್ಲೋ ಉದುರಿ
ನದಿಯ ತಲುಪಲೇ ಇಲ್ಲ

● ಯು.ಆರ್.ಲಲಿತಾ

ಗಿದ. ಭಾರತ ಒಪ್ಪಬೇಕಿತ್ತು. ಅಕ್ಟೋಬರ್ 10 ರಂದು ಇದ್ದ ಸ್ಥಾನಕ್ಕೆ ಮರಳಬಹುದಿತ್ತು. ಆದರೆ ಒಪ್ಪಲಿಲ್ಲ. ಜನ ಶಾಂತಿಪಡೆಗೆ ಹಿಡಿಶಾಪ ಹಾಕಿದರು. 1988ರಲ್ಲಿ ತಮಿಳು ವ್ಯಾಘ್ರಗಳು ಪೂರ್ವ ಪ್ರಾಂತ್ಯಕ್ಕೆ ವಲಸೆ ಹೋದವು. ಅವರ ಬಟ್ಟಿಕಲುವಾ ನೆಲೆ ಶಾಂತಿಪಡೆ ವಶವಾಗಿತ್ತು. ಇವರ ಹುಡುಕಿ ನಾಶಮಾಡುವ (Search and destroy) ಯುದ್ಧ ತಂತ್ರದಲ್ಲಿ ಐದುಸಾವಿರ ನಾಗರಿಕರು ಸತ್ತರು.

ಇಷ್ಟಾದರೂ ಶಾಂತಿಪಡೆಗೆ ಪ್ರಭಾಕರನ್‌ನನ್ನು ಬಂಧಿಸಲಾಗಲಿಲ್ಲ. ಕಿಳಿನೋಚಿ, ಮುಳ್ಳೈತ್ತಿವು ಮತ್ತು ವಾವುನಿಯಾದ ಕಾಡುಗಳಲ್ಲಿ ಆ ಹುಲಿಯನ್ನು ಹಿಡಿಯಲಾಗಲೇ ಇಲ್ಲ. LTTE ಪೂರ್ಣ ಶರಣಾಗಲೆಂಬುದು ಭಾರತದ ಪಟ್ಟು. ನಾವು ವಿಯಟ್ನಾಂ ತರಹದ ಯುದ್ಧ ಮಾಡುತ್ತೇವೆಂಬುದು ವ್ಯಾಘ್ರಗಳ ವಾದ. ಈ ಮಧ್ಯೆ ಶ್ರೀಲಂಕಾದ ಪೂರ್ವ ಮತ್ತು ಉತ್ತರ ಪ್ರಾಂತ್ಯಗಳಲ್ಲಿ ಶ್ರೀಲಂಕಾ ಸರಕಾರದ ಪರವಾಗಿ ಭಾರತದ ಶಾಂತಿಪಡೆಗಳು ಚುನಾವಣೆ ನಡೆಸಿದವು. (ಇದಲ್ಲವೆ ವಿಪರ್ಯಾಸ ?) LTTE ಚುನಾವಣೆಗಳನ್ನು ಬಹಿಷ್ಕರಿಸಿದ್ದರಿಂದ ಮುಖ್ಯವಾದ ರಾಜಕೀಯ ಪಕ್ಷಗಳೇ ಇಲ್ಲದ, ಮತದಾರರೇ ಇಲ್ಲದ, ಕೆಲವೆಡೆ ಅಭ್ಯರ್ಥಿಗಳೇ ಇಲ್ಲದ ಚುನಾವಣೆಗಳು ನಡೆದವು. ಭಾರತದ ಸೈನಿಕ ಶಕ್ತಿಯ ಗೌರವದ ಪ್ರಶ್ನೆಯೆಂಬಂತೆ ಚುನಾವಣೆಗಳು ಮುಗಿದು ಯಾವುದಕ್ಕೂ ಕೆಲಸಕ್ಕೆ ಬಾರದ, ತಮಿಳರ ಆಶೋತ್ತರಗಳೂ ಈಡೇರದ ಉತ್ತರ-ಪೂರ್ವ ಪ್ರಾಂತ್ಯಗಳ ಮಂಡಲಿಗಳು ಅಸ್ತಿತ್ವಕ್ಕೆ ಬಂದವು. ಅಷ್ಟು ಹೊತ್ತಿಗೆ ಶಾಂತಿಪಡೆ ಎಲ್ಲರಿಗೂ ಸಾಕುಸಾಕಾಗಿತ್ತು. ತಮಿಳರ ಪಾಲಿನ ರಕ್ಷಕನಾಗಿ ಬಂದ ಶಾಂತಿಪಡೆ ತಮಿಳರ ಸಮಾಧಿ ಕಟ್ಟಿತು. ಸಿಂಹಳೀಯರಿಗೂ ಅದು ಗೆಳೆಯನಾಗಲಿಲ್ಲ. LTTEಯನ್ನೂ ಪೂರ್ತಿ ನಾಶಮಾಡಲಿಲ್ಲ. ಅತ್ತ ತಮಿಳರಿಗೂ ಬೇಡದ, ಸಿಂಹಳೀಯರೂ ತಿರಸ್ಕರಿಸಿದ ಒಂದು ನಿರರ್ಥಕ ಒಪ್ಪಂದಕ್ಕಾಗಿ ತಮ್ಮ ಸೈನಿಕರು, ಗೌರವ ಮತ್ತು ತಮಿಳರ ಪ್ರಾಣಗಳನ್ನು ಪಣಕ್ಕಿಟ್ಟರು ರಾಜೀವ್ !

ತಮಿಳುನಾಡಿನಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ವಿರುದ್ಧ ಸೆಣಸಾಡಿ ಗೆದ್ದ ಕರುಣಾನಿಧಿ LTTEಗೆ ಬಹಿರಂಗ ಬೆಂಬಲ ನೀಡಿದರು. ಭಾರತ ಶಾಂತಿಪಡೆಯ ಅಧಿಕಾರಿಗಳು ಉತ್ತೇಜನ ನೀಡಿ ಬೆಳೆಸಿದ EPRLF ಮತ್ತು ENDLF ಪಕ್ಷಗಳ ಪ್ರಾಂತೀಯ ಸರ್ಕಾರ ಒಂದು ದಿನವೂ ಕೆಲಸ ಮಾಡಲಿಲ್ಲ. ಮದ್ರಾಸಿನಲ್ಲಿ ಬಂಧಿಸಲಾದ LTTE ನಾಯಕ ಕಿಟ್ಟು ಆಮರಣಾಂತ ಉಪವಾಸದ ಘೋಷಣೆ ಮಾಡಿದಾಗ ಆತನನ್ನು ಭಾರತ ಸರ್ಕಾರ ತೆಪ್ಪಗೆ ಜಾಫ್ನಾಕ್ಕೆ ಕಳಿಸಬೇಕಾಯಿತು. ಕಡೆಗೆ ಶ್ರೀಲಂಕಾ ಸರ್ಕಾರವೇ ಬಾಯಿಬಿಟ್ಟು ಹೇಳಿತು, 'ರಾಜೀವ್ ಗಾಂಧಿಯವರೇ...ನಿಮ್ಮ ಶಾಂತಿಪಡೆ ಹಿಂದಕ್ಕೆ ಕರೆಸಿಕೊಳ್ಳಿ !'

1989ರ ಹೊತ್ತಿಗೆ ಪ್ರೇಮದಾಸ ಸರ್ಕಾರ ನೇರವಾಗಿ LTTEಯೊಂದಿಗೇ ಮಾತನಾಡತೊಡಗಿತು. ಇಬ್ಬರಿಗೂ ಶಾಂತಿಪಡೆ ಬೇಕಾಗಿರಲಿಲ್ಲ. ಶಾಂತಿಪಡೆಗೂ ಅಲ್ಲಿರುವುದು ಸಾಕಾಗಿತ್ತು.

ಹೀಗೆ ಮುಗಿಯದ ಕತೆಯನ್ನು ರಾಜೀವ್ ಮುಗಿಸಲೆತ್ನಿಸಿದರು. ಲಂಕೆಯ ಬೆಂಕಿಗೆ ಅವರು ಕೈಹಾಕಿದ್ದು ಅನಿವಾರ್ಯವಾಗಿತ್ತಾದರೂ, ಮುಂದೆ ಅದರೊಂದಿಗೆ ವರ್ತಿಸಿದ ರೀತಿಯಲ್ಲಿ ಅಕ್ಷಮ್ಯ ದೋಷಗಳಿದ್ದವು. ಅರೆ ಜೀವ ಕೊರೆ ಜೀವವಾದ LTTE ವ್ಯಾಘ್ರಗಳು ಗವಿಗಳಲ್ಲೇ ಮೊರೆಯುತ್ತ ಹಳೆಯ ಗಾಯಗಳನ್ನು ನೆಕ್ಕುತ್ತ ಬಿದ್ದಿದ್ದವು. ಇಲ್ಲಿ, ನಿಮ್ಮ ದೇಶದಲ್ಲಿ ರಾಜೀವ್ ಸರ್ಕಾರ ಬಿದ್ದು, ಮತ್ತೆರಡು ಸರ್ಕಾರಗಳೂ ಬಿದ್ದು ಅಂತಿಮವಾಗಿ 1991ರ ಚುನಾವಣೆಗಳನ್ನು ಘೋಷಿಸಿದಾಗ ವ್ಯಾಘ್ರಗಳು ಹೊರಬಂದವು! ಚುನಾವಣೆಗಳಲ್ಲಿ ರಾಜೀವ್ ಗೆಲ್ಲುವುದು ಖಚಿತವಿತ್ತು. ಆತ ಗೆದ್ದರೆ ಮತ್ತೆ ಶಾಂತಿಪಡೆಯ ಸಿಂಹಸ್ವಪ್ನ!

ಕಣ್ಣಿಲ್ಲದ, ಕೈಕಾಲುಗಳಿಲ್ಲದ, ಭವಿತವ್ಯದ ಆಸೆ ಸತ್ತ, ಮಾನಭಂಗದಿಂದ ಘಾಸಿಗೊಂಡ, ಇಡೀ ಕುಟುಂಬವನ್ನೇ ಶಾಂತಿಪಡೆಯ ಬಾಯಿಗಿಟ್ಟು ಬಂದ ನೂರಾರು ಆತ್ಮಗಳು LTTE ಗುಹೆಯಲ್ಲಿವೆ. ಅವರು ಜಾಣರು. ಹೋರಾಟದ ಆಳ ಅಗಲ ಬಲ್ಲವರು. ಬಾಂಬುಗಳೆಂದರೆ ರಬ್ಬರು ಚೆಂಡುಗಳು ಎನ್ನುವವರು. ಹಳೆಯ ಸೇಡು ಪ್ರಜ್ವಲಿಸಿದಾಗ ಬಾಂಬು ಸಿಡಿಯಲು ಎಷ್ಟು ಹೊತ್ತು ಬೇಕು? ಹುಡುಕಿದ ಜಾಗ ಸಿಕ್ಕೇ ಬಿಟ್ಟಿತು. ಶ್ರೀಪೆರುಂಬದೂರು...ರಾಜೀವ್ ಮುಗಿದು ಹೋದರು.

ಕಡೆಗೊಂದು ಮಾತು ಹೇಳಲಾ? ಕಾಶ್ಮೀರ, ಪಂಜಾಬ್‌ಗಳಲ್ಲಿ ವಿಭಜನೆಯ ಸೊಲ್ಲೆದ್ದಾಗ ಪ್ರಧಾನಿಗಳು ದೇಶದ ಅಖಂಡತೆಯ ಕುರಿತು ಮಾತಾಡಿದರು. ಅದಕ್ಕಾಗಿ ಹೆಣಗಿದರು. ಅದೇ ಸೊಲ್ಲು ತಮಿಳು ಜನಾಂಗ ಶ್ರೀಲಂಕೆಯಲ್ಲೆಬ್ಬಿಸಿದಾಗ ಮೊದಲು ಅದಕ್ಕೆ ನೆರವು ನೀಡಿದರು. ಕಡೆಗೆ ಸೊಲ್ಲು ಸದೆಬಡಿದರು. ನಿಮಗೆ ಗೊತ್ತಿರಲಿಕ್ಕಿಲ್ಲ. ಶಾಂತಿಪಡೆಯ ಅಧಿಕಾರಿಗಳು ಕೆಲವು LTTE ಹುಡುಗರನ್ನು ಬಂಧಿಸಿದಾಗ ಅದರಲ್ಲೊಬ್ಬ ಹುಡುಗನನ್ನು ಎಲ್ಲೋ ನೋಡಿದ್ದೆವಲ್ಲಾ ಎನಿಸಿತಂತೆ. ಥಕ್ಕನೆ ಗುರುತು ಸಿಕ್ಕಿತು. ಆ ಹುಡುಗ ಇದೇ ಭಾರತೀಯ ಅಧಿಕಾರಿಗಳಿಂದ ಮದ್ರಾಸಿನಲ್ಲಿ ತರಬೇತಿ ಪಡೆದ LTTE ಯೋಧ!

ಬೆಂಕಿಯನ್ನು ಎಷ್ಟು ಹತ್ತಿರದಿಂದ ಬಳಸಬಹುದೆಂಬ ಸಾಮಾನ್ಯ ರಹಸ್ಯ ಅರಿಯದ ರಾಜೀವ್ ಅದರೊಂದಿಗೇ ಆಡಿ ಅದರಲ್ಲೇ ಮುಗಿದುಹೋದರು. ನಾನು ಈ ನಿರಾಶ್ರಿತ ಶಿಬಿರದಲ್ಲಿ ಯಾವ ಭರವಸೆಯೂ ಇಲ್ಲದೆ ಬದುಕಿ ಉಳಿದಿದ್ದೇನೆ. ಅಂಥ ಶ್ರೀಮಂತ, ಸುಂದರ, ಸ್ನಿಗ್ಧ ಪ್ರಧಾನಿ ರಾಜೀವ್ ಗಾಂಧಿಯವರ ಸಾವಿಗೆ ನನ್ನ ಕಣ್ಣು ಹನಿಗೂಡಿವೆ. ಈ ನೆಲ ಇನ್ನೂ ನನ್ನಂಥ ಅನಾಥರಿಗೆ ಕೊಟ್ಟಿರುವ ಆಶ್ರಯಕ್ಕೆ ನನ್ನೆದೆಯಲ್ಲಿ ಋಣಭಾರ ಕದಲುತ್ತದೆ. 'ಈ ತಮಿಳರೇ ಹೀಗೆ, ಹೋದ ಕಡೆಗೆಲ್ಲಾ ರಗಳೆ ಮಾಡ್ತಾರೆ' ಅನ್ನುವವರಿದ್ದಾರೆ. ಅವರಿಗೆ ನನ್ನದೊಂದೇ ವಿನಂತಿ....ನಾವು ಶ್ರೀಲಂಕೆಗೆ ಹೋದವರಲ್ಲ. ಅಲ್ಲಿಯವರೇ! ನಮಗೊಂದು ತಾಯ್ನಾಡು ಬೇಕು. ನಮ್ಮ 'ಈಳಂ' ನಮಗೆ ಸಾಕು. ●

Printed and Published by B.S.SAVANOOR on behalf of Loka Shikshana Trust at 'Samyukta Karnataka Press', Koppikar Road, Hubli-580 020. (Phone: 64303); No.2, Residency Road, Bangalore-560 025 (Phone: 213265).
Managing Editor: K.SHAMARAO
Registered with the Registrar of Newspapers for India under No.3633/57.